ಕಸ್ತೂರಿ

ಜನವರಿ, ೧೯೮೧



ರೂ. ೧-೫೦

ಕಸ್ತೂರಿ

ಕನ್ನಡ ಡೈಜೆಸ್ಟ್



ಸಂಪಾದಕ :

ಜಿ. ವಾಸುದೇವ

ಕಲೆ

ಕೆ. ಬಿ. ಕುಲಕರ್ಣಿ

ಮುಖಪುಟ :

ಮುಗಿಲುಂ ಮುತ್ತುವೆಯಾ ?

ಚಿತ್ರ :

ವಿಶಾಲಾಕ್ಷಿ ದೇಶಪಾಂಡೆ

ಚಂದಾದರ :

ಅರ್ಧವರ್ಷ ಅಂಚೆ ಸೇರಿ ರೂ. ೧೦-೦೦

೧ ವರ್ಷ ,, ರೂ. ೧೮-೦೦

(ವಿಶೇಷ ಸಂಚಿಕೆ ಸೇರಿ)

KASTURI January 1981

ಬೆಳಕಿಂಡಿ

ದೈವವೆನ್ನುವುದು ಬಹು ವಿಚಿತ್ರವಾದದ್ದು. ಆ ಭಾವನೆ ನಿಮ್ಮಲ್ಲಿದೆಯೆಂಬ ವಿಚಾರ ಬಂದ ಕ್ಷಣದಲ್ಲೆ ಅದನ್ನು ನೀವು ಕಳೆದುಕೊಂಡಿರುತ್ತೀರಿ.

—ಈ. ಡಿ. ಪೂಲ್ಸ್

*

ಯಾವುದೇ ಕಾರ್ಯಸಾಧನೆಗಾಗಿ ಬಲಪ್ರಯೋಗವನ್ನು ಕೊನೆಯ ಉಪಾಯವಾಗಿ ಬಳಸುವ ರಾಜ್ಯವ್ಯವಸ್ಥೆಯೆ ನಾಗರಿಕತೆ.

—ಜೋಸೆ ಒರೆಟ್ಗಾ

*

ಜೀವನ ಸ್ವಾರ್ಥಕವಾಗುವುದು ಅದಕ್ಕೆ ವರ್ಷಗಳನ್ನು ಜೋಡಿಸುವುದರಿಂದಲ್ಲ; ಬದಲು ಆ ವರ್ಷಗಳಲ್ಲಿ ಜೀವನವನ್ನು ತುಂಬುವುದರಿಂದ.

—ಅಲೆಕ್ಸಿಸ್ ಕ್ಯಾರೆಲ್

(ನೋಬೆಲ್ ಬಹುಮಾನಿತ ಸಾಹಿತಿ)

*

ನೀವು ಏನೇ ಮಾಡಿ, ಹಣ ಗಳಿಸುವ ಹವ್ಯಾಸಕ್ಕೆ ಮಾತ್ರ ಹೋಗಬೇಡಿ. ನೀವು ಮಾಡುವ ಕೆಲಸ ಹೆಚ್ಚು ಹೆಚ್ಚು ಚೆನ್ನಾಗಿ ಆಗುತ್ತ ಹೋದ ಹಾಗೆ ನಿಮಗೆ ಹಣ ಬರುವ ಪ್ರಮಾಣವೂ ಹೆಚ್ಚೆಚ್ಚಾಗುತ್ತಾ ಹೋಗುತ್ತದೆ.

—ಲಾರ್ಡ್ ರೂಟ್ಸ್

*

ಚಂದಾದಾರರಿಗೆ ಸೂಚನೆ

'ಕಸ್ತೂರಿ' ತಿಂಗಳ ಒಂದನೇ ದಿನಾಂಕದೊಳಗೇ ಪ್ರಕಟವಾಗುವುದು. ತಿಂಗಳ ೫ ನೇ ದಿನಾಂಕದೊಳಗೆ ತಲಪದೇ ಹೋದರೆ ಚಂದಾದಾರರು ತಮ್ಮ ಟಪಾಲು ಕಟ್ಟೆಯಲ್ಲಿ ಮೊದಲು ವಿಚಾರಿಸಿ ಅನಂತರ ನಮಗೆ ತಿಳಿಸಬೇಕು. ಪತ್ರವ್ಯವಹಾರ ಮಾಡುವಾಗ ಚಂದಾ ನಂಬರು ಹಾಕಿರಬೇಕು.

ಈ ಸಂಚಿಕೆಯಲ್ಲಿ

ಪುಸ್ತಕ ವಿಭಾಗ

ಸಹಚಿಂತನೆ

ಸೈ ಥಾವ್

ಡಿಸೆಂಬರ್ "ಕಸ್ತೂರಿ"ಯಲ್ಲಿ ಬೆಳಕು ಕಂಡ "ಸೈಥಾವ್" ಚೀನೀ ಕಥೆಯನ್ನು ಓದಿದೆ. ಶ್ರೀಪಾದ ಭಟ್ಟರು ಮೂಲ ಕತೆಯನ್ನು ಅತ್ಯಂತ ಸಮಂಜಸ ವಾಗಿ ಅದರ ಸವಿಯುಣ್ಣುವಂತೆ ಕನ್ನಡಿಸಿದ್ದಾರೆ. ಅತಿರಮ್ಯವಾದ ವರ್ಣನೆಗಳಿಂದಲೂ ಉಪಮಾ-ಲಂಕಾರಗಳಿಂದಲೂ ಕೂಡಿ ರಸಿಕರ ಮತ್ತು ಸಾಹಿತ್ಯ ಪ್ರೇಮಿಗಳ ಮೈಮನಗಳನ್ನು ಸ್ಪಂದಿಸುವಂತಿದೆ.

"ಸೈಲಳ ಕಾಮ ತೃಷ್ಣೆ ಉತ್ಕಟಾವಸ್ಥೆಗೇರಿ ವಿರಹವೇದನೆಯಿಂದ ಬಳಲುತ್ತಿರುವಾಗ ಒಮ್ಮೆ ಮಿಂಗ್ ವೈನಲ್ಲಿ ತುಂಬಿ ಚೆಲ್ಲುತ್ತಿರುವ ಯೌವ ನದ ಸಿರಿಯನ್ನು ಕಂಡು ಮೋಹವಶಳಾಗಿ, ಹಿರಿ ಹಿರಿ ಹಿಗ್ಗಿ ಸಂಭ್ರಮದಿಂದ ತನ್ನ ಅಸದೃಶ ಸೌಂದ-ರ್ಯೌಚಿತ್ಯವನ್ನು ಪ್ರದರ್ಶಿಸಿ, ಮೈಮಾಟದ ಬಲೆಯ ನ್ನುಬೀಸಿ ಬೇಟೆಯನ್ನು ಅವತಿ ಸುಲಭವಾಗಿ ಹಿಡಿಯುತ್ತಾಳೆ. ತನ ಕೈಗೊಂಬೆಯನ್ನಾಗಿ ಮಾಡಿ ಕೊಂಡು ಪುರಾತನ ಕವಿ ವಿರಚಿತ ಶೃಂಗಾರ ಕಾವ್ಯಗಳಿಂದ ಪ್ರೇರೇಪಿಸಿ ಭಾವಪರವಶನನ್ನಾಗಿ ಮಾಡಿ ವಾಸ್ತವ ಜಗತ್ತನ್ನು ನಿರ್ಲಕ್ಷಿಸುವಂತೆ ಮಾಡುತ್ತಾಲ್ಲದೆ ತಾನು ನಿರ್ಮಿಸಿದ ಸುಖಸ್ವರ್ಗ ಸಾಮ್ರಾಜ್ಯದಲ್ಲಿ ವಿಹರಿಸುತ್ತಾ, ಕಾಮಕೇಳಿಯಲ್ಲಿ ತನ್ಮಯರಾಗಿ ಕೊನೆಗೊಮ್ಮೆ ಎರಡು ಜೀವಿಗಳು ಪರಸ್ಪರ ದೂರವಾಗುವ ಕಾಲದಲ್ಲಿ... "ಕೊನೆಯ ರಾತ್ರಿಯನ್ನು ಜೀವಮಾನದ ಅತ್ಯಂತ ಸಂತೋಷ ರಾತ್ರಿಯನ್ನಾಗಿ ಕಳೆಯೋಣ"ವೆಂದು ಆ ಗಳಿಗೆಯ ಲ್ಲೂ ಅವಳ ಬಾಯಿಯಿಂದ ಹೊಮ್ಮಿಸಿರುವ ಈ ನುಡಿಗಳು ಓದುಗರ ಹೃದಯವನ್ನುಮಿಡಿಯುತ್ತವೆ.

ಬೆಂಗಳೂರು. —ತು. ಕೃ. ಸುಬ್ಬರಾವ

ಡಿಸೆಂಬರ್ ಸಂಚಿಕೆಯಲ್ಲಿ ಚೀನದ ಉತ್ಕೃಷ್ಟ ಕೃತಿಯಾದ "ಸೈ ಥಾವ್" ನಿಮ್ಮ ಈಚೀಚೆಗೆ ಪ್ರಕ ಟಿಸಿದ ಕಥೆಗಳಲ್ಲಿಯೇ ಸರ್ವಶ್ರೇಷ್ಠ. ಮಟ್ಟದ್ದಾಗಿದೆ ಅದರ ರಮ್ಯ ಪ್ರಶಾಂತ ದಿವ್ಯ ನಿರೂಪಣೆಯಿಂದ ಓದುಗರನ್ನು ಮಾಯಾಲೋಕಕ್ಕೆ ಕಳಿಸುವಲ್ಲಿ ಸಫಲ ವಾಗಿದೆ. ಇಂಥ ಅದ್ಭುತ ಕೃತಿಯನ್ನು ಕನ್ನಡಕ್ಕೆ ಅನುವಾದಿಸಿದ ಎಚ್. ಎಸ್. ಶ್ರೀಪಾದಭಟ್ಟ ಅವರಿಗೆ ನನ್ನ ಹೃತ್ಪೂರ್ವಕ ಅಭಿನಂದನೆಗಳು. ಇದರೊಂದಿಗೆ ಇನ್ನೊಂದು ಉರ್ದು ಕಥೆಯಾದ ಶ್ರೀಮತಿ ಜಿಲಾನಿ ಬಾನು ಅವರ "ಅದ್ದೂ" ಹೃದ ಯ ಕಲಕುವ ಚೊಕ್ಕ ಚಿತ್ರವಾಗಿದೆ. ಇಂಥ ಉತ್ತಮ ಕಥೆಗಳನ್ನು ಮುದ್ರಿಸಿದ ಕಸ್ತೂರಿಗೆ ನನ್ನ ಧನ್ಯವಾದಗಳು.

ಮುಧೋಳ —ಎಸ್. ಜಿ. ಸಾಲೀಮಠ

ಹರಬನ್ಸಲಾಲ ಪರ್ವಾನಾ

ಡಿಸೆಂಬರ್ 'ಕಸ್ತೂರಿ'ಯಲ್ಲಿ ಪ್ರಕಟವಾದ ಸುಂದರೇಶನ್‌ರವರ ಕಾಮ್ರೇಡ್ ಹರಬನ್ಸಲಾಲ ಪರ್ವಾನಾರ ಬಗೆಗಿನ ಲೇಖನ ಎಲ್ಲರ ಮೆಚ್ಚುಗೆ ಗಳಿಸುವಂತಹದು. ಬ್ಯಾಂಕ್ ನೌಕರರ ಒಳಿತಿಗಾಗಿ ಅವರು ಮಾಡಿದ ಹೋರಾಟ ಮತ್ತು ಬ್ಯಾಂಕ್ ನೌಕರರ ಸಂಘಟನೆಗಾಗಿ ಅವರು ಮಾಡಿದ ತ್ಯಾಗ ಎಂಥವರ ಮನಸ್ಸನ್ನಾದರೂ ಕರಗಿಸುವುದರಲ್ಲಿ ಸಂಶಯವಿಲ್ಲ. ಇಂದಿನ ಕಾರ್ಮಿಕ ಮುಖಂಡರೆಂದು ಸೋಗು ಹಾಕುವ ಅನೇಕ ಮಂದಿ ಪರ್ವಾನಾರವರ ಜೀವನ ಚರಿತ್ರೆಯನ್ನು ಓದಿ, ಸ್ವಲ್ಪ ಮಟ್ಟ-ಗಾದರೂ ಕಾರ್ಮಿಕರ ಒಳಿತಿಗಾಗಿ ಹೋರಾಡುವ ಮನಸ್ಸು ಮಾಡಿದರೆ ಮಾತ್ರ ಕಾಮ್ರೇಡ್ ಪರ್ವಾ-ನಾರ ಪರ ಆತ್ಮಕ್ಕೆ ಶಾಂತಿ ದೊರೆಯುತ್ತದೆ.

ಕೊಪ್ಪಳ —ಕೆ. ಎಸ್. ಚಿದಾನಂದ

ಉಪಕೃತರು

ಡಿಸೆಂಬರ್ ತಿಂಗಳ ಸಂಚಿಕೆಯಲ್ಲಿ ಹರಬನ್ಸ್ ಲಾಲ ಪರವಾನರ ಜೀವನ ಚರಿತ್ರೆಯನ್ನು ಓದಿ ಬಹಳ ಮೆಚ್ಚಿಗೆಯಾಯಿತು. ಕಟ್ಟಿದ ಭಾರತೀಯ ಬ್ಯಾಂಕು ನೌಕರರ ಸಂಘ ಇಂದಿನ ಎಲ್ಲಾ ಬ್ಯಾಂಕಗಳ ನೌಕರರಿಗೂ ಉಪಯೋಗವಾಗುತ್ತಿದೆ. ಈ ಸಂಘದಲ್ಲಿ ಈಗ ಸುಮಾರು ಐದು ಲಕ್ಷ ಸದಸ್ಯರುಗಳು ಇರುತ್ತಾರೆ. ಹರಬನ್ಸಲಾಲರ ಜೀವನ ಮತ್ತು ಅವರು ಬ್ಯಾಂಕ ನೌಕರರಿಗೆ ಮಾಡಿದ ಉಪಕಾರದ ಪರಿಚಯ ಮಾಡಿಕೊಟ್ಟ ದ್ದಕ್ಕೆ ಧನ್ಯವಾದಗಳು.

ಬೀದರ —ಬಿ. ಎಚ್. ಸಿದ್ರಾಮಪ್ಪ

ಶ್ರೀ ಕೃಷ್ಣಭಟ್ಟರಿಗೆ ವಂದನೆಗಳು.

ಡಿಸೆಂಬರ್ "ಕಸ್ತೂರಿ"ಯ "ಸಹಚಿಂತನ" ವಿಭಾಗದಲ್ಲಿ ನಿಮ್ಮ ಪತ್ರವನ್ನು ಓದಿದೆ. ಧನ್ಯವಾದಗಳು.

ಕನ್ನಡ ಸಾರಸ್ವತ ಜಯಂತಿ ಎತ್ತಿ ಆಡಿಸಿದ, ತೋರಿಸಿದ ಮಕ್ಕಳಲ್ಲಿ ನಾನೂ ಒಬ್ಬ; ಕಥಾ ಲೇಖನದಲ್ಲಿ ಕಾಣಿಸಿರುವ 'ಅಶ್ವ'. ಇದೇ ನನ್ನ ಸಂಬಂಧ ಜಯಂತಿಯೊಂದಿಗೆ.

—ಅಶ್ವತ್ಥ

ಭೂಲೋಕದ ನಾಶ ತಡೆಯಲು

ತಮ್ಮ ನವಂಬರ್ ೧೯೭೦ರ "ಕಸ್ತೂರಿ"ಯ ೫೦ನೇ ಪುಟದಲ್ಲಿ "ಭೂಲೋಕ ಹೇಗೆ ನಾಶವಾಗುವದು" ಲೇಖನ ಓದಿದೆ. ಇದನ್ನು ಮಾನವ ತಡೆಯಲಾರ. ಭೂಮಿಯು ಜಲಪ್ರಳಯ, ಲಾವಾರಸದ ಪ್ರವಾಹದಿಂದಾಗಲಿ ನಾಶವಾಗುವುದು ಎಂಬುದಾಗಿ ವಿವರಿಸಿದ್ದಾರೆ. ಆದರೆ ನನ್ನ ಅಭಿಪ್ರಾಯ ಮಾನವನು ಮಾನವನಿಂದಲೇ ನಾಶವಾಗುವ ಕಾಲ ದೂರವಿಲ್ಲ. ತಡೆಯಲು ದಾರಿ ಇದೆಯೇ? 'ದೇವಿಮಾಹಾತ್ಮ್ಯ' ಫಲಶ್ರುತಿಯಲ್ಲಿ ಭಗವತೀದೇವಿಯು ಹುಟ್ಟು ಸಾವುಗಳಿಲ್ಲದೆ ನಿತ್ಯಳಾದರೂ ಮತ್ತೆ ಮತ್ತೆ ಅವತರಿಸಿ ಜಗತ್ತಿನ ಪಾಲನೆಯನ್ನು ಮಾಡುತ್ತಾಳೆ. ಈ ಜಗತ್ತೆಲ್ಲವೂ ಮಹಾಪ್ರಳಯ ಕಾಲದಲ್ಲಿ ಮಹಾ ಮಾರಿಸ್ವರೂಪಳೂ ಮಹಾಂಕಾಳಿಯೂ ಆದ ಅವಳಿಂದ ವ್ಯಾಪಿಸಲ್ಪಟ್ಟದೆ. ಸನಾತನಿಯಾದ ಅವಳೇ ಸ್ಥಿತಿ ಕಾಲದಲ್ಲಿ ಪ್ರಾಣಿಕೋಟಿಗಳ ರಕ್ಷಣೆಯನ್ನು ಮಾಡುತ್ತಾಳೆ. ಮಾನವರ ಅಭ್ಯುದಯ ಕಾಲದಲ್ಲಿ ಅವಳೇ ಮನೆಯಲ್ಲಿ ಸಮೃದ್ಧಿಯನ್ನುಂಟು ಮಾಡುವ ಲಕ್ಷ್ಮಿಯಾಗಿರುತ್ತಾಳೆ. ಹಾಗೆಯೇ ಅವಳೇ ಅವನತಿಯ ಕಾಲದಲ್ಲಿ ಅಲಕ್ಷ್ಮಿಯಾಗಿ ವಿನಾಶವನ್ನುಂಟು ಮಾಡುತ್ತಾಳೆ.

ಎಲ್ಲಿ ನೋಡಿದರಲ್ಲಿ ಅಧರ್ಮ, ಅತ್ಯಾಚಾರ, ಕೊಲೆ, ಸುಲಿಗೆ, ಮೋಸ, ವಂಚನೆ ನಡೆಯುತ್ತಿರುವುದು (ದೇಶದ) ಪ್ರಪಂಚದ ವಿನಾಶ ಕಾಲ ಸಮೀಪಿಸುತ್ತಿರುವುದನ್ನು ತೋರಿಸುತ್ತದೆ. ಆದ್ದರಿಂದ ದೇವಿಯ ಮಾಹಾತ್ಮ್ಯವನ್ನು (೧೩ ಅಧ್ಯಾಯ) ವಿಪದ್ಭಂಜನಕ್ಕೆ ಅನುಗ್ರಹಕ್ಕೆ ಮತ್ತು ಧರ್ಮ ಬುದ್ಧಿಯನ್ನು ಶುಭಗತಿಯನ್ನು ಪಡೆಯುದಕ್ಕೆ ಪಾರಾಯಣಿಸಬೇಕು.

ಮುಂಡಿಪು —ಎಂ. ಎಸ್. ಎಸ್. ಬಿ.

ಗೊತ್ತೇ ಇರಲಿಲ್ಲ

ವಂಗಬಂಧು ಮುಜಿಬರ್‌ರವರಿಗೆ ಸ್ಫೂರ್ತಿ ನೀಡಿದ ಕ್ರಾಂತಿಕಾರಿ "ಸೂರ್ಯಸೇನ"ರ ಪರಿಚಯವನ್ನು ಡಿಸೆಂಬರ "ಕಸ್ತೂರಿ" ನೀಡಿ ಉಪಕರಿಸಿದೆ. ಇದು ಭಾರತೀಯ, ಈಗಿನ ಪೀಳಿಗೆಯವರಾದ ನಮಗೆ ಈ ಮೊದಲು ಗೊತ್ತೇ ಇರಲಿಲ್ಲ. ಕೆ. ಎ. ಕುಬಣೂರಾಯರಿಗೆ ಅಭಿನಂದನೆಗಳು.

ಕೃಷ್ಣರಾಜನಗರ —ವಿ. ನಾರಾಯಣ

ಹೊಸ ಇಸಂ?

ಡಿಸೆಂಬರ್ ೭೦ರ "ಕಸ್ತೂರಿ"ಯಲ್ಲಿ ಕೆ. ಚಂದ್ರಮೌಳಿ ಅವರು ಬರೆದ "ಬಾಸಿಸಂ" ಎಂಬ ಲೇಖನ ಪ್ರಕಟಿಸಿದ್ದೀರಿ. ನನಗಂತೂ ಅದು ತುಂಬ ಹಿಡಿಸಿತು. ಲೇಖಕರು ಫ್ಯಾಸಿಸಂ, ನಾಜಿಸಂ ಎಂದು ಇಸಂಗಳ ಬಗ್ಗೆ ಹೇಳುತ್ತಾ ಬಾಸಿಸಂ ಕೂಡ ಇಂಥ ಇಸಂಗಳ ಪಟ್ಟಿಯಲ್ಲಿ ಬರುವದು ಎಂದು ತಮ್ಮದೇ ಶೈಲಿಯಲ್ಲಿ ಬಹು ಮಾರ್ಮಿಕವಾಗಿ ಹೇಳಿದ್ದಾರೆ.

ಗಲಗಲಿ —ಎನ್. ಆರ್.

ತಿದ್ದುಪಡಿ

ಇದೇ ಸಂಚಿಕೆಯ ೫೦ನೆಯ ಪುಟದಲ್ಲಿ ಪ್ರಕಟವಾದ ತೆಲುಗು ಕಥೆ 'ಬದುಕು' ಕಾಮೆಡಿ ಒಂದೇ ಅಲ್ಲ'ದ ಮೂಲ ಲೇಖಕರು ಶ್ರೀ ಇಚ್ಛಾಪುರಪು ರಾಮಚಂದ್ರ ರಾವು. ಕಣ್ತಪ್ಪಿನಿಂದ ಅವರ ಹೆಸರು ಪ್ರಕಟವಾಗದೆ ಉಳಿದಿದೆ. —ಸಂ.

ಕಸ್ತೂರಿ

ವರ್ಷ : ೨೫ ಸಂಚಿಕೆ : ೫

ಜನವರಿ ೧೯೮೧



ವೀರ, ವೇದದ ಸಾರ

ಸಿ. ಎಂ. ದೇವೇಂದ್ರ ನಾಯಕ

ನಡುಗನ್ನಡದ ಮಹಾಕವಿ ಕುಮಾರವ್ಯಾಸನ ಮಹಾಭಾರತ ಕಾವ್ಯಸುಧೆಯನ್ನು ಓದಿ ಸವಿಯುವವರಿಗೆ, ಕೇಳಿ ಸೂರೆಗೊಳ್ಳುವವರಿಗೆ ಅವನ ಕಾವ್ಯದ 'ಮಂಗಲ ಪೀಠಿಕೆ' ಒಂದು ರತ್ನ ಖಚಿತ ಮಹಾದ್ವಾರದಂತಿದೆ. ಅವನು ಕಾವ್ಯ ಲೋಕದಲ್ಲಿ ಕಾಲಿಡುವ ಮೊದಲು, ತನ್ನ ಸಕಲ ಇಷ್ಟ ದೇವತೆಗಳಿಗೆ ವಂದಿಸಿ, ತನ್ನ ಕಾವ್ಯದ ಪರಮ ದೈವತವೆನಿಸಿದ ಗದುಗಿನ ವೀರನಾರಾಯಣನ ಭಕ್ತಿಯಲ್ಲಿ ಮೈಮರೆತುಬಿಡುತ್ತಾನೆ. ಹಾಗೆಯೇ ಓದುಗರು, ಕೇಳುಗರು ಸಹ ತನ್ನ ಭಕ್ತಿಪುರಸ್ಸರ-ತೆಯಲ್ಲಿ ತಲ್ಲೀನರಾಗುವಂತೆ ಮಾಡುತ್ತಾನೆ.

ಓದುಗರು ಅಥವಾ ಕೇಳುಗರು ಕವಿಹೃದಯದವರಿದ್ದರಂತೂ ತೀರಿತು, ಅವನ

ಶ್ರೀ ವನಿತೆಯರಸನೆ ವಿಮಲ ರಾ
ಜೀವ ಸಖನ ಪೀಠನ ಪಿತನೆ ಜಗಕತಿ
ಪಾವನನೆ......

ಎಂಬ ಮಂಗಲಕರವಾದ ಪೀಠಿಕೆ ಒಂದು ಉಜ್ವಲ ಕಾವ್ಯದೀಪ್ತಿಯನ್ನೇ ಅವರಲ್ಲಿ ಝಗ್ಗೆಂದು ಬೆಳಗಿಸುತ್ತದೆ.

ಮಂಗಲ ಪೀಠಿಕೆಯ ಒಂದೊಂದು ಸವಿ ನುಡಿಯನ್ನು ಓದುತ್ತಿದ್ದಂತೆ, ಕಾವ್ಯಲೋಕದಲ್ಲಿ

ಕಾಲಿಟ್ಟಂತೆ ಭಾಸವಾಗುತ್ತದೆ. ಇದನ್ನು ಅನುಭವಿಸಬೇಕೇ ಹೊರತು, ಶಬ್ದ ಸಂಪತ್ತಿನಿಂದ ವರ್ಣಿಸಲಸದಳ. ಈ ಕಾವ್ಯಲೋಕದಲ್ಲಿ ಪ್ರವೇಶಿಸುತ್ತಿದ್ದಂತೆಯೇ ಮೈ, ಮನಸ್ಸು, ಹೃದಯ ಪುಲಕಗೊಂಡು ರೋಮಾಂಚನವಾಗುತ್ತದೆ. ಕಾವ್ಯದ ವಿದ್ಯುದುನ್ಮಾದ ಕಣ್ಣು ಕುಕ್ಕಿಸುತ್ತದೆ. ವೇದಮಾತೆ, ಶಾರದೆಯನ್ನು ಕವಿ ಕುಮಾರವ್ಯಾಸ ಸ್ಮರಿಸುವ ರೀತಿ ಮೈ ರಘುಮ್ಮೆನಿಸುತ್ತದೆ.

ವೀರನಾರಾಯಣನೆ ಕವಿ,
ಲಿಪಿಕಾರ ಕುವರ ವ್ಯಾಸ,
ಕೇಳುವ ಸೂರಿಗಳು ಸನಕಾದಿಗಳು
ಜಂಗಮ ಜನಾರ್ದನರು......

ಎಂಬ ದಿವ್ಯ ಕಲ್ಪನೆಯಂತೂ ಅವನು ಮಹಾಭಾರತ ಕಾವ್ಯಕ್ಕಿಟ್ಟ ಕಲಶ.

'ಲಕ್ಷ್ಮಿ ಕೊಡುಗೆಮಗಧಿಕ ಸಂಪದವ,' ಎಂದು ಪ್ರಾರ್ಥಿಸಿ, ಶಕ್ತಿದೇವತೆಯನ್ನು 'ಕೊಡು ಕಾರುಣ್ಯದಲಿ ಮತಿಯ' ಎಂದು ಬೇಡುತ್ತಾನೆ. ತನ್ನ ಕಾವ್ಯ ರಚನೆ ನಿರ್ವಿಘ್ನವಾಗಿ ರಚಿತವಾಗಬೇಕೆಂದು, ತನ್ನ ಮತಿಗೆ ಮಂಗಳವಾಗಬೇಕೆಂದು ವಿಘ್ನೇಶನನ್ನು ಪ್ರಾರ್ಥಿಸುತ್ತಾನೆ. ಇದು ಸಾಲದೆಂಬಂತೆ ಶಾರದೆ ನಲಿದೊಲಿದು ಅವನ ನಾಲಿಗೆಯ ಮೇಲೆ ನರ್ತಿಸಬೇಕೆಂಬ ಪ್ರಾರ್ಥನೆ ಎಷ್ಟೊಂದು ಸಫಲತೆ ಪಡೆಯಿತು ಎಂಬುದು ಮುಂದೆ ಅವನ ಸಮಗ್ರ ಕಾವ್ಯ ಓದಿದ ಮೇಲೆ ತಾನೇ ಮನದಟ್ಟಾಗುತ್ತದೆ. ಇದಲ್ಲದೆ 'ದೇವ ವೇದವ್ಯಾಸ ಗುರುರಾಯ ತರಳನಾದ ತನ್ನನ್ನು ಪತಿಕರಿಸಿ, ಮಗನೆಂದು ಒಲಿದು ಕರುಣದಿ ಪರವ ನಿತ್ಯನು' ಎಂಬ ಕುಮಾರವ್ಯಾಸನ ನುಡಿ, ಅವನ ವಿನಮ್ರತೆಗೆ, ಅವನ ಹೃದಯಶ್ರೀಮಂತಿಕೆಗೆ ಒಂದು ಸಾಕ್ಷಿಯಾಗಿದೆ.

ಶ್ರೀ ಕೃಷ್ಣ ಪರಮಾತ್ಮನನ್ನು ಮೆಚ್ಚಿಸಲಿಕ್ಕೆಂದು, ಇಳೆಯ ಜಾಣರು ಮೆಚ್ಚುವಂತೆ, ಹಲವು ಜನ್ಮದ ಪಾಪರಾಶಿಯನ್ನು ತೊಳೆವ ಜಲವಿದು ಎಂದು ಕುಮಾರವ್ಯಾಸ ತನ್ನ ಕಾವ್ಯದ ಮಹತಿಯನ್ನು ಹೇಳುತ್ತಾನೆ.

ಗದುಗಿನ ವೀರನಾರಾಯಣನ ಕಿಂಕರನಾದ ತನಗೆ ತನ್ನ ಕಾವ್ಯ ರಚನೆಯಲ್ಲಿ ಎಂತಹ ಬಲುಹು ಬಂದಿದೆ ಎಂದು ಹೆಮ್ಮೆಯಿಂದಲೇ ಹೇಳುತ್ತಾನೆ. ತನ್ನ ಕಾವ್ಯಕೃತಿಯಲ್ಲಿ ಏನಾದರೂ ಓರೆ-ಕೋರೆ ಇದ್ದರೆ ಇದನ್ನು ಬಲ್ಲವರು ತಿದ್ದಬೇಕೆಂದು ಸೌಜನ್ಯದಿಂದ ಹೇಳುತ್ತಾನೆ. ರಾಮಾಯಣದ ಬಗೆಗೆ ಕಾವ್ಯರಚನೆ ಅತಿಯಾದಾಗ, ತಾನು ಮಹಾಭಾರತ ರಚಿಸಿದ ಬಗ್ಗೆ ಹೆಮ್ಮೆಯಿಂದ ಹೇಳುತ್ತ ತಾನು ಬಣಗು ಕವಿಗಳ ಲೆಕ್ಕಿಸಲಾರ, ತಾನು ಶುಕರೂಪನು ಮತ್ತು ಉಳಿದವರ ಕುಣಿಸಿ ತಾನು ನಗದೇ ಇರಲಾರ' ಎಂಬ ಧಾರ್ಷ್ಟ್ಯದ ಮಾತನ್ನೂ ಸಮಂಜಸವಾಗಿ ಹೇಳಿದ್ದಾನೆ.

ತನ್ನ ಮಹಾಭಾರತದ ಕಥೆ ಎಂಬ ಶರಧಿಯಲ್ಲಿ ಅನೇಕ ಪುರಾಣ ಶಾಸ್ತ್ರಗಳು ಅಡಗಿವೆಯೆಂಬುದನ್ನು ಅವನು ಸೂಚಿಸುವ ರೀತಿಯಲ್ಲಿ ಮನೋಜ್ಞವಾಗಿದೆ: ಅರಸುಗಳಿಗೆ ವೀರಶ್ರೀಯಂತೆ, ದ್ವಿಜರಿಗೆ ಪರಮವೇದದ ಸಾರ, ಯೋಗೀಶ್ವರರಿಗೆ ತತ್ವವಿಚಾರ, ಮಂತ್ರಿ ಜನರಿಗೆ ಬುದ್ಧಿಗುಣ, ವಿರಹಿಗಳಿಗೆ ಶೃಂಗಾರ, ವಿದ್ಯಾಪರಿಣತರಿಗೆ ಅಲಂಕಾರ, ಕಾವ್ಯಕ್ಕೆ ಗುರು.'

ತನ್ನ ಮಹಾಭಾರತ ಕಾವ್ಯವನ್ನೋದಿದರೆ, 'ವೇದ ಪಾರಾಯಣದ ಫಲ, ಗಂಗಾದಿ ತೀರ್ಥಸ್ನಾನ ಫಲ, ಕೃಚ್ಛ್ರಾದಿ ತಪಸಿನ ಫಲ, ಜ್ಯೋತಿಷ್ಟೋಮ ಯಾಗ ಫಲ, ಮಹಸ್ರಾದಿ ಕನ್ಯಾದಾನ ಫಲ' ದೊರೆಯುತ್ತದೆ ಎಂಬ ಭರವಸೆಯನ್ನು ಓದುಗರಿಗೆ ಕೊಡುತ್ತಾನೆ.

ಒಂದು ವೇಳೆ ಯಾರಾದರೂ ತನ್ನ ಕಾವ್ಯವನ್ನು ನಿಂದಿಸಿದರೆ, ಚೋರ ನಿಂದಿಸಿ ಶಶಿಯ ಬೈದಡೆ, ಕ್ಷೀರವನು ಕ್ಷಯರೋಗಿ ಹಳಿದಡೆ, ವಾರಣಾಸಿಯ ಹೆಳವ ನಿಂದಿಸಿ ನಕ್ಕರೇನಹುದು ಭಾರತದ ಕಥನ ಪ್ರಸಂಗವ ಕ್ರೂರ ಕರ್ಮಿಗಳೆತ್ತ ಬಲ್ಲರು ಘೋರ ರೌರವವನ್ನು ಕಿಡಿಸುಗು ಕೇಳ್ದ ಸಜ್ಜನರ...ಎಂಬ ಮಾರ್ಮಿಕ ಮಾತನ್ನು ಹೇಳಿ ಓದುಗರನ್ನು ಎಚ್ಚರಿಸುತ್ತಾನೆ.

ಕೊನೆಗೆ ಕುಮಾರವ್ಯಾಸನು ತನ್ನ ಭಕ್ತಿ ಪುರಸ್ಸರತೆಯಲ್ಲಿ...'ಆದಿ ಮಾರುತಿ ಸಲಹೊ, ಗದುಗಿನ ವೀರ ನಾರಾಯಣ...'ಎಂದು ಅನನ್ಯವಾಗಿ ಪ್ರಾರ್ಥಿಸಿ, ತನ್ನ ಭಕ್ತಿ ಪರಾಕಾಷ್ಠೆಯನ್ನೇ ಪ್ರದರ್ಶಿಸುತ್ತಾನೆ.

ಜನ್ಮಾಂತರದ ರಹಸ್ಯವನ್ನು
ಬಲ್ಲವರಾರು?

ನೇಪಲ್ಸಿನ ಮೊಸಳೆಯ ಸಮಸ್ಯೆ

ಆರ್. ನಾರಾಯಣ ಅಯ್ಯರ್

ನೇಪಲ್ಸ್ ನಗರದ ಪ್ರಾಣಿಸಂಗ್ರಹಾಲಯದಲ್ಲಿ ಮೊಸಳೆಯ ಮಡುವಿನ ಮುಂಭಾಗದಲ್ಲಿ ಅಲ್ಲಿರುವ ಮೊಸಳೆಯು ದೊರಕಿದ ಇತಿಹಾಸವನ್ನು ಪ್ರೇಕ್ಷಕರಿಗೆ ತಿಳಿಯುವಂತೆ ಬರೆದಿರುವ ಫಲಕವನ್ನಿಟ್ಟಿದ್ದಾರೆ:

ಸುಮಾರು ೨೦ ವರ್ಷಗಳ ಹಿಂದೆ, ಪುಟ್ಟ ಬಾಲಕನೊಬ್ಬನು ಮಣ್ಣಿನ ಮಡಕೆಯಲ್ಲಿ ಗಂಗೆಯ ನೀರನ್ನು ತುಂಬಿ ದಡದ ಮೇಲಿಟ್ಟನು. ಪಾಪ! ಆ ಬಾಲಕನಿಗೆ ತಂದೆಯಿರಲಿಲ್ಲ. ತಾಯಿಯು ಜ್ವರ ಬಂದು ಮಲಗಿದ್ದಳು. ಆದ್ದರಿಂದ ಅವನೇ ನದಿಯಿಂದ ನೀರನ್ನು ಹೊತ್ತು ತರಬೇಕಾಗಿದ್ದಿತು. ತಲೆಯ ಮೇಲಿಟ್ಟುಕೊಳ್ಳಲೆಂದು ಮಡಕೆಯನ್ನು ಅವನು ಮೇಲಕ್ಕೆತ್ತಲಿದ್ದನು.

ಆಗ ಮಡಕೆಯ ನೀರಿನಲ್ಲಿ ಸಣ್ಣ ಪ್ರಾಣಿಯೊಂದು ಈಜುತ್ತಿದ್ದುದನ್ನು ಕಂಡು ಅವನು, "ಓ! ಎಷ್ಟು ಮುದ್ದಾಗಿದೆ, ಈ ಜಾತಿಯ ಮೀನು!" ಎಂದು ಆನಂದದಿಂದ ಮಡಕೆಯನ್ನು ಹೊತ್ತು ಮನೆಗೆ ನಡೆದನು.

ಅವನು ಅದಕ್ಕೆ ರೊಟ್ಟಿಯ ಚೂರುಗಳನ್ನು ಹಾಕಿ ನೋಡಿದನು. ಆದರೆ ಅದು ರೊಟ್ಟಿಯ ಚೂರುಗಳನ್ನು ತಿನ್ನಲಿಲ್ಲ. ಆ ದಿನ ಸಂಜೆ ಆ ಬಾಲಕನ ಗೆಳೆಯರು ಬಂದಾಗ ಅವರಲ್ಲೊಬ್ಬನು, "ಇದು ಮೊಸಳೆಯ ಎಳೆಯ ಮರಿ ಇರುವಂತಿದೆ. ಇದಕ್ಕೆ ಹುಳಗಳನ್ನು ಹಿಡಿದು ಹಾಕಿ ನೋಡೋಣ," ಎಂದು ಸೂಚಿಸಿದನು.

ಸರಿ! ಇನ್ನು ಆ ಬಾಲಕರ ಸಂಭ್ರಮವನ್ನು ಕೇಳಬೇಕೆ? ಆಟದ ಮೈದಾನದಲ್ಲೆಲ್ಲಾ ಹುಳ ಹುಪ್ಪಡಿಗಳ ಬೇಟೆಗಾಗಿ ಅವರು ಕೂಗಿ ಕೇಕೆ

ಶ್ರೀ ಕೃಷ್ಣಭಟ್ಟರಿಗೆ ವಂದನೆಗಳು.

ಡಿಸೆಂಬರ್ "ಕಸ್ತೂರಿ"ಯ "ಸಹಚಿಂತನ" ವಿಭಾಗದಲ್ಲಿ ನಿಮ್ಮ ಪತ್ರವನ್ನು ಓದಿದೆ. ಧನ್ಯವಾದಗಳು.

ಕನ್ನಡ ಸಾರಸ್ವತ ಜಯಂತಿ ಎತ್ತಿ ಆಡಿಸಿದ, ತೋರಿಸಿದ ಮಕ್ಕಳಲ್ಲಿ ನಾನೂ ಒಬ್ಬ; ಕಥಾ ಲೇಖನದಲ್ಲಿ ಕಾಣಿಸಿರುವ 'ಅಶ್ವ'. ಇದೇ ನನ್ನ ಸಂಬಂಧ ಜಯಂತಿಯೊಂದಿಗೆ.

—ಅಶ್ವತ್ಥ

ಭೂಲೋಕದ ನಾಶ ತಡೆಯಲು

ತಮ್ಮ ನವಂಬರ್ ೧೯೮೦ರ "ಕಸ್ತೂರಿ"ಯ ೫೦ನೇ ಪುಟದಲ್ಲಿ "ಭೂಲೋಕ ಹೇಗೆ ನಾಶ-ವಾಗುವದು" ಲೇಖನ ಓದಿದೆ. ಇದನ್ನು ಮಾನವ ತಡೆಯಲಾರ. ಭೂಮಿಯು ಜಲಪ್ರಳಯ, ಲಾವಾರಸದ ಪ್ರವಾಹದಿಂದಾಗಲಿ ನಾಶವಾಗುವುದು ಎಂಬುದಾಗಿ ವಿವರಿಸಿದ್ದಾರೆ. ಆದರೆ ನನ್ನ ಅಭಿಪ್ರಾಯ ಮಾನವನು ಮಾನವನಿಂದಲೇ ನಾಶವಾಗುವ ಕಾಲ ದೂರವಿಲ್ಲ. ತಡೆಯಲು ದಾರಿ ಇದೆಯೇ? 'ದೇವಿಮಾಹಾತ್ಮ್ಯ' ಫಲಶ್ರುತಿಯಲ್ಲಿ ಭಗವತೀದೇವಿಯು ಹುಟ್ಟು ಸಾವುಗಳಿಲ್ಲದೆ ನಿತ್ಯಳಾದರೂ ಮತ್ತೆ ಮತ್ತೆ ಅವತರಿಸಿ ಜಗತ್ತಿನ ಪಾಲನೆಯನ್ನು ಮಾಡುತ್ತಾಳೆ. ಈ ಜಗತ್ತೆಲ್ಲವೂ ಮಹಾಪ್ರಳಯ ಕಾಲದಲ್ಲಿ ಮಹಾ ಮಾರಿಸ್ವರೂಪಳೂ ಮಹಾಕಾಳಿಯೂ ಆದ ಅವಳಿಂದ ವ್ಯಾಪಿಸಲ್ಪಟ್ಟಿದೆ. ಸನಾತನಿಯಾದ ಅವಳೇ ಸ್ಥಿತಿ ಕಾಲದಲ್ಲಿ ಪ್ರಾಣಿಕೋಟಿಗಳ ರಕ್ಷಣೆಯನ್ನು ಮಾಡುತ್ತಾಳೆ. ಮಾನವರ ಅಭ್ಯುದಯ ಕಾಲದಲ್ಲಿ ಅವಳೇ ಮನೆಯಲ್ಲಿ ಸಮೃದ್ಧಿಯನ್ನುಂಟು ಮಾಡುವ ಲಕ್ಷ್ಮಿಯಾಗಿರುತ್ತಾಳೆ. ಹಾಗೆಯೇ ಅವಳೇ ಅವನತಿಯ ಕಾಲದಲ್ಲಿ ಅಲಕ್ಷ್ಮಿಯಾಗಿ ವಿನಾಶವನ್ನುಂಟು ಮಾಡುತ್ತಾಳೆ.

ಎಲ್ಲಿ ನೋಡಿದರಲ್ಲಿ ಅಧರ್ಮ, ಅತ್ಯಾಚಾರ, ಕೊಲೆ, ಸುಲಿಗೆ, ಮೋಸ, ವಂಚನೆ ನಡೆಯುತ್ತಿರುವುದು (ದೇಶದ) ಪ್ರಪಂಚದ ವಿನಾಶ ಕಾಲ ಸಮೀಪಿಸುತ್ತಿರುವುದನ್ನು ತೋರಿಸುತ್ತದೆ. ಆದ್ದರಿಂದ ದೇವಿಯ ಮಾಹಾತ್ಮ್ಯವನ್ನು (೧೩ ಅಧ್ಯಾಯ) ವಿಪದ್ಭಂಜನಕ್ಕೆ ಅನುಗ್ರಹಕ್ಕೆ ಮತ್ತು ಧರ್ಮಬುದ್ಧಿಯನ್ನು ಶುಭಗತಿಯನ್ನು ಪಡೆಯುದಕ್ಕೆ ಪಾರಾಯಣಿಸಬೇಕು.

ಮುಡಿಪು —ಎಂ. ಎಸ್. ಎನ್. ಬಿ.

ಗೊತ್ತೇ ಇರಲಿಲ್ಲ

ವಂಗಬಂಧು ಮುಜಿಬರ್‌ರವರಿಗೆ ಸ್ಫೂರ್ತಿ ನೀಡಿದ ಕ್ರಾಂತಿಕಾರಿ "ಸೂರ್ಯಸೇನ"ರ ಪರಿಚಯವನ್ನು ಡಿಸೆಂಬರ "ಕಸ್ತೂರಿ" ನೀಡಿ ಉಪಕರಿಸಿದೆ. ಇದು ಭಾರತೀಯ, ಈಗಿನ ಪೀಳಿಗೆಯವರಾದ ನಮಗೆ ಈ ಮೊದಲು ಗೊತ್ತೇ ಇರಲಿಲ್ಲ. ಕೆ. ಎ. ಕುಬಣೂರಾಯರಿಗೆ ಅಭಿನಂದನೆಗಳು.

ಕೃಷ್ಣರಾಜನಗರ —ವಿ. ನಾರಾಯಣ

ಹೊಸ ಇಸಂ?

ಡಿಸೆಂಬರ್ ೮೦ರ "ಕಸ್ತೂರಿ"ಯಲ್ಲಿ ಕೆ. ಚಂದ್ರಮೌಳಿ ಅವರು ಬರೆದ "ಬಾಸಿಸಂ" ಎಂಬ ಲೇಖನ ಪ್ರಕಟಿಸಿದ್ದೀರಿ. ನನಗಂತೂ ಅದು ತುಂಬ ಹಿಡಿಸಿತು. ಲೇಖಕರು ಫ್ಯಾಸಿಸಂ, ನಾಜಿಸಂ ಎಂದು ಇಸಂಗಳ ಬಗ್ಗೆ ಹೇಳುತ್ತಾ ಬಾಸಿಸಂ ಕೂಡ ಇಂಥ ಇಸಂಗಳ ಪಟ್ಟಿಯಲ್ಲಿ ಬರುವದು ಎಂದು ತಮ್ಮದೇ ಶೈಲಿಯಲ್ಲಿ ಬಹು ಮಾರ್ಮಿಕವಾಗಿ ಹೇಳಿದ್ದಾರೆ.

ಗಲಗಲಿ —ಎನ್. ಆರ್.

ತಿದ್ದುಪಡಿ

ಇದೇ ಸಂಚಿಕೆಯ ೫೦ನೆಯ ಪುಟದಲ್ಲಿ ಪ್ರಕಟವಾದ ತೆಲುಗು ಕಥೆ 'ಬದುಕು' ಕಾಮೆಡಿ ಒಂದೇ ಅಲ್ಲ'ದ ಮೂಲ ಲೇಖ-ಕರು ಶ್ರೀ ಇಚ್ಛಾಪುರಪು ರಾಮಚಂದ್ರ ರಾವು. ಕಣ್ತಪ್ಪಿನಿಂದ ಅವರ ಹೆಸರು ಪ್ರಕಟವಾಗದೆ ಉಳಿದಿದೆ. —ಸಂ.



ಕಸ್ತೂರಿ

ವರ್ಷ : ೨೫ ಸಂಚಿಕೆ : ೫

ಜನವರಿ ೧೯೮೧

ವೀರ, ವೇದದ ಸಾರ

ಸಿ. ಎಂ. ದೇವೇಂದ್ರ ನಾಯಕ

ನಡುಗನ್ನಡದ ಮಹಾಕವಿ ಕುಮಾರವ್ಯಾಸನ ಮಹಾಭಾರತ ಕಾವ್ಯಸುಧೆಯನ್ನು ಓದಿ ಸವಿಯುವವರಿಗೆ, ಕೇಳಿ ಸೂರೆಗೊಳ್ಳುವವರಿಗೆ ಅವನ ಕಾವ್ಯದ 'ಮಂಗಲ ಪೀಠಿಕೆ' ಒಂದು ರತ್ನ ಖಚಿತ ಮಹಾದ್ವಾರದಂತಿದೆ. ಅವನು ಕಾವ್ಯ ಲೋಕದಲ್ಲಿ ಕಾಲಿಡುವ ಮೊದಲು, ತನ್ನ ಸಕಲ ಇಷ್ಟ ದೇವತೆಗಳಿಗೆ ವಂದಿಸಿ, ತನ್ನ ಕಾವ್ಯದ ಪರಮ ದೈವತವೆನಿಸಿದ ಗದುಗಿನ ವೀರನಾರಾಯಣನ ಭಕ್ತಿಯಲ್ಲಿ ಮೈಮರೆತುಬಿಡುತ್ತಾನೆ. ಹಾಗೆಯೇ ಓದುಗರು, ಕೇಳುಗರು ಸಹ ತನ್ನ ಭಕ್ತಿಪುರಸ್ಸರ-ತೆಯಲ್ಲಿ ತಲ್ಲೀನರಾಗುವಂತೆ ಮಾಡುತ್ತಾನೆ.

ಓದುಗರು ಅಥವಾ ಕೇಳುಗರು ಕವಿಹೃದಯದವರಿದ್ದರಂತೂ ತೀರಿತು, ಅವನ

ಶ್ರೀ ವನಿತೆಯರಸನೆ ವಿಮಲ ರಾ
ಜೀವ ಸಖನ ಪೀಠನ ಪಿತನೆ ಜಗಕತಿ
ಪಾವನನೆ……

ಎಂಬ ಮಂಗಳಕರವಾದ ಪೀಠಿಕೆ ಒಂದು ಉಜ್ವಲ ಕಾವ್ಯದೀಪ್ತಿಯನ್ನೇ ಅವರಲ್ಲಿ ಝಗ್ಗೆಂದು ಬೆಳಗಿಸುತ್ತದೆ.

ಮಂಗಲ ಪೀಠಿಕೆಯ ಒಂದೊಂದು ಸವಿ ನುಡಿಯನ್ನು ಓದುತ್ತಿದ್ದಂತೆ, ಕಾವ್ಯಲೋಕದಲ್ಲಿ

ಕಾಲಿಟ್ಟಂತೆ ಭಾಸವಾಗುತ್ತದೆ. ಇದನ್ನು ಅನುಭವಿಸಬೇಕೆ ಹೊರತು, ಶಬ್ದ ಸಂಪತ್ತಿನಿಂದ ವರ್ಣಿಸಲಸದಳ. ಈ ಕಾವ್ಯಲೋಕದಲ್ಲಿ ಪ್ರವೇಶಿಸುತ್ತಿದ್ದಂತೆಯೇ ಮೈ, ಮನಸ್ಸು, ಹೃದಯ ಪುಲಕಗೊಂಡು ರೋಮಾಂಚನವಾಗುತ್ತದೆ. ಕಾವ್ಯದ ವಿದ್ಯುದುನ್ಮಾದ ಕಣ್ಣು ಕುಕ್ಕಿಸುತ್ತದೆ. ವೇದಮಾತೆ, ಶಾರದೆಯನ್ನು ಕವಿ ಕುಮಾರವ್ಯಾಸ ಸ್ಮರಿಸುವ ರೀತಿ ಮೈ ಝುಮ್ಮೆನಿಸುತ್ತದೆ.

ವೀರನಾರಾಯಣನೆ ಕವಿ,
ಲಿಪಿಕಾರ ಕುಮರ ವ್ಯಾಸ,
ಕೇಳುವ ಸೂರಿಗಳು ಸನಕಾದಿಗಳು
ಜಂಗಮ ಜನಾರ್ದನರು......

ಎಂಬ ದಿವ್ಯ ಕಲ್ಪನೆಯಂತೂ ಅವನು ಮಹಾಭಾರತ ಕಾವ್ಯಕ್ಕಿಟ್ಟ ಕಲಶ.

'ಲಕ್ಷ್ಮಿ ಕೊಡುಗೆಮಗಧಿಕ ಸಂಪದವ,' ಎಂದು ಪ್ರಾರ್ಥಿಸಿ, ಶಕ್ತಿದೇವತೆಯನ್ನು 'ಕೊಡು ಕಾರುಣ್ಯದಲಿ ಮತಿಯ' ಎಂದು ಬೇಡುತ್ತಾನೆ. ತನ್ನ ಕಾವ್ಯ ರಚನೆ ನಿರ್ವಿಘ್ನವಾಗಿ ರಚಿತವಾಗಬೇಕೆಂದು, ತನ್ನ ಮತಿಗೆ ಮಂಗಳವಾಗಬೇಕೆಂದು ವಿಘ್ನೇಶನನ್ನು ಪ್ರಾರ್ಥಿಸುತ್ತಾನೆ. ಇದು ಸಾಲದೆಂಬಂತೆ ಶಾರದೆ ನಲಿದೊಲಿದು ಅವನ ನಾಲಿಗೆಯ ಮೇಲೆ ನರ್ತಿಸಬೇಕೆಂಬ ಪ್ರಾರ್ಥನೆ ಎಷ್ಟೊಂದು ಸಫಲತೆ ಪಡೆಯಿತು ಎಂಬುದು ಮುಂದೆ ಅವನ ಸಮಗ್ರ ಕಾವ್ಯ ಓದಿದ ಮೇಲೆ ತಾನೇ ಮನದಟ್ಟಾಗುತ್ತದೆ. ಇದಲ್ಲದೆ 'ದೇವ ವೇದವ್ಯಾಸ ಗುರುರಾಯ ತರಳನಾದ ತನ್ನನ್ನು ಪತಿಕರಿಸಿ, ಮಗನೆಂದು ಒಲಿದು ಕರುಣದಿ ವರವನಿತ್ತನು' ಎಂಬ ಕುಮಾರವ್ಯಾಸನ ನುಡಿ, ಅವನ ವಿನಮ್ರತೆಗೆ, ಅವನ ಹೃದಯಶ್ರೀಮಂತಿಕೆಗೆ ಒಂದು ಸಾಕ್ಷಿಯಾಗಿದೆ.

ಶ್ರೀ ಕೃಷ್ಣ ಪರಮಾತ್ಮನನ್ನು ಮೆಚ್ಚಿಸಲಿಕ್ಕೆಂದು, ಇಳೆಯ ಜಾಣರು ಮೆಚ್ಚುವಂತೆ, ಹಲವು ಜನ್ಮದ ಪಾಪರಾಶಿಯನ್ನು ತೊಳೆವ ಜಲವಿದು ಎಂದು ಕುಮಾರವ್ಯಾಸ ತನ್ನ ಕಾವ್ಯದ ಮಹತಿಯನ್ನು ಹೇಳುತ್ತಾನೆ.

ಗದುಗಿನ ವೀರನಾರಾಯಣನ ಕಿಂಕರನಾದ ತನಗೆ ತನ್ನ ಕಾವ್ಯ ರಚನೆಯಲ್ಲಿ ಎಂತಹ ಬಲುಹು ಬಂದಿದೆ ಎಂದು ಹೆಮ್ಮೆಯಿಂದಲೇ ಹೇಳುತ್ತಾನೆ. ತನ್ನ ಕಾವ್ಯಕೃತಿಯಲ್ಲಿ ಏನಾದರೂ ಓರೆ-ಕೋರೆ ಇದ್ದರೆ ಇದನ್ನು ಬಲ್ಲವರು ತಿದ್ದಬೇಕೆಂದು ಸೌಜನ್ಯದಿಂದ ಹೇಳುತ್ತಾನೆ. ರಾಮಾಯಣದ ಬಗೆಗೆ ಕಾವ್ಯರಚನೆ ಅತಿಯಾದಾಗ, ತಾನು ಮಹಾಭಾರತ ರಚಿಸಿದ ಬಗ್ಗೆ ಹೆಮ್ಮೆಯಿಂದ ಹೇಳುತ್ತ ತಾನು ಬಣಗು ಕವಿಗಳ ಲೆಕ್ಕಿಸಲಾರ, ತಾನು ಶುಕರೂಪನು ಮತ್ತು ಉಳಿದವರ ಕುಣಿಸಿ ತಾನು ನಗದೇ ಇರಲಾರ' ಎಂಬ ಧಾರ್ಷ್ಟ್ಯದ ಮಾತನ್ನೂ ಸಮಂಜಸವಾಗಿ ಹೇಳಿದ್ದಾನೆ.

ತನ್ನ ಮಹಾಭಾರತದ ಕಥೆ ಎಂಬ ಶರಧಿಯಲ್ಲಿ ಅನೇಕ ಪುರಾಣ ಶಾಸ್ತ್ರಗಳು ಅಡಗಿವೆಯೆಂಬುದನ್ನು ಅವನು ಸೂಚಿಸುವ ರೀತಿಯಲ್ಲಿ ಮನೋಜ್ಞವಾಗಿದೆ: ಅರಸುಗಳಿಗೆ ವೀರಶ್ರೀಯಂತೆ, ದ್ವಿಜರಿಗೆ ಪರಮವೇದದ ಸಾರ, ಯೋಗೀಶ್ವರರಿಗೆ ತತ್ವವಿಚಾರ, ಮಂತ್ರಿ ಜನರಿಗೆ ಬುದ್ಧಿಗುಣ, ವಿರಹಿಗಳಿಗೆ ಶೃಂಗಾರ, ವಿದ್ಯಾಪರಿಣತರಿಗೆ ಅಲಂಕಾರ, ಕಾವ್ಯಕ್ಕೆ ಗುರು.'

ತನ್ನ ಮಹಾಭಾರತ ಕಾವ್ಯವನ್ನೋದಿದರೆ, 'ವೇದ ಪಾರಾಯಣದ ಫಲ, ಗಂಗಾದಿ ತೀರ್ಥ ಸ್ನಾನ ಫಲ, ಕೃಚ್ಛ್ರಾದಿ ತಪಸಿನ ಫಲ, ಜ್ಯೋತಿಷ್ಟೋಮ ಯಾಗ ಫಲ, ಮಹಾದಿ ಕನ್ಯಾದಾನ ಫಲ' ದೊರೆಯುತ್ತದೆ ಎಂಬ ಭರವಸೆಯನ್ನು ಓದುಗರಿಗೆ ಕೊಡುತ್ತಾನೆ.

ಒಂದು ವೇಳೆ ಯಾರಾದರೂ ತನ್ನ ಕಾವ್ಯವನ್ನು ನಿಂದಿಸಿದರೆ, ಚೋರ ನಿಂದಿಸಿ ಶಶಿಯ ಬೈದಡೆ, ಕ್ಷೀರವನು ಕ್ಷಯರೋಗಿ ಹಳಿದಡೆ, ವಾರಣಾಸಿಯ ಹೆಳವ ನಿಂದಿಸಿ ನಕ್ಕರೇನಹುದು ಭಾರತದ ಕಥನ ಪ್ರಸಂಗವ ಕ್ರೂರ ಕರ್ಮಿಗಳೆತ್ತ ಬಲ್ಲರು ಘೋರ ಕೌರವನನ್ನು ಕೆಡಿಸುಗು ಕೇಳ್ದು ಸುಜನರ...ಎಂಬ ಮಾರ್ಮಿಕ ಮಾತನ್ನು ಹೇಳಿ ಓದುಗರನ್ನು ಎಚ್ಚರಿಸುತ್ತಾನೆ.

ಕೊನೆಗೆ ಕುಮಾರವ್ಯಾಸನು ತನ್ನ ಭಕ್ತಿ ಪ್ರತಿಸ್ಪರತೆಯಲ್ಲಿ...'ಆದಿ ಮಾರುತಿ ಸಲಹೊ, ಗದುಗಿನ ವೀರ ನಾರಾಯಣ...'ಎಂದು ಅನನ್ಯವಾಗಿ ಪ್ರಾರ್ಥಿಸಿ, ತನ್ನ ಭಕ್ತಿ ಪರಾಕಾಷ್ಠೆಯನ್ನೇ ಪ್ರದರ್ಶಿಸುತ್ತಾನೆ.

ಜನ್ಮಾಂತರದ ರಹಸ್ಯವನ್ನು ಬಲ್ಲವರಾರು?

ನೇಪಲ್ಸಿನ ಮೊಸಳೆಯ ಕಥೆ

ಆರ್. ನಾರಾಯಣ ಅಯ್ಯರ್

ನೇಪಲ್ಸ್ ನಗರದ ಪ್ರಾಣಿಸಂಗ್ರಹಾಲಯದಲ್ಲಿ ಮೊಸಳೆಯ ಮಡುವಿನ ಮುಂಭಾಗದಲ್ಲಿ ಅಲ್ಲಿರುವ ಮೊಸಳೆಯು ದೊರಕಿದ ಇತಿಹಾಸವನ್ನು ಪ್ರೇಕ್ಷಕರಿಗೆ ತಿಳಿಯುವಂತೆ ಬರೆದಿರುವ ಫಲಕವನ್ನಿಟ್ಟಿದ್ದಾರೆ:

ಸುಮಾರು ೨೦ ವರ್ಷಗಳ ಹಿಂದೆ, ಪುಟ್ಟ ಬಾಲಕನೊಬ್ಬನು ಮಣ್ಣಿನ ಮಡಕೆಯಲ್ಲಿ ಗಂಗೆಯ ನೀರನ್ನು ತುಂಬಿ ದಡದ ಮೇಲಿಟ್ಟನು. ಪಾಪ! ಆ ಬಾಲಕನಿಗೆ ತಂದೆಯಿರಲಿಲ್ಲ. ತಾಯಿಯು ಜ್ವರ ಬಂದು ಮಲಗಿದ್ದಳು. ಆದ್ದರಿಂದ ಅವನೇ ನದಿಯಿಂದ ನೀರನ್ನು ಹೊತ್ತು ತರಬೇಕಾಗಿದ್ದಿತು. ತಲೆಯ ಮೇಲಿಟ್ಟುಕೊಳ್ಳಲೆಂದು ಮಡಕೆಯನ್ನು ಅವನು ಮೇಲಕ್ಕೆತ್ತಲಿದ್ದನು.

ಆಗ ಮಡಕೆಯ ನೀರಿನಲ್ಲಿ ಸಣ್ಣ ಪ್ರಾಣಿಯೊಂದು ಈಜುತ್ತಿದ್ದುದನ್ನು ಕಂಡು ಅವನು, "ಓ! ಎಷ್ಟು ಮುದ್ದಾಗಿದೆ, ಈ ಜಾತಿಯ ಮೀನು!" ಎಂದು ಆನಂದದಿಂದ ಮಡಕೆಯನ್ನು ಹೊತ್ತು ಮನೆಗೆ ನಡೆದನು.

ಅವನು ಅದಕ್ಕೆ ರೊಟ್ಟಿಯ ಚೂರುಗಳನ್ನು ಹಾಕಿ ನೋಡಿದನು. ಆದರೆ ಅದು ರೊಟ್ಟಿಯ ಚೂರುಗಳನ್ನು ತಿನ್ನಲಿಲ್ಲ. ಆ ದಿನ ಸಂಜೆ ಆ ಬಾಲಕನ ಗೆಳೆಯರು ಬಂದಾಗ ಅವರಲ್ಲೊಬ್ಬನು, "ಇದು ಮೊಸಳೆಯ ಎಳೆಯ ಮರಿ ಇರುವಂತಿದೆ. ಇದಕ್ಕೆ ಹುಳಗಳನ್ನು ಹಿಡಿದು ಹಾಕಿ ನೋಡೋಣ," ಎಂದು ಸೂಚಿಸಿದನು.

ಸರಿ ! ಇನ್ನು ಆ ಬಾಲಕರ ಸಂಭ್ರಮವನ್ನು ಕೇಳಬೇಕೆ? ಆಟದ ಮೈದಾನದಲ್ಲೆಲ್ಲಾ ಹುಳ ಹುಪ್ಪಡಿಗಳ ಬೇಟೆಗಾಗಿ ಅವರು ಕೂಗಿ ಕೇಕೆ

ಹಾಕುತ್ತ ಹೊರಟರು. ಸೊಣ, ಮಿಡತೆ ಇಂತಹ ಹುಳಗಳನ್ನು ಹಾಕಿದಾಗ, ಅವುಗಳನ್ನು ಆ ಪ್ರಾಣಿಯು ತಿಂದುಹಾಕುತ್ತಿದ್ದಿತು. ಆಗ ಬಾಲಕರು ಚಪ್ಪಾಳೆ ತಟ್ಟಿ ಇನ್ನಷ್ಟು ಜೋರಾಗಿ ಕೂಗುತ್ತಿದ್ದರು.

ಅದೇ ಸಮಯದಲ್ಲಿ ಕಾಶೀ ಕ್ಷೇತ್ರಕ್ಕೆ ಬಂದಿದ್ದ ಇಟಲಿ ದೇಶದ ಸೆಲ್ಲಿನಿ ಎಂಬ ಪ್ರವಾಸಿಯೊಬ್ಬನು. ಬಾಲಕರ ಕೂಗುಗಳಿಂದ ಆಕರ್ಷಿತನಾಗಿ, ಮಡಕೆಯಲ್ಲಿಟ್ಟಿದ್ದ ಪ್ರಾಣಿಯನ್ನು ನೋಡಲು ಬಂದನು. ಅದು ಮೊಸಳೆಯ ಎಳೆಯ ಮರಿ ಎಂದು ತಿಳಿದಾಗ ಆತನು ಆ ಬಾಲಕನ ತಾಯಿಯು ನಿರೀಕ್ಷಿಸಿದುದಕ್ಕಿಂತಲೂ ಹೆಚ್ಚು ಹಣವನ್ನು ಕೊಟ್ಟು ಅದನ್ನು ಕೊಂಡುಕೊಂಡನು.

ತನ್ನ ರೋಗದ ಚಿಕಿತ್ಸೆಗೆ ಅತ್ಯಾವಶ್ಯಕವಾಗಿ ಬೇಕಾಗಿದ್ದ ಹಣವು, ಹೀಗೆ ಅನಿರೀಕ್ಷಿತವಾಗಿ, ದೊರಕಿದುದಕ್ಕಾಗಿ ಆಕೆಯು ಆನಂದಿಸಿದಳು.

ಮುಂದೆ ಆತನು ಆ ಮೊಸಳೆಯ ಮರಿಯನ್ನು ಅನುಕೂಲವಾದ ಲೋಹದ ಪಾತ್ರೆಯೊಂದಕ್ಕೆ ವರ್ಗಾಯಿಸಿ, ತನ್ನ ಜೊತೆಯಲ್ಲಿಯೇ ಹಡಗಿನಲ್ಲಿ ತೆಗೆದುಕೊಂಡು ಸ್ವದೇಶಕ್ಕೆ ಹಿಂತಿರುಗಿದನು. ಮತ್ತು ನೇಪಲ್ಸ್ ನಗರದ ಪ್ರಾಣಿ ಸಂಗ್ರಹಾಲಯಕ್ಕೆ ಅದನ್ನು ಒಳ್ಳೆಯ ಲಾಭದಾಯಕ ಬೆಲೆಗೆ ಮಾರಾಟ ಮಾಡಿದನು.

ಫಲಕದಲ್ಲಿ ಪ್ರದರ್ಶಿಸಲಾಗಿರುವ ಈ ವಿವರಗಳನ್ನು ಅಲ್ಲಿ ಇಂದಿಗೂ ಕಾಣಬಹುದಂತೆ.

*

೭೦ ವರ್ಷಗಳಿಂದ ಆರೋಗ್ಯದಿಂದಿದ್ದ ಮೊಸಳೆಯು ಹೊಟ್ಟೆಹಸಿಯಲ್ಲಿ ವ್ರಣವೊಂದು ಕಾಣಿಸಿಕೊಂಡು, ಅದು ಆಹಾರವನ್ನು ಮುಟ್ಟದೇ ಕೃಶವಾಗುತ್ತ ಬಂದಿತು. ಸರ್ಕಸ್ ರಿಂಗಿನಂತಹ ಆವರಣದ ಒಳಗಡೆ ಅದನ್ನು ಸೇರಿಸಿ, ಹಗ್ಗಗಳಿಂದ ಬಿಗಿದು ಸಲಾಕೆಗಳಿಂದ ಬಾಯನ್ನು ಬಿಡಿಸಿ, ಆಪರೇಷನ್ ಮೂಲಕ ಶಸ್ತ್ರಚಿಕಿತ್ಸೆಯನ್ನು ಮಾಡಲು ಹಲವು ಬಾರಿ ಪ್ರಯತ್ನಗಳನ್ನು ಕೈಗೊಳ್ಳಲಾಯಿತು. ಆದರೆ ಮೊಸಳೆಯ ಬಲವಾದ ಪ್ರತಿಭಟನೆಯಿಂದ ಶಸ್ತ್ರಚಿಕಿತ್ಸೆಯು ಸಾಧ್ಯವಾಗಲಿಲ್ಲ.

ಒಂದು ತಿಂಗಳ ಕಾಲದಿಂದ ತೀವ್ರವಾಗಿ ನರಳುತ್ತಿದ್ದ ಅದರ ಅವಸಾನ ಕಾಲವು ಸಮೀಪಿಸುತ್ತಿದ್ದಂತೆ ತೋರಿ, ಬೇರೆ ಯಾವ ಉಪಾಯವನ್ನೂ ಕಾಣದೆ, ಅದನ್ನು ಗುಂಡಿಕ್ಕಿ ಕೊಂದು ಅದರ ನೋವನ್ನು ಕೊನೆಗಾಣಿಸುವುದೇ ಉತ್ತಮವೆಂದು ಪ್ರಾಣಿಸಂಗ್ರಹಾಲಯದ ಅಧಿಕಾರಿಗಳು ತಮ್ಮ ಕೊನೆಯ ತೀರ್ಮಾನವನ್ನು ಮಾಡಿದರು.

ಇದೇ ವರ್ಷ ಜನವರಿ ಒಂದನೆಯ ತಾರೀಖು ಹೊಸ ವರ್ಷಾರಂಭದ ದಿನ. ಪ್ರಾಣಿಸಂಗ್ರಹಾಲಯದೊಳಕ್ಕೆ ಅಂದು ಪ್ರೇಕ್ಷಕರು ಯಾರನ್ನೂ ಬಿಡುವ ದಿನವಾಗಿರಲಿಲ್ಲವೆಂದು, ಬಾಗಿಲು ಕಾಯುತ್ತಿದ್ದ ಸಿಪಾಯಿಯು ನಿಷೇಧಿಸುತ್ತಿದ್ದರೂ ಅದನ್ನು ಲಕ್ಷಿಸದೆ ಸಾಧುಗಳೊಬ್ಬರು ಒಳಕ್ಕೆ ನಡೆದರು.

ಅವರು ಉಟ್ಟಿದ್ದ ಕಾವಿಯ ಬಟ್ಟೆ, ಮೆಟ್ಟಿದ್ದ ಮರದ ಪಾದುಕೆಗಳು, ನೀಳವಾದ ಬಿಳಿಯ ಗಡ್ಡ, ವಯಸ್ಸಿನಿಂದ ಸುಕ್ಕುಗಟ್ಟಿದ್ದರೂ ಮುಖದಲ್ಲಿ ಹೊರಹೊಮ್ಮುತ್ತಿದ್ದ ದಿವ್ಯ ತೇಜಸ್ಸು, ಅವರ ಭವ್ಯಾಕೃತಿ, ಇವನ್ನು ನೋಡಿದ ಕಾವಲುಗಾರನಿಗೆ ಆ ಸಾಧುಗಳನ್ನು ತಡೆಯುವ ಧೈರ್ಯ ಬರಲಿಲ್ಲ.

ಅವರು ನೇರವಾಗಿ ಮಡುವಿನ ಬಳಿಗೆ ಹೋಗಿ ಅಲ್ಲಿ ಮೊಸಳೆಯನ್ನು ಗುಂಡಿಕ್ಕಿ ಕೊಲ್ಲಲು

ಏರ್ಪಾಡುಗಳನ್ನು ಮಾಡಿಕೊಳ್ಳುತ್ತಿದ್ದ ಅಧಿಕಾರಿಗಳಿಗೆ, ತಡೆಯುವಂತೆ ತಿಳಿಸಿದರು. ನಂತರ ಮೊಸಳೆಯನ್ನು ಸಮೀಪಿಸಿ, ತಮ್ಮ ಕಮಂಡಲುವಿನಿಂದ ಕೊಂಚ ನೀರನ್ನು ಅದರ ಮೇಲೆ ಪ್ರೋಕ್ಷಿಸಿ, "ಸುರೇಖಾ, ನೋಡು! ನಾನು, ಶಂಕರದೇವ ಬಂದಿರುವೆನು. ನಿನ್ನ ಕರ್ಮವಿನ್ನೂ ಸವೆದಿಲ್ಲವಾಗಿ ನೀನು ಇನ್ನೂ ಕೆಲವು ವರ್ಷಗಳ ವರೆಗೆ ಭೂಲೋಕದಲ್ಲಿಯೇ ಉಳಿಯಬೇಕಾಗಿರುವುದು," ಎಂದು ನುಡಿದರು.

ಇದೇನಾಶ್ಚರ್ಯ!

ಸಾಧುವರ್ಯರ ಧ್ವನಿಯನ್ನು ಕೇಳಿದುದೇ ತಡ, ಮೊಸಳೆಯು ನಿಶ್ಚಲವಾಗಿ ಮಲಗಿತು. ಅವರು ವೈದ್ಯರಿಗೆ ಶಸ್ತ್ರಚಿಕಿತ್ಸೆಯನ್ನು ಕೈಕೊಳ್ಳಬಹುದೆಂದು ನಿರೋಪವನ್ನಿತ್ತರು.

ಶಸ್ತ್ರಚಿಕಿತ್ಸೆಯು ಯಶಸ್ವಿಯಾಗಿ ನೆರವೇರಿತು.

ಹೀಗೆ ಅನಿರೀಕ್ಷಿತ ಹಾಗೂ ವಿಚಿತ್ರ ರೀತಿಯಲ್ಲಿ ಒದಗಿ ಬಂದ ಸಹಾಯಕ್ಕಾಗಿ ಪ್ರಾಣಿಸಂಗ್ರಹಾಲಯದ ಅಧಿಕಾರಿಗಳು ಸಾಧುಗಳನ್ನು ವಂದಿಸಿ, ಅವರಿಗೆ ಪ್ರತಿಫಲರೂಪವಾಗಿ ಹಣವನ್ನು ಕೊಡಲು ಬಂದರು.

ಆದರೆ, "ಭವಪಾಶವನ್ನು ತೊಡೆದು ಮುಕ್ತನಾಗಿರುವ ನನಗೇಕೆ ಇದು?" ಎಂದು ಹೇಳಿ, ಅವರು ಹಣವನ್ನು ಮುಟ್ಟದೇ ಹೊರಟು ಹೋದರು.

ಈ ಘಟನೆಯ ಬಗ್ಗೆ ಅಲ್ಲಿನ ಪತ್ರಿಕೆಗಳಲ್ಲಿ, "ಇಂಡಿಯಾ ದೇಶದ ಫಕೀರನೊಬ್ಬನು ನೇಪಲ್ಸ್ ನಗರದ ಪ್ರಾಣಿಸಂಗ್ರಹಾಲಯದ ಮೊಸಳೆಯೊಂದನ್ನು ಹಿಪ್ನೋಟೈಜ್ ಮಾಡಿ, ಅದರ ದವಡೆಯಲ್ಲಿ ಕಾಣಿಸಿಕೊಂಡಿದ್ದ ವ್ರಣದ ಶಸ್ತ್ರಚಿಕಿತ್ಸೆಯನ್ನು ನಡೆಸಲು ವೈದ್ಯರಿಗೆ ಸಹಾಯಕನಾದನು. ಎಪ್ಪತ್ತು



ವರ್ಷದ 'ಸುರಕ' ಎಂಬ ಈ ಮೊಸಳೆಯನ್ನು ಗಂಗಾನದಿಯಿಂದ ಹಿಡಿದು ತರಲಾಗಿದ್ದಿತು" ಎಂದಷ್ಟೇ ಸಂಕ್ಷಿಪ್ತ ವರದಿಯನ್ನು ಪ್ರಕಟಿಸಲಾಗಿದ್ದಿತು.

■

ಆದರೆ, "ವಿಕ್ಟೋರಿಯಾ ಇಟಾಲಿಕ" ಎಂಬ ಸ್ಥಳೀಯ ಪತ್ರಿಕೆಯಲ್ಲಿ ಪ್ರಕಟವಾದ ವರದಿಯು, ಈ ಶಸ್ತ್ರಚಿಕಿತ್ಸೆಯ ಹಿನ್ನೆಲೆಯಲ್ಲಿ ಅಡಗಿದ್ದ ದುರಂತ ಪ್ರೇಮಕಥೆಯನ್ನು ಬೆಳಕಿಗೆ ತಂದಿದೆ.

"ನೇಪಲ್ಸ್ ನಗರದಲ್ಲಿ ಭಾರತೀಯ ಸಾಧುಗಳೊಬ್ಬರು ಕಂಡುಬಂದುದು ವಿಶೇಷವಲ್ಲವೆ? ಯಾರವರು? ಏಕೆ ಬಂದರು?" ಇಂತಹ ಪ್ರಶ್ನೆಗಳಿಗೆ ಉತ್ತರಗಳನ್ನು ಪಡೆಯಬಯಸಿ, ಆ ಪತ್ರಿಕೆಯ ಸಾಹಸಿ ವರದಿಗಾರನು ಸಾಧುವರ್ಯರನ್ನು ಹಿಂಬಾಲಿಸಿದನು. ಸಾಧುಗಳಿಂದ ಆತನು ಸಂಗ್ರಹಿಸಿದನೆಂದು ಹೇಳಲಾದ ಕಥೆಯನ್ನೇ ಮುಂದೆ ಕೊಡಲಾಗಿದೆ.

ಹಲವಾರು ವಾರಗಳ ಹಿಂದೆ ಸುಬೋಧಾನಂದಜಿ ನಾಮಾಂಕಿತರಾದ ಇದೇ ಸಾಧುವರ್ಯರು ಹಿಮಾಲಯದ ಪರ್ವತಮಯ ಪ್ರದೇಶ ಹೃಷಿಕೇಶದಲ್ಲಿ ಇತರ ಸಾಧುಗಳೊಡನೆ ಭಜನೆ ಮಾಡುತ್ತ ಕುಳಿತಿದ್ದರು. ಅಂದು ಅವರು ದೇವರ ಧ್ಯಾನದಲ್ಲಿ ತಮ್ಮ ಮನಸ್ಸನ್ನು ಕೇಂದ್ರೀಕರಿಸಲು ಸಾಧ್ಯವಾಗಲಿಲ್ಲ. ಏನೋ ಒಂದು ಕಳವಳ, ಮಾನಸಿಕ ಅಶಾಂತಿ. ಕಾರಣವೇನೆಂಬುದೇ ಅವರಿಗೆ ತಿಳಿಯಲಿಲ್ಲ. ಹಲವಾರು ಬಾರಿ ಭಂಗಿಯ ಸೇವನೆಯನ್ನು ಮಾಡಿದರೂ ಮಾನಸಿಕ ಅಸ್ಥಿರತೆಯು ಮಾಯವಾಗಲಿಲ್ಲ. ಯಾವುದೋ ಒಂದು ಅವ್ಯಕ್ತ, ಅಗೋಚರ ಶಕ್ತಿಯು ಅವರನ್ನು ಅಲ್ಲಿಂದ ಎದ್ದು ಪಶ್ಚಿಮಾಭಿಮುಖವಾಗಿ ಪ್ರಯಾಣ ಮಾಡಲು ಪ್ರೇರೇಪಿಸುತ್ತಿದ್ದಂತೆ ಭಾಸವಾಗುತ್ತಿದ್ದಿತು.

ಆ ಅವ್ಯಕ್ತ ದೈವೀಶಕ್ತಿಯ ಪ್ರೇರಣೆಯ ಒತ್ತಡವನ್ನು ಎದುರಿಸಲಾರದೇ ಅವರು ಅಲ್ಲಿಂದ ಎದ್ದು ಪ್ರಯಾಣ ಹೊರಟದ್ದರು. ಗಾಡಿ, ಮೋಟಾರು, ರೈಲು, ಹಡಗು, ಹೀಗೆ ಅಪ್ರಾರ್ಥಿತವಾಗಿ ಸಜ್ಜನರು ಒದಗಿಸುತ್ತಿದ್ದ ಸೌಕರ್ಯಗಳನ್ನು ಉಪಯೋಗಿಸಿಕೊಂಡು, ಅವರು ನೇಪಲ್ಸ್ ನಗರವನ್ನು ತಲುಪಿ, ಪ್ರಾಣಿಸಂಗ್ರಹಾಲಯಕ್ಕೆ ಬಂದಿದ್ದರು.

ಆ ಸಮಯದಲ್ಲಿಯೇ, ತಮ್ಮನ್ನು ಅಲ್ಲಿ ಎಳೆದು ತಂದಿದ್ದ ಭಗವತ್ಪ್ರೇರಣೆಯ ಉದ್ದೇಶವೇನೆನ್ನುವುದು ಅವರ ದೃಷ್ಟಿಗೆ ಗೋಚರವಾಯಿತು.

ಸಾಧು ಸುಬೋಧಾನಂದಜಿಯವರು ತಮ್ಮ ಪೂರ್ವಾಶ್ರಮದಲ್ಲಿ ವೈದ್ಯವೃತ್ತಿಯನ್ನು ಕೈಕೊಂಡಿದ್ದ ಶಂಕರದೇವ ನಾಮಾಂಕಿತ ಯುವಕರಾಗಿದ್ದರು. ಅವರು ನೆರೆಮನೆಯ ಯುವತಿ ಹಾಗೂ ತಮ್ಮ ಬಾಲ್ಯದ ಗೆಳತಿಯಾಗಿದ್ದ ಸುರೇಖಾಳನ್ನು ಪ್ರೀತಿಸುತ್ತಿದ್ದರು. ಆದರೆ ಆಕೆಯ ಮಾತಾ-ಪಿತೃಗಳು ಮಗಳ ಅಪೇಕ್ಷೆಯನ್ನು ಅಲಕ್ಷಿಸಿ, ಧನಿಕ ಯುವಕನೊಬ್ಬನೊಡನೆ ಆಕೆಯ ವಿವಾಹವನ್ನು ನೆರವೇರಿಸಲು ತೀರ್ಮಾನಿಸಿದಾಗ, ಆಕೆಯು ಜುಗುಪ್ಸೆಗೊಂಡು ಗಂಗೆಯನ್ನು ಹಾರಿಹೊಕ್ಕು ತನ್ನ ಅಸುವನ್ನು ನೀಗಿದ್ದಳು.

ತನ್ನ ಭಾವಿ ಪತ್ನಿಯ ಈ ದಾರುಣ ಅಂತ್ಯದ ಸುದ್ದಿಯನ್ನು ತಿಳಿದಾಗ ದುಃಖತಪ್ತರಾದ ಶಂಕರದೇವರು, ಮಾನಸಿಕ ಶಾಂತಿಯನ್ನರಸಿ ಸಂನ್ಯಾಸವನ್ನು ಸ್ವೀಕರಿಸಿದ್ದರು.

ಆದರೆ ಭಗವಂತನ ಲೀಲೆಯ ಆಳವನ್ನು ಅರಿತವರಾರು?

ಅಂದಿನ ಸುರೇಖಾ-ಶಂಕರದೇವರು, ಇಂದು

ಮೊಸಳೆ-ಸುಬೋಧಾನಂದಜಿಯವರಾಗಿ ಭೇಟಿಯಾಗಿದ್ದರು.

•

"ಸತ್ತು ಹೋಗಿದ್ದ ಸುಲೇಖಾಳು ಮೊಸಳೆಯಾಗಿ ಪುನರ್ಜನ್ಮ ಪಡೆದಿದ್ದಳೆ?"

"ಪ್ರಾಣಿಸಂಗ್ರಹಾಲಯದ ಅಧಿಕಾರಿಗಳು ಮೊಸಳೆಗೆ 'ಸುಲಕ' ಎಂದು ನಾಮಕರಣ ಮಾಡಿದುದರಲ್ಲಿ ತೋರಿ ಬರುವ ಹೆಸರುಗಳ ಸಾಮ್ಯವು ಆಕಸ್ಮಿಕ ಮಾತ್ರವೇ ಆಗಿರುವುದೇ ? ಅಥವಾ ಅದಕ್ಕೆ ವಿಶೇಷಾರ್ಥವನ್ನು ಕಲ್ಪಿಸಬಹುದೇ?"

"ಭವಪಾಶವನ್ನು ತೊರೆದು ಮುಕ್ತರಾಗಿರಲು ಬಯಸಿದ್ದ ಸಾಧುವರ್ಯರನ್ನು, ನೇಪಲ್ಸ್ ನಗರಕ್ಕೆ ಎಳೆದು ತಂದಿದ್ದ ಆ ಅವ್ಯಕ್ತ ಶಕ್ತಿಯು ಪ್ರೇಮದ ಅಗಾಧ ಶಕ್ತಿಯೋ ಅಥವಾ ಭಗವತ್ಪ್ರೇರಣೆಯೋ ಅಥವಾ ಎರಡೂ ಇರಬಹುದೋ?"

"ಆಧ್ಯಾತ್ಮಿಕ ವಿಷಯಗಳಲ್ಲಿ ಸಿದ್ಧಹಸ್ತರೆನ್ನಿಸಿದ ಭಾರತೀಯರು ಈ ಪ್ರಶ್ನೆಗಳಿಗೆ ಬಹು ಸುಲಭವಾಗಿ ಉತ್ತರಗಳನ್ನು ಕೊಡಬಲ್ಲರು. ಆದರೆ ಪ್ರಾಪಂಚಿಕ ವ್ಯಸನಗಳಲ್ಲಿಯೇ ಮುಳುಗಿರುವ ಪಾಶ್ಚಿಮಾತ್ಯರು ಏನು ಹೇಳುವರು?"

ಹೀಗೆಂದು ಆ ಪತ್ರಿಕಾ ಪ್ರತಿನಿಧಿಯು ಕೊನೆಯದಾಗಿ ಸವಾಲು ಹಾಕಿರುವನು. ✡

ಸಂನ್ಯಾಸ ಸ್ವೀಕಾರ

ಒಂದು ದಿನ ಒಬ್ಬಳು ಮನೆಯಾಕೆ ತನ್ನ ಪತಿಯೊಡನೆ, "ನೋಡಿ, ನನ್ನ ತಮ್ಮನು ಸಂನ್ಯಾಸ ತೆಗೆದುಕೊಳ್ಳುವೆನೆಂದು ಒಂದು ವಾರದಿಂದಲೂ ಓಡಿಯಾಡುತ್ತಾನೆ; ಆಸೆ-ಕಾಮನೆಗಳನ್ನು ಕೊಂಚಕೊಂಚವಾಗಿ ಕಡಿಮೆ ಮಾಡುತ್ತಿದ್ದಾನೆ," ಎಂದು ಗೋಳು ಹುಯ್ಯತೊಡಗಿದಳು. ಆತನು ಅದಕ್ಕೆ ಉತ್ತರವಾಗಿ, "ಪ್ರಿಯೇ, ನಿನ್ನ ತಮ್ಮನ ಕುರಿತು ಚಿಂತಿಸಬೇಡ. ಅವನು ಖಂಡಿತವಾಗಿಯೂ ಸಂನ್ಯಾಸ ತೆಗೆದುಕೊಳ್ಳುವುದಿಲ್ಲ. ಸಂನ್ಯಾಸ ಸ್ವೀಕಾರ ಮಾಡುವವರ ಮಾರ್ಗವೇ ಬೇರೆ," ಎಂದನು. "ಹಾಗಾದರೆ ಆ ಮಾರ್ಗ ಯಾವುದು ?" ಎಂದು ಕುತೂಹಲದಿಂದ ಆಕೆ ಪ್ರಶ್ನಿಸಿದಳು.

"ಇದೋ! ಹೀಗೆ" ಎಂದು ಆತನು ತಾನು ಧರಿಸಿದ್ದ ಉತ್ತಮ ವಸ್ತ್ರಗಳನ್ನು ಚಿಂದಿ ಚಿಂದಿಯಾಗಿ ಹರಿದು ಹಾಕಿ, ತೊಟ್ಟಿದ್ದ ಬೆಲೆ ಬಾಳುವ ಆಭರಣಗಳನ್ನು ಒಂದೊಂದಾಗಿ ತೆಗೆದುಹಾಕಿ, ಒಂದು ತುಂಡು ಅರಿವೆಯನ್ನು ಮಾತ್ರ ಸೊಂಟಕ್ಕೆ ಸುತ್ತಿಕೊಂಡು, "ಇನ್ನು ಮುಂದೆ ನೀನೂ ಮತ್ತಿತರ ಸ್ತ್ರೀಯರೂ ನನಗೆ ಮಾತೃಸ್ವರೂಪರು" ಎಂದು ಆಕೆಗೆ ತಿಳಿಸಿ, ಮನೆ ಬಿಟ್ಟು ಹೊರಟೇಹೋದವನು ಮತ್ತೆ ಎಂದಿಗೂ ಹಿಂದಿರುಗಲೇ ಇಲ್ಲ. ಅಂತೆಯೇ ವೈರಾಗ್ಯ ಎಂದಿಗೂ ಹನಿಹನಿಯಾಗಿ ಬರುವುದಿಲ್ಲ; ಬಂದರೆ ಪ್ರವಾಹದಂತೆ ಬಂದು ಕೊಚ್ಚಿಕೊಂಡು ಹೋಗುತ್ತದೆ. —ಸಿ. ಎಚ್. ಕೃಷ್ಣಭಟ್ಟ

(ಶ್ರೀ ರಾಮಕೃಷ್ಣ ಪರಮಹಂಸರ ಮಾರ್ಮಿಕ ಕಥೆ)


ರಂಗೋಲಿ ಮತ್ತು ಮಗ

೧

ನಮ್ಮೊಂದು ಮನೆ ವಿನಾ
ಮಿಕ್ಕೆಲ್ಲ ಮನೆಯೆದುರು ಪರಿಶುಭ್ರ ಹಲ್ಲಂತೆ
ಮುಂಜಾನೆ ರಂಗವಲ್ಲಿ: ಕಿಲಕಿಲಿಸಿದಂತೆ ಇವಿ ನಕ್ಕೆ.
ಶಾಲೆಗೆ ಹೊರಟಾಗ ಮೊತ್ತಾರೆ
ಚಿತ್ತಾಪಹಾರಿ ಚಿತ್ತಾರ
ಬಾಲೆ ಮನಸಿನ ಪೋಲಿ ಪೋಲಿಗಳ ಬೇಗ
ತಿಳಿದು ತುಂಬುವುದೇಷ್ಟು ತೀವ್ರ ಭಾವಾವೇಗ !
ಈ ರಸ್ತೆನಿಸ ಹಾಗೆ ಅದಿಲ್ಲ.
ಜ್ಯಾಮಿತಿಯ ಗಹನ, ಜಟಿಲ ಸೂತ್ರಗಳಿಗೆಲ್ಲ
ವಕ್ರರೂಪವಿಲ್ಲಿ ಮಿಗಿಲರ್ಥ;
ಮೃದು ಬೆರಳ ಪರಿಹಾರ.
ಕಾಲೇಜು ಕಲಿಯದ ಸುಮಂಗಲೆ
ರಂಗೋಲೆ ನೆವದಿಂದ ನೀಡಿದ್ದಾಳೆ
ಪ್ರತಿದಿನಾ ಸೂತ್ರಗಳಿಗಾಕಾರ.
ಕೋನ ರೇಖೆಗಳೇನು ! ಚೌಕ ವೃತ್ತಗಳೇನು !
ಸ್ವಸ್ತಿಕ ಮಂಡಲ ಚುಕ್ಕೆ :
ಯಾವುದೋ ಅರ್ಥ ಮಂತ್ರಕ್ಕೆ
ಎಡಮಾಡಿದೆ ಕಲೆಗಾರಿಕೆಯ ರೆಕ್ಕೆ.

೨

ರಂಗವಲ್ಲಿ
ನನ್ನ ಮನೆಯ ಕಷ್ಟದ ಚಿಕ್ಕಂದಿನಲ್ಲಿ.
ಇವರ ಪಾಲು ಮಾತ್ರ ಕೊನೆಯಲ್ಲಿ ಮಗು
ನೊತ್ತ್ರಾಗದೆ ನೊಂದು
ರೇಗಿಸಿಕೊಂಡಿದ್ದೇನೆ ಸಲಸಲಕ್ಕೂ :
ಈ ಬೆಳ್ಳನೆಯ ಕಗ್ಗಾಡ ಕಣ್ಣೀರ ಹೊಕ್ಕು.
ನೆರೆಯಾಕೆ ಜಗದಲ್ಲಿ ಬಾಗಿ
ಕೊಡಲ ಬಿಡಿಸಿದ ಚಿತ್ರಕ್ಕೆ ಬೆರಗಾಗಿ.
ಜಾಕ್‌ಪೀಸಿ ಪ್ರತಿಯೊಂದ ನಮ್ಮ ಮನಸಾಕ್ಷಿಯ
ವಿಕಸಿಸಲು ಹೋಗಿ ಸಂಸಲಪ್ಪ ನೋಡಿದ್ದೆ;
ಕಾಫರನ ಬರದು ಪತ್ರಮೇಲಿಂದ ಮೊತ್ತಿದ್ದೆ.
ಪಕ್ಕದ ಮನೆ ಅಯ್ಯಂಗಾರರ ಮೇದವಲ್ಲಿ
ಬಿಡಿಸಿದ್ದರೊಮ್ಮೆ ತೊಡಕಾದ ರಂಗವಲ್ಲಿ.
ನೆಟ್ಟಕಣ್ಣಿನ ನನ್ನ ಕೌತುಕಕ್ಕೆ
ಮರೆಸಿ ತಮ್ಮೆಲ್ಲ ಹಲ್ಲ —
"ಸಾಬರು ಯಾಕೊ ರಂಗೋಲಿ ಇಡೊಲ್ಲ ?"
— ದೇವರೇ, ಜವಾಬು ಗೊತ್ತಿದ್ದರೆ !



ನಾಚಿ ನೀರಾಗಿದ್ದೆ.

ನಮ್ಮ ಔಟ್‌ಹೌಸಿನ ಜನ
ಹೊಸಿಲ ಬಳಿ ರಂಗೋಲಿ ಬಿಡಿಸಿದ ಹೊತ್ತು
ಅಜ್ಜಿ ತೋರಿರಲು ಬಿರುನುಡಿಯ ದೌಲತ್ತು
ಅಬ್ಬ ! ನನಗೆಂಥ ನೋವಾಗಿತ್ತು.
ಒಮ್ಮೆ ಯಾವುದೋ ಜೋರಿನಲ್ಲಿ ಬಗೆನಿಟ್ಟು
ಮನೆಯೊಂದರ ರಂಗೋಲಿ ಮೇಲೆ ಅಡಿಯಿಟ್ಟು
ಸರಕ್ಕನೇ ನಾಚಿಕೊಂಡಿದ್ದೆ. ಕೆಂಡ ತುಳಿದವನಂತೆ:
ಜೊತೆಗೆ ಆ ಮನೆಯವರು ಕಂಡರೋ ಎಂಬ ಚಿಂತೆ

೩

ಆರು ವರ್ಷದ ಹುಡುಗ ಮಗ ಮೊನ್ನೆ
ಹಾಲು ತರಲು ಹೋದನು ನನ್ನೊಡನೆ.
ರಂಗೋಲಿ ನೋಡುತ್ತ ನಡೆದಿದ್ದ; ಗಮನಿಸಿದ ಅವನೆಂದ:
— ಯಾಕೆ ಬಿಡಿಸುತ್ತಾರೆ ಇವರು ಹೀಗೆ ದಿನಾ ಚಿತ್ರಬಂಧ? —
ವಿವರಣೆಯ ಗೊತ್ತು ಗುರಿಗಳಿಲ್ಲ
ಪರೆಮ ಸಾಘಗೊಳಿಸಿದ್ದೆ ಉತ್ತರದ ಸೊಲ್ಲ:
"ನಮ್ಮ ಪದ್ಧತಿಗೆ ಅದು ಸಲ್ಲ."
ಮನದ ಗೊಂದಲ ತಿಳಿಯಾಗಕತ್ತ ಮಗು
ಯಾಕೆಂಬ ಮರುಪ್ರಶ್ನೆ ಮುಂದಿರಿಸಿರಲು —
ತೆಪ್ಪಗಿರಿಸಲು ಮಗನ, ಪಲುಕಿದೆ ಹಳೆಯ ರಾಗ:
"ಖುರಾನ್, ಧರ್ಮಗ್ರಂಥಗಳಲ್ಲಿ ಹೇಳಿಲ್ಲ."
ತೂರೆದು, ಅರೆಗಳಿಗೆ ಮೌನದ ಹಕ್ಕಿ
ಪಮ್ಮನೆರಗಿತು ಮತ್ತೆ ಪ್ರಶ್ನೆ ಗರುಡನ ರೆಕ್ಕೆ:
— ಅಲ್ಲಿ ಹೇಳಿದ ಹಾಗೆ ಆಚರಿಸಬೇಕೆ ? —
ಹೌದೆಂದೆ, ಪ್ರಶ್ನೆಸೋನೆಯ ಬೇಸರಕ್ಕೆ.
— ಮನೆಯ ಕಟ್ಟಿದ ಇಟ್ಟಿಗೆ, ನಿನ್ನ ಹೆಸರ ಮಡಿಸಿದುದರಲ್ಲಿ
ಬರೆಸಿರುವೆಯಲ್ಲ, ಹೇಳಿದೆಯೆ ಖುರಾನಿನಲ್ಲಿ ? —
ಆತ್ಮಸಾಕ್ಷಿಯ ಕತ್ತು ಹಿಚುಕಬಂದವನನ್ನ,
ಮಗುವೆನ್ನಬಹುದೆ ಇವನನ್ನ ?
ಘೋರಿ ಪ್ರಶ್ನೆ ಎಲ್ಲೆಲ್ಲಿಗೊ ಕೈಚಾಚಿ
ಪೇಚಿಗಿಡಿಸಿತು ನನ್ನ
ಆಚರಣೆ ನಂಬಿಕೆಗಳ ಮಡಿಕೆ ಮಡಿಕೆಯ ರಶಟಿ.
"ಕ್ಯೊ ಬೆಳೆಯುತ್ತೆ. ಹೆಜ್ಜೆ ಹಾಕೋ ಬೇಗ"
ಎಂದೆ ಎಚ್ಚತ್ತು.
ರಂಗೋಲೆ ಹಾಯಾಗಿತ್ತು ಯಾವತ್ತಿನಂತೆ:
ಬೆರಗು ಪ್ರಶ್ನೆಗಳವಳಿ ರೆಕ್ಕೆ ಹರಡಿದ ಪುಟ್ಟ ಹಕ್ಕಿಯಂತೆ;
ಮನದಲಿ ನೆರೆಸಿ ಚಿಂತನೆಯ ಸಂತೆ.

— ಕೆ. ಎಸ್. ನಿಸಾರ್ ಅಹಮದ್

ಬೋನಸ್ಸು, ಕಲ್ಯಾಣ ಇತ್ಯಾದಿ

ಜಿ. ಎಸ್.

ನಾನು ಬಹುದಿನಗಳಿಂದ ನಿಮಗೆಲ್ಲರಿಗೆ ಬೋನಸ್ ಕೊಡಿಸಬೇಕೆಂಬ ವಿಚಾರದಲ್ಲಿದ್ದೇನೆ. ಆದರೆ ಅದು ಹೇಗೆ ಎಂಬ ವಿಚಾರ ಮಾತ್ರ ಹೊಳೆಯದಾಗಿದೆ. ಚುನಾವಣೆಗೆ ನಿಂತ ಹುರಿಯಾಳುಗಳು ತಮ್ಮ ವಿಚಾರಗಳನ್ನು ಸಾರ್ವಜನಿಕ ವೇದಿಕೆಗಳ ಮೇಲೆ ಘಂಟಾಘೋಷವಾಗಿ ಬಿತ್ತರಿಸುವಂತೆ ನಾನೂ ಯಾವುದಾದರೂ ಒಂದು ವೇದಿಕೆಯ ಮೇಲೆ ನಿಂತು ವೈಚಾರಿಕ ತುತ್ತೂರಿಯನ್ನು ಊದಿಬಿಡಲೇ ಅನಿಸುತ್ತದೆ. ಈಗಿನ ದಿನಗಳಲ್ಲಿ ವಿಚಾರಗಳಿಗೇನು ಕೊರತೆ? ವಿಚಾರವಂತರಿಗಾದರೂ ಏನು ಕಡಿಮೆ? ಎಲ್ಲ ವಿಚಾರವಂತರೂ ಒಂದೆಡೆ ಸೇರಿದರೆ ಅದು ಸಾರ್ವಜನಿಕ ವೇದಿಕೆಯೇ. ಆದರೆ ಖಾಲೀ ಒಂದು ಬೋನಸ್ ಮಾತ್ರವೇಕೆ? ನಮ್ಮ ನಾಡಿನ ಜನತೆಗೆ ಸ್ವರ್ಗವನ್ನೇ ನಿರ್ಮಿಸಿ ತರಬಹುದು. ಅದು ವಿಶ್ವಾಮಿತ್ರನು ತ್ರಿಶಂಕುವಿಗಾಗಿ ನಿರ್ಮಿಸಿದ ಸ್ವರ್ಗವಂತಾಗದಿದ್ದರೆ ಸರಿ. ಕಾರಣ ಯಾವುದೇ ವಿಚಾರವು ಮೂರ್ತರೂಪಕ್ಕೆ ಬರಲು ಅಥವಾ ತರಲು ಬರೀ ವಿಚಾರವಂತರು ಸೇರಿದರೆ ಸಾಲದು. ಅವರ ವಿಚಾರಗಳೆಲ್ಲ ತಲೆ ಕೆಳಗಾಗಿ ಗೊಂದಲವೇಳುತ್ತದೆ. ಪಾರ್ಲಿಮೆಂಟುಗಳಲ್ಲಿ ಅಸೆಂಬ್ಲಿಗಳಲ್ಲಿ ಹೀಗೆಯೇ ಆಗುತ್ತಿರುತ್ತದೆ. ಹಿರಿಯ ಮುತ್ಸದ್ದಿಗಳು ಅಂದರೆ ತತ್ವಶಃ ಕಾರ್ಯಕರ್ತರಾದವರು ತಮ್ಮ ಯೋಜನೆಗಳನ್ನು ಕಾರ್ಯತಃ ಜನತೆಗಾಗಿ ಆಚರಣೆಗೆ ತರಲು ಅಲ್ಲಿ ಶಾಸನ ಮಾಡಿಬಿಡುತ್ತಾರೆ. ಆಗ ವಿಚಾರವಂತರ ವಿಚಾರ ಬೇರೆಯೇ ಆಗಿರುತ್ತದೆ. ಯಾವ ಕಾರ್ಯಕ್ರಮದಲ್ಲಿ ಯಾರಿಗೆ ಎಷ್ಟು ಜವಾಬ್ದಾರಿ ಎಂಬುದರಲ್ಲಿ ಅವರ ಬುದ್ಧಿಶಕ್ತಿ ವ್ಯಯವಾಗತೊಡಗುತ್ತದೆ. ಎಲ್ಲ ವಿಚಾರವಂತರ ಬುದ್ಧಿಶಕ್ತಿ ಹೀಗೆ ಹರಣವಾಗುತ್ತ ಹೋದಂತೆ ದೇಶ ಬಡವಾಗುತ್ತ ಹೋಗುತ್ತದೆ. ಈಗ ನಮ್ಮ ದೇಶದ ಗತಿ ಆಗಿರುವುದೇ ಹೀಗೆ. ವೈಚಾರಿಕರ ಬುದ್ಧಿಗೆ ದೇಶ ಬೆಳೆದಂತೆ ದೇಶ ಬಡವೂ ಆಗುತ್ತದೆ. ಹಾಳೆಯ ಮೇಲೆ ನೀವು ಗೀಚಿ ನೋಡಿ. ಒಂದು ಆಕಾರಕ್ಕೆ ನೀವು ಗೆರೆಗಳನ್ನು ತೀಡಿದಂತೆ ಮತ್ತೆ ಇನ್ನೊಂದು ಆಕಾರ ತಾನಾಗಿಯೇ ಹುಟ್ಟಿಕೊಂಡಿರುತ್ತದೆ. ಇದನ್ನೇ ನೀವು ಬಡ ದೇಶವೆಂದು ಇಟ್ಟುಕೊಳ್ಳಿ. ಆಗ ನಿಮಗೆ ಅರ್ಥವಾಗುತ್ತದೆ, ದೇಶ ಎಷ್ಟು ಶ್ರೀಮಂತವಾದರೂ ಬಡ ದೇಶ ಎಲ್ಲಿ ಉಳಿದಿದೆ ಎಂದು. ಆಗ ನವ್ಯಕಲಾವಿದರು ಈ ಸ್ವಯಂಭೂ ಆಕಾರವನ್ನೇ ಮುಸಲಿತ್ತು ಮಾಡಿಕೊಂಡು ಹೋರಾಡತೊಡಗುತ್ತಾರೆ. ನಮಗೆ ಅನ್ನವಿಲ್ಲ, ಅನ್ನ ಕೊಡಿ! ಆಶ್ರಯವಿಲ್ಲ, ಆಶ್ರಯ ಕೊಡಿ!! ಅರಿವೆ ಇಲ್ಲ. ಅರಿವೆ ಕೊಡಿ!!! ಎಂದು ಬಡ ದೇಶದ ಕಕ್ಷೆಯಲ್ಲಿ ಜನ ಮೆರವಣಿಗೆ ಹೊರಡುತ್ತಾರೆ. ಶ್ರೀಮಂತ ದೇಶ ಅವರನ್ನು ನೋಡುತ್ತಿರುತ್ತದೆ. ಇಂಥವರು ಇರಬೇಕು ಎಂಬ ಪಂಥವೂ ಬೆಳೆಯುತ್ತಿರುವಂತೆ ಕಾಣುತ್ತದೆ. ಇಂಥವರಿಲ್ಲದೆ ದೇಶದ ಅನಿಮಿತ್ತ ಹುರಿಯಾಳುಗಳು ಬೆಳಕಿಗೆ ಬರಲು ಹೇಗೆ ಸಾಧ್ಯ? ನಾನು ಹೇಳುವ ಬೋನಸ್ ವಿಚಾರ ಇಲ್ಲಿಯ ವರೆಗೆ ಬಂದಿತಲ್ಲ! ಹಸಿದವರಿಗೆ ಬೋನಸ್ ಎಂದರೆ ನನ್ನನ್ನು ಹರಿದು ತಿಂದುಹಾಕಿಬಿಟ್ಟಾರು! ಬೋನಸ್ ಯಾರಿಗೆ ಎಂದರೆ ಹೊಟ್ಟೆ ತುಂಬ ತೇಗುವವರಿಗೆ. ಹಾಗೆ ನೋಡಿದರೆ ದೇಶದಲ್ಲಿ ಎಲ್ಲರೂ ಹೊಟ್ಟೆ ತುಂಬ ತಿಂದು ತೇಗುವವರೆ. ಬೀದಿ ಬೀದಿ ಅಲೆಯುವ

ಭಿಕ್ಷುಕರಿಗೂ ದೇಶದ ಸರಕಾರ ಸವಲತ್ತುಗಳನ್ನು ಕೊಡತೊಡಗಿದೆ. ನಾವು ಆಗಾಗ ಓದುತ್ತಿರುತ್ತೇವೆ ಪತ್ರಿಕೆಗಳಲ್ಲಿ; ಅನಾಥ ಮತ್ತು ನಿರ್ಗತಿಕ ಭಿಕ್ಷುಕರೂ ಬ್ಯಾಂಕ್ ಲೆಕ್ಕ ಬಿಟ್ಟು ಪರಲೋಕವಾಸಿಗಳಾಗಿರುತ್ತಾರೆಂದು. ಸರಕಾರದವರೂ ಇನ್‌ಕಮ್ ಟ್ಯಾಕ್ಸ್ ಹಾಕುವಷ್ಟು ಅವರ ಬ್ಯಾಂಕ್ ಬ್ಯಾಲೆನ್ಸ್ ಇರುತ್ತದೆ. ಯಾರೂ ದಿಕ್ಕಿಲ್ಲದೆ ಅದೆಲ್ಲವೂ ಸರಕಾರದ ಇನ್‌ಕಮ್ ಆಗಿಬಿಡುತ್ತದೆಂಬ ಮಾತು ಬೇರೆಯೇ. ಅಮಾವಾಸ್ಯೆಯ ಕರಾಳ ಕತ್ತಲಿನಲ್ಲಿ ತಾರೆಗಳು ಮಿನುಗುವಷ್ಟು ಈ ಭಿಕ್ಷುಕರ ದುಡಿಮೆ ಇರುತ್ತದೆ. ಈ ಭಿಕ್ಷುಕರು ಸತ್ತು ಹೋದಾಗಲೇ ಬೆಳಗಿನ ರವಿ ಉದಯಿಸಿ ಎಲ್ಲ ತಾರೆಗಳು ದಿನದ ಬೆಳಕಿನಲ್ಲಿ ಮಾಯವಾಗುವಂತೆ ಈ ಹಣವೆಲ್ಲ ಸರಕಾರಕ್ಕೆ ಸೇರಿಹೋಗುತ್ತದೆ. ಯಾವಾಗ ಈ ರವಿ ಉದಯಿಸುತ್ತಾನೆಯೋ ಎಂದು ನನಗೆ ಚಿಂತೆಯಾಗಿದೆ. ನಾನು ಕೊಡಿಸಬೇಕೆಂದಿರುವ ಬೋನಸ್ ಈ ರವಿ ಉದಯಿಸಿದಾಗಲೇ. ಅಲ್ಲಿಯ ವರೆಗೆ ನನ್ನದಂತೂ ಕೇವಲ ವಿಚಾರವಷ್ಟೇ. ಕತ್ತಲಿನಲ್ಲಿಯೇ ಬೆಳಕು ಬೀರಿ ಬೋನಸ್ ಕೊಡಿಸುವ ತಾಕತ್ತು ಯಾರಿಗಾದರೂ ಇದ್ದರೆ ನನ್ನಂಥವರದೇನು ಲೆಕ್ಕ? ಆಗ ನನ್ನ ಬುದ್ಧಿವಂತ ವಿಚಾರವನ್ನು ನಾನು ಬಹಳ ಸಂತೋಷದಿಂದ ಬಿಟ್ಟುಕೊಡುತ್ತೇನೆ.

ನಾನು ಬೋನಸ್ ಎಲ್ಲೆಲ್ಲಿ ಕೊಡತಕ್ಕದ್ದಿದೆ ಎಂದು ವಿಚಾರ ಮಾಡುತ್ತಿರುತ್ತೇನೆ. ಕಾರ್ಖಾನೆಗಳು, ಕಚೇರಿಗಳು, ಸಭೆ ಸಮಾರಂಭಗಳು ಬೋನಸ್ಸು ಕೊಡುವುದನ್ನು ಯಥಾವತ್ ಸಾಮಾನ್ಯ ಸಂಗತಿಯನ್ನಾಗಿ ಮಾಡಿಬಿಟ್ಟಿವೆ. ಅಂತಹ ಕಡೆಗಳಲ್ಲಿ ನಮ್ಮಂತವರದೇನು ಕೆಲಸ?

ಬೋನಸ್ ಕೊಡಬೇಕಾದ ಒಂದು ಜಾಗೆ ಮಾತ್ರ ನನಗೆ ಈಗ ತಟ್ಟನೆ ನೆನಪಾಗುತ್ತದೆ. ದೇಶದ ಎಲ್ಲಾ ಚುನಾವಣೆಗಳಲ್ಲಿ ಎಲ್ಲರೂ ಬಂದು ಚುನಾವಣೆಗಳನ್ನು ನಡೆಸಿಕೊಡುತ್ತಾರಲ್ಲ! ಅವರಿಗೆಲ್ಲರಿಗೂ ಒಂದು ಬೋನಸ್‌ನ್ನು ಏತಕ್ಕೆ ಕೊಡಬಾರದು? ಇವರಿಲ್ಲದೆ ಚುನಾವಣೆಗಳು ನಡೆಯಲಾರವಷ್ಟೇ ಅಲ್ಲ ಯಾವ ಪುರಿಯಾಳೂ ಮಂತ್ರಿ ಮುಖ್ಯಮಂತ್ರಿ ಎಂ. ಎಲ್. ಎ. ಎಂ. ಪಿ. ಆಗಲಾರ. ಯಾವ ಸಭೆ ಸಮಾರಂಭಗಳೂ ನಡೆಯಲಾರವು. ದೇಶದ ಆಡಳಿತಕ್ಕೂ ಸೊನ್ನೆ. ಕೈಯಲ್ಲಿ ತಕ್ಕಡಿ ಹಿಡಿದವರೋ ದಂಡ ಹಿಡಿದವರೋ ರಾಜ್ಯವಾಳುತ್ತಾರೆ. ಆಗ ಯಾರಿಗೆ ಏನು ಸುಖ? ನಾವು ನಮ್ಮನ್ನು ನಾವೇ ಆಳಿಕೊಳ್ಳುವ ಜನ ಅಂದ ಮೇಲೆ ನಾವು ಚುನಾವಣೆಗಳನ್ನು ನಡೆಸಿಕೊಡುವುದು ನಮ್ಮ ಧರ್ಮ. ಆದರೆ ಚುನಾವಣೆ ನಡೆಸಿಕೊಳ್ಳುವವರೂ ಒಂದಿಷ್ಟು ವಿಚಾರ ಮಾಡಬೇಕೆಂದು ನನ್ನ ಮತ. ಚುನಾವಣೆಗಳಲ್ಲಿ ಆರಿಸಿ ಬಂದು ಅಸೆಂಬ್ಲಿಗಳಲ್ಲಿ ಸಭೆ ಸಮಾರಂಭಗಳಲ್ಲಿ ರಾಜಮಹಾರಾಜರಿಗಿಂತ ಮಿಗಿಲಾಗಿ ಆದರೆ ದೀನದಯಾಳುಗಳಾಗಿ ದೇಶಸೇವಕರು ದೇಶಭಕ್ತರು ಆಗಿ ಪಂಚವರ್ಷ ಪೂರ ಆಯುಷ್ಯವಂತರಾಗಿ ಬಾಳುತ್ತಾರಲ್ಲ ಅವರೆಲ್ಲ ತಮ್ಮ ಕೊನೆಯುಸಿರೆಳೆಯುವದರೊಳಗಾಗಿ ಜನರಿಗೆ ಒಂದು ಬೋನಸ್ಸನ್ನು ಕೊಟ್ಟೇ ಹೋಗಬೇಕು. ನಮ್ಮ ದೇಶಕ್ಕೇನೋ ಬೋನಸ್ ಇದ್ದೇ ಇರುತ್ತದೆ. ರೈಲು ಇಲ್ಲದಲ್ಲಿ ರೈಲು, ಕಾರ್ಖಾನೆ ಇರಬೇಕಾದಲ್ಲಿ ಕಾರ್ಖಾನೆ, ಶಾಲೆಗಳು, ದವಾಖಾನೆಗಳು, ಪಟ್ಟಾರಿ ಕಿರುದಾರಿಗಳು, ತಂಗುಮನೆಗಳು ಒಂದೊಂದು ಕಡೆ ಈಜಾಗೊಳ ಆಗು



"ನಿನ್ನ ಕಾಲಮೇಲೆ ನೀನು ನಿಲ್ಲುವತನಕ ನನ್ನ ಮಗಳ ಮದುವೆ ವಿಚಾರ ಎತ್ತಬೇಡ ಅಂತಂದಿದ್ರಲ್ಲಾ, ಇವೆರಡೂ ನಂದೇ ಮಾವ!"

ತ್ತದೆ. ... ಯಾರಿಗೆ ಏನು ಸಾಲ ಅಥವಾ ಎಷ್ಟು ಸಾಲ? ಮನೆಗೊಂದು ನಿಯಮಾವಳಿ ಇದ್ದೇ ಇರುತ್ತದೆ. ಅದಕ್ಕಾಗಿ ವ್ಯಕ್ತಿಗೊಂದು ನಿಯಮ ರೂ ... ಅಗುತ್ತದೆ. ಈ ವ್ಯಕ್ತಿ ಕ್ತಿಕ ... ಅಥವಾ ಸ್ವಾತಂತ್ರ್ಯದ ... ಗಿಯೇ ... ಬೋನಸ್ಸು ... ಎಂದು ... ಯಾವುದೇ ವ್ಯಕ್ತಿ ... ಅವನಿಗೆ ತಲಾ ... ಅಂದರೆ ಗ್ರಾಹಕರಿಗೆ ನಷ್ಟವಿಲ್ಲದಂತೆ ಸಾಕಷ್ಟು ದೊರೆಯಬೇಕು. ಅಂತಹ ಒಂದು ಬೋನಸ್ಸು ತಿಕೀಟು ಕನಿಷ್ಟ ಕೈಯಲ್ಲಿ ಹಿಡಿದು ಮಾಡಿಕೊಳ್ಳಲು ಸಾಕಷ್ಟು ಮಾಡುವವರಿಗಾದರೂ ದೊರೆಯುವಂತಾಗಬೇಕು. ಕೈಯಲ್ಲಿ ಹಣವಿಲ್ಲದಿರುವವರಿಗೂ ಬೋನಸ್ಸು ಸಿಗಬೇಕೆಂಬುದು ದಿಟ, ಆದರೆ ಈ ಬೋನಸ್ಸಿನಿಂದ ಏನು ಪ್ರಯೋಜನ? ರೊಕ್ಕವಿಲ್ಲದವನಿಗೆ ಅವನಿಗೆ ಹೊಟ್ಟೆಯ ಚಿಂತೆಯಾದರೂ ಎಲ್ಲಿ? ಅಂತಹ ಸಾಮಾನ್ಯರು ಯಾವುದೇ ಬ್ಯಾಂಕು ತಿಜೋರಿಗೆ ಹೋದರೂ ಆ ದಿನ ಬೋನಸ್ಸು ಕೊಟ್ಟು ಹೊಟ್ಟೆಯ ಬಾಗಿಲು ತೆರೆದಿರುವಂತಾಗಬೇಕು. ಬ್ಯಾಂಕು ತಿಜೋರಿಗಳಲ್ಲಿ ಹಾಕ್ಕೆಯ ಕಥೆಯ? ಲಕ್ಷ್ಮಿ ದರಿದ್ರ ನಾರಾಯಣರಿಗಾಗಿ ಕೊಟ್ಟ ಬೋನಸ್ಸು ಬಾಚಿದ್ದು ಎಂದು ಸಾರಿಸುತ್ತಾರೆ ಯಾವ ಲಕ್ಷ್ಮಿ ವರಾಹಗಳು ಬಿಟ್ಟುದ್ದವಿಲ್ಲ? ಇವೆಲ್ಲ ವಿಚಾರಗಳು ಯಾವ ತಲೆಯಲ್ಲಿ ಬರಲು ಸಾಧ್ಯ? ಹೀಗೇ ಏಕೆ? ದೊರೆತನದ ಹಣದಾಹದವನಿಗೆ ತಿರುಗುಬಾಣ ಚಿಂತೆಯೇ? ಪರಿಕಾರಕನಿಗೆ ಹಣದ ಚಿಂತೆಯೆ! ನಮ್ಮ ದೇಶದ ದರಿದ್ರರಿಗೆ ತಿಂದಾಯಿತ ಚಿಂತೆಯೆ! ನೀನೇ ನೋಡಾ ಸಕಲಸಂಗಮೇಶಾ! ನಮಗೆ ನಮ್ಮ ಕೂಡಲ ಸಂಗ ಮನಪೂರೈಸುವ ಚಿಂತೆ ಇಲ್ಲ, ಭ್ರಾಂತಿ ಇಲ್ಲ. ಸಕಲ ಜೀವಿಗಳ ಲೇಸನೇ ಬಯಸುವ ಶರಣರಿಗೆ ಸಾಕೆನಗೆ. ಎಲ್ಲಿ ನೋಡಿದೊಡೆ ಅಲ್ಲಿ ಶರಣರೇ ಇದ್ದರೆ ಮತ್ತೆ ಬೇರೆ ಬೋನಸ್ಸು ಚಿಂತೆ ಏಕೆ? ಶರಣರಿರುವಲ್ಲಿ ಶಿಶುಗಳು ನಗುತ್ತ ಕೇಕೆ ಹಾಕುತ್ತವೆ. ಹಾಲಿನ ಹೊಳೆ ಹರಿಯುತ್ತವೆ. ಭಕ್ತಿಯ ರಸ ಚಿಮ್ಮುತ್ತವೆ. ಬಡವನ ಸಿರಿತನಗಳೆರಡು ಸಂಗಮವಾಗಿರುವಲ್ಲಿ. ಅಲ್ಲಿ ಕಾಮ-ಕ್ರೋಧ ಕಷ್ಟವಿಲ್ಲ. ದೋಷವೆಂಬುದು ಲೇಸಲ್ಲಿ, ಇಹಪರಗಳ ಚಿಂತೆಯಿಲ್ಲ. ಒಟ್ಟಾರೆ ಅಲ್ಲಿ ದಾದ ಎಲ್ಲವೂ ಕಲ್ಯಾಣ ರಾಜ್ಯ. ಇಂಥದೊಂದು ಬೋನಸ್ಸು ಸಾಕೆಂದು ನನಗೆ ಅನಿಸುತ್ತಿದೆ. ✪

ಕನ್ನಡದಲ್ಲಿ ಮಕ್ಕಳಿಗಾಗಿಯೇ ಪ್ರಾರಂಭಿಸಲಾದ ಪ್ರಥಮ ಮಾಸಪತ್ರಿಕೆಯೆಂದರೆ 'ಮಕ್ಕಳ ಪುಸ್ತಕ' ಅಶ್ವತ್ಥನಾರಾಯಣ ಎಂಬವರು ಇದರ ಸಂಪಾದಕರಾಗಿದ್ದರು. ಅವರು ಮಕ್ಕಳಿಗಾಗಿ ಶಿಶುವಿಹಾರವೊಂದನ್ನು ತೆರೆದು, ಇಲ್ಲಿ ತಾವು ಕೈಕೊಂಡ ಪ್ರಯೋಗಗಳ ಅನುಭವಗಳನ್ನು ಈ ಮಾಸಪತ್ರಿಕೆಯಲ್ಲಿ ಪ್ರಕಟಿಸುತ್ತಿದ್ದರು. ಸುಮಾರು ೪೦ ವರ್ಷ ಕಾಲ 'ಮಕ್ಕಳ-ಪುಸ್ತಕ' ಕನ್ನಡ ನಾಡಿನ ಮಕ್ಕಳ ಸೇವೆ ಮಾಡಿತು.

* * *

ಕನ್ನಡದ ಗ್ರಂಥಗಳಲ್ಲೆಲ್ಲ ಅತ್ಯಂತ ಪ್ರಾಚೀನವಾದುದೆಂದರೆ ಚಾಳುಕ್ಯ ರಾಜಕುಮಾರ ಕೀರ್ತಿವರ್ಮನ (ಸುಮಾರು ಕ್ರಿ. ಶ. ೧೧೦೦) 'ಗೋವೈದ್ಯ'.

ಕನ್ನಡದ ಪ್ರಥಮ ಜ್ಯೋತಿಷ್ಯಗ್ರಂಥವೆಂದರೆ ಶ್ರೀಧರಾಚಾರ್ಯನ (ಸುಮಾರು ಕ್ರಿ. ಶ. ೧೦೪೯) 'ಜಾತಕ ತಿಲಕ'.

ಜಾನಪದ ವಸ್ತು ಸಂಗ್ರಹಾಲಯದ ಸ್ಥಾಪನೆಗೆ ಮೊದಲು ಕೈ ಹಾಕಿದವ ಸ್ವೀಡನ್ನಿನ ಆರ್ಥರ್ ಹೆಜೆಲಿಯುಸ್.

ಅಂಬಿಕಾತನಯರ ಚರಿತ್ರೆ ಬರೆದ ಮಗ

ವಾಮನ ಬೇಂದ್ರೆ

ಎನ್ಕೆ

ತಂದೆಯ ಸೂರ್ಯತೇಜದ ಹಿಂದಿನ ಈ ಸೌಮ್ಯ ನಕ್ಷತ್ರದತ್ತ ಬಹು ಜನರ ಲಕ್ಷ್ಯ ಹರಿದಂತಿಲ್ಲ. ವಿಧುರ ತಂದೆಯ ಹೊಟ್ಟೆ ನೆತ್ತಿಯನ್ನು ನೋಡಿಕೊಂಡು, ಅವರ ಕೈಗೋಲಾಗಿ ಮಗನ ಕರ್ತವ್ಯ ನಿರ್ವಹಿಸುವಲ್ಲಿಯೆ ಹೆಚ್ಚಿನ ತೃಪ್ತಿಯನ್ನು ಬಾಳಿನಲ್ಲಿ ಕಾಣುತ್ತಿರುವ ಈ 'ಬಾಳ' ಜನ ತನ್ನ ಬರವಣಿಗೆಯ ಬದುಕನ್ನು ನೋಡಿ ತನ್ನ ಬೆನ್ನು ಚಪ್ಪರಿಸಬೇಕೆಂದು ಬಯಸಿಯೂ ಇಲ್ಲ. ತನ್ನ ತಂದೆ ಜ್ಞಾನಪೀಠಸ್ಥರಾಗಿದ್ದು ಆ ಜ್ಞಾನಸೂರ್ಯನ ಹೊಳೆಯಲ್ಲಿ ಮಿಂದು ಮಡಿಯಾಗಿರುವುದೆ ತನಗೊಂದು ಹೆಚ್ಚಿನ ಪುಣ್ಯವೆಂಬ ಧನ್ಯತೆಯ ಭಾವ ಈ ಚಿರಂಜೀವನಿಗೆ, 'ಜಗದೇಳಿಗೆಯಾಗುವುದಿದೆ ಕರ್ನಾಟಕದಿಂದೆ' ಎಂದು ಹಾಡಿರುವ 'ಅಂಬಿಕಾತನಯರು' ತನಗಷ್ಟೇ ತಂದೆಯಲ್ಲ ಮೂರು ಕೋಟಿ ಕನ್ನಡಿಗರಿಗೂ ತಂದೆಯ ಸಮಾನರಾಗಿದ್ದಾರೆಂಬ ಅಭಿಮಾನ. ತಂದೆಯ ಕೀರ್ತಿ ಈ ಮಗನಿಗೆ ಒಂದು ನೆರಳಿನ ಕೊಡೆಯಾಗಿದೆ.

ತನ್ನ ಸ್ವಂತ ಸಾಹಿತ್ಯ ಖ್ಯಾತಿಯಿಂದ, ಡಾಕ್ಟರೇಟ್ ಪದವಿಯಿಂದ, ಸಮರ್ಥ ಪ್ರಾಧ್ಯಾಪಕ ಎಂಬ ಮನ್ನಣೆಯಿಂದ ಕಟ್ಟಿಕೊಂಡ ಪ್ರಭಾವಳಿಯನ್ನು ವಾಮನ ಬೇಂದ್ರೆ ಅವರು ತಂದೆಯ ಲೋಕಪ್ರಿಯತೆಯ ಸೂರ್ಯಪ್ರಭೆಯಲ್ಲಿ ಕರಗಿಸಿಬಿಟ್ಟಿದ್ದಾರೆ ಮಗನ ಮಮತೆಯಿಂದಾಗಿ. ಸ್ವತಂತ್ರ ವೈಯಕ್ತಿಕ ಯೋಗ್ಯತೆಯಿಂದ ಯಾವುದೆ ವೇದಿಕೆಯ ಮೇಲೆ ನಿಂತು ಪ್ರಭಾವಿ ಭಾಷಣವನ್ನು ಮಾಡಬಲ್ಲ ವಾಮನ, ದಕ್ಷ ಮಗನಾಗಿ ತಂದೆಗೆ ಈ ವಯಸ್ಸಿನಲ್ಲೂ ಬರುವ ಹಲವಾರು ಆಮಂತ್ರಣಗಳನ್ನು ಮನ್ನಿಸಿ ಅವರ ಟಾರ್ಚು, ಪುಸ್ತಕಗಳ ಕೈಚೀಲಗಳನ್ನು ಹಿಡಿದು ಆ ಜ್ಞಾನವೃದ್ಧರನ್ನು ವೇದಿಕೆಗೆ ಕರೆದು ತಂದು ತಾನು ಹಿನ್ನೆಲೆಯ ಶ್ರೋತೃವಾಗಿ ಉಳಿಯುವಲ್ಲಿ ಈ ಹೆಚ್ಚಿನ ಸಂತೋಷ ಪಡೆಯುತ್ತಾರೆ.


ಇಂದು ಈ ವಾಮನ ದಂಪತಿಗಳು ಪಕ್ವ ಫಲದಂತಿರುವ ತಂದೆಯನ್ನು 'ಮಹಾಶ್ರವಣಾಗಳ ಸಾತ್ವಿಕ ಕಂದ'ನಂತೆ ನೋಡಿ ಕೊಳ್ಳುತ್ತಿದ್ದಾರೆ. ಶ್ರೀಮತಿ ವಾಮನ ಬೇಂದ್ರೆ (ಸೌ. ವಿಶಾಖಾ) ಸ್ವತಃ ಗ್ರಾಜುಯೇಟ್ ಇದ್ದು ಕವಯಿತ್ರಿಯಾಗಿದ್ದಾರೆ, ಸಂಸ್ಕೃತ ವಿದುಷಿಯಾಗಿದ್ದಾರೆ, ಲೇಖಿಕೆಯಾಗಿದ್ದಾರೆ. ಮಾವನವರು ಇಂದಿಗೂ ಈ

ವಯಸ್ಸಿನಲ್ಲೂ ಪರೀಕ್ಷಾ ವಿದ್ಯಾರ್ಥಿಯಂತೆ ತನ್ನ ಕೋಣೆಯಲ್ಲಿ ತನ್ನದೇ ಅಧ್ಯಯನವನ್ನು ಬೆರಗಿನಿಂದ ನೋಡಿ, ಲೇಖನ ಬರೆದಿದ್ದಾರೆ. ವಿಶೇಷವಾಗಿ ಗೃಹಿಣಿಯಾಗಿ, ತಾಯಿಯಾಗಿ 'ಶ್ರೀಮಾತಾ'ದ in-charge ಇವರೇ ಆಗಿದ್ದಾರೆ.

ಬೇಂದ್ರೆ ಅವರಿಗೆ ೧೯೮೧ನೇ ಜನವರಿ ೩೧ಕ್ಕೆ ೮೫ ಪೂರ್ತಿ. ಈ ಸಂದರ್ಭದಲ್ಲಿ ಕವಿವರರಿಗೆ 'ಶತಂಭವತು' ಎಂಬ ಶುಭ ಪ್ರಾರ್ಥನೆಯೊಂದಿಗೆ ಅವರನ್ನೆ ಕುರಿತು ಬರೆಯುವ ಬದಲು ಅವರ ಯೋಗಕ್ಷೇಮವಾಹಕ ವಾಮನ ಬೇಂದ್ರೆಯವರ ಬಗ್ಗೆ ಬರೆಯುವುದು ಹೆಚ್ಚು ಪ್ರಸ್ತುತವೆನಿಸುತ್ತಿದೆ. ಏಕೆಂದರೆ 'ಶ್ರೀ ಬೇಂದ್ರೆಯವರ ಜೀವನ ಪರಿಚಯ'ವನ್ನು ಚಿತ್ರಿಸಿರುವ ಈ ಚರಿತ್ರಕಾರನ ಜೀವನ ಪರಿಚಯವೂ ಅಷ್ಟೇ ಮಹತ್ವದ್ದೆನಿಸಿದೆ. ವಾಮನ ಬೇಂದ್ರೆ ಬರೆದಿರುವ ಡಾ. ದ. ರಾ. ಬೇಂದ್ರೆ ಅವರ ಜೀವನ ಪರಿಚಯ ಅಪೂರ್ವ ವೈಶಿಷ್ಟ್ಯಗಳಿಂದ ಕೂಡಿದ್ದು ಆ ಬಗ್ಗೆ ಬಹುಜನ ವಾಚಕರ ಚಿತ್ತ ಇತ್ತ ಸುಳಿದಂತಿಲ್ಲ. ಮಗನು ತಂದೆಯ ಜೀವನ ಚರಿತ್ರೆಯನ್ನು ಚಿತ್ರಿಸಿರುವುದು ಅಪರೂಪ. ಕಷ್ಟವೂ ಹೌದು. ತಾನು ಹುಟ್ಟಿ ಪ್ರಬುದ್ಧನಾಗುವ ಮೊದಲು ಆಗಿಹೋದ ತಂದೆಯ ಜೀವನದ ಆಗು ಹೋಗುಗಳನ್ನು ಅನ್ಯ ಮುಖಗಳಿಂದ ಸಂಗ್ರಹಿಸಿ ಪ್ರತ್ಯಕ್ಷದರ್ಶಿಯಂತೆ ಚಿತ್ರಿಸಬೇಕಾಗುವುದು. ವಾಮನ ಬೇಂದ್ರೆ ತಂದೆ ದತ್ತಾತ್ರೇಯರ ಈ ಜೀವನ ಪರಿಚಯವನ್ನು ಮೂರು ಮುಖಗಳಿಂದ ಕಂಡು ಚಿತ್ರಿಸಿರುವುದೆ ಇದರ ವೈಶಿಷ್ಟ್ಯ. ಈ ಚರಿತ್ರವನ್ನು ಶುದ್ಧವಾಗಿ ಪರಿಪೂರ್ಣವೆನಿಸುವಂತೆ ಚಿತ್ರಿಸಿರುವ ಯೋಗಸಿದ್ಧಿ ವಾಮನ ಬೇಂದ್ರೆ ಅವರದು. ಯೋಗಸಿದ್ಧಿ ಎನ್ನುವಲ್ಲಿ ವಿಶೇಷ ಅರ್ಥವಿದೆ. ತಾನು ಮಗನಾಗಿಯೂ ಅನ್ಯನೆಂಬಂತೆ ವಸ್ತುನಿಷ್ಠವಾಗಿ ವಾತ್ಸಲ್ಯ ಭಾವುಕತೆಗಳನ್ನು ಬೇರಿರಿಸಿ ತಂದೆಯ ಜೀವನ ಸಂಗತಿಗಳನ್ನು ಒಬ್ಬ ಇತಿಹಾಸತಜ್ಞನಂತೆ ಶೋಧಿಸಿ ಚಿತ್ತದೊಳಗಿನ ಚಿತ್ರಕಾರನಾಗಿ ನಿರೂಪಿಸಿರುವುದೀಗ ಈ ಯೋಗ ಸಾಧನೆ, ಸಿದ್ಧಿ. ತಂದೆಯ ಜೀವನದ 'ಕಟು ಮಧುರ ಅಧ್ಯಾಯ'ವನ್ನು ಮಗನಾಗಿ ನೋಡದೆ ಮೂರನೆಯ ಕಣ್ಣಾಗಿ ಕಂಡು ಅಣ್ಣನ ಸಾವು, ತಂದೆಯ ದುಃಖ, ತಾಯಿಯ ಸಾವು ಆ ಪತಿಯ ಸಹನೆಗಳನ್ನು ಚರಿತ್ರಕಾರನಂತೆ ಚಿತ್ರಿಸಿದ್ದಾರೆ ವಾಮನ.

ಈ ವಾಮನ ವಾಮನಮೂರ್ತಿಯಾಗಿದ್ದಾಗಿನಿಂದಲೆ ನಾನು ನೋಡುತ್ತ ಬಂದಿದ್ದೇನೆ. ಬೇಂದ್ರೆ ಕಾವ್ಯದ ದನಿವು ಹೆಚ್ಚಾದಾಗಲೆಲ್ಲ ನಾವು ಮಿತ್ರರು ಈ ನಂದನದ ತುಣುಕಿಗೆ ಧಾವಿಸಿ ಬರುತ್ತಿದ್ದೆವು. ಆಗ ಈ ಕೆಲವು ತಿಂಗಳದ ಶಿಶು, ವಾಮನಮೂರ್ತಿಯನ್ನು ಬೇಂದ್ರೆಯವರು ಹೆಗಲ ಮೇಲೆತ್ತಿಕೊಂಡು ಸಾಧನಕೇರಿಯ ಹಸಿರು ದಿನ್ನೆಯ ಮೇಲೆ ಆಡ್ತಾಡುತ್ತ ನಮ್ಮೊಂದಿಗೆ ಹರಟೆ ಹೊಡೆಯುತ್ತಿದ್ದರು, ಕವಿತೆ ಹೇಳುತ್ತಿದ್ದರು. ಹೀಗೆ ಕಾವ್ಯ ಜೋಗಳಕ್ಕೆ ತಂದೆಯ ಹಗಲ ಮೇಲೆ ನಿದ್ದೆಹೋಗುತ್ತಿದ್ದ ವಾಮನ ಮುಂದೆ ಆ ಸ್ಥಾನವನ್ನು ತಂಗಿ ಮಗಳಿಗೆ ಬಿಟ್ಟುಕೊಟ್ಟಿದ್ದ. ತಂದೆಯ ಹೆಗಲ ಮೇಲೆ ಕಾವ್ಯ ಯೋಗನಿದ್ರೆ ಮಾಡಿ ಬೆಳೆದ ವಾಮನ ಎಂಟು ಒಂಭತ್ತು ವರ್ಷದವನಾದಾಗಿನಿಂದ ಎಂದರೆ ತಂದೆ ಶಿವಮೊಗ್ಗಾ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಪೀಠದಲ್ಲಿ ಕುಳಿತಾಗಿನಿಂದ (೧೯೪೩) ಅವರ ಜೀವನ ವಾಹಿನಿಯ ದಂಡೆಯ ಮೇಲೆ ನಿಂತುಕೊಂಡು ಅದರ ಪ್ರವಾಹವನ್ನು ವೀಕ್ಷಿಸುತ್ತ ಬಂದಿದ್ದಾರೆ.

ವಾಮನ ಬೇಂದ್ರೆಯವರ ಈ ಐತಿಹಾಸಿಕ ಜೀವನ 'ಪರಿಚಯ'ವನ್ನು ನಾನು ಒಮ್ಮೆ ಬಿಟ್ಟು ಎರಡು ಸಲ, ಮೂರು ಸಲ ಓದಿದ್ದೇನೆ. ಬೇಂದ್ರೆ ಅವರೊಂದಿಗೆ ನಾನೂ ವಾಮನ ಕಳೆದಷ್ಟು ವರ್ಷಗಳನ್ನೇ ಕಳೆದಿದ್ದೇನೆ. ಆದರೆ ನನ್ನಿಂದ ಇಂತಹ ಒಂದು ಚರಿತ್ರ ಗ್ರಂಥ ರಚನೆ ಸಾಧ್ಯವಾಗುತ್ತಿತ್ತೆಂದು ಹೇಳಲಾರೆ. ನನ್ನ ಜೀವನದಲ್ಲಿ ಬೇಂದ್ರೆಯವರು, ಪ್ರಮುಖ ಪಾತ್ರವನ್ನು ವಹಿಸಿದಾರೆನ್ನುತ್ತೇನೆ. ನನ್ನ ಬಾಳಿನೊಂದು ದಿಕ್ಕು ತೋರಿದವರು ಅವರು. ನಾನು ಆಕಾಶವಾಣಿಯಿಂದ ನಿವೃತ್ತನಾದ ಮೇಲೆ ತಾವೇ ನನ್ನ ಮನೆಯವರೆಗೂ ಬಂದು ಏಳೆಂಟು ವರ್ಷ 'ಸಂವಾದ ಭಿಕ್ಷೆ'ಯೆಂದು ನನಗೆ ಜ್ಞಾನಭಿಕ್ಷೆ ನೀಡಿದ್ದಾರೆ. ಈಗ ಆ ನಿತ್ಯದ ಸಂಪರ್ಕ ತಪ್ಪಿದೆ—ನಾನು ಮನೆ ಸ್ಥಳಾಂತರಿಸಿದ್ದರಿಂದ. ಅದರಿಂದಾಗಿ ನನಗಾಗುವ ಬೇಸರಿಕೆ ಹೆಚ್ಚಿನದು. ನಾನೇ ನನ್ನೊಳಗೆ ನೋಡಿಕೊಂಡಾಗ ನನಗೂ ಅವರಿಗೂ ಅಂಟಿದ ನಂಟಿನ ಕೆಲವು ಸಮಾನ ಶೀಲಗಳು ಕಂಡುಬಂದಿವೆ. ಬೇಂದ್ರೆಯವರಂತೆ ನಾನೂ ಬಡ ಮನೆತನದವನೆ. ಅವರಂತೆಯೆ



೩೦ದೆ – ಮುಗ

ಅವರ ಬಿಸಿ ಹತ್ತದೆ ಬೆಳೆದೆನು. ಬೇಂದ್ರೆಯವರು ತಮ್ಮ ತಂದೆಯನ್ನು ತಮ್ಮ ಹನ್ನೊಂದನೆಯ ವಯಸ್ಸಿನಲ್ಲಿ (೧೯೦೭) ಕಳೆದುಕೊಂಡರೆ ನಾನೂ ಅಷ್ಟೇ–೧೯೩೪ರಲ್ಲಿ ಎಂದರೆ ಬೇಂದ್ರೆಯವರು ತಮ್ಮ ತಾಯಿಯನ್ನು ಕಳೆದುಕೊಂಡ ವರ್ಷ, ನನ್ನ ತಂದೆಯನ್ನು ಕಳೆದುಕೊಂಡು ಹನ್ನೊಂದು ವರ್ಷದವನಾಗಿದ್ದೆ. ನಮ್ಮ ಅಜ್ಜ ಮುಳುಗುಂದದ ಕುಲಕರ್ಣಿ. ಬೇಂದ್ರೆ ಅವರ ಅಜ್ಜಿ ಮುಳಗುಂದದ ನಾತು ಮನೆತನದ ಸೊಸೆ. ನಾನು ಹುಟ್ಟಿದ ವರ್ಷ (೧೯೧೩) ಬೇಂದ್ರೆ ಅವರು ಮ್ಯಾಟ್ರಿಕ್ ಪಾಸಾಗಿ ಅದೇ ದಿನ ತಮ್ಮ ಅಜ್ಜಿಯನ್ನು ಕಳೆದುಕೊಂಡರು. 'ಮ್ಯಾಟ್ರಿಕ್ ಪರೀಕ್ಷೆ ಮುಗಿಸಿ ಬಂದ ಸಾಯಂಕಾಲವೆ ಅವರ ಜೀವನಕ್ಕೆ ಸಿಂಹ ಕಾವಲು ನೀಡಿದ ಅಜ್ಜಿಯನ್ನು ಕಳೆದುಕೊಂಡಿದ್ದರು' ಎಂದು ಹೇಳುತ್ತ ವಾಮನ ಬೇಂದ್ರೆ 'ಮ್ಯಾಟ್ರಿಕ್ ಪಾಸಾದ ಸುಖದ/ಜೊತೆಗೆ ಅಜ್ಜಿಯನ್ನು ಕಳೆದುಕೊಂಡ ದುಃಖ ಸೇರಿ 'ಸುಖದುಃಖ ಸಂಗಮವಾದ ಹೃದ್ರಂಗವು ಪಾವನವೆಂಬೆನು ಯಾವಾಗಲೂ' ಎಂಬ ನಿಷ್ಠೆ ತಾಳುತ್ತ 'ಬೇಂದ್ರೆಯವರನ್ನು ದೈವತ್ವ ಕರೆದೊಯ್ದಿತು,' ಎಂದು ತಂದೆಯ ಜೀವನದ ನೆರಳು–ಬೆಳಕುಗಳ ಸಮಾಸಮ ಇರುವಿಕೆಯ ಪರಿಚಯ ಮಾಡಿಕೊಡುತ್ತಾರೆ. ಇನ್ನೊಂದು ಪ್ರಸಂಗ ಇಂತಹದೆ. ೧೯೪೧ರ ಕೊನೆ. ಬೆಳವಡಿಯಲ್ಲಿ ೨೧ ಎತ್ತಿನ ಜೋಡಿ ಹೂಡಿದ ಬಂಡಿಯಲ್ಲಿ ಬಿ. ಎಂ. ಶ್ರೀ. ಅವರೊಂದಿಗೆ ಮೆರವಣಿಗೆ ಮಾಡಿಸಿಕೊಂಡು ಮನ್ನಣೆಯ ಮಣೆಯ ಸತ್ಕಾರ ಪೂರೈಸಿಕೊಂಡು ಮನೆಗೆ ಬಂದರೆ ಗದಗ ಸಮಿತಿ ಹೈಸ್ಕೂಲಿನವರು 'ಬೇಂದ್ರೆಯವರನ್ನು ಕೆಲಸದಿಂದ ಕಡಿಮೆಮಾಡಿದ್ದಾರೆ' ಎಂದು ಪತ್ರ! ಬೇಂದ್ರೆಯವರ ಈವೊಂದು ಜೀವನದ ದೈವ-ದಾಟವನ್ನು ವಾಮನ ಮಾರ್ಮಿಕವಾಗಿ ಚಿತ್ರಿಸುತ್ತಾರೆ.

ಈ ಜೀವನ ಪರಿಚಯದ ಮುಖ್ಯ ಮತ್ತೊಂದು ಗುಣವೆಂದರೆ ಚರಿತ್ರದ ನಾಯಕರೊಡನೆ ಲೇಖಕನಿಗಿರುವ ಸಲುಗೆಯ ಸಂಬಂಧ. ಅಂತೆಯೇ ತಂದೆಯ ರೌದ್ರವನ್ನೂ ಕರುಣೆಯನ್ನೂ ಅಷ್ಟೇ ಸಮಭಾವ, ಸ್ವಾತಂತ್ರ್ಯಗಳನ್ನು ವಹಿಸಿ ಬರೆಯ ಬಲ್ಲರು ವಾಮನ. ನನ್ನಂಥವನು ಬೇಂದ್ರೆ ಅವರ ಸಿಟ್ಟು, ರೌದ್ರಗಳ ಸ್ವರೂಪವನ್ನು ಬಣ್ಣಿಸಲು ಹೆದರಿ ಹಿಂಜರಿಯಬಹುದು. ಆದರೆ ಈ ಚಿರಂಜೀವ ಸಿಂಹದ ಮರಿಯಂತೆ ಸಿಂಹದ ಆಯಾಲಿನ ಮೇಲೂ ಕೈಯಾಡಿಸಬಲ್ಲ.

ತಮ್ಮ ಅಜ್ಜಿಯ ಧೈರ್ಯ, ಸಾಹಸ, ದುರ್ದೈವಗಳನ್ನು ಬೇಂದ್ರೆಯವರು ನನ್ನ ಮುಂದೆ ಕಥೆ ಮಾಡಿ ಹೇಳುತ್ತ, ಎಷ್ಟೋ ಸಲ ಗದ್ಗದಿತರಾಗಿದ್ದಾರೆ. ಇಂಥ ಅಜ್ಜಿ ಅನಾಥ ಬೇನೆಯನ್ನು ಅನುಭವಿಸುತ್ತ ತಲವಾಯಿ ([illegible]) [illegible] (ಬೇಂದ್ರೆಯವರ ತಾಯಿ) [illegible] ವರ್ಣಿಸುವಲ್ಲಿ [illegible] ಯಾವುದೇ ಕದಿಮೆತನ [illegible]



ಈ ಹಾಳು ವಯಃಸ್ಕ ಚಿತ್ರಗಳಿಗೆ ಬರಬೇಡಾಂದ್ರೆ ಕೇಳಿದೆಯಾ ನನ್ನ ಮಾತು?"

'ಬಡ ಸಂಸಾರ ಎಂಬ ಭಾವನೆಯೇ ಬೇಂದ್ರೆಯವರಿಗೆ ಬರಲಿಲ್ಲ. ಏಕೆಂದರೆ ಶ್ರೀಮಂತಿಕೆ ಅವರಿಗೆ ಬೇಕಾಗಿರಲಿಲ್ಲ. ಊಟಕ್ಕೆ ಇರದಿದ್ದರೆ ಉಪವಾಸವಾದರೇನು ತಪ್ಪು, ಉಪವಾಸ ವ್ರತವನ್ನು ಸಾಧಿಸಿದಂತೆ ಆಯಿತು' ಎಂಬುದೇ ಅವರ ಜೀವನ ದೃಷ್ಟಿ. ಎಂತಹ ನಿಲುವು ತಂದೆಯದು. ತಂದೆಯ ಈ ನಿಲುವನ್ನು ಮೆಚ್ಚಿಕೊಂಡು 'Sweet are the uses of adversity' ಎಂದು ಶೆಕ್ಸ್‌ಪಿಯರನು ಹೇಳುವಂತೆ ಆವ್ರೊಂದು ತಾತ್ವಿಕ ಎತ್ತರದಿಂದ ಹೇಳುವ ಈ ಮಾತುಗಳು ಎಷ್ಟು ಮಾರ್ಮಿಕ. ಮಗನಾಗಿ ತಂದೆಯ ಬಡತನವನ್ನು 'ಒಲವೆ ನಮ್ಮ ಬದುಕು' ಎಂಬ ಹಾಡಿನ ಮೂಲಕ ಪಟ್ಟ ಪಾಡನ್ನು ಸವಿಮಾಡಿಕೊಳ್ಳುವ ಕವಿಯ ಹದಗಾರಿಕೆಯಿಂದ ಬಣ್ಣಿಸಿದ್ದಾರೆ. 'ಬಡತನದಲ್ಲಿಯೂ ಮದ್ದಾನೆಯಂತೆ ಮದೋನ್ಮತ್ತ ಬೇಂದ್ರೆಯವರ ನಡತೆ' -ಎಂದರೆ ಬೇಂದ್ರೆಯವರು ಹಿರಿಯರು ಅನುಭವಿಗಳು ಎಂಬವರೊಡನೆ ಗೌರವದಿಂದ ನಡೆಯುತ್ತಿದ್ದರೆ ಹೊರತು ಹೇಳಿದ್ದಕ್ಕೆಲ್ಲ ಗೋಣು ಹಾಕುವ ಕೌಲೆತ್ತು ಬೇಂದ್ರೆಯವರು ಆಗಲಿಲ್ಲ ಎಂಬ ಸಂದರ್ಭದಲ್ಲಿ ಹೇಳಿದ ಮಾತು ನಿಷ್ಠುರ ಸತ್ಯ.

ತನ್ನ ಜೀವನ ಪರಿಚಯ ಮಾಡಿಕೊಡುವ, ಪ್ರೌಢ ಪುತ್ರನನ್ನು ಕವಿ-ದಾರ್ಶನಿಕನಾದ ತಂದೆ ಸಹೃದಯ ಮಿತ್ರನಂತೆ ಕಂಡಿದ್ದಾನೆ. ನಿಜವಾಗಿಯೂ ವಾಮನ ಬೇಂದ್ರೆ ಮತ್ತು ದ. ರಾ. ಬೇಂದ್ರೆ ಅವರ ಸಂಬಂಧ ಈ ರೀತಿಯದಾಗಿ ಕಂಡುಬರುತ್ತದೆ ಈಗ. ತಂದೆಯ ಲೆಕ್ಕ ಪತ್ರವನ್ನೆಲ್ಲ ನೋಡಿಕೊಳ್ಳುವವರು ಮಗನೇ. ಆಕಾಶವಾಣಿಯಿಂದ ತಂದೆಗೆ ಒಂದು ಹಸಿರು ಚೆಕ್ ಬಂದರೆ ಅದನ್ನು ಮಗನ ತಾಬೆ ಮಾಡುತ್ತಾರೆ



"ನಮಗೆ ಆ ಬಂಗಾರದ ಜಿಂಕೆಯ ಗೊಡವೆಯೇ ಬೇಡ ಪ್ರಿಯೆ, ಗೋಲ್ಡ್ ಕಂಟ್ರೋಲ್ ಆರ್ಡರ್

ತಂದೆ. ರಸೀದಿಯ ರೆವೆನ್ಯೂ ಸ್ಟ್ಯಾಂಪಿಗೆ ಮಗ ಇಪ್ಪತ್ತು ಪೈಸೆ ಕೊಡುತ್ತಾನೆ. ಹಣದ ವ್ಯವಹಾರ ವೆಂದರೆ ಬೇಂದ್ರೆಯವರಿಗೆ ಎಂದಿಗೂ ಆಗದು. ಗಳಿಸುವಾಗ ಹಣ ಗಳಿಸಿದರೂ ಅದನ್ನು ಬಳಸುವ ಉಳಿಸುವ ಉಸಾಬರಿಗೆ ಅವರು ಹೋಗಲಿಲ್ಲ. 'ಬೇಂದ್ರೆಯವರು ತಾವು ಗಳಿಸಿದ ಹಣವನ್ನು ಮೊದಲು ತಾಯಿಗೆ. ಅನಂತರ ಪತ್ನಿ ಲಕ್ಷ್ಮೀಬಾಯಿ ಕಡೆಗೆ ಕೊಡುತ್ತ ಮನೆಯನ್ನು ಸಂಭಾಳಿಸಿಕೊಂಡು ಹೋಗಬೇಕು. ಎಂದು ಹೇಳಿ ತೆರವಾದರು' ಎಂಬಲ್ಲಿ ವಾಮನರು 'ತೆರವಾದರು' ಎಂಬ ಶಬ್ದವನ್ನು ಅತ್ಯಂತ ಮಾರ್ಮಿಕವಾದ ತಾತ್ವಿಕ ಅರ್ಥದಿಂದ ಬಳಸಿದ್ದಾರೆ.

ಬೇಂದ್ರೆಯವರು ಪ್ರೊಫೆಸರ್ ಆದ ಮೇಲೂ ತಮ್ಮ ಗೆಳೆಯರಿಗೆಲ್ಲಾ ಮಾಸ್ತರರೆ ಆಗಿ ಉಳಿದರು. ಉತ್ತಮ ವಿದ್ಯಾರ್ಥಿಗಳು ತಮ್ಮ ಭಾಗ್ಯವೆಂದು ಬಗೆದವರು ಗೆಳೆಯರನ್ನೂ ಹಾಗೇ ಬಗೆದರು. 'ಒಬ್ಬನಿಗೆ ಇನ್ನೊಬ್ಬ ನಿಜವಾದ ಗೆಳೆಯ ಸಿಕ್ಕರೆ ಸಾಕು ಅದು ಗೆಳೆಯರ ಗುಂಪು ಎಂದು ಗೆಳೆಯರ ಗುಂಪಿನ ವ್ಯಾಖ್ಯೆ ಎಂದು ಹೇಳಿ ಹಣದ ಸಮೀಕರಣ ಮಾಡುತ್ತಿದ್ದಾಗ ಅದು [illegible] ಎಂಬ ಮಾತನ್ನು ಮನ ಮುಟ್ಟುವಂತೆ ಹೇಳುತ್ತಾರೆ ಲೇಖಕರು ಈ ಗೆಳೆಯರ ಗುಂಪಿನ ಸಂವಿಧಾನದ ಬಗ್ಗೆ ಬರೆಯುತ್ತ– 'ಈ ಗುಂಪಿಗೆ ಸದಸ್ಯತ್ವ ನಿಯಮ, ಕಟ್ಟಳೆ, ಚುನಾವಣೆ, ಪದಾಧಿಕಾರಿ ಎಂಬ ಡೌಲು ಇರಲಿಲ್ಲ' ಎಂಬಲ್ಲಿ 'ಡೌಲು' ಎಂದು ವರ್ಣಿಸಿರುವ ಶಬ್ದ ಪ್ರಯೋಗವೂ ಅತ್ಯಂತ ಮಾರ್ಮಿಕವಾದುದು. ಈ ಡೌಲಿನಲ್ಲಿ ಗುಂಪಿನ ಅನೌಪಚಾರಿಕತೆ. ಮುಗ್ಧತೆ, ಸ್ನೇಹೈಕ ಭಾವನೆಗಳೆಲ್ಲವೂ ಧ್ವನಿತವಾಗುತ್ತವೆ. (ಡೌಲು ಬದಲಾಗಿ ಮಾಟವೆಂದೂ ಹೇಳಬಹುದು.)

ವಿದ್ಯಾರ್ಥಿ ಬೇಂದ್ರೆ ಪಠ್ಯಗಳನ್ನು ಅಭ್ಯಾಸ ಮಾಡುತ್ತಿದ್ದ ಕ್ರಮ, ಮಾಸ್ತರ್ ಬೇಂದ್ರೆ ಪಠ್ಯಗಳನ್ನು ಕಲಿಸುವ ಕ್ರಮ, ಅದರೊಂದಿಗೆ ಸುಂದರಕಾಂಡ, ವಾಯುಸ್ತುತಿ, ಸೌಂದರ್ಯ ಲಹರಿ, ಗೀತಾ [illegible] ಪುತ್ರ ಸಮೇತ ಮಾಡುತ್ತಿದ್ದ ಕ್ರಮ: ಮ್ಯಾಟರ್‌ಲಿಂಕ್, ಪಿ. ಇ. ಶೆಲಿ, ಶೇಕ್ಸ್‌ಪಿಯರ್, ಜಯದೇವ, ಜಗನ್ನಾಥ ಪಂಡಿತ ಮೊದಲಾದ ಕವಿ ವೇದಾಂತಿ ಗಳನ್ನು ಅಭ್ಯಾಸ ಮಾಡುವ [illegible]

ವಾಮನ ಸೊಗಸಾಗಿ ಬಣ್ಣಿಸುತ್ತಾರೆ–'ಕಾಳಿದಾಸನ ನಾಟಕಗಳನ್ನು ಓದುವಾಗ, ಅವರು ಕಾಳಿದಾಸ ರಾಗುತ್ತಿದ್ದರು, ಕೀಟ್ಸ್ ಓದುವಾಗ ಕೀಟ್ಸ್ ಆಗುತ್ತಿದ್ದರು' ಎಂದು.

'ನರಬಲಿ' ಕವಿತೆಯಿಂದ ಜೇಲುವಾಸ, ನಜರ ಬಂದಿಗಳನ್ನು ಅನುಭವಿಸಿ ಎಲ್ಲಿಯೂ ಇವರಿಗೆ ನೌಕರಿ ಕೊಡಬಾರದು ಎಂಬ ಸರಕಾರದ ಆಶೀರ್ವಾದವನ್ನು ಹೊತ್ತು ಮಕ್ಕಳೊಂದಿಗೆ, ಮಡದಿಯೊಂದಿಗೆ ಈ ಬಡ ಕವಿ, ನಿರುದ್ಯೋಗಿ ಮಾಸ್ತರ್ ಕಳೆದ ದಿನಗಳನ್ನು ವಾಮನ ಬೇಂದ್ರೆ ಯೋಗಿಯ ನಿಗ್ರಹದಿಂದಲೆ ಬರೆದಿದ್ದಾರೆನ್ನಬೇಕು. ೧೯೪೧ರ ಹೊತ್ತಿಗೆ ಸರಕಾರದ ಶಾಪವಿಮೋಚನೆಯ ಕಾಲ ಬರುತ್ತದೆ. ಗದುಗಿನ ನೌಕರಿ ಬಾಳ- ನೌಕೆಯನ್ನು ತೇಲಿಸೀತು ಎಂಬ ಭರವಸೆಯಿಂದ ಹೋದರೆ ಅದೂ ಮುಳುಗುವ ನೌಕೆಯೆ ಆಯಿತು. ಮರು ವರ್ಷ ಹುಬ್ಬಳ್ಳಿಯ ಮಾಸ್ತರಿಕೆ, ವಾರದಾಗ ಮೂರು ಸಾರೆ ಬಂದು ಹೋಗಾವಾ, ಎಂಬಂತೆ ಪಾರ್ಟ್‌ಟೈಂ ನೌಕರಿ. ಅದೂ ಆಯಿತು. 'God sent' ಎಂಬಂತೆ ದೇವಪ್ರೇಷಿತವಾಗಿ ಬರುತ್ತದೆ ಸೊಲ್ಲಾಪುರದ ಡಿ. ಎ. ವಿ. ಕಾಲೇಜಿನ ಪ್ರಾಧ್ಯಾಪಕತ್ವ. ಹಿರಿಯ ಮಗ ರಾಮು ಉತ್ಸಾಹದಿಂದ ಸೊಲ್ಲಾಪುರದಲ್ಲಿ ದೊಡ್ಡ ಮನೆ ಹಿಡಿಯುತ್ತಾನೆ. ಮುಂದೆ ಒಂದು ವಾರದಲ್ಲಿ ರಾಮು, ಚಿಕ್ಕ ತಮ್ಮ ಆನಂದ ಸಾವಿಗೆ ತುತ್ತಾಗಿ ಉಳಿದವರು ಜ್ವರ ಬಾಧೆಯಿಂದ ಬಳಲುತ್ತಾರೆ. ಹೀಗೆ ಸೊಲ್ಲಾಪುರ ಯಾತ್ರೆ ಮುಗಿದು ಮತ್ತೆ ಸಾಧನಕೇರಿಗೆ ಈ [illegible] ಆಗಮನ. [illegible] ಈ ಸಂಸಾರ ನೌಕೆಯ [illegible] ಚಿತ್ರವನ್ನು ಬರೆಯಲೆಂದು ಮಗನಾದವನು ಕೈಯಲ್ಲಿ ಲೇಖನಿ ಹಿಡಿದಾಗ ಆ ಲೇಖನಿ ಎಷ್ಟು ಸಲ ನಡುಗಿರಬೇಡ! ಶಾಯಿಲೆ ಆದ ಮಗು ಆನಂದ ಒಮ್ಮೆ ಅಪ್ಪನ ಬಾಯೊಳಗಿನ ಅಡಕೆ ಬೇಡಿದ. ಬೇಂದ್ರೆಯವರಿಗೆ ಸಿಟ್ಟು ಬಂತು. 'ನಿನ್ನ ಪ್ರಕೃತಿ ನೆಟ್ಟಗಿಲ್ಲ. ನಿನಗೆ ಅಡಿಕೆ ಏಕೆ ಬೇಕು' ಎಂದು ಜಬರಿಸಿದರು. ಒಂದು ವರುಷ [illegible]


ಅಡಿಕೆಯ ಆಡಿಮಪದಿಂದ ಮುಕ್ತವಾಗಿಬಿಟ್ಟಿತ್ತು. 'ಈ ಘಟನೆ ಇಂದಿಗೂ ಬೇಂದ್ರೆ ಅವರನ್ನು ಅಸ್ವಸ್ಥಗೊಳಿಸುತ್ತದೆ' ಎಂದು ಒಂದೇ ಒಂದು ಸರಳ ವಾಕ್ಯದಲ್ಲಿ ವಾಮನ ಅದೆಷ್ಟು ಭಾವನೆಯನ್ನು ಬಿಗಿಯಾಗಿ ತುಂಬಿಬಿದ್ದಾರೆ. ಅದೇ ರೀತಿ ಆನಂದ ಕೀರಿಕೊಂಡು ಎರಡು ದಿನವಾಗುವಷ್ಟರಲ್ಲಿ ರಾಮನ ಆರೋಗ್ಯ ಕೆಟ್ಟಿತು. ಎಂಟನೆಯ ದಿವಸ ಸಾಯಂಕಾಲ ಅವನ ಪ್ರಾಣಪಕ್ಷಿ ಹಾರಿತು. ಆಗ ಹತ್ತು ವರುಷದ ವಾಮನನಿಗೆ ಅಣ್ಣನ ಮರಣದ ಬಗ್ಗೆ ಏನೆನಿಸಿರಬೇಕು? 'ರಾಮು ಸತ್ತ ಅಂದರ ಏನಾತು ನನಗ ತಿಳೀಲಿಲ್ಲ!' ಈ ಮುಗ್ಧ ಮಾತಿನಲ್ಲಿ ಎಷ್ಟೊಂದು ಅರ್ಥ ಸಾಮರ್ಥ್ಯ! ಈ ಹೊತ್ತಿಗೆ ಅಂಬಿಕಾತನಯ ನೊಂದು ಬೆಂದ ಹೃದಯದಿಂದ ಹೊರಬಿದ್ದ ಗೀತ, 'ಶಿವಕರುಣೆ'! 'ರುದ್ರವಿಲಾಸದ ಪರಿಯೇ ಬೇರೆ? ಶಿವಕರುಣೆಯು ಹಿರಿದು' ಎಂದು ಮೊದಲಾಗುತ್ತದೆ. 'ಶಿವಕಾರುಣ್ಯದ ಘನತೆಯ ಮಿಗಿಲು ತಿಳಿದವರಾರದನು?' ಎಂದು ಮುಗಿಯುತ್ತದೆ. ದುಃಖವನ್ನು ಅದುಮಿಕೊಂಡಿದ್ದ ಅಂಬಿಕಾತನಯರ ಈಗಿನ ಸ್ವಭಾವ ಸಿಡುಕಿನದಾಗಿತ್ತು ಎಂದು ತಂದೆಯ ಮನಸ್ಸನ್ನು ವಿಶ್ಲೇಷಿಸಿ ಬರೆಯುತ್ತಾರೆ. ಸೊಲ್ಲಾಪುರದ

ಮೊದಲಿನ ದೊಡ್ಡ ಮನೆಯಿಂದ ಸಣ್ಣ ಮನೆಗೆ ಬದಲಿಸುತ್ತಾರೆ. ಪ್ರತಿಯೊಬ್ಬರಿಗೂ ಪರಸ್ಪರರ ಆಧಾರ ಬೇಕಾಗಿತ್ತು' ಎಂಬ ವಾಕ್ಯವನ್ನೋದಿದಾಗ ಓದುಗನಿಗೇ ಸೂತಕ ಹಿಡಿದಂತೆ ಭಾಸವಾಗುತ್ತದೆ.

ಹೀಗೆ ಸೊಲ್ಲಾಪುರದ ಅಗ್ನಿಪರೀಕ್ಷೆ ಕೊಟ್ಟು ಬೇಂದ್ರೆ ಸಂಸಾರ ಮತ್ತೆ 'ಧಾರವಾಡದ ತಾಯಿ'ಯ ಮಡಲಿಗೆ ಬಂದು ಬಿತ್ತು. ಆಕಾಶವಾಣಿಯ ಆಸರೆ ದೊರೆಯಿತು. ಅಲ್ಲಿಂದಲೂ ನಿವೃತ್ತಿ ಪಡೆದ ಮೇಲೆ ಸರಕಾರಿ ನಿವೃತ್ತಿ ವೇತನ. ಎರಡು ಯುನಿವರ್ಸಿಟಿಗಳ ಡಾಕ್ಟರೇಟ್ ಪದವಿ. ಪದ್ಮಶ್ರೀ ಗೌರವ, ಜ್ಞಾನಪೀಠ ಪ್ರಶಸ್ತಿ. ಹೀಗೆ ಮರ್ಯಾದೆಯು ಮಹಲು ಮಜಲಿನ ಮೇಲೆ ಮಜಲೇರಿತು, ಆದರೇನು? ಮರ್ಯಾದೆ ಬಂತು: ಮನೆಯ ಲಕ್ಷ್ಮಿ ತೆರಳಿದಳು. 'ಚಿತೆಯ ಹಸೆ'ಯನೇರಿದಳು. ಗೃಹದೇವತೆ ಬೇಂದ್ರೆಯವರ 'ಸಖೀಗೀತ'ದ ರತಿ ಕತ್ತಲಿಸಿತು. 'ಸಮರಸ ಜೀವನ'ದ 'ನಾಕು ತಂತಿ'ಯ ಶ್ರುತಿ ಅಡಗಿತು.

ಈ ಸಂದರ್ಭದ ವರ್ಣನೆ 'ಸಂಸಾರದಲ್ಲಿ ತಂದೆ ತಾಯಿಗಳ ಪ್ರೀತಿ. ಪರೋಕ್ಷ ಸಖ್ಯ ಸಮಗ್ರ [illegible] ಪ್ರಕಾರ ನಾನು ಕಂಡಿದ್ದೆ'– ಎಂದು ಹೇಳುತ್ತ ತನ್ನ ತಾಯಿಯ ಅನಾರೋಗ್ಯದ ಕಾಲಕ್ಕೆ 'ಬೇಂದ್ರೆಯವರು ವೈಯುಕ್ತಿಕವಾಗಿ ನಡೆದುಕೊಂಡ ರೀತಿ ನನ್ನ ತಾಯಿಯ ಮರಣ ಘಟನೆಯ ಕಾಲಕ್ಕೆ ಉಪಸ್ಥಿತರಿದ್ದ. ಎಲ್ಲರ ಜೀವನದಲ್ಲಿ ಒಂದು ಹೊಸ ದೃಷ್ಟಿಯನ್ನು ಕೊಟ್ಟಿತು ಎಂದು ನನಗೆ ಕಂಡುಬಂದಿತು' ಎಂದಿದ್ದಾರೆ.

ಈಗ ಬೇಂದ್ರೆ ಬದರ ದರ್ಶನದ ದಶಾಂಗುಲ ಸಂಖ್ಯಾಶಾಸ್ತ್ರ ಪ್ರಯೋಗಶಾಲೆಯು. ತಪಸ್ವಿ



"ನನ್ನ ಮನೆಯವರು ಹೈದರಾಬಾದಿನಲ್ಲಿ ಡಾಕ್ಟರಾಗಿದ್ದಾರೆ. ಅವರ ಪತ್ರವನ್ನು ಕೊಂಚ ಓದಿ ಹೇಳ್ತೀರಾ ?"

ಶಬ್ದ– ಅರ್ಥ ಮೀರಿದ ಈ ಸಾಂಖ್ಯ ವಿಚಾರ ಸಂವತ್ಸರ– ಯಜ್ಞ ಪೌರುಷಗಳ ಹೊಂದಾಣಿಕೆ. ಇದರ ರಹಸ್ಯದ ಜಾಡು ಚಿರಂಜೀವಿ ವಾಮನ ಅಲ್ಲದೆ ಇನ್ನಾವ ಮಿತ್ರರಿಗೂ ಪತ್ತೆಲ್ಲ. ಈ ಸಂಖ್ಯಾಸಮಾಧಿಯಲ್ಲಿರುವ ಬೇಂದ್ರೆಯವರ ಪ್ರಯೋಗಶೀಲತೆಗೆ ವಾಮನ ತಮ್ಮ ಗಣಕ ಯಂತ್ರದ ಸಹಾಯ ನೀಡಲು ಸದಾಸಿದ್ಧ, ಸದಾ ಜಾಗೃತ. ಮಧ್ಯರಾತ್ರಿಯಲ್ಲೂ ಕರೆ ಬಂದೀತು, ನಸುಕಿನ ಜಾವದಲ್ಲೂ ಕರೆ ಬಂದೀತು. ಯಾವ ಹೊತ್ತಿಗೆ ಕರೆ ಬಂದರೂ ಈತ ಸಿದ್ಧ.

ಹೀಗೆ ತಮ್ಮ ಸಂಖ್ಯಾಸಾಮ್ರಾಜ್ಯದಲ್ಲಿ ತಲ್ಲೀನರಾದ ತಂದೆಗೆ ನೆರವಾಗುತ್ತ, ಅವರನ್ನು ಕರೆದಲ್ಲಿಗೆ ಸ್ಕೂಟರ್ ಮೇಲೆ ತಲುಪಿಸಿ ಮತ್ತೆ ಕರೆತಂದು ಮನೆ ಮುಟ್ಟಿಸಬೇಕು. ಆಮೇಲೆ ತನ್ನ ಕಾಲೇಜು, ತನ್ನ ಅಧ್ಯಾಪನ ವೃತ್ತಿ! ಇತ್ತ ಮನೆವಾರ್ತೆ. ಎಲ್ಲವನ್ನೂ ಹೂಣೆ ಹೊತ್ತು ನೋಡಿಕೊಂಡು ಸಂಭಾಳಿಸಬೇಕು. ತಮ್ಮ ವಿಚಾರ ಸಮಾಧಿಯಲ್ಲೆ ಇರುವ ಬೇಂದ್ರೆ ಅವರ 'ಮೂಡ್ಸ್' ಹೇಳಲಿಕ್ಕೆ ಬರುವುದಿಲ್ಲ. ಅಲ್ಲದೆ– "ಬೇಂದ್ರೆಯವರು ಪ್ರವಾಸ ಮಾಡುವ, ಭಾಷಣ ಮಾಡುವ ಕವನ ವಾಚನ ಮಾಡುವ ವಯಸ್ಸು ಇದು ಅಲ್ಲ. ಬೇಡವೆನಿಸಿದರೆ ಬೇಂದ್ರೆ ಸಾಹಿತ್ಯ ಓದಬೇಡಿರಿ. ಧಾರವಾಡಕ್ಕೆ ಬಂದರೂ ಅವರಿಗೆ ಭೆಟ್ಟಿಯಾಗಬೇಡಿರಿ. ಭೆಟ್ಟಿ ಆದರೂ ಸಾಹಿತ್ಯ ವಿಷಯವಾಗಿ, ಸಾಹಿತಿಗಳ ವಿಷಯವಾಗಿ ಅವರೊಡನೆ ವಾದ ಮಾಡಬೇಡಿರಿ. ಬೇಂದ್ರೆಯವರು ಈಗ ಧಾರವಾಡದಲ್ಲಿ ಇರುವು ದಿಲ್ಲ ಎಂದು ಪ್ರಚಾರ ಮಾಡಿದರೂ ಧನ್ಯವಾದ ಗಳು. ಬೇಂದ್ರೆ ಅವರನ್ನು ಅವರ ಪಾಡಿಗೆ ಬಿಟ್ಟು ಬಿಡುವುದೂ ಗೌರವವೆ. 'ಎನ್ನ ಪಾಡೆನಗಿರಲಿ ಅವರ ಹಾಡನ್ನಿಷ್ಟೆ ಹಾಡುವೆನು ರಸಿಕ ನಿನಗೆ' ಎಂದು, ೧೯೩೮ರಲ್ಲಿ ಹೇಳಿದ್ದನ್ನೆ ಅವರು ೧೯೭೭ರ ಲ್ಲಿಯೂ ಹೇಳುತ್ತಿದ್ದಾರೆ." ಎಂದೆಲ್ಲ ಬರೆದಿರು ವಲ್ಲಿ ತಥ್ಯವಿದೆ, ಅರ್ಥವಿದೆ. ಬೇಂದ್ರೆಯವರು ತಮ್ಮ ಲೋಕದಲ್ಲಿ ತಾವಿರುತ್ತಾರೆ. ತಮ್ಮ ಚಿಂತನೆಯಲ್ಲಿ ಮಗ್ನರಾಗಿ ನಿಮಗ್ನರಾಗಿ, ಮುಳುಗಿ ಹೋಗಿರುತ್ತಾರೆ. ಇಂಥ ಅವರನ್ನು ವ್ಯಾಪ

ಪ್ರಾಪ್ತವಾದುದಲ್ಲ ಎಂದು ಇಂದಿನ ಸಾಹಿತ್ಯ ಲೋಕ ಅರ್ಥ ಮಾಡಿಕೊಂಡರೆ ಉಭಯತ– ರರಿಗೂ ಉಪಕಾರವಾದೀತು. ವಾಮನ ಹೇಳುವಂತೆ, ಬೇಂದ್ರೆಯವರ ಈ ಹರೆಯ ಜೀವನದ ಪರಿಸರ ಮತ್ತು ಪರಿಸ್ಥಿತಿ ನೋಡಿ ದರೆ ಅವರು ಇಷ್ಟು ದಿವಸ ಬದುಕಿದ್ದುದೇ ಒಂದು ಮಹಾ ಆಶ್ಚರ್ಯ ಎಂಬ ಉದ್ಗಾರದ ಜೊತೆಗೆ ಬೇಂದ್ರೆಯವರು – 'ದೈವವಾದಿಗಳು' ಎಂಬ ಮಾತನ್ನೂ ನೆನೆಯಬೇಕು.

೧೯೧೮ರಿಂದ ಆರು ದಶಕ ಮಿಕ್ಕಿ ಬೇಂದ್ರೆ ಯವರು ಕಾವ್ಯಸಾಧನ, ಕಾವ್ಯೋದ್ಯೋಗ ಮಾಡಿದ್ದಾರೆ. ಈ ಅವಧಿಯಲ್ಲಿ ಅವರು ಪಟ್ಟ ಪಾಡೆಷ್ಟು! ಅನುಭವಿಸಿದ ನೋವುಗಳೆಷ್ಟು! ಕಂಡ ಸಾವುಗಳೆಷ್ಟು! ದೇವರು ಕಾವ್ಯಶಕ್ತಿ ಯನ್ನು ದಯಪಾಲಿಸಿದ್ದರಿಂದ ಎಲ್ಲ ನೋವನ್ನೂ ನೋಂಪಿಯಾಗಿಸಿದರು, ಎಲ್ಲ ತಾಪ ವನ್ನು ತಪವನ್ನಾಗಿ ಮಾಡಿದರು. ಅವರ, ಕಾವ್ಯ ಬೆಟ್ಟದಷ್ಟಾಗಿ ಕನ್ನಡಿಗರ ಮುಂದಿದೆ. ಅವರ ಗದ್ಯ ಬರವಣಿಗೆ ವಿರಾಟ್ ಆಕಾರ ತಾಳಿ ನಿಂತಿದೆ. ಇದನ್ನೆಲ್ಲ ಓದಿಕೊಂಡವರು ಎಷ್ಟು ಜನ? ಬೇಂದ್ರೆಯವರ ಕಾವ್ಯಕಾವೇರಿ ಇನ್ನೂ ಪ್ರವಹಿಸುತ್ತಲೇ ಇದೆ. ಬೇಕಾದವರು ಸವಿಯಲಿ, ತಣಿಯಲಿ, ಅರ್ಥವಾಗದಿದ್ದರೆ, ಸ್ವಸ್ಥವಾಗಿರಲಿ. ಡಾ. ವಾಮನ ಬೇಂದ್ರೆ, ಹೇಳುವುದಿಷ್ಟೆ. 'ವಾದಕ್ಕೆ ಪ್ರತಿ ವಾದ ಸಾಕು. ವಾದ ವಿವಾದ ಜೀವನ ಸಂವಾದಕ್ಕೆ ಹಸಿದು ಬಂದೆ' ಎಂಬ ಬೇಂದ್ರೆಯವರ ನುಡಿಗಳನ್ನು ನೆನೆಯಿರಿ. ಮುಖ್ಯವಾಗಿ 'ಬೇಂದ್ರೆ ಅವರು ಬರೆದ ಎಲ್ಲ ಕವನಗಳ ಸಂಪೂರ್ಣ ಅರ್ಥ ಅವರಿಗೇ ಆಗಿಲ್ಲ, (ಬೇಂದ್ರೆ ತಮ್ಮ ರಚನೆ ಗಳನ್ನು ಇನ್ನೊಬ್ಬರ ರಚನೆಗಳೆಂಬಂತೆ ಒಮ್ಮೊಮ್ಮೆ ಓದಿ ಆನಂದಿಸುತ್ತಾರೆ) ಅನೇಕ ಪಂಡಿ ತರಿಗೆ ಆಗಿಲ್ಲ. ಆದುದರಿಂದ ಜನಸಾಮಾನ್ಯರಿಗೆ ಬೇಂದ್ರೆ ಕವನದ ಅರ್ಥವಾಗುತ್ತಿಲ್ಲ ಎಂಬುದರ ಬಗ್ಗೆ ಬೇಂದ್ರೆ ಅವರಿಗೆ ಎಳ್ಳಷ್ಟೂ ಅಸಮಾಧಾನವಿಲ್ಲ' ಎಂದು ಲೇಖಕ ವಾ. ದ. ಬೇಂದ್ರೆ ಬೇಂದ್ರೆ ಕಾವ್ಯ ವಿಮರ್ಶೆಯ ಕೊನೆಯ

ಒಂದು ಮಾತನ್ನು ನಾವಿಲ್ಲಿ ನೆನಪಿಡಬೇಕು. ವಾಮನ ಹೇಳುತ್ತಾರೆ: ಬೇಂದ್ರೆಯವರೊಡನೆ ತಪ್ಪು ನಡೆದು ಕ್ಷಮೆ ಕೇಳಲು ಬಂದರೆ ಬೇಂದ್ರೆಯವರಿಗೆ ವಿಪರೀತ ಸಿಟ್ಟು. 'ತಪ್ಪು ಮರೆಯೋಣ ಒಪ್ಪಾಗಿರೋಣ' ಎಂಬ ತತ್ವವೇ ಬೇಂದ್ರೆಯವರಿಗೆ ಒಪ್ಪಿಗೆ ಇಲ್ಲ. ತಪ್ಪನ್ನು ನೆನಪಿಟ್ಟು, ಮತ್ತೊಮ್ಮೆ ತಪ್ಪು ಮಾಡದೆ ಇರೋಣ ಎನ್ನುತ್ತಾರೆ ಬೇಂದ್ರೆ... ಉತ್ತಮಿಕೆಯ ನಟನೆಗಿಂತ ಉತ್ತಮಿಕೆ ನಮ್ಮಲ್ಲಿ ಬರುವಂತೆ, ಉತ್ತಮ ಜನಾಂಗದ ಸೃಷ್ಟಿಯಾಗುವಂತೆ ದೇವರಲ್ಲಿ ಪ್ರಾರ್ಥಿಸಲು ಬೇಂದ್ರೆಯವರು ಸದಾಸಿದ್ಧ. ಅದರಂತೆಯ ಬೇಂದ್ರೆಯವರಿಗೆ ಸಾಹಿತ್ಯ ನಿರ್ಮಿತಿಗಿಂತ ಜೀವನ ಉನ್ನತಿ ಹೆಚ್ಚು ಪ್ರಿಯ' ಎಂಬ ಮಾತಿನಲ್ಲಿ ಬೇಂದ್ರೆಯವರ ನಿಲುವಿನ ಎತ್ತರ ಕಂಡು ಬರುವುದಿಷ್ಟೆ ಅಲ್ಲ, ಬೇಂದ್ರೆ ಚರಿತ್ರಕಾರ, ವಾಮನ ಬೇಂದ್ರೆಯವರ ಚರಿತ್ರ ಲೇಖನ ಕೃತಿಯ ಪರಿಪಕ್ವತೆ ವ್ಯಕ್ತವಾಗುತ್ತದೆ. ಆದರೂ ಈ ಗ್ರಂಥವನ್ನು ಚರಿತ್ರ ಗ್ರಂಥವೆಂದು ಅವರು ಕರೆದಿಲ್ಲ, 'ಜೀವನ ಪರಿಚಯ' ಎಂದು ಮಾತ್ರ ಹೇಳಿದ್ದಾರೆ.

ಅರುವತ್ತು ಪುಟಗಳ ಈ ಪರಿಚಯ ಪುಸ್ತಕದಲ್ಲಿ ವಾಮನ ಬೇಂದ್ರೆ ದ. ರಾ. ಬೇಂದ್ರೆಯವರ ಜೀವನ, ಸಾಧನ, ಅವರ [illegible] ಪರಿಪೂರ್ಣ ಕಲ್ಪನೆ ಮಾಡಿಕೊಡುತ್ತಾರೆ. ವೇದಗಳು, ವೇದಗಳ ಬಗೆಗಿನ ಗ್ರಂಥಗಳು, ಶ್ರೀ ಅರವಿಂದರ ಪೂರ್ಣ ವಿಜ್ಞಾನ, ಶ್ರೀ ವಾಸಿಷ್ಠ ಗಣಪತಿ ಮುನಿಗಳ ಗ್ರಂಥಗಳು, ಕಾಳಿದಾಸ, ಶೇಕ್ಸ್‌ಪಿಯರ್, ಶೆಲಿ, ಶಂಕರಾಚಾರ್ಯ, [illegible] [illegible] [illegible], [illegible] ಮೊದಲಾದ ಕವಿ ಕೃತಿಗಳು, ಬೇಂದ್ರೆಯವರ ಕೃತಿ ಸಾಹಿತ್ಯ, ಈ ಎಲ್ಲರ ಜೊತೆಗೆ ಬೇಂದ್ರೆಯವರು 'ಜೀವನ'ವೆಂಬ ಗ್ರಂಥವನ್ನು 'ಓದಿ' ಅರಗಿಸಿಕೊಂಡಿದ್ದಾರೆ. ಪ್ರಕೃತಿಯೆಂಬ ಪಾಠಶಾಲೆಯಲ್ಲಿ ಕಲಿತಿದ್ದಾರೆ. ಆತ್ಮಚಿಂತನೆಯೆಂಬ ಗರುಡಿಯಲ್ಲಿ ವ್ಯಾಯಾಮ ಮಾಡಿದ್ದಾರೆ. ಬೇಂದ್ರೆಯವರ ಈ ಎಲ್ಲ ಅಂಗೋಪಾಂಗಗಳನ್ನು ಸರಿಯಾದ perspective ನಲ್ಲಿ, ವಾಮನ ಬೇಂದ್ರೆಯವರು ನಮ್ಮ ಮುಂದೆ ಪ್ರಸ್ತುತ ಪಡಿಸಿದ್ದಾರೆ.

ವಾಮನ ಬೇಂದ್ರೆಯವರದು ತಿರುಳಿನ ಶೈಲಿ: ಜಾಬಾಳ ವರ್ಣನೆ, ಅತಿಶಯೋಕ್ತಿಯ ಅಲಂಕಾರ ಅವರಿಗೆ ಇಷ್ಟವೇ ಇಲ್ಲ. ಸತ್ಯ ಸಂಗತಿಗಳನ್ನು ಖಂಡತುಂಡಾಗಿ ಮಂಡಿಸುವ ಸ್ಪಷ್ಟ ವೃತ್ತಿ ಅವರಿಗಿದೆ. ವಾ. ದ. ಬೇಂದ್ರೆಯವರ ಗದ್ಯ ಶೈಲಿಯನ್ನು ನಾನು ತುಂಬ ಮೆಚ್ಚಿಕೊಂಡಿದ್ದೇನೆ. ಲೇಖಕ ವಾ. ದ. ಬೇಂದ್ರೆ ಲೇಖಕ ದ. ರಾ. ಬೇಂದ್ರೆ ಅವರೊಡನೆ ಸಂವಾದ ಸಖ್ಯವನ್ನು ಬೆಳೆಸಿ ಅವರನ್ನು ಅರ್ಥಮಾಡಿಕೊಂಡಿದ್ದಾರೆ. ವೇದಾಂತಿ ಬೇಂದ್ರೆ, ಪ್ರೊಫೆಸರ್–ಮಾಸ್ತರ್ ಬೇಂದ್ರೆ, ಕವಿ ಬೇಂದ್ರೆ, ತಂದೆ ಬೇಂದ್ರೆಯವರ ಸತ್ವಗಳನ್ನು ಸರಿಯಾಗಿ ಹಿಡಿದಿದ್ದಾರೆ. ಮಂಡನೆ ಮಾಡಿಕೊಂಡಿದ್ದಾರೆ. 'ಸಾಹಿತ್ಯ ಸೃಷ್ಟಿ ಕಮ್ಮಟ ಶಾಲೆಯ ಕರ್ಮವಲ್ಲ: ಅದು ಒಂದು ಪ್ರಸಾದೋದ್ಭವ ದಿವ್ಯದಿಂದ ದೀಪ ಹಚ್ಚುವ ಕ್ರಿಯೆ ಎಂದು ಬೇಂದ್ರೆಯವರು ತಿಳಿದುಕೊಂಡಿದ್ದರು.' ಎಂಬ ಈ ವಾಮನ ವಾಕ್ಯವನ್ನು ನೆನೆದು ಚಿಂತಿಸಿದರೆ ಸಾಕು. ಬೇಂದ್ರೆಯವರ ಉನ್ನತ ಕಾವ್ಯದ ಅರ್ಥವಾದೀತು.

ಈ ಸುಂದರ ಸುಬಂಧದ ವಸ್ತುನಿಷ್ಠ ಪರಿಚಯವನ್ನು [illegible] [illegible] ಬೇಂದ್ರೆ. [illegible] ಬೇಂದ್ರೆ [illegible] [illegible].

"ನನ್ನ ಗಂಡ ನನ್ನೊಂದಿಗೆ ಕಳೆದ ಹತ್ತು ವರ್ಷಗಳಿಂದ ಮಾತಾಡಿಲ್ಲ. ಕಾರಣ ನನಗೆ ಡೈವೋರ್ಸ್ ಬೇಕು," ಎಂದಳಾಕೆ.

"ಹೌದಾ ?! ನಿಜವೇನ್ರಿ ?" ಕೇಳಿದ ನ್ಯಾಯಾಧೀಶ.

"ಆಕೆಯ ಮಾತು ಮುಗೀಲಿ ಅಂತ ಕಾಯ್ತಿದ್ದೆ ಸಾರ್," ಅಂದ ಬಡಪಾಯಿ ಗಂಡ.


ಮರಳುಗಾಡಿನ ಅಮರ ಕಲೆ

ಹತ್ತು ಸಾವಿರ ವರ್ಷಗಳ ಹಿಂದೆ ಸಹಾರಾ ಸುಜಲ ಸುಫಲ ಸಮೃದ್ಧ ಪ್ರದೇಶ. ನೆಲೆಗೇಡಾದ ಮಂದಿ ಸುತ್ತ ಹತ್ತೂ ಕಡೆಯಿಂದ ಒತ್ತೊತ್ತಾಗಿ ಬಂದು ನೆಲೆಸಿ ಮತ್ತೆ ಪ್ರಯಾಣ ಮುಂದುವರೆಸುತ್ತಿದ್ದರು. ಕೆಲ ಜನಾಂಗಗಳು ಅಲ್ಲಿಯೇ ಬೀಡುಬಿಟ್ಟವು ಕೂಡ. ಅವರೆಲ್ಲ ಟೆಸ್ಸಿಲಿ ಎನ್ ಅಜರ್ ಪ್ರಸ್ಥಭೂಮಿಯನ್ನು ಜೀವಂತವಾಗಿ ಇರಿಸಿದರು.

ಕಾಲಪ್ರವಾಹದಲ್ಲಿ ಈ ಸಮೃದ್ಧ ಸಹಾರಾ ಮರಳುಗಾಡಾಯಿತು. ಪ್ರಕೃತಿ ಪ್ರಕೋಪಕ್ಕೆ ಜನ ಹೆದರಿ ಅತ್ತಿತ್ತ ಓಡಿದರು. ಸುಡುಬಿಸಿಲಿಗೆ ಎಲ್ಲ ಹಾಳಾಯಿತು. ಆದರೆ ಪ್ರಕೃತಿಗೂ ಕಲೆಯ ಬೆಲೆ ಗೊತ್ತಿದ್ದಿರಬೇಕು: ನೆಲೆಸಿದ್ದವರ ನೆನಪಿಗೆಂದು ಬಂಡೆಗಲ್ಲುಗಳ ಮೇಲಿದ್ದ ಕಲೆಯ ಕುಸುಮವನ್ನದು ಕೆಡಿಸಲಿಲ್ಲ.


ಮಧ್ಯ ಸಹಾರಾದಲ್ಲಿ ಬೇರೆನಿರದಿದ್ದರೂ ಅಮರ ಕಲೆಯ ಪ್ರಕೃತಿದತ್ತ "ಅಗಾಧ ಮ್ಯೂಜಿಯಂ" ಇದೆ. ದಕ್ಷಿಣ ಅಲ್ಜೀರಿಯದ ಟೆಸ್ಸಿಲಿ ಪ್ರಸ್ಥಭೂಮಿಯ ಟಿ ಎನ್ ಟೆಜಾರಿಫ್, ಸೆಫಾರ್ ಜಾನೆಟ್, ಜಬ್ಬಾರೆನ್ ಮತ್ತು ಅಜೆಫು ಪ್ರದೇಶ

ಚರಿತ್ರಪೂರ್ವಯುಗದ ರಥ ಕುದುರೆ ಮತ್ತು ಯೋಧರೊಂದಿಗೆ ಪಶು ಕರು ನಾಯಿಗಳು (ಅಜೆಫು)





↓ ದನಗಳ ದೊಡ್ಡಿ   ಕೆಂಪು ಬಣ್ಣದ ದುಂಡು ತಲೆಯ ಶಹಾಮೃಗಗಳು (ಲಾಕ್ಷಿ) ↑




ಗಳಲ್ಲಿ ಪ್ರಾಗೈತಿಹಾಸಿಕ ವಸ್ತುಗಳು ಶೋಧಿಸಲ್ಪಟ್ಟದ್ದು ೧೯೩೩ರಲ್ಲಿ. ಅಲ್ಲದೆ ಅಲ್ಲಿಯ ಬಂಡೆಗಲ್ಲುಗಳ ಮೇಲಿನ ಅಪೂರ್ವ ವರ್ಣಚಿತ್ರಗಳ ಬಗ್ಗೆ ಜಗತ್ತಿನ ಕೆಲ ಆಸಕ್ತರಿಗೆ ತಿಳಿದದ್ದೂ ಆಗಲೇ.


ಈ ಅದ್ಭುತ ವಸ್ತ್ಯಾಜಿಯುವ್ಮ್ಯನ್ನು ಹೊರ ಪ್ರಪಂಚಕ್ಕೆ ತೋರಿಸಿದ ಶ್ರೇಯಸ್ಸು ಹೆನ್ರಿ ಲ್ಹೋಟ್ ಎಂಬ ಫ್ರೆಂಚ್ ಸಂಚಾರಿ ಮತ್ತು ಪ್ರಾಚ್ಯವಸ್ತು ಸಂಶೋಧಕ ಹಾಗೂ ಆತನ ಸಹಚರರಿಗೆ ಸಲ್ಲುತ್ತದೆ. ಅವರು ಅಲ್ಲಿ ೧೯೫೬–೫೭ರಲ್ಲಿ ಹದಿನೆಂಟು ತಿಂಗಳು ಕಾಲ ಉಳಿದು ಪ್ರತಿಯೊಂದು ಕಲ್ಲನ್ನೂ ನಿರೀಕ್ಷಿಸಿ ಅದರಲ್ಲಡಗಿದ್ದ ಚಿತ್ರಗಳನ್ನು, ವರ್ಣಚಿತ್ರಗಳನ್ನು ಪ್ರತಿಮಾಡಿ ಛಾಯಾಗ್ರಹಣ ಮಾಡಿಕೊಂಡು ಕಲಾಪ್ರಪಂಚಕ್ಕೆ ಕಾಣಿಕೆಯಾಗಿತ್ತರು. ಲ್ಹೋಟ್ ಬರೆದ 'The search for the Tassili Frescoes: The story of the prehistoric Rock-Paintings of the Sahara' ಎಂಬ ಸಚಿತ್ರ ಪುಸ್ತಕ ನಮಗೆ ಈ ಅಮರ ಕಲೆಯನ್ನು ಪರಿಚಯಿಸುತ್ತದೆ.

ಇಂದು ನಾವು "ನವ್ಯಕಲೆ" ಎಂದು ಕರೆಯುವ ಕಲಾಪ್ರಕಾರ ನಾಚುವಷ್ಟು ನವ್ಯ ಶೈಲಿಯವು ಈ ಭಿತ್ತಿಚಿತ್ರಗಳು.


ಕ್ರಿಸ್ತಪೂರ್ವ ೮೦೦೦ ವರ್ಷದ ಅವಧಿಯಲ್ಲಿ ಈ ಮಾದರಿಯ ಮೊದಲ ಭಿತ್ತಿಚಿತ್ರಗಳನ್ನು ತೆಗೆಯಲಾಯಿತೆಂದು ಲ್ಹೋಟ್ ಅಭಿಪ್ರಾಯಪಡುತ್ತಾರೆ. ನಿಗ್ರಾಯ್ಡ್ ಜನಾಂಗಕ್ಕೆ ಸೇರಿದ ಕಲಾವಿದರು ಈ ಚಿತ್ರಗಳನ್ನು ಬಂಡೆಗಲ್ಲುಗಳ ಮೇಲೆ ರೂಪಿಸಿದರು. ತಾವು ವಾಸಿಸಿದ್ದ ಬಂಡೆಗಳ ಸಂದಿನಲ್ಲಿ ಒಳಹೊರಗೆ ನಾನಾ ಬಣ್ಣಗಳಿಂದ ಬರೆದರು. ಆಗಿನ ಚಿತ್ರಗಳಲ್ಲಿ ಪ್ರಾಣಿಜೀವನದ ಪದಿನೆಳಲು ಕಾಣಿಸುತ್ತದೆ.



ಬೇಟೆಗಾರರು: ಶಿಲಾಯುಗದ ಭಿತ್ತಿ ಚಿತ್ರದಲ್ಲಿ ಅವರ ಬೇಟೆಯಾಟದ [illegible] (ಸಹಾರಾ)




ಈಜಿಪ್ತ್ ಕಲೆಯ ಪ್ರಭಾವವಿರುವ ಈ ಚಿತ್ರಗಳಲ್ಲಿ ನರ್ತಕಿಯರು ವಾದ್ಯವಾದನಕಾರರನ್ನು ಕಾಣಬಹುದು.





ಬೆದರಿದ ಜಿಂಕೆಗಳು.



ಜಿರಾಫೆ–ಮರಿಯನ್ನು ಬೇಟೆ ನಾಯಿ ತವೆದಿದೆ. ಬೇಟೆಗಾರ ಗುರಿಯಿಟ್ಟಿದ್ದಾನೆ.
ಚರಿತ್ರಪೂರ್ವಯುಗದ ಭಿತ್ತಿಚಿತ್ರ.

ಕ್ರಿಸ್ತಪೂರ್ವ ೪೦೦೦ ದ ಸುಮಾರಿಗೆ ಅಲ್ಲಿ ಬಂದು ನೆಲೆಸಿದ ನಿಗ್ರಾಯ್ಡ್ ಅಲ್ಲದ ಒಂದು ಜನಾಂಗ—ಬಹುಶಃ ಪಶುಪಾಲನೆಯನ್ನೇ ತಮ್ಮ ಜೀವನೋಪಾಯವಾಗಿ ಮಾಡಿಕೊಂಡವರಿರಬೇಕು — ಹಸು ಕರುಗಳನ್ನು ಚಿತ್ರಿಸತೊಡಗಿತು. ತಮ್ಮ ಪರಿಸರದ ಪಶು–ಪಕ್ಷಿಗಳನ್ನು ಬಲು ಕಲಾತ್ಮಕವಾಗಿ ಅವರು ಬಂಡೆಗಳ ಮೇಲೆ ಪ್ರತಿಷ್ಠಾಪಿಸಿದರು.

ಈ ಭಿತ್ತಿಚಿತ್ರಗಳನ್ನು ಒಟ್ಟು ನಾಲ್ಕು ಮುಖ್ಯ ವಿಭಾಗಗಳಲ್ಲಿ ವಿಂಗಡಿಸಿದ್ದಾರೆ ಲ್ಹೋಟ್: ಶಿಲಾಪೂರ್ವಯುಗ, ಶಿಲಾಯುಗ, ಚರಿತ್ರಪೂರ್ವ ಕಾಲದವು ಹಾಗೂ ನಮ್ಮ ಯುಗದವುಗಳು ಎಂದು. ✿

ದೇಶ-ಕಾಲ ತಂತ್ರಕ್ಕೆ ಸಂಬಂಧಿಸಿದಂತೆ ಕಲೆಯ ವರ್ಗೀಕರಣ ಮಾಡಲಾಗುತ್ತದೆ. ಶಿಲಾಯುಗದಲ್ಲಿ ವರ್ಣಚಿತ್ರಣಕ್ಕೆ ಉಪಯೋಗಿಸುತ್ತಿದ್ದ ಆಧಾರತಲಗಳೆಂದರೆ ಗುಹೆಗಳ ಗೋಡೆಗಳು. ತುದಿ ಜಜ್ಜಿದ ಕಡ್ಡಿ ಇಲ್ಲವೆ ಕೂದಲಿಂದ ಮಾಡಿದ ಕುಂಚದಿಂದ ನೇರವಾಗಿ ಗೋಡೆಯ ಮೇಲೆ ಬಣ್ಣದ ರಾಡಿಯನ್ನು ಲೇಪಿಸುತ್ತಿದ್ದರು. ಕೆಲವೆಡೆ ಬಣ್ಣವನ್ನು ಬಾಯಲ್ಲಿ ಇಲ್ಲವೆ ಕೊಳವೆಯಲ್ಲಿ ತುಂಬಿ ಊದಿ ತುಂತುರು ಬೀಳುವಂತೆ ಮಾಡುವ ಸಿಂಪರಣೆಯ ತಂತ್ರವೂ ಬಳಕೆಯಲ್ಲಿತ್ತು. ಫ್ರೆಸ್ಕೊ ಎಂಬ ವಿಧಾನದಲ್ಲಿ ಗೋಡೆಯ ಮೇಲೆ ಸುಣ್ಣ ಬಳಿದು ಅದು ಹಸಿಯಾಗಿರುವಾಗಲೇ ನೀರಿನಲ್ಲಿ ಕಲಸಿದ ಬಣ್ಣವನ್ನು ಲೇಪಿಸಿ ಚಿತ್ರಿಸಲಾಗುತ್ತದೆ. ಹೀಗಾಗಿ ಬಣ್ಣ ಗೋಡೆಯ ಸುಣ್ಣದೊಡನೆ ರಾಸಾಯನಿಕವಾಗಿ ಬೆರೆತು ಗೋಡೆಯ ಭಾಗವಾಗಿಯೇ ಸ್ಥಿರವಾಗುತ್ತದೆ. ಇಲ್ಲಿ ವಿವರಿಸಲಾದ ಭಿತ್ತಿಚಿತ್ರಗಳು ಇದೇ ತಂತ್ರದವು.

JOHNSON®

ಪ್ರೆಷರ್ ಕುಕ್ಕರ್

— ಎಲ್ಲಾ ವಿಚಾರಗಳಲ್ಲೂ ಇದು ಜಯಶಾಲಿ



- ಸ್ಟೇನ್‌ಲೆಸ್ ಸ್ಟೀಲ್‌ನಂತಹ ಹೊಳಪು
- ಅಧಿಕ 'ಹಿಸ್' ಶಬ್ದ
- ಇನ್ಸುಲೇಟ್ ಆದ ಒತ್ತಡದ ಬಟ್ಟು
- ಹೆಚ್ಚು ಸುರಕ್ಷಿತವಾದ ಸೇಫ್ಟಿ ವಾಲ್ವ್
- ಸಂಪೂರ್ಣ ಹುಟಿಕರ ರಿವಟಿಂಗ್
- ಅತಿ ಕಠಿಣ ಹೊರಮೈ
- ಬಿಸಿ ತಟ್ಟದ ಹಿಂಬದಿಯ ಹಿಡಿ
- ಅತಿ ದಪ್ಪ ಗ್ಯಾಸ್ಕೆಟ್
- ಮಜಬೂತಾದ ಜಾಲರಿ ತಟ್ಟೆ
- ಉತ್ತಮ ರಚನೆಯುಳ್ಳ ವೆಂಟ್ ಟ್ಯೂಬ್
- ಸರಾಗ ಹಿಡಿತವುಳ್ಳ ಬಲವಾದ ಹಿಡಿಗಳು

ಅತಿ ವಿಸ್ತಾರ ಶ್ರೇಣಿ:
4.5, 5.5, 6.5,7.5. 9.
11,13.5 ಮತ್ತು 16
ಲೀಟರುಗಳ ಸೈಜುಗಳಲ್ಲಿ

ವೃಷಭೋಪಾಖ್ಯಾನ

ಡಾ. ಕೆ. ಶ್ರೀಕಂಠಯ್ಯ

ದೇವರ ಹೆಸರಿನಲ್ಲಿ ಗೂಳಿ ಬಿಡುವ ಸಂಪ್ರದಾಯ ಭಾರತೀಯರಲ್ಲಿ ಬಹಳ ಹಿಂದಿನಿಂದಲೂ ಬೆಳೆದು ಬಂದಿದೆ: ಇಂದಿಗೂ ಇದೆ. ಗೂಳಿ ಬಿಡುವುದು ಎನ್ನುವ ಪದದ ಅರ್ಥವ್ಯಾಪ್ತಿಯ ಬಗೆಗೆ ಒಂದೆರಡು ಸ್ವಾರಸ್ಯಕರ ವಿವರಣೆಗಳು ದೊರೆಯುತ್ತವೆ. ಎತ್ತಿಗೆ ಅಥವಾ ಹೋರಿಗರುವಿಗೆ ಲಿಂಗಮುದ್ರೆಯನ್ನೊತ್ತಿ ದೇವರ ಹೆಸರಿನಲ್ಲಿ ಸ್ವತಂತ್ರವಾಗಿ ಬಿಡುವುದಕ್ಕೆ ಗೂಳಿ ಬಿಡುವುದು ಎಂದು ಅರ್ಥ. 'ಎತ್ತಿಗುತ್ತಮ ಲಿಂಗ ಮುದ್ರೆಯನೊತ್ತಲಾಗೆ ಅದು ಬಸವನೆಂಬರು' (ಅನುಭವಾಮೃತ), ಆಕಳ ಹೊಟ್ಟೆಯಲ್ಲಿ ಹೋರಿ ಹುಟ್ಟಿವರೇನು ಲಿಂಗಮುದ್ರೆಯನೊತ್ತುವನ್ನಕ್ಕ' (ಚೆನ್ನಬಸವಣ್ಣನವರ ವಚನಗಳು). ಮನೆಯಲ್ಲಿ ಹಿರಿಯರು ಕಾಲವಾದರೆ, ಅಪರ ಕರ್ಮದ ಅಂಗವಾಗಿ ಹೋರಿಗರುವಿಗೆ ಲಿಂಗಮುದ್ರೆ ಒತ್ತಿಬಿಡುವ ಆಚರಣೆಯೂ ಉಂಟು. ಇದಕ್ಕೆ ವೃಷೋತ್ಸರ್ಜನ ಎಂದು ಹೆಸರು. ಗರುಡ ಪುರಾಣದಲ್ಲಿ ಇದರ ಉಲ್ಲೇಖವಿದೆ. ಗೂಳಿ ಬಿಡುವುದು ಎನ್ನುವ ಮಾತು ವೃಷೋತ್ಸರ್ಜನವನ್ನು ಕುರಿತು ಇರಬಹುದು.

ಸೆಮಿನಾಲ್

ಹೈದರಾಬಾದಿನಲ್ಲಿರುವ ಕಣ ಮತ್ತು ಅಣು ಜೀವಶಾಸ್ತ್ರ ಕೇಂದ್ರದ (CSIR ನ ಒಂದು ಕೂಸಾದ CMB) ಡಾ. ಭಾರ್ಗವ ಮತ್ತು ಶ್ಯಾಮ ರೆಡ್ಡಿ ಹಾಗೂ ಜರ್ಮನಿಯ ಮೇಕ್ಸ್ ಫ್ಲಾಸ್ಕ್ ಸಂಸ್ಥೆಯ ಡಾ. ಕಾರ್ಲ್ ಶಯನ್ಟ್ ಎಂಬ ವಿಜ್ಞಾನಿಗಳು ಪ್ರೋಟೀನೊಂದನ್ನು ಗೂಳಿಯ ದಾಕು ರಸ (Semen) ದಿಂದ ಬೇರ್ಪಡಿಸಿರುವರು. ಸೆಮಿನಾಲ್ ಪ್ಲಾಸ್ಮಿನ್ ಎಂದು ಕರೆಯಲ್ಪಡುವ ಇದಕ್ಕೆ ಕೆಲವು ಪ್ರತಿ ಜೈವಿಕಲಕ್ಷಣಗಳಿದ್ದು ಬ್ಯಾಕ್ಟೀರಿಯೆಗಳನ್ನು ನಾಶಪಡಿಸಬಲ್ಲದು. ಈ ಮೂರು ಮಂದಿಯ ಹೆಸರಿನಲ್ಲಿ ಅಂತಾರಾಷ್ಟ್ರೀಯ ಪೇಟೆಂಟ್ ಪಡೆಯಲಾಗಿದ್ದು ಇದರಿಂದ ಬರುವ ರಾಯಲ್ಟಿಯಲ್ಲಿ ಮೂರು ಪಾಲು ಭಾರತಕ್ಕೂ ಒಂದು ಪಾಲು ಪಶ್ಚಿಮ ಜರ್ಮನಿಗೂ ಸಲ್ಲುವುದು. ಸದ್ಯಕ್ಕೆ CSIR ಪುಡಿ ರೂಪದಲ್ಲಿ ಇದನ್ನು ಸಂಶೋಧಕರಿಗೆ ಉಚಿತವಾಗಿ ಒದಗಿಸುತ್ತಿದೆ.

ಪ್ರತಿಜೈವಿಕ ವಸ್ತುಗಳು ಸೂಕ್ಷ್ಮಾಣುಗಳನ್ನು ನಾಶಗೊಳಿಸ ಬಲ್ಲವು ಇಲ್ಲವೆ ಅವುಗಳ ಬೆಳವಣಿಗೆಯನ್ನು ನಿಲ್ಲಿಸುತ್ತವೆ. ಸೇಮಿನಾಲ್ ಪ್ಲಾಸ್ಮಿನ್ ಒಂದು ಕುತೂಹಲಕಾರಿ ಹಾದಿಯಲ್ಲಿ ಸೂಕ್ಷ್ಮಾಣುವನ್ನು ಹೊಗುತ್ತದೆ. ಈ ಹಾದಿಯನ್ನು ಅನ್ವೇಷಕರು principle of permeation ಎಂದಿದ್ದಾರೆ. ಅಲ್ಲಿರುವ RNA ಪಾಲಿಮೆರಸ್ ಎಂಬ ಕಿಣ್ವಗಳನ್ನು ಇದು ಅಕ್ರಿಯಗೊಳಿಸುವುದು. ಈ ಕಿಣ್ವಗಳಿಲ್ಲದೆ RNA ಬೆಳವಣಿಗೆಗೆ ಕುಮ್ಮಕ್ಕು ಸಿಗದೆ, ಸೂಕ್ಷ್ಮಾಣುವಿನ ಸಂತಾನಾಭಿವೃದ್ಧಿ ನಿಲ್ಲುವುದು. ಈ ಪ್ರೋಟೀನು ತನ್ನ ಆಟವನ್ನು ಬ್ಯಾಕ್ಟೀರಿಯಾ ಮೇಲಲ್ಲದೆ ಬೂಸ್ಟು, ಯೀಸ್ಟುಗಳ ಮೇಲೂ ತೋರಿಸುವುದು

ಬೀದಿ ಬೀದಿಗಳಲ್ಲಿ ಸ್ವೇಚ್ಛಾವಿಹಾರಿಗಳಾಗಿ, ದುಂಡು ದುಂಡಾಗಿ ಮೈತುಂಬಿಕೊಂಡಿರುವ ಗೂಳಿಗಳು ಅಲೆಯುವುದನ್ನು ವಿದೇಶಿ ಪ್ರವಾಸಿಗರೂ ಗಮನಿಸಿದ್ದಾರೆ. ಹಾಗೆಯೇ ಶಿವಾಲಯ-ಗಳಲ್ಲಿ ಸ್ಥಾಪಿಸಿರುವ ಬಸವನ ವಿಗ್ರಹಗಳನ್ನು ಕಂಡು ಕಲ್ಲಿನಲ್ಲಿ ಹಸು ಮತ್ತು ಗೂಳಿ-ಗಳ ವಿಗ್ರಹಗಳನ್ನು ಮೂಡಿಸಿ ದೇವಸ್ಥಾನಗಳಲ್ಲಿಡುತ್ತಾರೆ. ದೇವಸ್ಥಾನಕ್ಕೆ ಬಿಟ್ಟ ಅನೇಕ ಗೂಳಿಗಳು ಯಾರ ಅಡ್ಡಿ ಆತಂಕವಿಲ್ಲದೆ ಊರಿನಲ್ಲಿ ಅಲೆಯುವುದನ್ನು ನೋಡಬಹುದು ಎಂದಿದ್ದಾರೆ ಪಾಯೇಸ್ ಫಾರ್ಗಾಟನ್ ಎಂಪೈರ) ಗೂಳಿ. ಬಿದ್ದರೆ ಆಳಿಗೊಂದು ಕಲ್ಲು, ಗೂಳಿನಡೆವ ಹೆಜ್ಜೆ ತೋರುವುದಲ್ಲದೆ ಗಾಳಿಯ ಹೆಜ್ಜೆ ತೊರುವುದೆ ಎಂಬ ಮಾತುಗಳು ಗೂಳಿಯ ಸ್ಥೂಲಕಾಯವನ್ನು ಸೂಚ್ಯವಾಗಿ ಬಿಂಬಿಸುತ್ತವೆ. ಕಂಠೀರವ ನರಸರಾಜ ವಿಜಯದಲ್ಲಿ ದೊರೆಯುವ ಗೂಳಿ ಕಾಳಗಗಳ್ ಘೂಳಿಯ ನೆಲದೊಳು ಕೇಳಿಯ ಚೌರವ ಮಾಡಿ ಕಾಳಗವನು ಮಾಡಿಸುವ ರಾಜಪುತ್ರರ ಸಾಲುಗಳಿರುತಿರ್ಪವಲ್ಲಿ (ಕಂನವಿ ೭-೧೬) ಎಂಬ ಒಂದು ವಿವರಣೆ ಗೂಳಿಕಾಳಗಗಳೂ ನಡೆಯುತ್ತಿದ್ದವೆಂಬುದಕ್ಕೆ ಇಂಬುಕೊಡುತ್ತದೆ. 'ಬುಲ್ ಫೈಟ್' ಅಥವಾ ಗೂಳಿ ಕಾಳಗ ಎಂಬುದು ತುಂಬ ಪರಿಚಿತ ಕ್ರೀಡೆಯಾದರೂ ಗೂಳಿ ಕಾಳಗಗಳ ವರ್ಣನಾತ್ಮಕ ಚಿತ್ರಗಳು ಎಲ್ಲೂ ಅಷ್ಟಾಗಿ ಕನ್ನಡ ಸಾಹಿತ್ಯ ಕೃತಿಗಳಲ್ಲಿ ಮೂಡಿಬಂದಂತಿಲ್ಲ. (?) ಆದರೆ ಟಗರ ಕಾಳಗ, ಹುಂಜಗಳ ಕಾಳಗ, ಮುಂತಾದ ಮೃಗಯಾವಿನೋದಗಳನ್ನು ಕುರಿತ ಚಿತ್ರಗಳು ಸಾಕಷ್ಟು ದೊರೆಯುತ್ತವೆ.

ರೂಢಿಯ ಮಾತಿನಲ್ಲಿ ಕೂಡ ಯಾರ ಅಡ್ಡಿ ಆತಂಕಗಳಿಲ್ಲದೆ ಸ್ವೇಚ್ಛಾವಿಹಾರಿಗಳಾಗಿ ಯಾರಾದರೂ ಇದ್ದರೆ ಅವರನ್ನು ಗೂಳಿ ಬಿಟ್ಟಿದೆ ಎಂದು ಹೇಳುವ ವಾಡಿಕೆ ಇದೆ. 'ಪರರ ಮನೆಯೊಳುಂಡು ಪರರ ಮನೆಯೊಳಿದ್ದು ಪರರ ಭೋಗಿಸುತಿಪ್ಪ ಗೂಳಿಯಂತೆ' (ಪುರಂದರದಾಸರ ಕೀರ್ತನೆ) 'ಆಳುವ ನಿಮ್ಮ ಗಂಡರಿಗೆ ನಾಚಿಕೆ ಇಲ್ಲ ಗೂಳಿ ಬಿಟ್ಟಿದೆ ನಿಮ್ಮನು ಸ್ತ್ರೀಯರನು (ಪು. ದಾ. ಕೀರ್ತನೆ) ✡

ಫ್ಲಾಸ್ಮಿನ್

ಇದನ್ನು ಗೂಳಿಯ ತಾಜಾ ಧಾತು ರಸದಿಂದ ತೆಗೆಯಲಾಯಿತು. ಈ ಪ್ರೋಟೀನು ಧಾತು ರಸದಲ್ಲಿರುವುದೆಂದು ಡಾ. ಭಾರ್ಗವರವರು ೧೯೫೭ ರಲ್ಲಿ ಶಂಕಿಸಿದ್ದರು. ಮಾಕ್ಸ್ ಪ್ಲಾಸ್ಕ್‌ನ ಡಾ. ಶರ್ಟ್ ಸೇರಿಕೊಂಡ ಬಳಿಕ ಬೇರ್ಪಡಿಕೆಯ ಕೆಲಸ ತ್ವರಿತವಾಯಿತು. ಸಸ್ತನಿಗಳಿಂದ ತೆಗೆಯಲ್ಪಟ್ಟಿರುವ ಪ್ರತಿಜೈವಿಕ ಸಸಾರಜನಕಗಳಲ್ಲಿದು ನಾಲ್ಕನೆಯದು.

ಈ ಅನ್ವೇಷಣೆಯು ಹಲವು ವಿದೇಶೀ ವೈಜ್ಞಾನಿಕರ ಮತ್ತು ತಯಾರಕರ ಲಕ್ಷ್ಯ ಸೆಳೆದಿದೆ. ಬ್ಯಾಕ್ಟೀರಿಯಾ ಸೋಂಕಿನಿಂದ ಉಂಟಾಗುವ ಬಂಜೆತನಕ್ಕೆ ಇದರಿಂದ ಮದ್ದು ಅರೆಯಬಹುದೆಂದು ಕೆಲವರ ಆಸೆ.

ಈ ಸಂಶೋಧನಾ ಕಾರ್ಯದ ಮುಂದಾಳು ಡಾ. ಪಿ. ಎಂ. ಭಾರ್ಗವ ಅವರು ಹೇಳುವಂತೆ, ಈ ಸಸಾರಜನಕ ವಿಕಾಸದ ಹಾದಿಯಲ್ಲಿ ಸಾಕಷ್ಟು ಹಿರಿಯ ಪಾತ್ರ ವಹಿಸಿದೆ. ಹೆಣ್ಣಿನ ಜನನೇಂದ್ರಿಯ ಮತ್ತು ಅವಯವಗಳಿಗೆ ಹತ್ತುವ ರೋಗಗಳನ್ನೆದುರಿಸಿ ಸೇಮಿನಾಲ್‌ಪ್ಲಾಸ್ಮಿನ್ ಕಾರ್ಯಗೈಯುವುದು. ಗಂಡಿನೊಡನೆ ಸಂಪರ್ಕ ಹೊಂದಿ ಧಾತುರಸದ ಲಾಭ ಪಡೆಯುವ ಹೆಣ್ಣುಗಳು ಈ ರೋಗಗಳಿಗೆ ತುತ್ತಾಗಿ, ಅಂಥವರ ಸಂತತಿ ಮುಗಿದುಹೋಯಿತು, ಎಂದು ಇವರ ವಿವರಣೆ. ಇನ್ನೂ 'ಡಾಕ್ಟರ್' ಎನ್ನಿಸದಿರುವ ಶಾವ್ ರೆಡ್ಡಿಯವರು ಇದರಿಂದ ಬೂಸ್ಟು ಸಂಬಂಧೀ ಕಾಯಿಲೆಗಳು ಹಾಗು ಲೈಂಗಿಕ ರೋಗಗಳಿಗೆ (STD) ಪ್ರತಿಜೈವಿಕಗಳನ್ನು ತೆಗೆಯಬಹುದಾಗಿದೆ ಎಂದು ಆಶಿಸಿದ್ದಾರೆ.

–ಬಿಂದು

ಸರಳ ಸಮಸ್ಯೆಗೆ ಸರಳವಾದದ್ದೆ ಪರಿಹಾರ

ವೈಜ್ಞಾನಿಕ ಕ್ಷೇತ್ರದಲ್ಲಿ ಹೊಸ ಹೊಸ ಸಂಶೋಧನೆಗಳು ಪ್ರಕಟಗೊಂಡ ಮೇಲೆ ಜನಸಾಮಾನ್ಯರು 'ಓಹ್, ಇಷ್ಟೇನೆ? ಆದರೆ ಅದು ಮೊದಲು ನನ್ನ ಗಮನಕ್ಕೆ ಬರಲೇ ಇಲ್ಲ, ನೋಡಿ,' ಎನ್ನುವುದುಂಟು. ಹೌದು, ಸರಳವಾದ ತಥ್ಯ ನಮ್ಮ ಕಣ್ಣಿಗೆ ಬೀಳುವುದೇ ಇಲ್ಲ– ಬೇರೆ ಯಾರಾದರೂ ಅದನ್ನು ಎತ್ತಿ ತೋರಿಸುವ ವರೆಗೆ. ನಮಗೂ ವಿಜ್ಞಾನಿಗಳಿಗೂ ಇರುವ ವ್ಯತ್ಯಾಸವೆಂದರೆ ಇಷ್ಟೆ. ಯಾವುದೇ ಸಮಸ್ಯೆಗೆ ಕಷ್ಟಕರವಾದ ಪರಿಹಾರವನ್ನು ಹುಡುಕುವುದನ್ನು ಬಿಟ್ಟು ಸರಳವಾದ ಪರಿಹಾರವನ್ನು ಹುಡುಕುವ ಅಭ್ಯಾಸವನ್ನು ಬೆಳೆಸಿಕೊಂಡರೆ ಹೊಸ ಹೊಸ ತಥ್ಯಗಳು ತಂತಾನೆ ಗೋಚರಿಸಿಯಾವು; ಜೀವನವೂ ಸುಗಮವಾದೀತು. ಸರಳವಾದ ಪ್ರಶ್ನೆಗೆ ಸರಳವಾಗಿಯೆ ಪರಿಹಾರವನ್ನು ಹುಡುಕುವ ಅಭ್ಯಾಸವನ್ನು ಬೆಳೆಸಿಕೊಳ್ಳಲು ಇಲ್ಲಿ ಕೊಟ್ಟಿರುವ ಸಮಸ್ಯೆಗಳು ಸ್ವಲ್ಪವಾದರೂ ಪ್ರಯೋಜಕವಾಗಬಹುದು.

೧

ಬಸಪ್ಪನನ್ನು ಯಾರೋ ಅಪಹರಿಸಿಕೊಂಡು ಹೋಗಿ ನಿರ್ಜನವಾದ ಪ್ರದೇಶದಲ್ಲಿರುವ ಬಂಗಲೆಯ ಮೂರನೆಯ ಅಂತಸ್ತಿನಲ್ಲಿ ಬಂಧಿಸಿದ್ದಾರೆ. ಮೇಲೆ ಎಂಟು ಅಡಿಗಳಷ್ಟು ಅಂತರದಲ್ಲಿ ದೊಡ್ಡ ಕಿಟಕಿಯಿದ್ದು ಅದರ ಎದುರಿಗೆ ಗಿಡದ ಟೊಂಗೆಯಿದೆ. ಕಿಟಕಿಯಿಂದ ಪಾರಾಗಬೇಕೆಂದರೆ ಏಣಿಯಿಲ್ಲ, ಕುರ್ಚಿಯಿಲ್ಲ, ಮೇಜು ಇಲ್ಲ– ಒಂದು ಮಾತಿನಲ್ಲಿ ಹೇಳಬೇಕೆಂದರೆ ಒಂದು ಚಿಕ್ಕ ಕೊಡಲಿಯನ್ನುಳಿದು ಬೇರೆ ಯಾವ ವಸ್ತುವೂ ಕೋಣೆಯಲ್ಲಿಲ್ಲ. ಬಾಗಿಲನ್ನು ಮುರಿದು ಪಾರಾಗಬೇಕೆಂದರೆ ಅದು ಕಬ್ಬಿಣದ ತಗಡುಗಳಿಂದ ಮಾಡಿದ್ದರಿಂದ ಸಾಧ್ಯವಿಲ್ಲ. ಕೊಡಲಿಯಿಂದ ಗೋಡೆಗೆ ಕನ್ನ ಹಾಕಿ ಪಾರಾಗಬೇಕೆಂದರೆ ಗೋಡೆಯಿಂದ ಕೆಳಗಿಳಿಯಲು ಯಾವ ಸಾಧನಗಳೂ ಇಲ್ಲ. ಕೆಳಗೆ ಜಿಗಿಯಬೇಕೆಂದರೆ ನೆಲ ಬಹಳ ಕೆಳಕ್ಕಿದ್ದುದರಿಂದ ಎಲುವು ಹುಡಿಹುಡಿಯಾದಾವೆನ್ನುವ ಭೀತಿ ಬಸಪ್ಪನಿಗೆ. ಆದರೂ ಆತ ಪಾರಾದ. ಹೇಗೆ ?

೨

ರಾಮು ಕಿಟ್ಟುವಿಗೆ ಪ್ಯಾಂಟಿನ ಎಡಕ್ಕಿರುವ ಕಿಸೆಯಲ್ಲಿ ಬಲಗೈಯನ್ನು, ಬಲಕ್ಕಿರುವ ಕಿಸೆಯಲ್ಲಿ ಎಡಗೈಯನ್ನು ಒಂದು ನಿಮಿಷದಲ್ಲಿ ಪೂರ್ತಿಯಾಗಿ ಹಾಕಿ ತೋರಿಸಿದರೆ ಒಂದು ರೂಪಾಯಿ ಬಕ್ಷೀಸ್ ಕೊಡುತ್ತೇನೆಂದ. ಕಿಟ್ಟು ಅದನ್ನೊಪ್ಪಿ ರಾಮುವನ್ನು ಗೆದ್ದ, ಹೇಗೆ?

೩

ಭೀಮರಾಯರು ೧೨ ಇಂಚಿನಷ್ಟು ವ್ಯಾಸದ ಸ್ಟೀರಿಯೋ ರಿಕಾರ್ಡ್ ಪ್ಲೇಟನ್ನು ತಂದರು. ಅದರ ಎರಡೂ ಬದಿಗಳಲ್ಲಿ ಅರ್ಧ ಇಂಚಿನಷ್ಟು ಸ್ಥಳದಲ್ಲಿ ಗೆರೆಗಳಿರಲಿಲ್ಲ. ಹಾಗೆಯೆ ಮಧ್ಯದಲ್ಲಿ ೩ ಇಂಚಿನಷ್ಟು ವ್ಯಾಸವುಳ್ಳ ಸ್ಥಳದಲ್ಲಿಯೂ ಗೆರೆಗಳಿರಲಿಲ್ಲ. ಉಳಿದ ಸ್ಥಳದಲ್ಲಿ

ಒಂದು ಇಂಚಿಗೆ ನೂರರಂತೆ ಗೆರೆಗಳಿವೆ. ಭೀಮರಾಯ ರಿಕಾರ್ಡನ್ನು ಪೂರ್ತಿಯಾಗಿ ಕೇಳಿದ. ಈ ಅವಧಿಯಲ್ಲಿ ಸ್ಟೈಲಸ್ ಎಷ್ಟು ಅಂತರವನ್ನು ಕ್ರಮಿಸಿತೆಂಬುದನ್ನು ಹೇಳಬಲ್ಲಿರಾ ?

೪

ಐದು ಡಜನ್ ಸ್ಟಾಂಪಿನಲ್ಲಿ ಒಂದು ಪೈಸೆಯ ಅರವತ್ತು ಸ್ಟಾಂಪುಗಳಿರುತ್ತವೆಯಾದರೆ ಅಷ್ಟೇ ಡಜನ್ ಸ್ಟಾಂಪುಗಳಲ್ಲಿ ಐದು ಪೈಸೆಯ ಎಷ್ಟು ಸ್ಟಾಂಪುಗಳಿರುವವು ?

೫

ಸಿದ್ಧರಾಮಪ್ಪ ಒಂದು ಕುದುರೆಯನ್ನೂ ಒಂದು ಕುರಿಯನ್ನೂ ೮೫ ರೂಪಾಯಿಗಳಿಗೆ ಕೊಂಡ. ಆತ ಕುರಿಗೆ ಕೊಟ್ಟದ್ದಕ್ಕಿಂತಲೂ ೫೫ ರೂಪಾಯಿಗಳಷ್ಟು ಹೆಚ್ಚು ಹಣವನ್ನು ಕುದುರೆಗೆ ಕೊಟ್ಟ. ಹಾಗಾದರೆ ಕುದುರೆಯ ಬೆಲೆ ಎಷ್ಟು ?

೬

ಸುರೇಶ ಹಾಗೂ ರೇಖಾ ಒಂದೇ ಕಾಲೇಜಿನಲ್ಲಿ ಓದುತ್ತಿದ್ದವರು. ಸುರೇಶ ಅಗರ್ಭ ಶ್ರೀಮಂತ. ದಿನಾಲೂ ಕಾರಿನಲ್ಲಿ ಕಾಲೇಜಿಗೆ ಬರುತ್ತಿದ್ದ. ಆದರೆ ರೇಖಾ ಅಷ್ಟು ಸ್ಥಿತಿವಂತಳಲ್ಲ. ಹೀಗಾಗಿ ನಡೆದುಕೊಂಡೆ ಕಾಲೇಜಿಗೆ ಹೋಗುತ್ತಿದ್ದಳು. ಇಬ್ಬರೂ ಒಂದು ದಿನ ಊರ ಹೊರಗೆ ಹೋಗಿ ಮಜಾ ಮಾಡಬೇಕೆಂದು ನಿರ್ಧರಿಸಿದರು. ತಾನು ಸಂಜೆ ಐದು ಗಂಟೆಗೆ ಕಾರಿನಲ್ಲಿ ಬರುವುದಾಗಿಯೂ ಆಕೆ ತಾನು ಹೇಳಿದ ಸ್ಥಳದಲ್ಲಿ ಕಾಯುತ್ತಾ ನಿಂತಿರಬೇಕೆಂದೂ ಸುರೇಶ ಹೇಳಿದ. ಆ ಪ್ರಕಾರ ರೇಖಾ ಆತ ಹೇಳಿದ ಸ್ಥಳದಲ್ಲಿ ಕಾಯುತ್ತಾ ನಿಂತಳು. ಆರು ಗಂಟೆಯಾದರೂ ಸುರೇಶನ ಸುಳಿವೇ ಇಲ್ಲ. ಮೊದಲೇ ಮೋಡ ಕವಿದಿತ್ತು. ಆರೂ ಕಾಲು ಗಂಟೆಯ ಸುಮಾರಿಗೆ ಮಳೆ ಧೋ ಧೋ ಎಂದು ಸುರಿಯಲು ಪ್ರಾರಂಭವಾಯಿತು. ರೇಖಾ ಕೊಡೆಯನ್ನು ತಂದಿರಲಿಲ್ಲ; ರೇನ್‌ಕೋಟು ಧರಿಸಿರಲಿಲ್ಲ. ಸುತ್ತಮುತ್ತ ಗಿಡಮರಗಳೂ ಇರಲಿಲ್ಲ. ಕೊನೆಗೆ ಏಳು ಗಂಟೆಯ ಸುಮಾರಿಗೆ ಸುರೇಶ ಬಂದು ಕಾರಿನಲ್ಲಿ ಕರೆದುಕೊಂಡು ಹೋದ. ನಾಲ್ವತ್ತೈದು ನಿಮಿಷಗಳ ವರೆಗೆ ಮಳೆ ಸುರಿದಿದ್ದರೂ ರೇಖಾಳ ವಸ್ತ್ರಗಳು ಮಾತ್ರ ಒಣವಾಗಿಯೆ ಇದ್ದವು. ಈ ಆಶ್ಚರ್ಯ ಸಂಭವಿಸಿದ್ದು ಹೇಗೆ ?

೭

ಬಸಪ್ಪ ಈಶಪ್ಪ ಇಬ್ಬರೂ ಪೋಲೀಸರು. ದಾರಿ ಉದ್ದವಾಗಿದ್ದುದರಿಂದ ಒಬ್ಬ ಒಂದು ದಿಕ್ಕಿನತ್ತ, ಇನ್ನೊಬ್ಬ ಇನ್ನೊಂದು ದಿಕ್ಕಿನತ್ತ ನಿಗಾ ಇಡಬೇಕೆಂದು ಮಾತನಾಡಿಕೊಂಡು ರಾತ್ರಿ ಕಾಲದಲ್ಲಿ ಲೈಟಿಲ್ಲದೆ ಬರುವ ಸೈಕಲ್ ಸವಾರರನ್ನು ಹಿಡಿಯಲು ಇಬ್ಬರೂ ಒಂದೇ ಕಡೆ ನಿಂತರು. ಪಕ್ಕದ ಮನೆಗಳಲ್ಲಿ ಅಷ್ಟಿಷ್ಟು ದೀಪಗಳು ಬೆಳಗುತ್ತಿದ್ದುದರಿಂದ ಕಗ್ಗತ್ತಲೇನೂ ಆಗಿರಲಿಲ್ಲ. ಇಲಿಯನ್ನು ಹಿಡಿಯಲು ಬೆಕ್ಕು ಜಪ್ಪಿಸಿ ಕೂಡುವ ಹಾಗೆ ಇವರು ಲೈಟಿಲ್ಲದ ಸವಾರರನ್ನು ಹಿಡಿಯಲು ಸಿದ್ಧರಾಗಿ ನಿಂತಿದ್ದರು. ಮೊದಲೇ ರಾತ್ರಿ. ಹಗಲಿನ ಗಜಿಬಿಜಿಯಿರಲಿಲ್ಲ. ಈ ಶಾಂತ ವಾತಾವರಣದಲ್ಲಿ ಬಸಪ್ಪನಿಗೆ ಏನು ನೆನಪಾಯಿತೋ, ಒಮ್ಮೆಲೆ ಹಲ್ಲು ಕಿರಿದ. ಕೂಡಲೆ ಈಶಪ್ಪ, "ಅದೇಕೆ ಹಲ್ಲು ಕಿರಿಯುತ್ತೀ ಹುಚ್ಚನ ಹಾಗೆ ? ತಲೆಗಿಲೆ ಕೆಟ್ಟಿತೇನು?" ಎಂದು ಒದರಿದ. ಬಸಪ್ಪ ಹಲ್ಲು ಕಿರಿದಿದ್ದು ಈಶಪ್ಪನಿಗೆ ಗೊತ್ತಾದದ್ದು ಹೇಗೆ ?

(ಉತ್ತರಕ್ಕಾಗಿ ೧೧೨ ನೆಯ ಪುಟ ನೋಡಿರಿ)

ಅಚಾರವಿಲ್ಲದ ನಾಲಿಗೆ....

ವೈ. ಎನ್. ಗುಂಡೂರಾವ್

ಪ್ರತಿಯೊಬ್ಬನೂ ಕೆಲವು ಸಾರೆ ಪರಿಸ್ಥಿತಿಯ ಒತ್ತಡಕ್ಕೆ ಮಣಿದು ಸಣ್ಣಪುಟ್ಟ ಸುಳ್ಳುಗಳನ್ನು ವಿಧಿಯಿಲ್ಲದೆ ಹೇಳಬೇಕಾಗುತ್ತದೆ. ಅಂತಹ ಸಂದರ್ಭದಲ್ಲಿ ತಾನು ಸುಳ್ಳು ಹೇಳುವುದರಿಂದ ಪರಿಣಾಮವೇನಾದೀತೆಂದು ಯೋಚಿಸುವುದಿಲ್ಲ. ಕ್ಷುಲ್ಲಕ ವಿಷಯಕ್ಕೂ ಬುರುಡೆ ಹೊಡೆಯುವುದು ಕೆಲವರಿಗೆ ಅಭ್ಯಾಸವಾಗಿ ಹೋಗಿರುತ್ತದೆ. ಆದರೆ ಅವನು ಬುರುಡೆ ಹೊಡೆಯುತ್ತಿದ್ದಾನೆಂದು ಸುತ್ತಲಿನವರಿಗೆ ಗೊತ್ತಿದ್ದರೂ ಧೈರ್ಯವಾಗಿ ಎದುರಿಗೇ ಅವನನ್ನು ಕಂಡೆಮ್ ಮಾಡದೇ ಒಂದು ರೀತಿಯ ಮಜಾ ತೆಗೆದುಕೊಳ್ಳುವುದೇ ಜಾಣತನ. ಬುರುಡೆ ಬಿಡುವಾತ ತಾನೇ ಸರ್ವಜ್ಞ, ಕೇಳುವವರೆಲ್ಲರೂ ಪೆದ್ದಪ್ಪಗಳೆಂದೇ ಭಾವಿಸಿರುತ್ತಾನೆ. ಇಂತಹ ಸಂದರ್ಭಗಳಲ್ಲಿ ನಿಮ್ಮ ಬುದ್ಧಿವಂತಿಕೆಯನ್ನು ಪ್ರದರ್ಶಿಸದೇ ಗಂಭೀರವಾಗಿ ಅವನನ್ನು ಹೊಗಳಿ ಅಟ್ಟಕ್ಕೇರಿಸಿ ನೋಡಿ, ಅವನ ಬುರುಡೆಗಳಿಗೆ ಇನ್ನೂ ರಂಗೇರಿ ಅವನ ಬಾಯಿಂದ ಸುಳ್ಳಿನ ಗಂಗಾ ಪ್ರವಾಹ ಹರಿಯತೊಡಗುತ್ತದೆ. ನಮ್ಮ ಸೋಮುವನ್ನೇ ಉದಾಹರಣೆಗೆ ತೆಗೆದುಕೊಳ್ಳೋಣ. ಅವನಿಗೆ ಇಂಥ ವಿಷಯ ಗೊತ್ತಿಲ್ಲವೆಂಬುದೇ ಇಲ್ಲ. ಯಾವುದೇ ಯಾತ್ರಾ ಸ್ಥಳ, ಗಿರಿಧಾಮಗಳು ಎಲ್ಲದರ ಮೇಲೆಯೂ ಬುರುಡೆ ಹೊಡೆಯತೊಡಗುತ್ತಾನೆ. ಆದರೆ ಯಾವುದಾದರೊಂದು ನಿರ್ದಿಷ್ಟ ಜಾಗೆಯ ಬಗ್ಗೆ ಕೊಂಚ ಬಿರುಸಾಗಿ ನೀವೇನಾದರೂ ವಾಗ್ಯುದ್ಧಕ್ಕೆ ನಿಂತರೆ ಕೂಡಲೇ ಅವನು, ಹೌದೌದು ನಾನು ಆ ಜಾಗಕ್ಕೆ ಹೋದಾಗ ಹಾಗೆ ಇದ್ದುದು. ಈಗ ಬಹುಶಃ ಬದಲಾಗಿರಬೇಕೆಂತಲೋ ಅಥವಾ ಇನ್ನೇನೋ ಹೇಳಿ ತನ್ನನ್ನು ತಾನು ಬಚಾಯಿಸಿಕೊಂಡುಬಿಡುತ್ತಾನೆ.


ಒಮ್ಮೆ ನನ್ನ ಸ್ನೇಹಿತರ ಸಹೋದರರಿಗೆ ಭಟ್ಕಳದಿಂದ ಇಂಟರವ್ಯೂ ಬಂದಿತು. ಆತ ಸೋಮುವನ್ನು ಭಟ್ಕಳ ನೋಡಿದ್ದೀರಾ ಎಂದಾಗ, ಅದಾ ನಮ್ಮ ಕೋ-ಬ್ರದರ್ ಇರೋದು ಅಲ್ಲೇನೆ; ನಾನು ಆಗಾಗ್ಗ ಅಲ್ಲಿಗೆ ಹೋಗುತ್ತಿರುತ್ತೇನೆ ಎಂದ. ಹಾಗಾದರೆ ಯಾವ ಮಾರ್ಗದಿಂದ ಭಟ್ಕಳ ತಲುಪಬೇಕು ಸ್ವಲ್ಪ ಹೇಳಿ, ನನ್ನ ಸಹೋದರನಿಗೆ ಇಂಟರವ್ಯೂ ಇದೆ ಎಂದಾಗ, ನಾನು ಹೋಗಿ ಬಹಳ ವರ್ಷವಾಯಿತು. ಈಗೆಲ್ಲಾ ಬಹಳ ಬದಲಾಯಿಸಿಬಿಟ್ಟದೆ. ಅದೂ ಅಲ್ಲದೆ ಈಗೆಲ್ಲಾ ಗೌರ್ನಮೆಂಟ್ ಬಸ್ಸುಗಳೇ. ನಾನು ಹೋದಾಗ ಪ್ರೈವೇಟ್ ಬಸ್ಸಿತ್ತು ಎಂದ. ನಿಜಕ್ಕೂ ನನ್ನ ಸ್ನೇಹಿತನಿಗೆ ದಂಗುಬಡಿಸಿತ್ತು.

ಮತ್ತೊಂದು ಬಾರಿ ಸ್ನೇಹಿತರೆಲ್ಲರೂ ಸೇರಿ ಊಟಿಗೆ ಟ್ರಿಪ್ ಹಾಕಿದರು. ಸೋಮುವಿಗೆ ಹೊಸತಾದ್ದರಿಂದ ಬಹಳ ಹಿಂದೆಯೇ ಸುತ್ತುತ್ತಾ ಇದ್ದ. ಎಲ್ಲವನ್ನೂ ನೋಡಿಬಂದ ಮೇಲೆ, ಏನ್ರಿ ನೀವು ಊಟಿಗೆ ಹೋಗಿದ್ರಂತೆ ಎಂದು ಒಬ್ಬ

ಸ್ನೇಹಿತ ಕೇಳಿದಾಗ, ಯ್ರ್! ಅದ್ ಬಿಡ್ರಿ ನಾನು ಪ್ರತಿ 'ಫ್ಲವರ್‌ಷೋಗೂ' ಹೋಗ್ತಾಯಿರ್ತೇನೆ ಎಂದ. ಕೇಳಿದಾತ ಬುದ್ಧಿವಂತಿಕೆಯಿಂದ ಹೌದಲ್ಲಾ, ನಿಮ್ಮ ಕೋ-ಬ್ರದರ್ ಇದಾರಲ್ಲ –ಎಂದು ಬಿಟ್ಟಾಗ ಸೋಮು ಪೆಚ್ಚಾಗಿದ್ದ.

ಇನ್ನೊಂದು ಬಾರಿ ಆಫೀಸಿನ ಹತ್ತಿರದಿಂದ ಎಳನೀರು ತೆಗೆದುಕೊಂಡು ಹೋಗುತ್ತಿದ್ದುದನ್ನು ನೋಡಿ, ಆರೆ ಸೋಮು ಯಾಕೆ ನಿಮ್ಮ ಮನೆ ಹತ್ತಿರ ಎಲ್ಲೂ ಸಿಕ್ಕೊಲ್ವೇ? ಇಲ್ಲಿಂದ ಯಾಕೆ ಮೈಕೈ ನೋವು ಮಾಡಿಕೊಂಡು ಹೊತ್ತುಕೊಂಡು ಹೋಗ್ತೀರಾ ಎಂದಾಗ, ಅಲ್ಲಿ ದೊರೆಯೋದೆಲ್ಲಾ ಕಡಿದು ಬಾಳ ದಿವಸವಾಗಿರುತ್ತದೆಯಾದ್ದರಿಂದ ಕೆಟ್ಟು ಹೋಗಿರುತ್ತದೆ ಎಂದ. ಅಲ್ಲದೆ, ನಿಮಗೆ ಗೊತ್ತಿಲ್ಲಾರೀ ನಮ್ಮ ಕೋ-ಬ್ರದರ್ ತೋಟಾನೆಲ್ಲಾ ನಾನೇ ನೋಡಿಕೊಳ್ಳೋದು ಎಂದಾಗ ನಮಗೆಲ್ಲರಿಗೂ ಆಘಾತವಾಗಿತ್ತು.

ಮತ್ತೊಂದು ಸಾರಿ ಸ್ನೇಹಿತನ ಮದುವೆಯ ಪಾರ್ಟಿಗೆ ಎಲ್ಲರೂ ಆಹ್ವಾನಿತರಾಗಿದ್ದೆವು. ಅವನ ಮನೆಯಾವುದೋ ಒಂದು ಮೂಲೆಯಲ್ಲಿದ್ದುದರಿಂದ ಜಾಗ ತಿಳಿಯಲೆಂದು, ಆತ ತನ್ನ ಮನೆ ಅಡ್ರೆಸ್ ಜೊತೆಗೆ ನಕ್ಷೆಯನ್ನು ತಯಾರಿಸಿ ಎಲ್ಲರಿಗೂ ಕೊಟ್ಟಿದ್ದ. ಅದನ್ನು ನೋಡಿದ ಸೋಮು, ಯ್ಯಾ! ಇದಾ ನಮ್ಮ ಕೋ-ಬ್ರದರ್ ಮನೆ ಪಕ್ಕದ ರೋಡ್ ಎಂದಾಗ ಎಲ್ಲರಿಗೆ ಅವನಿಗೆ ಜಾಗ ಗೊತ್ತಿದೆಯೆಂದೇ ತಿಳಿದರು. ಆದರೆ ಪಾರ್ಟಿ ಮುಗಿಯುವ ವೇಳೆಯಾದರೂ ಸೋಮು ಬರದಿದ್ದಾಗ ಒಂದು ರೀತಿಯ ಬೇಸರವೇ ಆಗಿತ್ತು. ಅವನು ಬುರುಡೆ ಹೊಡೆಯುವುದನ್ನು ಕೇಳಿ ಆನಂದಿಸಲೆಂದೇ ಕೆಲವರು ಕಾದಿದ್ದರು. ಕಡೆಗೂ ರಾತ್ರಿ ಎಂಟೂವರೆ ಘಂಟೆಗೆ ಸೋಮು ಬಂದು ತಲುಪಿದ ಎಲ್ಲರೂ ಅವನನ್ನು ಬಹುಪರಾಕಿನೊಡನೆ ಸ್ವಾಗತಿಸಿ ಏಕೆ ತಡವಾಯಿತೆಂದು ಕೇಳಿದಾಗ ಅವನು ಉತ್ತರಿಸುವ ಮೊದಲೇ ಪಕ್ಕದಲ್ಲಿದ್ದ ಸ್ನೇಹಿತರೊಬ್ಬರು, ಅಯ್ಯೋ ಬಿಡ್ರಿ ಅವರ ಕೋ-ಬ್ರದರ್ ಮನೆಗೆ ಹೋಗಿ ಪಾಪ ಲೇಟಾಗೋಯ್ತು ಎಂದು ಬಿಡಬೇಕೆ!



"ನನ್ನ ಈ ಗೆಳೆಯ ಒಂಭತ್ತು ತಿಂಗಳಿಂದಲೂ ತಪ್ಪಿಸಿಕೊಂಡುಬಿಟ್ಟಿದ್ದಾನೆ ನೋಡಿ!"

ನಮ್ಮ ಆಫೀಸಿನವರೆಲ್ಲರೂ ಸೇರಿ ಒಂದುದಿನದ ಮಟ್ಟಿಗೆ ಮೈಸೂರು ಟೂರು ಹೋಗುವುದೆಂದು ನಿರ್ಧರಿಸಿ ಎರಡು ಬಸ್ಸು ಜನ ಹೊರಟಿದ್ದೆವು. ಟೂರಿನ ದಿನ ಊಟ ತಿಂಡಿ ಏರ್ಪಾಡಿನ ಬಗ್ಗೆ ವಿಚಾರಣೆ ನಡೆಯುತ್ತಿದ್ದಾಗ ಎಲ್ಲರೂ ಅಡುಗೆಯವರಿಂದ ಮಾಹಿತಿ ಸಂಗ್ರಹಿಸಿ, ಅಷ್ಟಕ್ಕೆ ನಾನು ಮಾಡಿಸುತ್ತೇನೆ, ಇಷ್ಟಕ್ಕೆ ನಾನು ಮಾಡಿಸುತ್ತೇನೆ ಎಂದು ತಾವು ವಿಚಾರಣೆ ಮಾಡಿದ ಬಗ್ಗೆ, ಖರ್ಚಿನ ಬಗ್ಗೆ ಹೇಳುತ್ತಿದ್ದಾಗ ಮಧ್ಯೆ ತಲೆಹಾಕಿದ ಸೋಮು, ಅದ್ ಬಿಡ್ರಿ, ನಾನು ೧೦೦ ಜನರ ಅಡುಗೆ ಊಟಾನ ೫೦೦ ರೂ. ಗೆ ಮಾಡಿಸುತ್ತೇನೆಂದು ಹೇಳಿಬಿಟ್ಟ. ಆದರೆ ಆತನ 'ವ್ಯವಸ್ಥೆ' ೫೦ ಜನರಿಗೂ ಸಾಲದೆ ಬಂದಾಗ ಎಲ್ಲರೂ ಸೋಮು ಮೇಲೆ ರೇಗಾಡುವವರೇ.

ಮತ್ತೊಂದು ಬಾರಿ ಟ್ರಿಪ್ ಹಾಕಿದಾಗ ಸೋಮುವೇ ಊಟದ ವ್ಯವಸ್ಥೆ ಮಾಡಬೇಕೆಂದೆವು. ಆತ ಉಪಾಯವಾಗಿ ನಾನು ಬರೋಕ್ಕಾಗೊಲ್ಲಾರೀ, ಅಗ್ಲೇ ಒಂದು ಮದುವೆ ಇದೆ ಎಂದ. ಪಕ್ಕದವರೊಬ್ಬರು ಹೌದೌದು ಆವತ್ತೆ ಹೇಳಿದ್ರು ಅವರ ಕೋ–ಬ್ರದರ್ ಮದುವೆಯಿದೆಯಂತೆ ಎಂದು ನಕ್ಕು ಬಿಡಬೇಕೆ.

ಇದೇ ಕೆಟಗರಿಗೆ ಸೇರಿದ ನಮ್ಮ ಕಜಿನ್ ಒಬ್ಬನಿದ್ದಾನೆ. ಅವನು ಬಿ.ಎಸ್‌ಸಿ. ಮುಗಿದ ತಕ್ಷಣ ಕೆಲಸಕ್ಕಾಗಿ ಎಲ್ಲಾ ಕಡೆಗೂ ಅರ್ಜಿ ಗುಜರಾಯಿಸ ತೊಡಗಿದ. ಯಾವುದಾದರೂ ಸಂಸ್ಥೆಯಿಂದ ಇಂಟರ್‌ವ್ಯೂಗೆ ಬಂದರೆ ಹೋಗುವುದಕ್ಕೆ ಮುಂಚೆಯೇ ಆ ಸಂಸ್ಥೆಯಲ್ಲಿ ಆವರು ಗೊತ್ತು, ಇವರು ಗೊತ್ತು ಎಂದು ಹೇಳಿಕೊಂಡು ತಿರುಗಾಡುತ್ತಿದ್ದ. ವಾಸ್ತವವಾಗಿ ನೋಡಿದರೆ ಅವನಿಗೆ ಹಾಗೆ ಪರಿಚಯವಿದ್ದಿದ್ದರೆ ಕೆಲಸ ಸಿಕ್ಕ ಮೇಲೆಯೇ ಮಾತಾಗಿ ಬಿಡಬಹುದಿತ್ತು.

ಕಡೆಗೊಂದು ಸಾರಿ ಆತ ಇಂಟರ್‌ವ್ಯೂಗೆ ಹೋಗಿದ್ದ ಸಂಸ್ಥೆಯ ಜನರಲ್ ಮ್ಯಾನೇಜರ್ ತನ್ನ ತಂದೆಗೆ ಪರಿಚಯವಿದ್ದರೆಂದು ಅವನೇ ಹೇಳಿದ್ದ. ಇಂಟರ್‌ವ್ಯೂ ಎಲ್ಲವೂ ಆಗಿ ಇನ್ನೇನು ಆರ್ಡರ್ಸ್ ಬಂದೇ ಬಿಡುತ್ತದೆ ಎಂದೂ ಕೊಚ್ಚಿಕೊಂಡಿದ್ದ. ಪಾಪ ಕೆಲಸಕ್ಕಾಗಿ ತುಂಬಾ ಅಲೆದಿದ್ದಾನೆ ಎಂದು ನಮಗೆ ಮರುಕವಾದರೂ ಅವನಿಗೆ ಅದರ ಅವಶ್ಯಕತೆಯಿಲ್ಲವೆಂಬಂತಿತ್ತು.

ಈಚೆಗೆ ಅವನ ಸಮಾಚಾರ ಇಲ್ಲವೆಂದು ನಾನೇ ಹುಡುಕಿಕೊಂಡು ಮನೆಗೆ ಹೋದಾಗ ಇದೇ ತಾನೇ ಮಂಗಳೂರಿನಿಂದ ಬಂದೆ ಎಂದ. ಅದೇನು ಇಂಟರ್‌ವ್ಯೂ ಆಯಿತ್ತಾ ಎಂದೆ. ಹ್ಞ! ನನಗೆಂತ ಇಂಟರ್‌ವ್ಯೂನಮ್ಮಾ! ನಾನು ಮಂಗಳೂರಿಗೆ ಹೋಗಿ ಮನೆ ಮಾಡಿದ ತಕ್ಷಣ ಕೆಲಸ ಕೊಡಿಸಿ ಸಾರ್ ಎಂದು ನಾನು ಹೇಳುವದಕ್ಕೆ ಮುಂಚೆಯೇ ಬಂದು ನನ್ನ ಮನೆಬಾಗಿಲಿನಲ್ಲಿ ಕಾದಿರುತ್ತಾರೆ ಎಂದು. ಹಾಗಾದ್ರೆ ಒಳ್ಳೆ ಕಡೆ ಒಳ್ಳೆ ಕೆಲ್ಸಾನೇ ಸಿಕ್ಕಿರಬೇಕು. ಆಫೀಸಿನಲ್ಲಿ ಮ್ಯಾನೇಜರ್ ಪಿ. ಎ. ನಾನೇ ಎಂದಾಗ, ಒಳ್ಳೇ ಕೆಲ್ಸಾನೆ ಸಿಕ್ತು ಬಿಡು ಕಾಫಿ ಹಾಕ್ಕೊ ಅಂದೆ. ಅವೇ ನಾನೇನು ಕೆಲಸಕ್ಕೆ ಕಾಯ್ಕೊಂಡೇನೂ ಇರಲಿಲ್ಲ ನೋಡು, ಕೆಲ್ಸಾನೇ ನನ್ನ ಕಾಯ್ಕೊಂಡಿತ್ತು ಎಂದುಬಿಟ್ಟ.

ನಾನು ಬರುತ್ತೇನೆಂದು ಹೊರಬಿದ್ದೆ. ●

ದೇಶಪ್ರೇಮ

ಒಂದು ನೌಕೆಯು ಗಂಗಾ ನದಿಯನ್ನು ದಾಟುತ್ತಿತ್ತು. ಭಿನ್ನ ಭಿನ್ನ ರಾಷ್ಟ್ರೀಯರಿದ್ದ ಅದು ಪ್ರವಾಹದ ಮಧ್ಯಕ್ಕೆ ಹೋದಾಗ ಹೊಯ್ದಾಡತೊಡಗಿತು. ಕಪ್ತಾನನು ತನ್ನ ಪ್ರಯತ್ನಗಳು ಸಫಲವಾಗದಿದ್ದಾಗ ದೋಣಿಯಲ್ಲಿದ್ದವರಲ್ಲಿ ಮೂವರು ನೀರಿಗೆ ಹಾರಿದರೆ ಉಳಿದವರೆಲ್ಲ ಬದುಕುತ್ತಾರೆ ಎಂದು ಪ್ರಾರ್ಥಿಸಿದ. ಎಲ್ಲರೂ ಹಿಂದು ಮುಂದು ನೋಡುತ್ತಿದ್ದಾಗ ಒಬ್ಬ ಅಮೇರಿಕನ್, 'ಅಮೇರಿಕ ಚಿರಾಯುವಾಗಲಿ' ಎಂದು ಘೋಷಿಸಿ ನೀರಿಗೆ ಹಾರಿದ. ಅದನ್ನು ಕಂಡ ರಶಿಯನ್ ತಾನೂ ಎದ್ದು 'ಸೋವಿಯತ್ ನಾಡು ಚಿರಾಯುವಾಗಲಿ' ಎಂದವನೇ ನದಿಗೆ ಜಿಗಿದ. ಕೂಡಲೆ ಭಾರತೀಯನೊಬ್ಬ ಎದ್ದು, 'ಭಾರತ ಮಾತಾಕೀ ಜಯ್' ಎಂದು ಜಯಘೋಷ ಮಾಡಿದವನೇ ಬದಿಗೆ [illegible]

ಇದು ಪವಾಡ ಇದು ಜೀವನ

ಇದು ಪವಾಡವೆಂದು ಇತರರು ನಂಬಬೇಕೆಂದು ನಾನು ಬಯಸುವುದಿಲ್ಲ. ಆದರೆ ನನ್ನ ಜೀವನದಲ್ಲಿ ನಡೆದುಹೋದ ಅಸಂಖ್ಯ ಘಟನೆಗಳಲ್ಲಿ ಇದು ಅಸಾಮಾನ್ಯವಾದುದು, ಭಕ್ತರ ದೃಷ್ಟಿಯಲ್ಲಿ ಪವಾಡಸದೃಶವಾದುದು ಎಂದು ಮಾತ್ರ ಹೇಳಬಲ್ಲೆ.

ಮುಚ್ಚುಮರೆ ಇಲ್ಲದೆ ನಾನೊಬ್ಬ ಸಾಯೀಭಕ್ತನೆಂದು ಹೇಳಿಬಿಡುತ್ತೇನೆ. ಒಂದು ದೃಷ್ಟಿಯಿಂದ ಶಿರ್ಡಿಯ ಬಾಬಾ ಎಂಥ ಕಗ್ಗತ್ತಲಲ್ಲೂ ನನ್ನನ್ನು ಕೈ ಹಿಡಿದು ಮುನ್ನಡೆಸುತ್ತಿದ್ದಾರೆಂದು ನಂಬಿದವ ನಾನು. ೧೯೭೨ರಲ್ಲಿ 'ಶ್ರೀ ಸಾಯಿ ಸಚ್ಚರಿತ' ಪಾರಾಯಣ ಸಪ್ತಾಹ ಮಾಡಬೇಕೆಂದು ನಿರ್ಧರಿಸಿ ಪ್ರಾರಂಭಿಸಿದೆನು. ಪಾರಾಯಣ ಮಾಡುತ್ತಿರುವಾಗೆಲ್ಲ ಬಾಬಾ ಯಾವುದಾದರೂ ರೂಪದಲ್ಲಿ ಸಪ್ತಾಹ ಮುಗಿಯುವುದರಲ್ಲೇ ನನಗೆ ದರ್ಶನವಿತ್ತರೆ ನಾನು ಅವರ ನೈಜ ಭಕ್ತ ಎಂಬ ವಿಚಾರ ಕೂಡ ಅನೇಕ ಸಲ ಸುಳಿದು ಹೋಯಿತು. ಆರನೆಯ ದಿನ ಬೆಳಿಗ್ಗೆ ೧೧ರ ಸುಮಾರಿಗೆ ನಾನು ಪಡಸಾಲೆಯಲ್ಲಿ ಕುಳಿತು ಪಾರಾಯಣ ಮಗ್ನನಾಗಿದ್ದಾಗಲೆ ಹೊರಗಡೆಯಿಂದ "ಭಿಕ್ಷಾಂದೇಹಿ" ಎಂಬ ನುಡಿ ಕೇಳಿಸಿತು. ಅಡುಗೆಗೆ ಕುಳಿತಿದ್ದ ನನ್ನ ಹೆಂಡತಿ ಬಂದು ಬಾಗಿಲು ತೆರೆದು ನೋಡಿ ಮುಖದಲ್ಲಿ ಆಶ್ಚರ್ಯವನ್ನು ಹೊತ್ತುಕೊಂಡೇ ನನ್ನ ಬಳಿ ಬಂದಾಗ, "ಹೊರಗೊಬ್ಬ ಸಾಧು ಬಂದಿದ್ದಾರೆ. ಅವರ ತ್ರಿಶೂಲಕ್ಕೆ ಬಾಬಾ ಅವರ ಫೋಟೊ ಇದೆ; ನೀವೇ ನೋಡಿ," ಎಂದು ಅವಸರದಿಂದ ಹೇಳಿದಳು. ಕುತೂಹಲದಿಂದ ನಾನೂ ಬಾಗಿಲಿಗೆ ಹೋಗಿ ನೋಡಿದೆ. ನಾನು ಆನಂದದಿಂದ ಅಂದು ನಮ್ಮಲ್ಲೇ ಅವರ ಭೋಜನವಾಗಬೇಕೆಂದು ಸಾಧುವನ್ನು ಆಮಂತ್ರಿಸಿದೆನಲ್ಲದೆ ಅಡುಗೆಯಿನ್ನೂ ಮುಗಿಯಬೇಕಿದ್ದುದರಿಂದ ಸುಮಾರು ಒಂದು ತಾಸು ತಡೆದು ಬರಬೇಕೆಂದು ಬಿನ್ನವಿಸಿದೆ. ಅವರು ಹೋದ ನಂತರ ನಾನು ಪುನಃ ಪಾರಾಯಣಕ್ಕೆ ಕುಳಿತೆ. ಆದರೆ ಮುಂದೆ ಒಂದೂವರೆ ತಾಸು ಗತಿಸಿದರೂ ಸಾಧು ಬರಲಿಲ್ಲವಾದ್ದರಿಂದ ನಾನು ಹೊರಹೋಗಿ ಅತ್ತಿತ್ತ ನೋಡಿದರೆ ಎಲ್ಲೂ ಸುಳಿವೇ ಇಲ್ಲ. ನೆರೆಹೊರೆಯವರನ್ನು ಕೇಳಿದಾಗ ಯಾರ ಮನೆಗೂ ಸಾಧು ಭಿಕ್ಷೆಗೆ ಬಂದಿಲ್ಲವೆಂದು ತಿಳಿಯಿತು. ನನ್ನ ಶೋಧ ಕಾರ್ಯ ಮುಂದುವರಿಸಿದಾಗ ನಮ್ಮ ಮನೆಯ ಹಿಂದುಗಡೆಯೇ ಒಂದು ಗಿಡದ ನೆರಳಿನಲ್ಲಿ ನಿಂತದ್ದು ಗೋಚರಿಸಿತು. ನಾನು ಅವರಿಗೆ ನಮಸ್ಕಾರ ಮಾಡಿ, ಅವರಿಗಾದ ತೊಂದರೆಯ ಬಗ್ಗೆ ಕ್ಷಮೆ ಕೇಳಿ ಮನೆಗೆ ಬರಬೇಕೆಂದು ಬಿನ್ನವಿಸಿದೆ. ಮರು ಮಾತಾಡದೆ ಅವರು ನನ್ನೊಡನೆ ಮನೆಗೆ ಬಂದು ಮೌನವಾಗಿ ಊಟ ಮುಗಿಸಿ ತಮ್ಮ ಎಲೆಯನ್ನು ತಾವೇ ತೆಗೆದು ಚೆಲ್ಲಿ ನೀರು ಹಚ್ಚಿ ಊಟ ಮಾಡಿದ ಸ್ಥಳವನ್ನು ಶುಚಿಗೊಳಿಸಿದರು. ನಂತರ ನಮ್ಮನ್ನು ಬೀಳ್ಕೊಳ್ಳುವ ಮುನ್ನ ತಾವು ಶಿರ್ಡಿಗೆ ಹೋಗಿ ತಮ್ಮ ರಾಜ್ಯವಾದ ಕೇರಳಕ್ಕೆ ಮರಳುತ್ತಿರುವುದಾಗಿ ಹೇಳಿ ತಮ್ಮ ನಿಲುವಂಗಿಯ ಜೇಬಿನಿಂದ 'ಉದಿ' (ಭಸ್ಮ)ಯನ್ನು ತೆಗೆದು ನಮ್ಮ ಕುಟುಂಬದ ಎಲ್ಲರಿಗೂ ಹಂಚಿ ಭೋಜನದಿಂದ ತಾವು ತುಂಬ ಸಂತುಷ್ಟರೆಂದು ಉಸುರಿದರು. ಅನಂತರ ನಮ್ಮ ಬಾಗಿಲಿಗೆ ಬೆನ್ನು ಮಾಡದೆಯೇ ಹಿಂದೆ ಹಿಂದೆ ಹೆಜ್ಜೆಯಿಡುತ್ತ ಗೇಟು ದಾಟಿ ಹೊರಟು ಹೋದರು. ಆಗಲೇ ನಮಗೆಲ್ಲ ಇವರು ಬಾಬಾನೇ ಆಗಿರಬಹುದೆಂಬ ಸಂದೇಹ ಸುಳಿದುಹೋಯಿತು. ಅಂದೇ ಸಂಜೆ ನಮ್ಮ ಸೋದರತೆ ನಮ್ಮಲ್ಲಿಗೆ ಬಂದವಳು

(ಅವಳ ಮನೆ ನಮ್ಮ ಮನೆಯಿಂದ ಬಹಳ ದೂರದಲ್ಲಿದೆ), ತಮ್ಮಲ್ಲಿಗೆ ಒಬ್ಬ ಸಾಧು ಬಂದು ನೀರು ಕೇಳಿ ಕುಡಿದುಹೋದ ವಿಷಯವನ್ನು ಹೇಳುವಾಗ ಅವನ ತ್ರಿಶೂಲಕ್ಕೆ ಸಾಯಿಬಾಬಾರ ಫೋಟೋ ಇದ್ದ ವಿಚಾರವನ್ನು ಅರುಹಿದಳು. ಈಗ ನಾನು ನಂಬಬೇಕೆ ಬಿಡಬೇಕೆ - ಇವರೇ ಬಾಬಾ ಎಂದು. ನಂಬುತ್ತೇನೆಂದರೆ ಜನ ನನ್ನನ್ನು ಹುಚ್ಚ ಎಂದಾರು, ನಂಬುವುದಿಲ್ಲವೆಂದರೆ ಆತ್ಮಸಾಕ್ಷಿ ಅಳುಕುತ್ತದೆ. ಯಾವುದು ದಿಟ ನೀವೇ ಹೇಳಿ. —ಪಿ. ಜಿ. ವೈದ್ಯ

ಜಿ. ಪಿ. ರಾಜರತ್ನಂರವರು ಗತಿಸುವ ೨೦ ದಿನಗಳ ಮುನ್ನ ಸೆಂಟ್ರಲ್ ಕಾಲೇಜಿನಲ್ಲಿ ಸೆಮಿನಾರ್ ಪ್ರಯುಕ್ತ ಸೆನೆಟ್ ಸಭೆಗೆ ಅವರನ್ನು ಆಹ್ವಾನಿಸಿದ್ದರು ಮಹಾರಾಣಿ ಕಾಲೇಜಿನ ವಿದ್ಯಾರ್ಥಿನಿಯಾಗಿದ್ದ ನಾನು ಕನ್ನಡದ ಗಣ್ಯರನ್ನು ಕಾಣಲು ಹಾಗೂ ಚರ್ಚೆಯ ವಿಷಯದ ಬಗ್ಗೆ ಆಸಕ್ತಿ ಹೊಂದಿದ್ದರಿಂದ ಕೇಳಲು ಕಾಲೇಜಿಗೆ ಚಕ್ಕರ್ ಹೊಡೆದು ಗೆಳತಿಯರನ್ನು ಕೂಡಿಕೊಂಡು ಹೋದೆ. ಶ್ರೀಯುತರಾದ ಜಿ. ಎಸ್. ಶಿವರುದ್ರಪ್ಪ, ಜಿ. ಪಿ. ರಾಜರತ್ನಂ ಇನ್ನೂ ಅನೇಕ ಕನ್ನಡ ಸಾಹಿತಿಗಳು ಬಂದಿದ್ದರು. ಚರ್ಚೆಯು ಸಮಂಜಸವಾಗಿ ನೆರವೇರಿತು. ನಂತರ ಎಲ್ಲರೂ ಸಭೆಯಿಂದ ಹೊರಬಂದೆವು.

ಚರ್ಚಿಸಲ್ಪಟ್ಟ ವಿಷಯಗಳನ್ನು ನೆನಪಿಸಿಕೊಳ್ಳುತ್ತಾ, ಹಿರಿಯ ಸಾಹಿತಿಗಳನ್ನು ಸ್ಮರಿಸುತ್ತಾ ಗೇಟು ದಾಟ ರಸ್ತೆಗಿಳಿಯುತ್ತಿದ್ದಂತೆಯೇ, ನಮ್ಮ ಹಿಂದೆಯೇ ವಯಸ್ಸಾದ ರಾಜರತ್ನಂರವರು ಮೆಲ್ಲಮೆಲ್ಲನೆ ಅಡಿಯಿಟ್ಟು ಒಬ್ಬರೇ ಬರುತ್ತಿದ್ದರು. ನಾನವರನ್ನು ಸೂಕ್ಷ್ಮವಾಗಿ ಗಮನಿಸಿ, ನನ್ನ ಗೆಳತಿಯರಿಗೆ ಹೇಳಿದೆ – ಸಭೆಗೆ ಇವರನ್ನು ಕರೆತರುವಲ್ಲಿ, ಬರುವುದು ಕೊಂಚ ತಡವಾದರೂ ಕಾಯುತ್ತಿರುತ್ತಾರೆ ಅಲ್ಲದೆ ಅವರ ಮನೆತನಕ ವಾಹನ ಕೊಂಡು ಹೋಗುತ್ತಾರೆ. ಪಾಪ! ಈಗ ಒಬ್ಬರೇ ಬರುತ್ತಿದ್ದರಲ್ಲಾ? ಇವರನ್ಯಾರೂ ಗಮನಿಸಲಿಲ್ಲವೇ? ಇಲ್ಲದಿದ್ದರೆ ಇವರಿಗೆ ಅವರ ಹಂಗು ಬೇಡವೇ? ಎಂದು ನನ್ನ ದೃಷ್ಟಿಯೆಲ್ಲವನ್ನೂ ಅವರಲ್ಲೇ ಕೇಂದ್ರೀಕರಿಸಿಕೊಂಡು ಮುನ್ನಡೆಯುತ್ತಿದ್ದಂತೆ, ಅವರು ಆಟೋಗಾಗಿ ಪೇಚಾಡುತ್ತಿರುವುದು ಕಂಡುಬಂದಿತು. ಖಾಲಿ ಆಟೋಗಳು ಯಾಕೋ ಕರೆದರೂ ನಿಲ್ಲುತ್ತಿರಲಿಲ್ಲ. ಈ ವಯಸ್ಸಿನಲ್ಲಿ ಅವರು ಓಡುತ್ತಿರುವ ಆಟೋವಿನೊಂದಿಗೆ ಸರಸವಾಡಲು ಸಾಧ್ಯವೇ? ಆಟೋದವರಿಗೆ ನಿಜವಾಗಿ ಇವರು ಜಿ. ಪಿ. ಎಂದು ತಿಳಿದಿದ್ದರೆ, ಬಹುಶಃ ಕೂರಿಸಿಕೊಂಡು ಹೋಗುತ್ತಿದ್ದರೇನೋ? ನಾನು ಇವರಿಗಿಂತ ಎರಡು ಅಡಿ ಮುಂದೆ ಇದ್ದು ವೀಕ್ಷಿಸುತ್ತಿದ್ದೆ. ನನಗಿಂತ ಅನತಿ ದೂರದಲ್ಲಿ ಒಂದು ಆಟೋರಿಕ್ಷಾದಿಂದ ಯಾರೋ ಇಳಿಯುತ್ತಿದ್ದುದನ್ನು ಕಂಡು, ನಾನು ನನ್ನ ಗೆಳತಿಯರನ್ನೆಲ್ಲಾ ಬಿಟ್ಟು ಓಡಿದೆ, ಆಟೋ ಹಿಡಿಯಲು. ನಂತರ ಆಟೋವನ್ನು ಇವರ ಸಮೀಪಕ್ಕೆ ಬರುವಂತೆ ಹೇಳಿದೆ. ಆಟೋ ಏರುವ ಮುನ್ನ ಅವರು, "ನಾನು ಆಟೋವನ್ನು ನಿಮಗಾಗಿ ಹಿಡಿದಿರಬಹುದೆಂದು ತಿಳಿದೆನಮ್ಮ, ಬಹಳ ವಂದನೆಗಳು," ಎಂದು ಹೇಳಿ, ನಮಸ್ಕರಿಸಿ ನೀಟಸ್ಥರಾದರು.

ಆ ಆಟೋ ತಿರುವಿಕೊಂಡು ಪುನಃ ನನ್ನ ಸಮೀಪಕ್ಕೆ ಹಾಯ್ದು ಬರುವಾಗ, ಅವರು ಪುನಃ ಪುನಃ ಇಣುಕಿನೋಡಿ ನಮಸ್ಕರಿಸಿದಾಗ, ನನ್ನ ಮೈನವಿರೆದ್ದಿತು. ಮೂಕ ವಿಸ್ಮಿತಳಾಗಿ ಹಾಗೇ ನಿಂತೆ. ಅಷ್ಟು ದೊಡ್ಡ ವ್ಯಕ್ತಿಯ ಮುಂದೆ ನಾನು ಕ್ಷುಲ್ಲಕವೆನಿಸಿ, ನನ್ನ ಇಡೀ ಶರೀರ ಹಿಡಿಯಂತಾಯಿತು. ನಾನು ಪ್ರತಿಯಾಗಿ ನಮಸ್ಕರಿಸಿದೆನಷ್ಟೆ. ನನಗೆ ಮತ್ತೆ ಏನೂ ತೋಚದಾಯಿತು. ಆ ಆಟೋವನ್ನೇ ದಿಟ್ಟಿಸುತ್ತಾ ನಿಂತೆ. ಕೆಲ ನಿಮಿಷಗಳಲ್ಲೇ ಅದು ಕಣ್ಮರೆಯಾಯಿತು.

—ಬಿ. ವಿ. ಗೀತಾ

ತಾರೆಗಳ ಚಿರಂತನ ಮೂಕ ಶ್ಲೋಕ

ಜಿ. ಟಿ. ನಾರಾಯಣರಾವ್

ತಾರೆಗಳ ಸ್ನೇಹ ಗಳಿಸಬೇಕೆಂಬ ಆಸೆ ಇರುವವರಿಗೆ ಜನವರಿ–ಫೆಬ್ರುವರಿ ಅವಧಿ ಅತ್ಯಂತ ಪ್ರಶಸ್ತ ಕಾಲವು. ಪೇಟೆಯ ಕೃತಕ ಪ್ರಕಾಶದಿಂದ ಮುಕ್ತವಾಗಿರುವ ಎತ್ತರ ದಿಬ್ಬ ಅನುಕೂಲ ವೇದಿಕೆ. ಕೃಷ್ಣಪಕ್ಷದ ಇರುಳಿನ ೭–೯ ಗಂಟೆ ಯುಕ್ತ ವೇಳೆ. ಈ ಪೂರ್ವಸಿದ್ಧತೆಯಿಂದ ಸಜ್ಜಾಗಿ ಗಗನವನ್ನು 'ಮೈ ನೀಲಿಗಟ್ಟುವವರೆಗೆ' ನೋಡಿದಾಗ ನಮ್ಮಲ್ಲಿ ಮೂಡುವ ಅನುಭವವೇನು?

ಅರ್ಧಗೋಳಾಕಾರದ, ಊಹಾತೀತ ಔನ್ನತ್ಯದ ಮತ್ತು ಕರಿನೀಲಿಬಣ್ಣದ ಚತ್ತು ನಮ್ಮನ್ನು ಸುತ್ತುವರಿದಿದೆ. ಇದರ ಕೇಂದ್ರ ಬಿಂದುವಿನಲ್ಲಿ ನಾವಿದ್ದೇವೆ. ಆದರೆ ನಮ್ಮ ಅಸ್ತಿತ್ವ ಮಾತ್ರ ಅನಂತಾಲ್ಪ.

ಚತ್ತುವಿನ ಮೈಗೆ ಬೆಳಕಿನ ನತ್ತು, ಮಿನುಗು, ರೇಣು ಮುಂತಾದವು ಬೇಕಾಬಿಟ್ಟಿ ಲಗತ್ತಾಗಿವೆ. ಒಂದೊಂದರ ಹೊಳಪು, ಬಣ್ಣ ಒಂದೊಂದು.

ಆಕಾಶದ ಒಂದು ಪ್ರದೇಶಕ್ಕೆ ಸೀಮಿತವಾದ ಒಂದಿಷ್ಟು ಬೆಳಕಿನ ಹುಡಿಗಳು ರಂಗವಲ್ಲಿ ಬೊಟ್ಟುಗಳಂತೆ ಕಂಗೊಳಿಸುತ್ತವೆ. ನಮ್ಮ ಕಲ್ಪನೆ ಇವನ್ನು ಎಡ್ಡ ತಿಡ್ಡ ಗೆರೆಗಳಿಂದ ಜೋಡಿಸಿ ಜೇಡನ ಬಲೆಯಂಥ ಚಿತ್ರವನ್ನು ನೂಲುತ್ತದೆ. ಬಾನ ಬಟ್ಟಲು ಇಂಥ ಮೆರುಗು ಚಿತ್ತಾರಗಳಿಂದ ಕುಂದಣಗೊಂಡಿದೆ.

ನಕ್ಷತ್ರ ಚಿತ್ರಗಳನ್ನು ಹಲವು ರಾತ್ರಿ ಗಮನಿಸಿದಾಗ ಅವು ಕೆಲವು ಕಟ್ಟುಪಾಡುಗಳಿಗೆ ಒಳಪಟ್ಟಿರುವುದು ಗೊತ್ತಾಗುತ್ತದೆ. ಚಿತ್ರಗಳ ವಿಶಿಷ್ಟ ಆಕಾರ ಇಲ್ಲವೇ ಸಾಪೇಕ್ಷ ಸ್ಥಾನ ಎಂದೂ ಬದಲಾಗುವುದಿಲ್ಲ. 'ಕಾಲದಿಂದ ಮಾಸದಾ ವಿಚಿತ್ರ'ಗಳವು. ಎಲ್ಲ ಚಿತ್ರಗಳೂ ಮೂಡಲಲ್ಲಿ ಮೂಡಿ ಕ್ರಮೇಣ ಮೇಲೇರಿ ಎದುರುಗಡೆ ಹೊರಳಿ ಕ್ರಮೇಣ ಕೆಳಗಿಳಿದು ಪಡುವಲಲ್ಲಿ ಕಂತುತ್ತವೆ. ಇದೊಂದು ಏಕಮುಖವಾಹನ ಸಂಚಾರಕ್ರಮ. ಇಲ್ಲಿ ಎಂದೂ ಒಂದು 'ವಾಹನ' ಇನ್ನೊಂದನ್ನು ಹಿಂದೆ ಹಾಕಿ ಮುಂದೆ ಧಾವಿಸುವುದಾಗಲಿ ಒಂದು ಇನ್ನೊಂದರ ಪಥವನ್ನು ಅತಿಕ್ರಮಿಸುವುದಾಗಲಿ ಸಂಭವಿಸದು.


ಚಂದ್ರ, ಗ್ರಹ, ಸೂರ್ಯ, ನಕ್ಷತ್ರ ಎಲ್ಲವೂ ಸದಾ ಮೂಡಲಿನಿಂದ ಪಡುವಲಿಗೆ ಉತ್ಸವ

ಕಪಾಯುತಿ ನಡಿಗೆಯಲ್ಲಿ ಭಾಗಿಗಳಾಗಿವೆ. ಅವು ನೀಡುವ ಗೌರವವಂದನೆ ಸ್ವೀಕರಿಸುವ ಮಹಾ ಘನತೆ ಪಡೆದ ವ್ಯಕ್ತಿ ನಾವೇ. ಆದರೆ ಈ ನಡಿಗೆಯ ಶಿಸ್ತಿಗೆ ಒಳಪಡದ ಒಂದೇ ಒಂದು ಹಠಮಾರಿ ಕ್ಷುದ್ರ ನಕ್ಷತ್ರ ಉಂಟು. ಇದು ಹಂದಾಡದು. ಇತರ ಸಮಸ್ತ ಆಕಾಶಕಾಯಗಳೂ ನಿರಂತರ ಗತಿಶೀಲವಾಗಿರುವಾಗ ಇದು ಮಾತ್ರ ಸ್ಥಿರವಾಗಿದೆ. ಇದಕ್ಕೆ ಕಣ್ಣು ಕೋರೈಸುವ ವಜ್ರ ಕಾಂತಿ ಇಲ್ಲ. ಇದು ಯಾವುದೇ ಆಕರ್ಷಕ ನಕ್ಷತ್ರ ಚಿತ್ರದ ಸದಸ್ಯ ಅಲ್ಲ. ಇದೇ ಚಿರಧ್ರುವ ನಕ್ಷತ್ರ.

ಗುರುತಿಸಿ ಧ್ರುವನಕ್ಷತ್ರ

ಜನವರಿ ತಿಂಗಳು. ಇರುಳು ಮುಸುಕಿದೆ. ನೀವು ಎತ್ತರ ದಿಬ್ಬದ ಮೇಲೋ ಮನೆ ಮಾಳಿಗೆಯ ಮೇಲೋ ನಿಂತು ಉತ್ತರಾಕಾಶದ ಹರವನ್ನು ಬಲದಿಂದ (ಪೂರ್ವ) ಎಡಕ್ಕೆ ಒಮ್ಮೆ ಎವೆಯಿಕ್ಕಿ ಸರ್ವೇಕ್ಷಿಸುತ್ತಿದ್ದೀರಿ. ಐದು ಸ್ಪಷ್ಟ ನಕ್ಷತ್ರಗಳು ರಚಿಸುವ M ಆಕಾರದ ಚಿತ್ರ ನಿಮ್ಮ ಲಕ್ಷ್ಯವನ್ನು ಹಿಡಿದು ನಿಲ್ಲಿಸುತ್ತದೆ. (ಚಿತ್ರ* ೧). ಇದರ ಪೂರ್ವಭಾಗದ (ನಿಮ್ಮ ಬಲಗಡೆಯ) ಕೋನ ತುಸು ಪೆಚ್ಚಾಯಿತೊ ಎಂದು ನಿಮಗನ್ನಿಸುತ್ತದೆ. ಇದನ್ನು ಕಾಲ್ಪನಿಕವಾಗಿ ಸಮದ್ವಿಭಾಗಿಸಿ ಈ ರೇಖೆಯ ನೇರ ಉತ್ತರದ ತಗ್ಗಿಗೆ ಇಳಿಯಿರಿ. ಮೊದಲು ನಿಮಗೆದುರಾಗುವ ಮಂದ ಹೊಳಪೇ ಧ್ರುವನಕ್ಷತ್ರ.

ನಕ್ಷತ್ರ ಚಿತ್ರದ ಹೆಸರು ಕೆಸೀಯೊಪೀಯ. ರಾತ್ರಿಯ ಬೇರೆ ಬೇರೆ ಜಾವಗಳಲ್ಲಿ ಇದನ್ನು ಗಮನಿಸಿ. ಮೊದಲು ಉತ್ತರ–ಪೂರ್ವ ವಲಯದಲ್ಲಿದ್ದುದು ಕ್ರಮೇಣ ಯಾಮ್ಯೋತ್ತರವನ್ನು (ಶಿರೋಬಿಂದುವನ್ನು ಧ್ರುವನಕ್ಷತ್ರಕ್ಕೆ ಜೋಡಿಸುವ ಕಾಲ್ಪನಿಕ ಮಹಾವೃತ್ತ: ಇದು ಖಗೋಳವನ್ನು ಪೂರ್ವ ಮತ್ತು ಪಶ್ಚಿಮ ಅರ್ಧಗೋಳಗಳಾಗಿ ಸಮದ್ವಿಭಾಗಿಸುತ್ತದೆ) ಅಡ್ಡಹಾಯ್ದು ಉತ್ತರ–ಪಶ್ಚಿಮ ವಲಯಕ್ಕಿಳಿದು ಕ್ರಮೇಣ ಕಂತುತ್ತದೆ. ಆದರೆ ಇದರ ಪ್ರತಿಯೊಂದು ಸ್ಥಾನದಲ್ಲಿಯೂ ಪೂರ್ವಕೋನದ ಸಮದ್ವಿಭಾಜಕ ಸ್ಥಿರ ಧ್ರುವ ನಕ್ಷತ್ರದ ಮೂಲಕವೇ ಹೋಗುತ್ತದೆ. ಸಮದ್ವಿಭಾಜಕ ಒಂದು ಸರಳಾಗಿದ್ದು ಅದರ ಒಂದು ಕೊನೆಗೆ Mನ ಪೂರ್ವ ಶೃಂಗವನ್ನು ದೃಢವಾಗಿ ಬೆಸೆದು ಇನ್ನೊಂದು ಕೊನೆಯನ್ನು ಧ್ರುವನಕ್ಷತ್ರ ಹಿಡಿದು ತನ್ನ ಸುತ್ತಲೂ ಗಿರಿಗಿಟಿ ತಿರುಗಿಸುತ್ತಿದೆಯೋ ಎಂಬಂತಿದೆ ಈ ನೋಟ.




ಚಿತ್ರ ೧. ಕೆಸೀಯೋಪಿಯ ನಕ್ಷತ್ರ ಪುಂಜ.
***P* ಧ್ರುವ ನಕ್ಷತ್ರ.**

ಎರಡು ನೇರ ಸರಳು ತೆಗೆದುಕೊಂಡು ಒಂದನ್ನು ನಿಮ್ಮ ಕಣ್ಣ ನೇರ ನೆಲಕ್ಕೆ ಸಮಾಂತರವಾಗಿ ಹಿಡಿದು ಇನ್ನೊಂದನ್ನು ಧ್ರುವನಕ್ಷತ್ರಕ್ಕೆ ಗುರಿ ಇಡಬೇಕು (ಚಿತ್ರ ೨). ಸರಳುಗಳ ನಡುವಿನ ಕೋನಕ್ಕೆ ಧ್ರುವನಕ್ಷತ್ರದ ಕೋನೋನ್ನತಿ ಎಂದು ಹೆಸರು. ನೀವು ನಿಂತ ನೆಲೆಯಲ್ಲೇ ಧ್ರುವನಕ್ಷತ್ರದ ಕೋನೋನ್ನತಿ ಅಳೆದು ನೋಡಿ. ಇದು ನಿಮ್ಮ ನೆಲೆಯ ಅಕ್ಷಾಂಶಕ್ಕೆ ಸಮವಾಗಿರುತ್ತದೆ. ಉದಾಹರಣೆಗೆ ಧ್ರುವನಕ್ಷತ್ರದ ಕೋನೋನ್ನತಿ ಹುಬ್ಬಳ್ಳಿಯಲ್ಲಿ ಸುಮಾರು ೧೫.೫ ಡಿಗ್ರಿ, ದೇಹಲಿಯಲ್ಲಿ ಸುಮಾರು ೨೯ ಡಿಗ್ರಿ, ಶ್ರೀನಗರದಲ್ಲಿ ಸುಮಾರು ೩೪ ಡಿಗ್ರಿ, ಉತ್ತರ ಮೇರುವಿನಲ್ಲಿ ೯೦ ಡಿಗ್ರಿ (ಇಲ್ಲಿ ಧ್ರುವನಕ್ಷತ್ರ ನೆತ್ತಿ ಮೇಲಿರುತ್ತದೆ).

---

* ಚಿತ್ರಗಳನ್ನು ತಲೆಯ ಮೇಲೆ ನಿಮಗೆ ಕಾಣುವಂತೆ ಕೆಳಮುಖವಾಗಿ ಹಿಡಿದು ಯುಕ್ತ ದಿಕ್ಕಿನತ್ತ ತಿರುಗಿಸಿ ಆಕಾಶದಲ್ಲಿ ಕಾಣುವ ಅಯಾ ನಕ್ಷತ್ರ ಚಿತ್ರದೊಡನೆ ಹೊಂದಿಸಬೇಕು.



ಚಿತ್ರ ೨. ನಕ್ಷತ್ರದ ಕೋನೋನ್ನತಿಯನ್ನು ಅಳೆಯುವ ಬಗೆ. *FE* ವೀಕ್ಷಕ. *E* ಆತನ ಕಣ್ಣು. *EH* ನೆಲಕ್ಕೆ ಸಮಾಂತರವಾಗಿದೆ. *EP* ನಕ್ಷತ್ರ *P* ಯನ್ನು ಗುರಿ ಹಿಡಿದಿದೆ. x ಡಿಗ್ರಿ *E* ಯಿಂದ ಕಾಣುವಂತೆ *P* ಯ ಕೋನೋನ್ನತಿ.

ಧ್ರುವನಕ್ಷತ್ರದ ದಿಕ್ಕು ನೇರ ಉತ್ತರ. ಅಲ್ಲಿಂದ ೯೦ ಡಿಗ್ರಿ ಬಲಕ್ಕೆ ತಿರುಗಿ. ನೀವು ಪೂರ್ವದಿಕ್ಕಿಗೆ ಅಭಿಮುಖರಾಗುತ್ತೀರಿ.

ಗಗನ ವೈಭವ ಮಹಾವ್ಯಾಧ


ನಿಮ್ಮೆದುರು ನಿಂತಿರುವ ದೊಡ್ಡ ತ್ರಾಪಿಜ್ಯಾಕಾರದಿಂದ ಮಂತ್ರಮುಗ್ಧರಾಗುತ್ತೀರಿ. ನಕ್ಷತ್ರಮುಗ್ಧರೂ ಆಗುತ್ತೀರಿ (ಚಿತ್ರ ೩). ಆ ನಾಲ್ಕು ನಕ್ಷತ್ರಗಳು ನಿಮ್ಮ ಮೇಲೆ ಎಸೆಯುವ ಸಂಮೋಹಕಾಸ್ತ್ರ ಹಾಗಿದೆ. ಮೇಲಿನ ಎರಡು ನಕ್ಷತ್ರಗಳನ್ನು ಜೋಡಿಸುವ ಗೆರೆ (ಇದು ತ್ರಾಪಿಜ್ಯದ ಪಶ್ಚಿಮ ಬಾಹು) ಕೆಳಗಿನ ಎರಡು ನಕ್ಷತ್ರಗಳನ್ನು ಜೋಡಿಸುವ ಗೆರೆಗೆ (ಪೂರ್ವಬಾಹು) ಸಮಾಂತರವಾಗಿದೆ. ಬಲಗಡೆಯ ಎರಡು ನಕ್ಷತ್ರಗಳನ್ನು ಜೋಡಿಸುವ ಗೆರೆ (ದಕ್ಷಿಣ ಬಾಹು) ಎಡಗಡೆಯ ಎರಡು ನಕ್ಷತ್ರಗಳನ್ನು ಜೋಡಿಸುವ ಗೆರೆಗೆ (ಉತ್ತರಬಾಹು) ಸಮಾಂತರವಾಗಿಲ್ಲ. ತ್ರಾಪಿಜ್ಯದ ಒಳಗೆ ಮೂರು ಉಜ್ಜ್ವಲ ನಕ್ಷತ್ರಗಳು ಹೆಚ್ಚು ಕಡಿಮೆ ಒಂದೇ ಗೆರೆಯ ಮೇಲೆ ನೆಲಸಿವೆ. ಇಷ್ಟೇ ಅಲ್ಲ ನಡುವಿನದು ಉಳಿದೆರಡನ್ನು ಜೋಡಿಸುವ ಗೆರೆಯ ಮಧ್ಯಬಿಂದುವೂ ಹೌದು. ಆದರೆ ಈ ಗೆರೆ ತ್ರಾಪಿಜ್ಯದ ಬೆಲ್ಲಾಟ್ರಿಕ್ಸ್-ಸೈಫ್ ಕರ್ಣದ ನೇರ ಇರಬಾರದಿತ್ತೇ ಎಂದು ನಿಮಗನ್ನಿಸುತ್ತದೆ. ಸಾಧ್ಯವಾಗಿದ್ದರೆ ನೀವಲ್ಲಿಗೆ ಆಕಾಶೋಲ್ಲಂಘನ ಮಾಡಿ ಈ 'ವಿಕೃತಿ' ಯನ್ನು ಸರಿಪಡಿಸಿರುತ್ತಿದ್ದಿರಿ.

ತಾರೆಗಳಲ್ಲಿ ಮತ್ತು ತಾರಾಲೋಕದಲ್ಲಿ ಅತಿಮಾನವರನ್ನೂ ದೇವತೆಗಳನ್ನೂ ಕಂಡ ಅಥವಾ ಕಾಲ್ಪನಿಕವಾಗಿ ಕೂರಿಸಿದ ನಮ್ಮ ಹಿರಿಯರು ತ್ರಾಪಿಜ್ಯಾಕಾರದ ಈ ಚಿತ್ರದಲ್ಲಿ ಬಲಶಾಲಿ ಬೇಟೆಗಾರನನ್ನು ಕಂಡು ಅವನಿಗೆ ಮಹಾವ್ಯಾಧ ಎಂಬ ಬಿರುದು ಅನುಗ್ರಹಿಸಿದರು. ಈಗ ನೀವು ನೋಡುತ್ತಿರುವುದು ಮಹಾವ್ಯಾಧ ನಕ್ಷತ್ರಪುಂಜವನ್ನು. ಇದು ಆಕಾಶಪರದೆಯ ಮೇಲೆ ಸೃಷ್ಟಿಕರ್ತ ಕುಂಚಿಸಿರುವ ಅತ್ಯಂತ ಸುಂದರ ಚಿತ್ರ. ಇದರ ನಾಲ್ಕು ಗಡಿ ನಕ್ಷತ್ರಗಳಿವು: ಈಶಾನ್ಯ ಆರ್ದ್ರಾ, ವಾಯುವ್ಯ ಬೆಲ್ಲಾಟ್ರಿಕ್ಸ್, ನೈರುತ್ಯ ರೈಗಲ್, ಆಗ್ನೇಯ ಸೈಫ್. ಉಳಿದ ಮೂರು ನಕ್ಷತ್ರಗಳಿಗಿಂತ ಆರ್ದ್ರಾ ಹೆಚ್ಚು ಕೆಂಪಗಿದೆ. ತ್ರಾಪಿಜ್ಯದ ಉದರದಲ್ಲಿರುವ ಮೂರು ಏಕರೇಖಸ್ಥ ನಕ್ಷತ್ರಗಳಿಗೆ ಮಹಾವ್ಯಾಧನ ಒಡ್ಯಾಣ ಎಂದೂ


ಇದಕ್ಕೆ ತಾಗಿ ದಕ್ಷಿಣಕ್ಕೆ ಹರಡಿರುವ ಕ್ಷೀಣ ಪ್ರಕಾಶದ ರೇಣುಗಳಿಗೆ ಮಹಾವ್ಯಾಧನ ಕರವಾಳವೆಂದೂ ಹೆಸರು. ಆರ್ದ್ರಾ-ಬೆಲ್ಲಾಟ್ರಿಕ್ಸ್ ರೇಖೆಯ (ಇದು ತ್ರಾಪಿಜ್ಯದ ಉತ್ತರಬಾಹು) ಒತ್ತಿಗೆ ಉತ್ತರಕ್ಕಿರುವ ಬೆಳಕಿನ ಹುಡಿಗಳು ಒಟ್ಟಾಗಿ ಮೃಗಶಿರಾವನ್ನು ರೂಪಿಸುತ್ತವೆ.

ಒಡ್ಯಾಣವನ್ನು ಆಗಸದ ಆಗ್ನೇಯ ದಿಶೆಗೆ ವೃದ್ಧಿಸಿ. ಈ ಗೆರೆಗೆ ಒತ್ತಾಗಿ ತುಸು ದಕ್ಷಿಣಕ್ಕೆ ನೀಲಿ ಹೊಳಪಿನ ಕಣ್ಣು ಕೋರೈಸುವ ಕಾಂತಿಯ ಮಹೋಜ್ವಲ ನಕ್ಷತ್ರ ಥಳಥಳಿಸುತ್ತಿದೆ. ಪ್ರಪಂಚದ ಸಮಸ್ತ ವಜ್ರಗಳ ಸಮಷ್ಟಿ ಕಾಂತಿಯೂ ಇದಕ್ಕೆ ಸಾಟಿ ಆಗದು. ಇದು ಲುಬ್ಧಕ, ತಾರಾಲೋಕದ ನಾಯಕ. ಪ್ರಕಾಶದಲ್ಲಿ ಇದನ್ನು ಮೀರಿಸುವ ತಾರೆ ಇನ್ನೊಂದಿಲ್ಲ. ನಮ್ಮ ಸೂರ್ಯನನ್ನೇನಾದರೂ ಇದರ ಸ್ಥಾನದಲ್ಲಿ ಪ್ರತಿಷ್ಠಾಪಿಸಿದ್ದಾದರೆ ಆ ಮಂಕು ಚುಕ್ಕಿಯನ್ನು ಗುರುತಿಸುವುದೇ ಕಷ್ಟವಾದೀತು.

ಲುಬ್ಧಕದಿಂದ ದಕ್ಷಿಣಕ್ಕೆ ಸರಿಸುಮಾರಾಗಿ ಸೈಫ್-ಲುಬ್ಧಕ ಅಂತರದಷ್ಟು ದೂರ ದೃಷ್ಟಿ ಹರಿಸಿದ್ದಾದರೆ ಪ್ರಕಾಶದಲ್ಲಿ ಲುಬ್ಧಕದ ಅವಳಿ ನಕ್ಷತ್ರವೊಂದು ಎದುರಾಗುತ್ತದೆ. ಇದು ಅಗಸ್ತ್ಯ. ಪ್ರಕಾಶಮಾನದಲ್ಲಿ ಇದಕ್ಕೆ ಎರಡನೆಯ ಮಣೆ. ಅಗಸ್ತ್ಯನಿಂದ



ಚಿತ್ರ ೩. ಮಹಾವ್ಯಾಧ ನಕ್ಷತ್ರ ಪುಂಜ. ರೋ—ರೋಹಿಣಿ. ಮೃ—ಮೃಗಶಿರಾ. ಆ—ಆರ್ದ್ರಾ. ಲು—ಲುಬ್ಧಕ. ಒ—ಮಹಾವ್ಯಾಧನ ಒಡ್ಯಾಣ. ಕ—ಮಹಾವ್ಯಾಧನ ಕರವಾಳ.




ಚಿತ್ರ ೪. ಸಮ—ಸಪ್ತರ್ಷಿಮಂಡಲ. ಕೆ—ಕೆಸಿಯೋಪಿಯ. P—ಧ್ರುವನಕ್ಷತ್ರ. ಪು—ಪುಲಹ. ಕ್ರ—ಕ್ರತು.

ಪಶ್ಚಿಮಕ್ಕೆ ಲುಬ್ಧಕ-ಅಗಸ್ತ್ಯ ಅಂತರದಷ್ಟು ದೂರ ಸಾಗುವಾಗ ಎದುರಾಗುವ ಮಿನುಗು ತಾರೆ ವೈತರಣೀಮುಖ.

ಟಗರು ಗೂಳಿಗಳ ಮೇಳ

ಮಹಾವ್ಯಾಧನಿಗೆ ಮರಳಿ. ಆದ್ರಾ-ಮೃಗಶಿರಾ ರೇಖೆಯನ್ನು ವೃದ್ಧಿಸಿ ಪಶ್ಚಿಮದೆಡೆಗೆ ತುಸು ದೂರ ಸಾಗುವಾಗ ಆದ್ರಾದ ಅವಳಿಯಂತೆ ಕಾಣುವ ಇನ್ನೊಂದು ಕೆಂಪು ನಕ್ಷತ್ರ ಎದುರಾಗುತ್ತದೆ. ಇದು ರೋಹಿಣಿ. ಇದರ ವಲಯದಲ್ಲಿ ದೃಷ್ಟಿ ಸಾಂದ್ರೀಕರಿಸಿದರೆ ಐದು ನಕ್ಷತ್ರಗಳ V ಆಕಾರ ಗೋಚರವಾಗುತ್ತದೆ. Vಯ ಕೋನ ಅಥವಾ ಶೃಂಗ ನೈಋತ್ಯಕ್ಕಿದೆ. ಇದರ ದಕ್ಷಿಣಬಾಹುವಿನ ತುದಿ ನಕ್ಷತ್ರವೇ ರೋಹಿಣಿ. ಬೆಲ್ಲಾಟ್ರಿಕ್ಸ್-ರೋಹಿಣಿ ರೇಖೆಯನ್ನು ವೃದ್ಧಿಸಿ. ಇದು ಬೆಳಕಿನ ಹಲವು ಹುಡಿಗಳ ನಿಬಿಡ ಒಕ್ಕೂಟವನ್ನು ತಲಪುತ್ತದೆ. ಎಷ್ಟು ನಿಬಿಡವೆಂದರೆ ಅಷ್ಟನ್ನೂ ಪುಟ್ಟ ಮುಷ್ಟಿಯಲ್ಲಿ ಹಿಡಿದುಬಿಡಬಹುದೋ ಎನ್ನುವಂತೆ. ನಕ್ಷತ್ರಗಳ ಈ ಗುಚ್ಛದ ಹೆಸರು ಕೃತ್ತಿಕೆ. ಬೆಲ್ಲಾಟ್ರಿಕ್ಸ್-ಕೃತ್ತಿಕೆ ರೇಖೆಯು ನಡುವಿಂದು ಸರಿಸುಮಾರಾಗಿ ರೋಹಿಣಿ (ಚಿತ್ರ ೩). ಕೃತ್ತಿಕೆಯಲ್ಲಿರುವ ಬಿಡಿ ಚುಕ್ಕಿಗಳನ್ನು ಎಣಿಸಲು ಪ್ರಯತ್ನಿಸಿ. ಉತ್ತರ ಏಳಾದರೆ ದೃಷ್ಟಿ ಸರಿಯಾಗಿದೆ. ಆರಾದರೆ ಸಾಧಾರಣವಾಗಿದೆ. ಅರಕ್ಷಿತ ಕಣ್ಣಿಗೆ ಐದಾದರೆ ದೋಷಯುತವಾಗಿದೆ ಎಂದರ್ಥ. ರೋಹಿಣಿ-ಕೃತ್ತಿಕೆ ವಲಯಕ್ಕೆ ವೃಷಭ ರಾಶಿಯೆಂದು ಹೆಸರು.

ರೋಹಿಣಿ-ಕೃತ್ತಿಕೆ ರೇಖೆಯನ್ನು ಪಶ್ಚಿಮಕ್ಕೆ ವೃದ್ಧಿಸಿದರೆ ವೃಷಭ ರಾಶಿ ಬಿಟ್ಟು ಮೇಷ ರಾಶಿ ತಲಪುತ್ತೀರಿ. ಮತ್ತೂ ಮುಂದೆ ಸಾಗಿದರೆ ಮೀನ ರಾಶಿ. ಮೇಷದಿಂದ ಮೀನದ ವರೆಗಿನ ದ್ವಾದಶ ರಾಶಿಗಳು ಚಂದ್ರ, ಸೂರ್ಯ, ಮತ್ತು ಗ್ರಹಗಳು



ಚಿತ್ರ ೫. ವೃಶ್ಚಿಕ ರಾಶಿ. ಮೇಲೆ ಅಡ್ಡಸಾಲಿನಲ್ಲಿರುವ ಮೂರು ನಕ್ಷತ್ರಗಳು (ಅ)—ಅನೂರಾಧಾ. ಜ್ಯೇ—ಜ್ಯೇಷ್ಠಾ. ಮೂ—ಮೂಲಾ.

ಸಂಚರಿಸುವ ಮನೆಗಳು. ಅಂದರೆ ಅವು ಈ ರಾಶಿ ಚಕ್ರದಿಂದ ಆಚೀಚೆ ಕದಲಲಾರವೆಂದರ್ಥ. ರೇಲು ಬಂಡಿ ಹೇಗೆ ಹಳಿ ಬಿಟ್ಟು ಅತ್ತಿತ್ತ ಹೋಗದೋ ಹಾಗೆ. ಉದಾಹರಣೆಗೆ ಜನವರಿ ೭ರಿಂದ ೨೦ರ ತನಕ ಪ್ರತಿ ರಾತ್ರಿ ಒಂದೇ ಹೊತ್ತಿಗೆ ಚಂದ್ರನ ಸ್ಥಾನ ಗುರುತಿಸಿ. ೧೬, ೧೭, ೧೮, ೧೯ರಂದು ಚಂದ್ರ ಅನುಕ್ರಮವಾಗಿ ಕೃತ್ತಿಕೆ, ರೋಹಿಣಿ, ಮೃಗಶಿರಾ, ಆರ್ದ್ರಾ ನಕ್ಷತ್ರಗಳ ಸಮೀಪವಿರುತ್ತದೆ.

ಈ ಸ್ಥಾನಾಂತರತೆ ಅಂತೆಯೇ ರಾಶಿಗಳ ವಿತರಣೆ ಪಶ್ಚಿಮ–ಪೂರ್ವ ದಿಶೆಯಲ್ಲಿವೆ ಎಂದು ಗಮನಿಸಿ.



ಚಿತ್ರ ೬. ಕಲ್ಪನೆ ಕಂಡ ಮಹಾವ್ಯಾಧನ ಚಿತ್ರ. ಹಿನ್ನೆಲೆಯಲ್ಲಿರುವ ನಕ್ಷತ್ರಗಳನ್ನು ಚಿತ್ರ ೩ರ ನಕ್ಷತ್ರಗಳೊಡನೆ ಹೋಲಿಸಿ ನೋಡಿ.

ನಸುಕಿನ ಮೆರುಗು

ಜನವರಿ, ಫೆಬ್ರುವರಿ ತಿಂಗಳುಗಳಲ್ಲಿ ನೀವು ನಸುಕಿನಲ್ಲೆದ್ದು ಆಕಾಶದ ಉತ್ತರ ವಲಯವನ್ನು ವೀಕ್ಷಿಸಿದರೆ ಸಮ ಅಂತರಗಳಲ್ಲಿ ಹಂಚಿಹೋಗಿರುವ ಏಳು ನಕ್ಷತ್ರಗಳ ವಿಶಿಷ್ಟ ದೃಶ್ಯ ನಿಮ್ಮ ಪ್ರಥಮಾಕರ್ಷಣೆಯಾಗುತ್ತದೆ. ಮೂಡುತ್ತಿರುವಾಗ ಅತಿ ಗಹನ ಪ್ರಶ್ನಾರ್ಥಕ ಚಿಹ್ನೆಯಂತೆಯೂ ಯಾಮ್ಯೋತ್ತರದ ಹತ್ತಿರ ಬಂದಾಗ ಕಿತ್ತೆಸೆದ ರತ್ನಹಾರದಂತೆಯೂ ಕಂತುತ್ತಿರುವಾಗ ಹಿಡಿ ಮುರಿದ ಸೌಟು ಅಥವಾ ಹಿರಿನೇಗಿಲಿನಂತೆಯೂ ಕಾಣುವ ಈ ಒಕ್ಕೂಟದಲ್ಲಿ ಪ್ರಾಚೀನ ಖಗೋಳ ಚಿಂತನಕಾರ ಸಪ್ತ ಋಷಿಗಳನ್ನು ಕೂರಿರಿಸಿದ್ದಾನೆ (ಚಿತ್ರ ೪). ಪೂರ್ವದಿಂದ (ಅಂದರೆ ಸೌಟಿನ ಹಿಡಿಯ ಮೊದಲ ಬಿಂದುವಿನಿಂದ) ತೊಡಗಿದರೆ ಇವರ ಹೆಸರು ಅನುಕ್ರಮವಾಗಿ ಮರೀಚಿ, ವಸಿಷ್ಠ, ಅಂಗೀರಸ್ಸು, ಅತ್ರಿ, ಪುಲಸ್ತ್ಯ, ಪುಲಹ, ಕ್ರತು. ಈ ಪುಂಜ ಸಪ್ತರ್ಷಿಮಂಡಲ. ವಸಿಷ್ಠನಿಗೆ ಅಂಟಿಕೊಂಡು ಉತ್ತರದೆಡೆಗೆ ಕ್ಷೀಣ ಪ್ರಕಾಶದ ಸಾಕಷ್ಟು ಸೂಕ್ಷ್ಮವಾಗಿ ದಿಟ್ಟಿಸಿದಾಗ ಮಾತ್ರ ಗೋಚರವಾಗುವ ಒಂದು ಚುಕ್ಕಿ ಉಂಟು. ಇದು ಅರುಂಧತಿ. ಪುಲಹ–ಕ್ರತು ರೇಖೆಯನ್ನು ಉತ್ತರದ ತಗ್ಗಿಗೆ ಮುಂದುವರಿಸಿದರೆ ಮತ್ತೆ ಶಾಶ್ವತ ಧ್ರುವನಕ್ಷತ್ರವನ್ನು ತಲಪುತ್ತೀರಿ.

ಮೂಡಲ ಬಾನೀಗ ಚೆಲುವಿನ ಗಣಿ, ಬೆಳಕಿನ ಸೂರೆ. ನೇಸರಿನ ಬರುವಿಕೆಯನ್ನು ಸಾರುವ ಪರಿಕಾರರಂತೆ ಹಾರಿಜದಿಂದ ತುಸು ಎತ್ತರದಲ್ಲಿ ಬೆಳಕಿನ ಉಂಡೆ ಶುಕ್ರ ಗ್ರಹ, ಮತ್ತು ಎತ್ತರದಲ್ಲಿ ಇನ್ನೊಂದು ಬೆಳಕಿನ ಉಂಡೆ ಗುರು ಗ್ರಹ ಕಂಗೊಳಿಸುತ್ತಿವೆ. ಗುರುವಿನ ಓಲೆಕಾರನಾಗಿ ಮಂದ ಪ್ರಕಾಶದ ಶನಿಗ್ರಹವಿದೆ. ಶುಕ್ರನಿವಾಸ ವೃಶ್ಚಿಕ ರಾಶಿ (ಚಿತ್ರ ೫) ಆಗ್ನೇಯಾಕಾಶದಲ್ಲಿರುವ ಹನ್ನೆರಡು ಹದಿಮೂರು ನಕ್ಷತ್ರಗಳ ಈ ಚಿತ್ರ ಚೇಳಿನ ಕಂಕಾಲವನ್ನು ನೆನಪಿಗೆ ತರುತ್ತದೆ. ಗುರು ಮತ್ತು ಶನಿ ಕನ್ಯಾರಾಶಿಯಲ್ಲಿವೆ.

ತಾರೆಗಳ ಚಿರಂತನ ಮೂಕ ಶ್ಲೋಕವೇ ಸಕಲ ವಿಜ್ಞಾನಗಳ ಸ್ಫೂರ್ತಿ ಮತ್ತು ಆಕರ. ✡

ತಿನ್ನುವುದು ಅಂದರೆ ಗಟ್ಟಿಯಾದ ಪದಾರ್ಥವನ್ನು ಬಾಯಲ್ಲಿ ಹಾಕಿಕೊಂಡು ಜಗಿದು ನುಂಗುವುದು ಎಂಬ ತಾತ್ಪರ್ಯವಾಗುತ್ತದೆ. **ಕುಡಿಯುವುದು** ಅಂದರೆ ದ್ರವಪದಾರ್ಥದ ಸೇವನೆ. ಆದ್ದರಿಂದ ನಾವು ಚಕ್ಕುಲಿ ತಿನ್ನುತ್ತೇವೆ; ನೀರು **ಕುಡಿಯುತ್ತೇವೆ**. ಕನ್ನಡದವರಾದ ನಾವು **ನೀರು ತಿನ್ನುವುದಿಲ್ಲ**. ಆದರೆ ನಮ್ಮ ನೆರೆಯವರಾದ ತಮಿಳರು ಹಾಗಲ್ಲ. ಅದರ ಭಾಷೆಯಲ್ಲಿ **ಕುಡಿ** ಎಂಬ ಧಾತು ಇದ್ದರೂ ಅವರು **ತಣ್ಣೀ ಶಾಪಟ್ರದು** (ನೀರು ತಿನ್ನುವುದು –ಶಾಪಾಟ್ = ಊಟ) ಎನ್ನುತ್ತಾರೆ. ಆದರೆ ಹೀಗೆ ನೀರೂಟಮಾಡುವವರು ಅವರು ಮಾತ್ರವಲ್ಲ, ಉತ್ತರದ ನಮ್ಮ ಬಂಗಾಲಿ ಬಂಧುಗಳು **ಕೂಡ ಜಲಖಾವಾ**(ನೀರು ತಿನ್ನವುದು–ಖಾ =ತಿನ್ನು, ಉಣ್ಣು) ಮಾಡುತ್ತಾರೆ. ತಮಾಷೆ ಆಗಿಲ್ಲವೆ?

ಅಷ್ಟೇನೂ ತಮಾಷೆ ಆಗಿಲ್ಲ. ಯಾಕಂದರೆ ಕನ್ನಡದಲ್ಲೇ ತಿನ್ನುವುದಕ್ಕೆ **ಸಮಾನಾರ್ಥಕವೆಂದು** ಬಗೆಯುವ **ಉಣ್ಣು** ಧಾತು ತೆಗೆದುಕೊಂಡರೆ ನಮ್ಮ ಕೂಸುಗಳು **ಹಾಲುಣ್ಣುತ್ತವೆ**; ನಮ್ಮ ಗದ್ದೆಗಳು **ನೀರುಣ್ಣುತ್ತವೆ**: ಅದಕ್ಕೂ ವಿಶೇಷವೆಂದರೆ ನಮ್ಮ ತೋಟದ ಹಣ್ಣುಗಳು **ಬಿಸಿಲು ಉಣ್ಣುತ್ತವೆ**. ಹೀಗೆ ತಿನ್ನುವುದಕ್ಕೆ **ಉಣ್ಣು** ಇಲ್ಲದಂತೆ **ಅನುಭವಿಸು** ಎಂಬ ವಿಶಾಲಾರ್ಥವೊಂದು ರೂಪುಗೊಂಡಿದೆ. ಅರ್ಥ ವಿಸ್ತಾರದಲ್ಲಿ **ತಿನ್ನು** ಕೂಡ ಬಡವಾಗಿಲ್ಲ. ಚಿಂತೆಗಳು ನಮ್ಮ **ತಲೆತಿನ್ನುತ್ತವೆ**. ನಮ್ಮ ಬಸರಿಯರು ಹಡೆಯಬೇಕಾದರೆ **ಬೇನೆತಿನ್ನುತ್ತಾರೆ**. ನಾವು ಮಾಡಿದ ಕರ್ಮವನ್ನು **ಎರಡು ಕೈಗಳಿಂದ ತಿನ್ನುತ್ತೇವೆ**. ಹೀಗೆ ಲಕ್ಷಣಾರ್ಥದಲ್ಲಿ **ಉಣ್ಣುವುದಕ್ಕಿಲ್ಲದ** ತೀಕ್ಷ್ಣಾನುಭವದ ಛಾಯೆ **ತಿನ್ನುವುದಕ್ಕೆ** ಇದೆ. ಬರೇ **ನಾವು ತಿನ್ನುವವರು** ಎಂದರೆ **ಮಾಂಸ ತಿನ್ನುವವರು** ಎಂಬ ಲಕ್ಷಣಾರ್ಥ ಇಂದಿನ ಮಾಂಸಾಹಾರಿ ಹೋಟೆಲುಗಳ ಕಾಲದಲ್ಲಿ, ಮಾತ್ರವಲ್ಲ ಕನಿಷ್ಠ ೧೫–೧೬ ನೇ ಶತಮಾನದ ಕಾಲದಿಂದ ಇದೆ. **ನಾವು ಉಣ್ಣುವವರು** ಎಂದರೆ ಆ ಅರ್ಥ ಬಾರದು. ನಾವು **ಅನ್ನವನ್ನು ಉಣ್ಣ**ಬಹುದು; ಆದರೆ **ಕೋಡುಬಳೆ**ಯನ್ನು **ಉಣ್ಣಲಾರೆವು**—ಅದನ್ನು **ತಿನ್ನಬೇಕಾಗುತ್ತದೆ**. ನಾವು ಬೇಕಾದರೆ **ಅನ್ನ** ತಿನ್ನಬಹುದು; ಆದರೆ ಅದರ ಅರ್ಥ ಮಾತ್ರ **ಅನ್ನ ಉಣ್ಣುವುದೆಂದಾಗದು. ಅನ್ನ ತಿನ್ನುವಾಗ ನಾವು** ಉಪಾಯವಿಲ್ಲದೆ ಜುಗುಪ್ಸೆಯಿಂದ ತಿನ್ನುತ್ತೇವೆ, ಅಥವಾ ಹಂಗಿನ **ಅನ್ನ**ವನ್ನು ಕಣ್ಣುಮುಚ್ಚಿ ತಿನ್ನುತ್ತೇವೆ. ಹಾಗೆಯೇ ನಾವು **ಲಂಚ ತಿನ್ನ**ಬಹುದೇ **ಹೊರತು ಲಂಚವುಣ್ಣಲಾರೆವು**. ಇಂಥ ಅರ್ಥಸೂಕ್ಷ್ಮಗಳೇ ಒಂದು ಭಾಷೆಗೆ ತನ್ನದೇ ಆದ ವ್ಯಕ್ತಿತ್ವವನ್ನು ಕೊಡುತ್ತವೆ; ಪರ ಭಾಷಿಕರಿಗೆ ಅವನ್ನು ಜಾರುವ ಬಂಡೆಯಾಗಿಯೂ ಭಾಷಾಂತರಕಾರರಿಗೆ ತಲೆ ನೋವಾಗಿಯೂ ಮಾಡುತ್ತವೆ.

ಕನ್ನಡದ **ಉಣ್ಣು ತಿನ್ನುವ** ವಿಚಾರಗಳು ಸ್ವಾರಸ್ಯವಾಗಿದ್ದರೂ ಆಶ್ಚರ್ಯಕರವೆಂದು **ಹೇಳಲಾ**ಗದು. ಆದರೆ ಉರ್ದುವಿನಲ್ಲಿ, ಹಿಂದಿಯಲ್ಲಿ ಬರುವ **ಕಸಮ್ ಖಾನಾ** (= ಪ್ರತಿಜ್ಞೆ ತಿನ್ನುವುದು) ಕನ್ನಡಿಗರನ್ನು ಬೆಚ್ಚಿಸುತ್ತದೆ. ಏನನ್ನಾದರೂ (ಮಣ್ಣನ್ನು ಕೂಡ !) ಕನ್ನಡಿಗರು ತಿಂದಾರು. ಆದರೆ ಪ್ರತಿಜ್ಞೆಯನ್ನು ಹೇಗಪ್ಪಾ ತಿನ್ನುವುದು ? ಬಹುಶಃ ಈ ನುಡಿಕಟ್ಟು ಅರಬಿ ಭಾಷೆಯಿಂದ ಬಂದ **ಕಸಮ್** ಶಬ್ದದೊಡನೆಯೇ ಉರ್ದುವಿಗೆ ಬಂತು. ಉರ್ದು ಹವೆಯಲ್ಲಿ ಬಹುಕಾಲ ಬಾಳಿದ ಹೈದರಾಬಾದ್ ಕನ್ನಡಿಗರಿಗೆ ಕೂಡ **ಆಣೆ ತಿನ್ನುವುದು** ಅಭ್ಯಾಸವಾಯಿತು. ಕಾಲಾಂತರದಲ್ಲಿ ಆಣೆಯನ್ನು ತಿನ್ನುವ ಚಟ ಹೈದರಾಬಾದಿ ಕನ್ನಡಿಗರಿಂದ ಇತರರಿಗೂ ಹಬ್ಬಬಹುದೆಂದು ಈಗಾಗಲೇ ಪ್ರಮಾಣಿತವಾಗುತ್ತಿದೆ. ಪರಿಷತ್ತಿನ ಬೃಹತ್‌ಕೋಶದಲ್ಲಿ **ಆಣೆ ತಿನ್ನು** ದಾಖಲಾಗಿದೆ. ಅಲ್ಲಿ ಕೊಟ್ಟ ಪ್ರಯೋಗಗಳಲ್ಲಿ ಒಂದು ಹೈದರಾಬಾದ್ ಕನ್ನಡಿಗರ ಬರವಣಿಗೆಯಿಂದ ಎತ್ತಿದ್ದು. **— ಸಾವೆಂ.**

ಬದುಕು ಕಾದಂಬರಿ ಒಂದೇ ಅಲ್ಲ...

"ಯೆಸ್, ಸರ್..." ತಮಗೇನು ಬೇಕು ಎಂಬಂತೆ ವಿನಯದಿಂದ ಕೈಕಟ್ಟಿ ನಿಂತಿದ್ದ, ಬೇರರ್.

ಆತ ಸ್ವಲ್ಪ ಆಲೋಚಿಸಿ, ಕಡೆಗೊಂದು ನಿರ್ಣಯಕ್ಕೆ ಬಂದವನಂತೆ – ಕಿರುನಗೆ ನಕ್ಕು, "ಚಿಲ್ಡ್ ಬೀರ್" ಎಂದ.

ಬೇರರ್‌ಗೆ ಆಶ್ಚರ್ಯವಾಯಿತು. ತನ್ನ ಕರ್ತವ್ಯವೆಂಬಂತೆ, "ತುಂಬಾ ಚಳಿ ಇದೆ," ಎಂದು ಸೂಚಿಸಿದ.

ಆ ಸೂಚನೆಯಲ್ಲಿನ ಅರ್ಥ 'ಬೀರು ಬೇಡ. ಮತ್ತೇನಾದರೂ ಹಾಟ್ ಡ್ರಿಂಕ್ಸ್ ತಗೊಳ್ಳಿ' ಅಂತ.

ಆತ ನಕ್ಕು, "ನಿಜಕ್ಕೆ ನನಗೆ ಡ್ರಿಂಕ್ಸ್ ಅಭ್ಯಾಸವಿಲ್ಲ. ಬೀರು ಕೂಡಾ ಹೆಚ್ಚಾಗಿ ಕುಡಿಯೊಲ್ಲ. ಒಂದೇ ಒಂದು ಗ್ಲಾಸು. ಅನಂತರ ನೀನು ತಗೋ ಬೇಕಾದಷ್ಟೇ..." ಎಂದ.



ತೆಲುಗು ಕಥೆ

ಅನುವಾದ : **ಶರ್ವಾಣಿ**

ಇಷ್ಟು ರಾತ್ರಿಯಾದ ಮೇಲೆ ಡ್ರಿಂಕ್ಸ್‌ಗೋಸ್ಕರ ಅಲ್ಲದಿದ್ದರೆ ಬಾರಿಗೆ ಯಾಕೆ ಬರುತ್ತಾರೆ ಎಂಬ ಸಂಶಯದಿಂದ ಆತನ ಕಡೆ ನೋಡಿದ ಬೇರರ್, ಕಸ್ಟಮರ್ ಈಗಾಗಲೇ ಹದ್ದು ಮೀರಿ ಕುಡಿದಿದ್ದಾನೇನೋ ಎಂದು. ಆದರೆ ಆತ ಸ್ವಲ್ಪವೂ ಕುಡಿದಂತೆ ಕಾಣಲಿಲ್ಲ.

"ತುಂಬಾ ಕಾರಣ ಇದೆ–ನಾನೀ ರೀತಿ ಬಂದಿರೋದಕ್ಕೆ ಹೇಳ್ತೀನಿ. ಮೊದಲು ಬೀರು ತೆಗೆದುಕೊಂಡು ಬಾ. ಹರಟೆ ಹೊಡೆಯುತ್ತಾ ಮುಗಿಸುವಾ..."

ಈ ಕಸ್ಟಮರ್ ವಿಚಿತ್ರವಾಗಿ ಕಾಣಿಸಿದ್ದ ಬೇರರ್‌ಗೆ. ಆತನ ಕಡೆ ಪರೀಕ್ಷಾದೃಷ್ಟಿಯಿಂದ ನೋಡಿ ಅಲ್ಲಿಂದ ಕಾಲ್ತೆಗೆದ.

ಕುಡಿಯುವುದಕ್ಕೆ ಸಮಯಾ ಸಮಯಗಳೇನೂ ಇಲ್ಲದಿದ್ದರೂ, ಸಾಧಾರಣವಾಗಿ ಅದು ಕುಡಿತ ಮುಕ್ತಾಯ ಮಾಡುವ ಸಮಯವೇ ಹೊರತು, ಪ್ರಾರಂಭಮಾಡುವ ವೇಳೆ ಮಾತ್ರ ಅಲ್ಲ. ಎರಡನೆ ಆಟ ಬಿಡುವ ಹೊತ್ತಾಗುತ್ತಿತ್ತು. ಪ್ಯಾಸೇಂಜರಿಗೂ ನಿದ್ರೆ ಬರುತ್ತಿತ್ತು. ಬಹಳ ಮಂದಿ ಬೇರರ್ಸ್ ಈಗಾಗಲೇ ನಿದ್ದೆಯಲ್ಲಿ ಮುಳುಗಿದ್ದರು. ರೆಸ್ಟೋರೆಂಟ್ ಸೆಕ್ಷನ್ ಮುಚ್ಚಿ ತುಂಬಾ ಹೊತ್ತಾಗಿತ್ತು. ಕುಡಿತದ ಜತೆ ತಿನ್ನಲು ಬಿಸ್ಕಟ್ಸ್, ಗೋಡಂಬಿ ಬಿಟ್ಟರೆ ಮತ್ತೇನೂ ಇರಲಿಲ್ಲ.

ನಂತಿದ್ದಾನೆ. ಇಲ್ಲದಿದ್ದರೆ ಇಷ್ಟು ಹೊತ್ತಿನಲ್ಲಿ ಬರೋಣ ಅಂದರೇನು? ಆದರಲ್ಲೂ ಕುಡಿತ ಕ್ಕೋಸ್ಕರ ಅಲ್ಲಾಂದ ಮೇಲೆ ಕಷ್ಟ ಪಟ್ಟು ಇಲ್ಲಿ ಬಾರ್‌ಗೆ ಏಕೆ ಬರಬೇಕು? ತನ್ನೊಂದಿಗೆ ಕುಡಿಯುತ್ತಾ ಹರಟೆ ಹೊಡೀತಾನಂತೆ... ಅಂದ ಹಾಗೆ ಈತನ ಪರಿಚಯ ತನಗಿಲ್ಲ. ಆದರೆ ಎಲ್ಲೋ ನೋಡಿದಂತೆ ಅನ್ನಿಸುತ್ತೆ. ಎಷ್ಟು ಆಲೋಚಿಸಿದರೂ ನೆನಪಿಗೆ ಬರುತ್ತಿಲ್ಲ... ಹೊತ್ತು ಗೊತ್ತಿಲ್ಲದೆ ಬಾರಿಗೆ ಬಂದು ಹರಟೆ ಹೊಡೆಯೋಕೆ ಅಂತಿದ್ದಾನಲ್ಲಾ! ಎಷ್ಟೋ ವಿಧವಾದ ಹುಚ್ಚುಗಳಲ್ಲಿ ಇದೂ ಒಂದು ವಿಧವೇನೋ?... ಅಂತೂ ಈಗ ವಿಚಿತ್ರವಾದ ಕತೆಯೊಂದು ನಡೆಯುಲಿಕ್ಕಿದೆ...ಆಗಲಿ... ನೋಡೋಣ...

ಬೀರು ಬಾಟಲ್ ಗ್ಲಾಸುಗಳೊಂದಿಗೆ ಹಿಂತಿರುಗಿದ ಬೇರರ್. ಸ್ವಲ್ಪವೂ ನೊರೆ ಬಾರದಂತೆ ಬಾಟಲ್ ತೆಗೆದು, ಒಂದು ಗ್ಲಾಸನ್ನು ತುಂಬಿ ಆತನ ಮುಂದಿಟ್ಟ.

"ನೀನೂ ತಗೋ... ನನಗೊಂದು ಗ್ಲಾಸ್ ಸಾಕು. ಅಂದ ಹಾಗೆ ಬೀರ್‌ಗೆ 'ಚೀರ್ಸ್' ಇರೊಲ್ಲ ಅಲ್ಲವೇ?"

"ಇರೊಲ್ಲ... ಆದರೆ... ಕ್ಷಮಿಸಬೇಕು..."

"ಏಕೆ, ಮಂಚಿಂಗ್ ಇಲ್ಲಾಂತಲೇ? ಪರವಾಗಿಲ್ಲ, ನನಗೆ ಹಸಿವಿಲ್ಲ. ಬೀರ್‌ಗೆ ಮಂಚಿಂಗ್ ಬೇಕೇ ಬೇಕೂಂತ ಅನ್ನಿಸೋಲ್ಲ ನಂಗೆ..."

"ಅದಲ್ಲ..."

"ಮತ್ತೆ?" ಆತ ಒಂದು ಗುಟುಕು ಬೀರನ್ನು ಕುಡಿದು, "ಬೀರನ್ನು ಸಿಪ್ ಮಾಡೊಲ್ಲ. ಗಲ್ಪಿಂಗೇ. ಆದರೆ ಹೇಳಿದೆನಲ್ಲಾ... ನನಗೆ ಸ್ವಲ್ಪ ಕೂಡಾ ಅಭ್ಯಾಸ ಇಲ್ಲ. ಅದರ ಅವಶ್ಯಕತೇನೂ ಇಲ್ಲ."

"ಅದಲ್ಲ. ನಾನು ಕುಡಿಯೋಲ್ಲ... ಅದಕ್ಕೇ ಕ್ಷಮಿಸಿ ಅಂದೆ. ನಿಮ್ಮ ಜತೆ ಕುಡಿಯದಿದ್ದರೂ ನಿಮ್ಮ ಮಾತುಗಳನ್ನು ಕೇಳಲು ನನಗೇನೂ ಅಭ್ಯಂತರವಿಲ್ಲ" ವಿನಯದಿಂದ ಹೇಳಿದ ಬೇರರ್.

"ನಿಜವಾಗಿಯೂ... ನೀನು ಕುಡಿಯೋದೇ ಇಲ್ಲವೇ?" ಆಶ್ಚರ್ಯದಿಂದ ಕೇಳಿದ ಕಸ್ಟಮರ್.

"ನನಗೆ ನಂಬಲಿಕ್ಕೇ ಆಗುತ್ತಿಲ್ಲ. ಬಾರ್‌ನಲ್ಲಿ ಬೇರರ್ ಆಗಿದ್ದೂ ಕನಿಷ್ಠ ಪಕ್ಷ ಬೀರನ್ನಾದರೂ ಕುಡಿಯದೆ ಇರೋದು ಸಾಧ್ಯವೇ ಇಲ್ಲವಲ್ಲಾ..."

"ಇರಬಹುದು. ಆದರೆ ನನ್ನ ಪರಿಸ್ಥಿತಿ ನನ್ನನ್ನು ಹಾಗೆ ಬದಲಾಯಿಸಿದೆ."

"ನಾನೂ ಅಷ್ಟೆ. ಬದುಕು ತುಂಬಾ ವಿಚಿತ್ರವಾದದ್ದು. ಅದು ಮನುಷ್ಯನನ್ನು ಏನು ಬೇಕಾದರೂ ಮಾಡುತ್ತೆ. ಹಾಗಲ್ಲದಿದ್ದಲ್ಲಿ ನಾನೀಗ. ಇಲ್ಲಿ. ಈ ರೀತಿ ಇರಬೇಕಾದದ್ದೇ ಅಲ್ಲ... ನನ್ನ ಬಾಳೂ ಒಂದು ವಿಚಿತ್ರವಾದ ಆಶ್ಚರ್ಯಕರವಾದ ಕಥೇನೇ. ಕೇಳ್ತೀಯಾ. ಸ್ವಲ್ಪದರಲ್ಲೇ ಹೇಳಿ ಮುಗಿಸ್ತೀನಿ.."

"ಹೇಳಿ... ಕೇಳ್ತೀನಿ. ಆದರೆ ನಾನೊಂದು ಮಾತು ಹೇಳ್ತೀನಿ."

"ಆ ಮೇಲೆ ಹೇಳುವಿಯಂತೆ, ತಪ್ಪದೆ ಕೇಳ್ತೀನಿ. ನಾನೀಗ ಇಲ್ಲಿಗೆ, ಈ ಸಮಯದಲ್ಲಿ ಏಕೆ ಬಂದೆ ಅನ್ನೋ ವಿಷಯ ಹೇಳಿದರೆ ಆಶ್ಚರ್ಯ ಪಡುತ್ತೀ ನೀನು. ನಾನಾರು ಗೊತ್ತೇನು? ಲಕ್ಷಾಧೀಶ ವ್ಯಾಪಾರಸ್ಥ ...ಕಲ್ಕತ್ತೆಗೆ ಹೋಗುತ್ತಾ ದಾರಿಯಲ್ಲಿ ಇಲ್ಲಿ ಇಳಿದಿದೀನಿ. ಇನ್ನೂ ಮುಂಚೆಯೇ ಇಲ್ಲಿಗೆ ಬಂದು ಸಾಕಷ್ಟು ಹೊತ್ತನ್ನ ಇಲ್ಲಿ ಕಳೆಯಬೇಕೂ ಅಂತ ಮನಸಿತ್ತು ನನಗೆ. ಆದರೆ ಹಾಳಾದ್ದು ರೈಲು ತುಂಬಾ ಲೇಟಾಯಿತು... ಅಂದ ಹಾಗೆ ಹತ್ತು ವರ್ಷಗಳ ಕೆಳಗೆ ಈ ಬಾರ್‌ಗೆ ರೆಸ್ಟೋರೆಂಟ್ ಇರಲಿಲ್ಲ ಅಲ್ಲವೇ?"



"ಹತ್ತು ವರ್ಷಗಳ ಕೆಳಗೆ?... ಉಹುಂ... ಇರಲಿಲ್ಲ."

"ನಿನಗೆ ಹೇಗೆ ಗೊತ್ತು?"

"ಇದು ನಮ್ಮೂರಲ್ಲವೇ?" ಸ್ವಲ್ಪ ತಡೆದು "ನೀವು ಹತ್ತು ವರ್ಷಗಳ ಕೆಳಗೆ ಇಲ್ಲಿ ಬಿಜಿನೆಸ್ ಮಾಡುತ್ತಿದ್ದಿರೇನು?" ಎಂದ ಬೇರರ್.

"ಬಿಜಿನೆಸ್ ಅಲ್ಲ. ಈ ಬಾರ್‌ನಲ್ಲೇ ಬೇರರ್ ಆಗಿದ್ದೆ."

"ಆಂ...!"

"ಹೌದು... ಆ ಮಾತು ಹೇಳಿಕೊಳ್ಳೋದಕ್ಕೆ ನಾನೇನು ನಾಚಿಕೆ ಪಡೋದಿಲ್ಲ. ಆ ಕೆಲಸಾನೇ ನಾನೀ ದಿನ ಇಷ್ಟು ಮಟ್ಟಿಗೆ ಇರೋದಕ್ಕೆ ಸಹಾಯ ಮಾಡಿದ್ದು. ಹೇಗೇ ಅಂದರೇ... ಆಗಿನ ಕಾಲದಲ್ಲಿ ಬಾರಿಗೆ ಬರೋವರ ಸಂಖ್ಯೆ ಕಡಿಮೇನೇ. ಆದರೆ ರಾಮಲಾಲ ಮಾತ್ರ ಹತ್ತು ಜನಕ್ಕೆ ಸಮಾನ. ಸದಾ ಐದಾರು ಜನ ಸ್ನೇಹಿತರು ಜತೆಯಲ್ಲಿದ್ದೇ ಇರುತ್ತಿದ್ದರು. ಅವರೊಂದಿಗೆ ದಿನಾ ಬರೋರು. ಅವರಿಗೆ ಬೇಕಾದದ್ದನ್ನೆಲ್ಲಾ ನಾನೇ ಮುತುವರ್ಜಿಯಿಂದ ನೋಡಿಕೊಳ್ಳುತ್ತಿದ್ದೆ– ವಿಧೇಯನಾಗಿ. ಆತ ತುಂಬಾ ಉದಾರಿ. ದಿನಾ ನನಗೆ ಐದಾರು ರೂಪಾಯಿಗಳಿಗೆ ಕಡಿಮೆಯಾಗದಂತೆ ಟಿಪ್ಸ್ ಕೊಡುತ್ತಿದ್ದರು. ಆಗ ನಾನಿನ್ನೂ ಬ್ರಹ್ಮಚಾರಿ. ಬಾರ್‌ನವರೇ ಊಟ ಹಾಕಿ ಇರಲು ಸ್ಥಳ ಕೊಟ್ಟು ಸಂಬಳ ಕೊಡುತ್ತಿದ್ದರು. ನನಗಿನ್ನೇನು ಖರ್ಚಿದ್ದೀತು? ರಾಮಲಾಲರು ಕೊಟ್ಟ ಹಣವನ್ನೆಲ್ಲಾ ಭದ್ರವಾಗಿ ಕೂಡಿ ಹಾಕುತ್ತಿದ್ದೆ. ಈ ಬಾರ್‌ನಲ್ಲಿ ಐದಾರು ವರ್ಷ ಕೆಲಸ ಮಾಡಿದೆ. ಬ್ಯಾಂಕಿನಲ್ಲಿ ನನ್ನ ಹಣ ಐದಾರು ಸಾವಿರಕ್ಕೆ ಮೇಲೆ ಆಗಿತ್ತು. ಆಗ ಬೇರರ್ ಕೆಲಸ ಬಿಟ್ಟು. ನಮ್ಮೂರಿಗೆ ಹೋಗಿ ಬಿಜಿನೆಸ್ ಪ್ರಾರಂಭಿಸಿದೆ. ಅದರಲ್ಲಿ ನನ್ನ ಅದೃಷ್ಟ ತೆರೆಯಿತು. ಒಳ್ಳೇ ಲಾಭ ಬಂತು. ಮುಂದು

ವರಿಸಿದೆ. ಲಕ್ಷಾಧೀಶನಾಗಿದೆ... ನಾನು ಎಂದೆಂದಿಗೂ ಈ ಬಾರ್‌ಗೂ ರಾಮುಲಾಲರಿಗೂ ಚಿರಋಣಿ. ಎಷ್ಟೋ ಸಲ ಇಲ್ಲಿಗೆ ಬಂದು ನನ್ನ ಕೃತಜ್ಞತೆಗಳನ್ನು ತಿಳಿಸಬೇಕು ಅಂದುಕೊಂತಾ ಇದ್ದೀನಿ. ಆದರೆ ವ್ಯಾಪಾರದಲ್ಲಿ ಬಿಡುವು ಸಿಗಬೇಕಲ್ಲ! ಈ ದಿನ ಏನಾದರೂ ಸರಿಯೆ ಇಲ್ಲಿಗೆ ಬಂದೇ ತೀರಬೇಕು ಅಂತ ಮನಸ್ಸುಮಾಡಿ. ಕಲ್ಕತ್ತೆಗೆ ಹೋಗುತ್ತಾ ಇಲ್ಲಿ ಇಳಿದೆ. ಆದರೆ... ಏನು ಪ್ರಯೋಜನ?... ಅರ್ಧ ರಾತ್ರಿಯಾದ್ದರಿಂದ ಯಾರೂ ಸಿಕ್ಕೊ ಹಾಗೆ ಕಾಣೆ. ಬಾರ್ ಕೂಡಾ ಹಿಂದಿನಂತಿಲ್ಲ. ತುಂಬಾ ಬದಲಾಯಿಸಿದೆ. ಮ್ಯಾನೇಜರ್ ಹೊಸಬನಂತಿದ್ದಾನೆ. ಆ ಮ್ಯಾನೇಜರರನ್ನೂ ರಾಮುಲಾಲರನ್ನೂ ಕಂಡು ನನ್ನ ಕೃತಜ್ಞತೆಗಳನ್ನು ತಿಳಿಸಬೇಕೆಂಬ ನನ್ನ ಆಶೆ ನೆರವೇರೋ ಹಾಗೆ ಕಾಣೆ, ನಿಜಕ್ಕೆ ರಾಮುಲಾಲರು ಇಲ್ಲಿರದೆ ಇರೋದೇ ಆಶ್ಚರ್ಯ. ಕತ್ತಲವಾಗುತ್ತಿದ್ದ ಹಾಗೆಯೇ ಬಂದು ಬೆಳಗಾಗುವವರೆಗೂ ಇಲ್ಲಿರುತ್ತಿದ್ದರು... ಆಗ..."

"ಈಗಲೂ ಅವರಷ್ಟೆ, ಚಿಕ್ಕ ಬದಲಾವಣೆ ಮಾತ್ರ." ಎಂದ ಬೇರರ್.

"ಅಂದರೆ...?"

"ಬದುಕು ತುಂಬಾ ಕ್ರೂರವಾದದ್ದು. ಬಾರು ಇನ್ನೂ ಕ್ರೂರವಾದದ್ದು. ಜಮೀಂದಾರ್ ರಾಮುಲಾಲ ತನ್ನ ಆಸ್ತಿಯನ್ನೆಲ್ಲಾ ಈ ಬಾರ್‌ಗೇ ಧಾರೆಯೆರೆದನೆಂದರೆ ಅದರಲ್ಲಿ ಎಳ್ಳಷ್ಟೂ ಸುಳ್ಳಿಲ್ಲ. ಆ ಪುಟ್ಟ ಜಮೀಂದಾರ ಹತ್ತು ವರ್ಷಗಳಲ್ಲಿ ಫಕೀರನೇ ಆದ. ಅವನ ಪಾಲಿಗೆ ಸಾಲವಷ್ಟೇ ಉಳಿಯಿತು. ಕೈ ಹಿಡಿದ ಹೆಂಡತಿಯೂ ಅವನನ್ನು ತೊರೆದು ಹೋದಳು. ಅವನು ಪೂರ್ತಿಯಾಗಿ ಬೀದಿಯ ಪಾಲಾದ. ಕುಡಿತದ ಚಟಕ್ಕೆ ಸಿಕ್ಕಿದವನಿಗೆ ಅದಕ್ಕಿಂತ ಬೇರೇನು ದೊರಕೀತು? ಅಷ್ಟಾದರೂ ಸಾಯುವ ಮನಸ್ಸಾಗಲಿಲ್ಲ ಅವನಿಗೆ. ಆತ್ಮಹತ್ಯೆ ಮಾಡಿಕೊಳ್ಳುವ ಧೈರ್ಯ ಬರಲಿಲ್ಲ. ಪ್ರಾಣದ ಮೇಲಿನ ಆಶೆ ಬಿಡಲಿಲ್ಲ. ಹುಚ್ಚನಂತೆ ಬೀದಿ ಬೀದಿ ಅಲೆಯುತ್ತಿದ್ದ. ಯಾರಾದರೂ ಏನಾದರೂ ಕೊಟ್ಟರೆ ತಿನ್ನುವುದು. ಕುಡಿಸಿದರೆ ಕುಡಿಯುವುದು. ಇದು ಅವನ ಗತಿ. ಹೀಗೆ ಬೀದಿಪಾಲಾದ ರಾಮುಲಾಲನನ್ನು ನೋಡಿ ಬಾರ್ ಮ್ಯಾನೇಜರಿಗೆ ಕರುಣೆ ಹುಟ್ಟಿತು. ಹಳೆಯದನ್ನು ಮರೆಯಲಾರದ ಕೃತಜ್ಞತೆ ವಿಶ್ವಾಸಗಳಿಂದ ಇಲ್ಲಿ ಬೇರರ್ ಆಗಿ ಕೆಲಸ ಕೊಟ್ಟರು. ಆದ್ದರಿಂದ ಈಗಲೂ ರಾಮು ಲಾಲ್ ಕತ್ತಲಾಗುತ್ತಿದ್ದಂತೆ ಬಾರ್‌ಗೆ ಬಂದು ಬೆಳಕು ಹರಿಯುತ್ತಿದ್ದಾಗ ಹೋಗುತ್ತಾರೆ..."

"ಅಂ... ರಾಮುಲಾಲರು... ಬೇರರ್ ಆದರೇ? ಅಯ್ಯೋ ವಿಧಿವೈಚಿತ್ರ್ಯವೇ?"

"ಅಷ್ಟೇ ಅಲ್ಲ. ಒಂದು ಕಾಲದಲ್ಲಿನ ಬೇರರ್, ಈ ದಿನದ ಕಸ್ಟಮರ್ ಆದ ನಿಮಗೆ ಬೀರು ತಂದು ಕೊಟ್ಟನಲ್ಲ, ಒಂದು ಕಾಲದ ಕಸ್ಟಮರ್, ಈಗಿನ ಬೇರರ್ ಆದ ರಾಮುಲಾಲನೇ. ತನ್ನನ್ನೀ ಸ್ಥಿತಿಗೆ ತಂದ ಕುಡಿತದ ಮೇಲೆ ವಿಪರೀತ ದ್ವೇಷ ಆತನಿಗೆ. ಆದ್ದರಿಂದ ಈಗ... ಇಲ್ಲಿ... ನಿಮ್ಮ ಜತೆ ಬೀರ್ ಸಹ ತೆಗೆದುಕೊಳ್ಳಲಿಲ್ಲ."

"ಅಂದರೆ... ನೀವು..."

"ಹೌದು... ನಾನೇ ರಾಮುಲಾಲ್, ಎಲ್ಲವನ್ನೂ ಕಳೆದುಕೊಂಡ ಚಿಕ್ಕ ಜಮೀಂದಾರ.." ಎಂದಂದು ಬೇಗ ಬೇಗ ಹೆಜ್ಜೆ ಹಾಕುತ್ತಾ "ನೀವು ನೋಡಬೇಕೆಂದಿದ್ದ ಇನ್ನೊಬ್ಬ ವ್ಯಕ್ತಿ, ಮ್ಯಾನೇಜರ್, ಊರಲಿಲ್ಲ," ಎನ್ನುತ್ತಾ ಹೊರಟುಹೋದ.

ಕಸ್ಟಮರ್ ವಿಭ್ರಾಂತಿಯಿಂದ ಚೇತರಿಸಿಕೊಳ್ಳಲು ಕೆಲ ಸಮಯವೇ ಹಿಡಿಯಿತು.

ಶಕ್ತಿಯನ್ನೆಲ್ಲಾ ಕಳೆದುಕೊಂಡವನಂತೆ ಎದ್ದು ಮುಂದಕ್ಕೆ ಹೆಜ್ಜೆ ಹಾಕುತ್ತಾ "ಬದುಕು ಕಾಮೆಡಿ ಒಂದೇ ಅಲ್ಲ. ಟ್ರಾಜಿಡಿ ಕೂಡಾ..." ಎಂದು ತನ್ನಲ್ಲಿ ತಾನೇ ಗೊಣಗಿಕೊಂಡ.

ಟೆಕ್ಸಾಸ್ ನಗರದ ಒಂದು ದೊಡ್ಡ ಚೌಕದಲ್ಲಿ ನಾಲ್ಕು ಕಡೆಗೆ ಹೋಗುವ ದಾರಿಗಳ ಸೂಚಿಕಂಬವೊಂದಿದೆ. ಅದರಲ್ಲಿ, "ದಿಸ್‌ವೇ" "ದ್ಯಾಟ್‌ವೇ" "ಎನಿವೇ" ಮತ್ತು "ಹೀಸ್‌ವೇ" ಎಂಬುದಾಗಿ ಬರೆದಿದೆ.

ನಾಲ್ಕನೆಯ ದಾರಿ ಮಾತ್ರ ಸುಡುಗಾಡಿಗೆ ಕರೆದೊಯ್ಯುತ್ತದೆ.


ಇತರರನ್ನು ಹಿಂದೆ ಬೀಳಿಸುವ ಬಿಳುಪು,
ವಿಜಯದ ಕಾಂತಿಯಿಂದ ಥಳಥಳಿಸುವ
ಬಿಳಿಪು. ಕಣ್ಣು ಕೋರೈಸುವ ಬಿಳಿಪು.
ಬಿಳಿಪಿಗಿಂತ ಮಿಗಿಲಾದ ಬಿಳಿಪು.
ಅದುವೇ ಸ್ಕೋರ್! ಸ್ಕೋರ್ ಡಿಟರ್ಜೆಂಟ್
ಬಿಲ್ಲೆಯು ಕೊಳೆಯನ್ನು ಹೊರಹಾಕಿ ನಿಮ್ಮ
ಬಟ್ಟೆಗಳಿಗೆ ಅತ್ಯಂತ ಸುಂದರವಾದ
ಕಾಂತಿಯನ್ನು ನೀಡುವುದು. ಸ್ಕೋರ್
ನೊಡನೆ ಬಿಳೀ ಬಟ್ಟೆಗಳನ್ನು ಹೆಚ್ಚು
ಬಿಳಿಪಾಗಿ ಮಾಡಿ, ಬಣ್ಣದ ಬಟ್ಟೆಗಳನ್ನು
ಹೆಚ್ಚು ಶುಭ್ರ ಹಾಗೂ ಉಜ್ವಲಗೊಳಿಸಿ.
ವಿಜಯದ ಕಾಂತಿಯಿಂದ
ಥಳ ಥಳಿಸುವ ಬಿಳಿಪು
ಸ್ಕೋರ್
ನೀಲಿ ಡಿಟರ್ಜೆಂಟ್ ಬಿಲ್ಲೆ
ಕೇರಳ ಸ್ಟೇಟ್ ಡಿಟರ್ಜೆಂಟ್ಸ್ & ಕೆಮಿಕಲ್ಸ್ ಲಿಮಿಟೆಡ್
(ಒಂದು ಸರ್ಕಾರದ ಉದ್ಯಮ)
LATEST
Score
ವಿಜಯದ ಕಾಂತಿಯಿಂದ
ಥಳ ಥಳಿಸುವ ಬಿಳಿಪು!

ನಗೆ ಬುಗ್ಗೆ

ಮಗುವಿನೊಂದಿಗೆ ಡಾಕ್ಟರರ ಬಳಿ ಬಂದರು ಶ್ಯಾಮಯ್ಯ. ಮೊದಲು ಮಗುವನ್ನು ಪರೀಕ್ಷಿಸಿ ಔಷಧಿ ಬರೆದು ಕೊಟ್ಟ ಡಾಕ್ಟರರು ಶ್ಯಾಮಯ್ಯನವರನ್ನು ಪರೀಕ್ಷಿಸಿ, "ನಿಮಗೆ ಯಾವ ಔಷಧಿಯು ಅಗತ್ಯವೂ ಇಲ್ಲ. ನೀವು ದಿನಂಪ್ರತಿ ೫ ಮೈಲುಗಳಷ್ಟು ನಡೆದರೆ ಸಾಕು. ನಿಮ್ಮ ಖಾಯಿಲೆ ಗುಣವಾಗುತ್ತದೆ," ಎಂದರು.

ಒಂದು ವಾರದ ಬಳಿಕ ಡಾಕ್ಟರರಿಗೆ ಫೋನು ಬಂತು.

"ನಾನು ಶ್ಯಾಮಯ್ಯ ಮಾತನಾಡುತ್ತಿರುವುದು."

"ಒಳ್ಳೆಯದು. ಹೇಗಿದೆ ನಿಮ್ಮ ಆರೋಗ್ಯ?"

"ಈಗ ಪರವಾಗಿಲ್ಲ. ಸಂಪೂರ್ಣ ವಾಸಿಯಾಗಿದೆ."

"ಮತ್ತೆ ಆ ಮಗುವಿನದು?"

"ನನಗೆ ಗೊತ್ತಿಲ್ಲ."

"ಗೊತ್ತಿಲ್ಲ? ಅದೇನು?"

"ನೀವು ತಿಳಿಸಿದಂತೆ ದಿವಸಕ್ಕೆ ಐದೈದು ಮೈಲು ನಡೆದು ಒಂದು ವಾರದಲ್ಲಿ ಮನೆಯಿಂದ ಮುವತ್ತೈದು ಮೈಲು ದೂರ ಬಂದಿದ್ದೇನೆ!"

*

ತಂದೆ: ನೀನೊಬ್ಬ, ಶತ ದಡ್ಡ. ಹತ್ತರವರೆಗಿನ ಅಂಕಿಗಳನ್ನ ಬಿಟ್ಟರೆ ಬೇರೆ ಏನೂ ಗೊತ್ತಿಲ್ಲ. ಮುಂದೆ ಏನಾಗುತ್ತಿಯೋ ದೇವರಿಗೇ ಗೊತ್ತು.

ಮಗ: ಬಾಕ್ಸಿಂಗ್ ಪಂದ್ಯದ ರೆಫ್ರಿಯಾಗುತ್ತೇನೆ, ಅಪ್ಪಾ!

*

ಮೇಸ್ಟ್ರು: ಲೋ ರಾಮು, ನೀನು ಇಂಗ್ಲೀಷ್‌ನಲ್ಲಿ ತುಂಬಾ ಹಿಂದೆ. ಆದ ರಿಂದ ನಿನಗೆ ಈ ಪಾಠವನ್ನು ಹತ್ತು ಸಲ ಬರೆಯಲು ಹೇಳಿದ್ದೆ. ಆದರೆ ನೀನು ಏಳು ಸಲ ಮಾತ್ರ ಬರೆದಿರುವೆ. ಅದೇಕೆ?

ರಾಮು: ಸಾರ್ ನಾನು ಲೆಕ್ಕದಲ್ಲೂ ತುಂಬಾ ಹಿಂದೆ...!

*

ಖಾಸಗಿ ಸಂಸ್ಥೆಯೊಂದಕ್ಕೆ ಹೊಸದಾಗಿ ಆಯ್ಕೆಯಾಗಿದ್ದ ಟೈಪಿಸ್ಟ್‌ಗೆ ಬಾಸ್, "ನೋಡಿ, ನಮ್ಮ ಸಂಸ್ಥೆ ಒಂದು ಕುಟುಂಬದ ಹಾಗೆ. ಎಲ್ಲರೂ ಅನ್ಯೋನ್ಯವಾಗಿದ್ದುಕೊಂಡು ಕೆಲಸ ಮಾಡುತ್ತಾರೆ. ನೋಡಿ, ಇವರ ಹೆಸರು ರಾಮರಾಯ ಅಂತ. ನಾವೆಲ್ಲ ಇವರನ್ನು ಪ್ರೀತಿಯಿಂದ 'ರಾಮು' ಅನ್ನುತ್ತೇವೆ. ಇವರ ಹೆಸರು ಸುಬ್ರಹ್ಮಣ್ಯ ಭಟ್. ನಾವು ಕರೆಯುವುದು 'ಸುಬ್ಬು' ಎಂದು."

"ಓಹೊ ಹಾಗೋ. ನನ್ನ ಹೆಸರು ಜಯಮಾಲಾ ಎಂದು. ನನ್ನನ್ನು 'ಮಾಲಾ' ಎಂದು ಕರೆಯಿರಿ," ಮಧ್ಯದಲ್ಲೇ ಆಕೆ ನುಡಿದಳು.

ಕೂಡಲೇ ಬಾಸ್, "ಆಗಬಹುದು. ನನ್ನ ಹೆಸರು 'ಪಶುಪತಿ' ಎಂದು. ನನ್ನನ್ನು 'ಪತಿ' ಎಂದು ಕರೆಯಿರಿ," ಎಂದ. ಸುತ್ತಲಿದ್ದವರೆಲ್ಲಾ ಘೊಳ್ಳೆಂದು ನಕ್ಕುಬಿಟ್ಟರು.

"ಬೇಡ, ಮೊದಲಿನೆರಡು ಅಕ್ಷರಗಳಿಂದ್ಲೇ ಕರೀತೇನೆ" ಥಟ್ಟನೇ ಹೇಳಿದಳಾಕೆ.

ಸಂಗ್ರಹ: ಜಿ. ಎಸ್.

ಗಿರಾಕಿ: ನಿಮ್ಮಲ್ಲಿ ತೆಗೆದುಕೊಂಡ ವಸ್ತುಗಳು 'ಚೆನ್ನಾಗಿಲ್ಲ' ಅನ್ನಿಸಿದರೆ ಹಿಂದಿರುಗಿಸಬಹುದೆ?

ವರ್ತಕ: ಓಹೋ, ಧಾರಾಳವಾಗಿ.

ಗಿರಾಕಿ: ಹಾಗಾದರೆ ನಿನ್ನೆ ಒಯ್ದ ಈ ಕಾದಂಬರಿಯನ್ನು ವಾಪಸ್ಸು ತೆಗೆದುಕೊಳ್ಳಿ, ಅದರ ಮುಕ್ತಾಯ 'ಚೆನ್ನಾಗಿಲ್ಲ' ಅನ್ನಿಸಿತು.

*

"ಬಾರೋ ಇಲ್ಲಿ ಭಡವಾ... ನಿಮ್ಮ ಮೇಡಂ ಪತ್ರ ಬರೆದಿದಾರೆ ನನಗೆ..."

ಅಪ್ಪನ ಮಾತಿನ ನಡುವೆಯೇ ಬಾಯಿ ಹಾಕಿದ ಮಗ, "ಹೌದಾ! ನಾನೇನೂ ಅವ್ರಿಗೆ ಹೇಳೋದಿಲ್ಲ, ನೀನೂ ಬರೆ ಮತ್ತೆ."

ಬೆಂಗಳೂರಿಂದ ಬಂದ ಸ್ನೇಹಿತ ಹದಿನೈದು ದಿನ ಕಳೆದರೂ ವಾಪಸ್ ಹೋಗುವ ಸುದ್ದಿಯನ್ನೇ ಎತ್ತದಿದ್ದುದನ್ನು ನೋಡಿದ ಊತ, "ಏನಯ್ಯಾ ಇಷ್ಟು ದಿನವಾದ್ರೂ ನಿನ್ನ ಹೆಂಡ್ತಿ-ಮಕ್ಕಳನ್ನ ನೋಡಬೇಕೂಂತ ಅನ್ನಿಸಲ್ವೇನಯ್ಯಾ ನಿನಗೆ?," ಎಂದು ಕೇಳಿದ.

"ಹಾಂ! ಹೌದ್ಹೌದು. ನೆನಪಿಸಿದ್ದು ಒಳ್ಳೇದಾಯ್ತು. ಇವತ್ತೇ ಟೆಲಿಗ್ರಾಂ ಕೊಡ್ತೀನಿ ನೀವೂನೂ ಬಂದ್ ಬಿಡಿ ಅಂತ."

*

"'ವಚನಬದ್ಧತೆ ಮತ್ತು ಜಾಣ್ಮೆ'ಗಳಿಂದ ಮಾತ್ರ ಒಳ್ಳೇ ಬಿಜಿನೆಸ್‌ಮನ್ ಆಗಬಹುದು," ಖ್ಯಾತ ಉದ್ದಿಮೆದಾರನೊಬ್ಬ ಸಂದರ್ಶಕನಿಗೆ ಹೇಳುತ್ತಿದ್ದ, "ಒಂದು ಪಾರ್ಟಿಗೆ ಇಂಥ ದಿನ ಇಂಥದನ್ನು ಸರಬರಾಜು ಮಾಡ್ತೀನಿ ಅಂತ ವಚನವಿತ್ತರೆ, ನನಗೆ ಅದರಿಂದ ಹಾನಿಯಾದರು ಸರಿಯೇ ವಚನಕ್ಕೆ ಬದ್ಧವಾಗಿ ನಡೀಬೇಕು."

"ಆದ್ರೆ ಸರ್, ಹೀಗೇ ಮಾಡ್ತಾ ಹೋದ್ರೆ ಬರಿ ಹಾನಿ. ಜಾಣ್ಮೆಯ ಪ್ರಶ್ನೆ ಎಲ್ಬಂತು?"

"ಅಲ್ಲೇ ಇರೋದು ಜಾಣ್ಮೆ, ಅಂಥ ವಚನ ಕೊಡದಿದ್ದರಾಯಿತು."

*

ರಾಜಕಾರಣ ಶಾಸ್ತ್ರವನ್ನು ಕಲಿಸುತ್ತಿದ್ದ ಮಾಸ್ತರರು ವಿದ್ಯಾರ್ಥಿಯೊಬ್ಬನಿಗೆ ಕೇಳಿದರು, "ರಾಜ ಮತ್ತು ರಾಷ್ಟ್ರಾಧ್ಯಕ್ಷ ಇವರ ನಡುವಿನ ಅಂತರ ಏನು?"

"ಸಾರ್, ರಾಜನಾದವ ತನ್ನ ತಂದೆಯ ಮಗನೇ ಆಗಬೇಕಾಗುತ್ತದೆ. ರಾಷ್ಟ್ರಾಧ್ಯಕ್ಷನಿಗೆ ಹಾಗೇನಿಲ್ಲ."

*

ಶ್ರದ್ಧಾಂಜಲಿ

...ಶ್ರೀಯುತರು ಖ್ಯಾತ ದೇಶಪ್ರೇಮಿಗಳು. ದೇಶೋದ್ಧಾರಕ್ಕಾಗಿ ತಮ್ಮನ್ನು ತಾವೇ ಅರ್ಪಿಸಿಕೊಂಡವರು. ಅವರ ಅಕಾಲಿಕ ನಿಧನಕ್ಕೆ ನಾವು ವಿಷಾದಿಸುತ್ತೇವೆ. ದೇಶದ ಜನತೆ ಅವರನ್ನು ಅನುಸರಿಸುವ ಕಾಲ ಈಗ ಸನ್ನಿಹಿತವಾಗಿದೆ... —ಸಂ.

ಖ್ಯಾತ ಫುಟ್‌ಬಾಲ್ ಕೋಚ್ ಒಬ್ಬ ತನ್ನ ಪ್ರತಿಷ್ಠೆಯ ಬಗ್ಗೆ ಪತ್ರಕರ್ತರೆದುರು ಕೊಚ್ಚಿಕೊಳ್ಳುತ್ತಿದ್ದ. "ಬೇಕಾದ್ರೆ ಈ ಪತ್ರಗಳನ್ನು ನೋಡಿ," ಎಂದವನೇ ಒಂದು ಪತ್ರವನ್ನೋದತೊಡಗಿದ:

"ನಿಮ್ಮನ್ನು ಬಿಟ್ಟರೆ ನಿಮ್ಮಂಥ ಖ್ಯಾತ ಫುಟ್‌ಬಾಲ್ ಪಟು ನೀವೇ. ಖ್ಯಾತರಷ್ಟೇ ಅಲ್ಲ, ಜಾಣ ಹಾಗೂ ಸುಂದರ ವ್ಯಕ್ತಿ ಕೂಡ. ನಿಮ್ಮ ಕಾಲು ಅದೆಷ್ಟು ತರಬೇತುಗೊಂಡಿವೆಯೆಂದರೆ ರಾತ್ರಿ ನಿದ್ದೆಯಲ್ಲಿ ಕೂಡ ನೀವು ಚೆಂಡು ಒದೆಯುತ್ತಿರುತ್ತೀರಿ. ಆದರೆ ಅಲ್ಲಿ ನಾನಿರುತ್ತೇನೆ..." ಎನ್ನುತ್ತಿದ್ದಂತೆ ಫುಟ್‌ಬಾಲ್ ಪಟುವಿನ ಬಾಯಿ ತಂತಾನೇ ಮುಚ್ಚಿತು.

*

"ಯಾಕೆ? ನಿಮಗೆ ಪಸಂದಾಗ್ಲಿಲ್ವೆ ಈ ಕಾರು? ಇದರ ಬಗ್ಗೆ ಒಂದು ತಾಸಿನವರೆಗೂ ಹೇಳ್ತಾನೇ ಇದೀನಿ ಸಾರ್. ಚೆನ್ನಾಗಿದೆ ಕಾರು." — ಸೆಕೆಂಡ್ ಹ್ಯಾಂಡ್ ಕಾರಿನ ವ್ಯಾಪಾರಿ ಗಿರಾಕಿಗೆ ಹೇಳಿದ.

"ಹೌದಪ್ಪಾ, ಅದೆಲ್ಲ ನಿಜ. ಆದ್ರೆ ನೀನೆಷ್ಟು ಸರಾಗವಾಗಿ ಮಾತಾಡಿದೆಲ್ಲ ಅಷ್ಟು ಸರಾಗವಾಗಿ ಈ ಕಾರು ಓಡಬಹುದೇ ಅಂತ ಅನುಮಾನ."

ಆತ ಅಂಗಿಯೊಳಗಿಂದ ಮುತ್ತನ್ನು ಹೊರ ತೆಗೆದು ನೋಡಿದ. ಅವನಿಗೆ ಗುಂಡಿನೇಟಿನಿಂದ ತುಂಡರಿಸಿ ಹೋದ ತನ್ನ ಮುಗ್ಧ ಮಗುವಿನ ತಲೆ, ಹೆಂಡತಿಯ ಶೋಕಗ್ರಸ್ತ ಮುಖದ ಚಿತ್ರ ಕಂಡಂತಾಯಿತು. ಹೌದು, ಆ ಮುತ್ತು ಅವನ ಪಾಲಿಗೆ ಸಾವು-ಕೇಡಿನ, ಪಾಪ-ವಿನಾಶದ ಸಂಕೇತವಾಗಿತ್ತು.

ಒಂದು ಮುತ್ತಿನ ಕಥೆ

ಮೂಲ: ಸಾಮರ್‌ಸೆಟ್ ಮಾಮ್
ಅನುವಾದ: ಗೀತಾ ಮುರಲಿ

ಕೈನೋಗೆ ಎಚ್ಚರವಾದಾಗ ಇನ್ನೂ ನಸುಕಿನ ಜಾವ. ಆಕಾಶದಲ್ಲಿ ನಕ್ಷತ್ರಗಳಿನ್ನೂ ಮಿನುಗುತ್ತಿದ್ದು ಮೂಡಣದಲ್ಲಿ ಅರುಣೋದಯದ ಮುಂಬೆಳಕು ಮಾತ್ರ ಮೂಡಿತ್ತು. ಕೋಳಿಗಳು ಕೂಗಲು ಆರಂಭಿಸಿ ಕೆಲ ಹೊತ್ತಾಗಿ, ಗುಡಿಸಲಿನ ಹೊರಗೆ ಮರ-ಪೊದೆಗಳಲ್ಲಿ ಪಕ್ಷಿಗಳ ಅಸ್ಪಷ್ಟ ಕಲರವ ಕೇಳಿಬರುತ್ತಿತ್ತು.

ಕೈನೋ ಕಣ್ಣು ತೆರೆದು, ಮೊದಲು ಮಗು ಮಲಗಿದ ತೊಟ್ಟಿಲತ್ತ ದೃಷ್ಟಿ ಹಾಯಿಸಿದ. ಅನಂತರ ತನ್ನ ಪಕ್ಕದಲ್ಲಿ ಚಾಪೆಯ ಮೇಲೆ ಮಲಗಿರುವ ಹೆಂಡತಿ ಜುಆನಾಳತ್ತ ನೋಡಿದ. ತಿಳಿನೀಲಿಯ ನೀಲಿ ಹೊದಿಕೆ ಅವಳ ತುಂಬು ಎದೆಯ ಮೇಲೆ, ಮೂಗಿನವರೆಗೆ ಆವರಿಸಿತ್ತು. ಜುಆನಾಳ ಕಣ್ಣುಗಳೂ ತೆರೆದಿದ್ದವು. [illegible] ಕಪ್ಪು ಕಣ್ಣುಗಳು [illegible] ನಕ್ಷತ್ರದಂತಾಗ ತನ್ನನ್ನೇ [illegible] ಕಣ್ಣುಗಳು.

ಸಮುದ್ರ ತೀರದಲ್ಲಿ ಬೆಳಗಿನ ಅಲೆಗಳ ಸೌಮ್ಯ ಸದ್ದು ಕೇಳಿಸಿತು. ಕೈನೋ [illegible] ಕೊಂಡು ಆ ಮಧುರನಾದವನ್ನು ಆಲಿಸಿದ. ತಂಪು ಹವೆಯಿಂದ ದೂರವಿರಲು ತನ್ನ ಹೊದಿಕೆಯನ್ನು ಮೂಗಿನ ವರೆಗೆ ಎಳೆದುಕೊಂಡಿದ್ದ. ಆತನ ತನುಮನ ಈ ಸಮಯದ ಸುಖಶಾಂತಿಯಲ್ಲಿ ಲೀನವಾಗಿದ್ದಿತು.

ಜುಆನಾ ಮೆಲ್ಲನೆ ಎದ್ದು, ಮಗುವಿನ ತೊಟ್ಟಿಲ ಹತ್ತಿರ ಹೋಗಿ, ಅದೇ ಕಣ್ಣು ತೆರೆದ ಮಗುವಿನ ಮುಖದ ಮೇಲೆ ಬಾಗಿ ಅಕ್ಕರೆಯಿಂದ ಮಾತಾಡಿಸಿ ಮೃದುವಾಗಿ ತಟ್ಟಿದಳು. ಮಗು ಕಣ್ಣು ಮುಚ್ಚಿ ಮತ್ತೆ ನಿದ್ರಿಸಿತು.

ಕೈನೋ ಎದ್ದ. ತಲೆತುಂಬ ಕಂಬಳಿಯನ್ನು ಮುಸುಕು ಹಾಕಿಕೊಂಡು [illegible] ಹೊರಗೆ ಹೋಗಿ ನಿಂತ. ಪೂರ್ವದಿಗಂತ ರಾಗರಂಜಿತವಾಗಿತ್ತು. ಕ್ರಮೇಣ ಬೆಂಕಿಯ ಚೆಂಡಿನಂತೆ ಕೊಲ್ಲಿಯಿಂದ [illegible] ಈ ಮುಂಜಾನೆ [illegible] ಮನೋಹರವಾಗಿತು.

ಒಳಗೆ ಗುಡಿಸಲಿನಲ್ಲಿ ನಿತ್ಯಕ್ರಮದ ಶಬ್ದಗಳು ಕೇಳಿ ಬರುತ್ತಿದ್ದವು. ಜುಆನಾ ಒಲೆಗೆ ಇದ್ದಿಲು ಹಾಕಿ ಬೆಂಕಿ ಹೊತ್ತಿಸಿ, ಮುಸುಕಿನ ಜೋಳ ಕುಟ್ಟಿ, ರೊಟ್ಟಿ ತಟ್ಟುತ್ತಿದ್ದಳು. ಹಂಚಿನ ಮೇಲೆ ಬೇಯುವಾಗ ಹಿಟ್ಟಿನ ಘಮಘಮ ಮೂಗಿಗಡರಿತು. ಪಕ್ಕದ ಗುಡಿಸಲುಗಳಿಂದಲೂ ಹೊಗೆ ಕಾಣಿಸಿತು, ಪಾತ್ರೆಯ ಶಬ್ದ ಕೇಳಿ ರೊಟ್ಟಿ ಬೇಯಿಸುವ ವಾಸನೆ ಬರುತ್ತಿತ್ತು. ನಂತರ ಜುಆನಾ ಮಗುವನ್ನು ತೊಟ್ಟಿಲಿನಿಂದ ಹೊರಗೆ ಎತ್ತಿಕೊಂಡು, ಮೆಲ್ಲನೆ ಹಾಡು ಹೇಳುತ್ತ ಅವನ ಮುಖ, ಮೈ ಕೈಯೆಲ್ಲ ತೊಳೆದು ಹಾಲುಣಿಸಿ, ಮತ್ತೆ ತೊಟ್ಟಿಲಲ್ಲಿ ಮಲಗಿಸುತ್ತಿದ್ದಳು.

ಕೈನೋ ಸದೃಢ ಯುವಕ. ಅವನ ಕಂದು ಬಣ್ಣದ ಮುಖದಲ್ಲಿ ತೀಕ್ಷ್ಣ ಕಾವುಳ್ಳ ಕಣ್ಣುಗಳು, ಚಿಕ್ಕ ಒರಟು ಮೀಸೆ, ಹಣೆಯ ವರೆಗೆ ದಟ್ಟ ಕಪ್ಪು ತಲೆಗೂದಲು. ಸೂರ್ಯ ಕೆಂಪನ್ನು ಕಳೆದುಕೊಳ್ಳತೊಡಗಿದಂತೆ ಕೈನೋ ಕಂಬಳಿ ತೆಗೆಯುತ್ತ, ಮನೆಯೊಳಗೆ ಹೋದ. ಒಲೆಯ ಮುಂದೆ ಕುಳಿತು, ಬಿಸಿ ಬಿಸಿ ರೊಟ್ಟಿ ತಿಂದು ಕಷಾಯ ಕುಡಿದು, ಬೆಳಗಿನ ಉಪಹಾರ ಮುಗಿಸಿದ. ಅಷ್ಟರಲ್ಲಿ ಜುಆನಾಳೂ ಬಂದು ತನ್ನ ಉಪಾಹಾರ ತಿನ್ನತೊಡಗಿದಳು. ಕೈನೋ ತೃಪ್ತಿಯ ನಿಟ್ಟುಸಿರೆಳೆದ. ಅದೇ ಅವಳೊಡನೆ ಅವನ ಸಂಭಾಷಣೆಯಂತಿತ್ತು.

ಗುಡಿಸಲಿನ ಬಾಗಿಲು ಸಂದಿನಿಂದ ಇಣುಕಿ ನೋಡುತ್ತಿದ್ದ ಸೂರ್ಯರಶ್ಮಿಯೊಂದು ಮಗುವಿನ ತೊಟ್ಟಿಲ ಹಗ್ಗವನ್ನು ನೇರವಾಗಿ ಬೆಳಗಿಸಿತು. ಹಗ್ಗದ ಸೂಕ್ಷ್ಮ ಚಲನೆ ತಂದೆ ತಾಯಿಗಳ ಗಮನ ಸೆಳೆದು, ಇಬ್ಬರೂ [illegible] ರಾದರು. ಹಗ್ಗದ ಮೇಲೆ, ಒಂದು ಚೇಳು ತೊಟ್ಟಿಲತ್ತ ಮೆಲ್ಲನೆ ಸಾಗಿತ್ತು!



ಜುಆನಾ ಉಸಿರು ಕಟ್ಟಿ, ಹಳೆಯ ಮಂತ್ರವೊಂದನ್ನು ಉಚ್ಚರಿಸುತ್ತ ಸುಮ್ಮನೆ ನಿಂತುಬಿಟ್ಟಳು. ಕೈನೋ ಮೆಲ್ಲನೆ ಮುಂದೆ ಹೋಗಿ ಚೇಳನ್ನೇ ದಿಟ್ಟಿಸುತ್ತ ಜಾಗರೂಕತೆಯಿಂದ ಕೈ ಎತ್ತಿದ. ನಿಮಿರಿನಿಂತ ಚೇಳಿನ ವಕ್ರ ಕೊಂಡಿ ಬಿಸಿಲಿನಲ್ಲಿ ಹೊಳೆಯುತ್ತಿತ್ತು. ಆ ಕ್ಷಣ ಮಗು ನಗುತ್ತ ಕೈ ಕಾಲು ಅಪ್ಪಳಿಸಿತು. ಹಗ್ಗ ಅಲುಗಾಡಿತು. ಕೆಳಗೆ ಬೀಳುವ ಚೇಳನ್ನು ಕೈನೋ ಹಿಡಿಯುವಷ್ಟರಲ್ಲಿಯೇ ಅದು ಮಗುವಿನ ಭುಜದ ಮೇಲೇ ಬಿದ್ದಿತು. ಅಲ್ಲಿಂದ ಕೈನೋ ಅದನ್ನು ಕಿತ್ತೊಗೆದು ಸಿಟ್ಟಿನಿಂದ, ಜಜ್ಜಿ ಕೊಂದುಬಿಟ್ಟ. ಆದರೆ ಅಷ್ಟರಲ್ಲೇ ಚೇಳಿನ ಕೊಂಡಿ ಮಗುವಿನ ಭುಜ ಕಚ್ಚಿತ್ತು.

ನೋವಿನಿಂದ ಚೀರುತ್ತಿರುವ ಮಗುವನ್ನು ಜುಆನಾ ತೊಟ್ಟಿಲಿನಿಂದ ಹೊರಗೆತ್ತಿ, ಗಾಯವಾದ ಜಾಗದಲ್ಲಿ ತನ್ನ ಬಾಯಿಟ್ಟು, ವಿಷ ಹೀರಲು ಪ್ರಯತ್ನಿಸಿದಳು. ಚೇಳು ಕಚ್ಚಿದ ಜಾಗ ಆಗಲೇ ಕೆಂಪಾಗಿ, ಊದಿಕೊಂಡಿತ್ತು. ಮಗುವಿನ ಕಿರಚಾಟ ಕೇಳಿ ನೆರೆಹೊರೆಯವರೆಲ್ಲ ಹಾಜರಾದರು. ಚೇಳಿನ ಕಡಿತ ಅಪಾಯಕರ, ಮಗುವಿಗೆ ಪ್ರಾಣಾಂತಕವೂ ಆಗಬಹುದೆಂದು ಎಲ್ಲರೂ ಅಂದುಕೊಳ್ಳತೊಡಗಿದರು.

ಜುಆನಾ ಬಹಳೇ ಗಟ್ಟಿಗಳೆಂದು ಕೈನೋನಿಗೆ ಗೊತ್ತು. ಆದರೆ ಆಕೆ, "ಡಾಕ್ಟರರನ್ನು ಕರೆದುಕೊಂಡು ಬಾ" ಎಂದಾಗ ಅವನಿಗೆ ವಿಚಿತ್ರವೆನಿಸಿತು.

ಜುಆನಾ ಡಾಕ್ಟರನನ್ನು ಕರೆಸುತ್ತಾಳೆ ಎಂದು ನೆರೆಹೊರೆಯವರಲ್ಲಿಯೂ ಪಿಸುಮಾತು ನಡೆಯಿತು. ಆದರೆ ಆ ಡಾಕ್ಟರ್ ಈ ಗುಡಿಸಲಿಗೆ ಬರಬಹುದೇ! ಆತ ನಗರದಲ್ಲಿನ ಕಲ್ಲು, ಸಿಮೆಂಟಿನ ಮನೆಗಳಲ್ಲಿರುವ ಶ್ರೀಮಂತ ಜನರನ್ನಷ್ಟೇ ಉಪಚರಿಸುವವನು. ಈ ಗುಡಿಸಲುಗಳಿಗೆ ಎಂದೂ ಬಂದವನಲ್ಲ. "ಡಾಕ್ಟರ್ ಇಲ್ಲಿಗೆ ಬರುವದಿಲ್ಲ," ಎಂದು ಕೈನೋ ಹೆಂಡತಿಗೆ ಹೇಳಿದ.

"ಹಾಗಾದರೆ ನಾವೇ ಅಲ್ಲಿಗೆ ಹೋಗುವಾ," ಎಂದಳು. ತಲೆಯ ಮೇಲೆ ಶಾಲು ಹೊದ್ದು ನರಳುತ್ತಿರುವ ಮಗುವನ್ನು ತನ್ನ ಬೆನ್ನ ಹಿಂದೆ ಜೋಳಿಗೆಯಲ್ಲಿ ಕೂರಿಸಿ, ಹೊರಗೆ ನಡೆದಳು. ಕೈನೋ ಅವಳ ಬೆನ್ನು ಹತ್ತಿದ. ಅವರ ಹಿಂದೆ ನೆರೆಹೊರೆಯವರೆಲ್ಲ ಹೊರಟರು.

ಎಲ್ಲರೂ ನಗರದ ದಾರಿ ಹಿಡಿದರು. ಗುಡಿಸಲುಗಳ ಮೇರೆ ದಾಟಿ, ಕಲ್ಲಿನ ಮನೆ, ಸಿಮೆಂಟಿನ ಬಂಗ್ಲೆಗಳ ಸರಹದ್ದನ್ನು ಪ್ರವೇಶಿಸಿದರು. ಪೇಟೆಯ ಬೀದಿಯಲ್ಲಿ ಹಾಯುವಾಗ, ಅನೇಕ ಸೋಮಾರಿಗಳೂ ಭಿಕ್ಷುಕರೂ ಅವರನ್ನು ಕೂಡಿಕೊಂಡರು. ಈ ಮೆರವಣಿಗೆ ಕೊನೆಗೆ ಡಾಕ್ಟರನ ಮನೆಯ ವಠಾರದ ಹೊರಬಾಗಿಲಿನಲ್ಲಿ ನಿಂತಿತು.

ಅಲ್ಲಿ ಕೈನೋ ಒಂದು ನಿಮಿಷ ನಿಂತು ಅನುಮಾನಿಸಿದ. ಈ ಡಾಕ್ಟರು ತನ್ನ ಜನಾಂಗದವನಲ್ಲ. ಆತ ವಿದೇಶೀಯ ಬಿಳಿಯ. ನೂರಾರು ವರ್ಷಗಳಿಂದ ಇಲ್ಲಿಯ ಸ್ಥಳೀಯರನ್ನು ಹೊಡೆದು ಬೆದರಿಸಿ, ಸುಲಿಗೆಮಾಡಿ, ಕಡೆಗಣಿಸಿದ ಹೊರನಾಡಿನವ. ಈ ಪರದೇಶದ ಜನರನ್ನು ಕಂಡರೆ ಕೈನೋನಿಗೆ ಕೋಪ. ಭಯ. ಆದರೂ ಧೈರ್ಯಮಾಡಿ ಕೊನೆಗೆ ಆ ಮುಚ್ಚಿದ ಬಾಗಿಲನ್ನು ಜೋರಾಗಿ ಬಡಿದ.

ಬಾಗಿಲು ತುಸು ತೆರೆದು ದೇಶೀಯ ಕಾವಲುಗಾರನ ಮುಖ ಕಾಣಿಸಿತು. "ತೊಟ್ಟಿಲು ಮಗುವಿಗೆ ಚೇಳಿನ ವಿಷಬಾಧೆ" ಕೈನೋ ಸಾಂಪ್ರದಾಯಿಕ ಭಾಷೆಯಲ್ಲಿ ತಿಳಿಸಿದ. "ವೈದ್ಯನ ಕುಶಲ ಉಪಚಾರ ಅವಶ್ಯವಿದೆ."

"ತಿಳಿಸುತ್ತೇನೆ," ಎಂದು ಸೇವಕ ಬಾಗಿಲು ಮುಚ್ಚಿ ಒಳಗೆ ಹೋದ.

ದೊಡ್ಡ ಬಂಗಲೆಯ ವಿಶಾಲವಾದ, ಸಿಂಗರಿಸಿದ ಕೊಠಡಿಯಲ್ಲಿ ಕುಳಿತುಕೊಂಡು ಆ ಸಿರಿವಂತ ಡಾಕ್ಟರು ಆಡಂಬರದಿಂದ ಬೆಳ್ಳಿ ತಟ್ಟೆ, ಪಿಂಗಾಣಿ ಪಾತ್ರೆಗಳಲ್ಲಿ ಬೆಳಗಿನ ಉಪಹಾರ ಸೇವಿಸುತ್ತಲಿದ್ದ. ಅವನ ದೃಢಕಾಯದ ಮೇಲೆ ಕೆಂಪು ಚಿತ್ತಾರದ ರೇಶಿಮೆಯ ನಿಲುವಂಗಿ ಶೋಭಿಸುತ್ತಿತ್ತು. ಕಿರಿದಾದ ಸಂಕುಚಿತ ಕಣ್ಣುಗಳು, ಕೊಬ್ಬಿದ ಕುತ್ತಿಗೆ ಉಬ್ಬಿದ ಹೊಟ್ಟೆ. ಬಾಗಿಲಲ್ಲಿ ಸುಮ್ಮನೆ ಬಂದು ನಿಂತ ಸೇವಕನನ್ನು ನೋಡಿ, "ಏನು?" ಎಂದು ಗಡುಸಾದ ಧ್ವನಿಯಲ್ಲಿ ಹೇಳಿದ.

"ಸ್ವಾಮಿ, ದೇಶೀಯನ ಮಗುವಿಗೆ ಚೇಳು ಕಚ್ಚಿದೆ." ಸೇವಕ ಹೆದರುತ್ತಲೇ ಹೇಳಿದ. "ಈ ದೇಶೀಯರಿಗಾದ ಕ್ರಿಮಿಕೀಟ ಕಡಿತಗಳನ್ನು ಉಪಚರಿಸುವದಕ್ಕಿಂತ ನನಗಿನ್ನೇನು ಉದ್ಯೋಗವಿಲ್ಲವೇ? ನಾನು ಡಾಕ್ಟರ್ ಪಶುವೈದ್ಯನಲ್ಲ."

"ಹೌದು ಸ್ವಾಮಿ," ಸೇವಕ ಒಪ್ಪಿದ.

"ಅವನ ಹತ್ತಿರ ಹಣವಿದೆಯೇ…ಹೋಗು ಹಣವಿದ್ದರೆ ಬಂದು ಹೇಳು."

ಹೊರಬಾಗಿಲು ಮತ್ತೆ ತೆರೆದು ಸೇವಕ ಕೇಳಿದ: "ಔಷಧಿಗಾಗಿ ನಿನ್ನ ಹತ್ತಿರ ಹಣವಿದೆಯೇ?"

ಕೈನೋ ತನ್ನ ಕಂಬಳಿಯಲ್ಲಿ ಕೈಹಾಕಿ ಹುಡುಕಿ ಒಂದು ಚಿಕ್ಕ ಹಳೆಯ ಪೊಟ್ಟಣವನ್ನು ಹೊರತೆಗೆದ. ಅದರ ಮಡಿಕೆಗಳನ್ನು ಬಿಚ್ಚಿದಾಗ ಕಡೆಗೆ ಕೆಲವು ಚಿಕ್ಕ ಬೀಜದಂತಿದ್ದ ಮುತ್ತುಗಳು ಕಂಡವು. ಸೇವಕ ಒಳಗೆ ಹೋಗಿ ಮತ್ತೆ ಬೇಗನೆ ಬಂದು, "ಡಾಕ್ಟರ್ ಮನೆಯಲಿಲ್ಲ. ಒಂದು ಮಹತ್ವದ ರೋಗದ ಉಪಚಾರಕ್ಕಾಗಿ ಕರೆ ಬಂದಿತ್ತು." ಎಂದು ತಿಳಿಸಿ ಬಾಗಿಲು ಮುಚ್ಚಿ, ಒಳಗಿನ ಅಗಳಿ ಎಳೆದ.

ಇಡೀ ಜನಸಮುದಾಯಕ್ಕೆ ಅವಮಾನವಾದಂತಾಯಿತು. ಕೈನೋ ಬಹಳ ಹೊತ್ತು ಜುಆನಾಳೊಡನೆ ಅಲ್ಲೆ ನಿಂತಿದ್ದ. ಕೊನೆಗೆ ಒಮ್ಮೆಲೆ ಕ್ರೋಧಾವೇಶದಿಂದ ಆ ಮುಚ್ಚಿದ ಬಾಗಿಲಸಳಿಗಳನ್ನು ತನ್ನ ಮುಷ್ಟಿಯಿಂದ ಗಟ್ಟಿಯಾಗಿ ಗುದ್ದಿದ. ಅವನ ಬೆರಳುಗಳು ಕಿತ್ತಿ ಕೈಯೊಡನೆ ರಕ್ತ ಹರಿಯಿತು.

*

ಕೈನೋ ಮತ್ತು ಜುಆನಾ ಮೆಲ್ಲನೆ ತಿರುಗಿ ನಡೆದುಕೊಂಡು ಸಮುದ್ರದಂಡೆಯಲ್ಲಿರುವ ತಮ್ಮ ಚಿಕ್ಕ ದೋಣಿಯ ಹತ್ತಿರ ಬಂದರು. ಈ ಹಳೆಯ ದೋಣಿ ಕೈನೋನ ಪಿತ್ರಾರ್ಜಿತ ಆಸ್ತಿ; ಇದೊಂದೇ ಅವನ ಮಹತ್ವದ ಸ್ವಂತ ವಸ್ತು; ಅವನ ಸಕಲ ಸಂಪತ್ತು. ಮೀನುಗಾರನಿಗೆ ದೋಣಿಯೆ ಜೀವನೋಪಾಯ ಅದರಲ್ಲಿ ಕುಳಿತುಕೊಂಡು ಸಮುದ್ರದಲ್ಲಿನ ಆಹಾರ ದೊರಕಿಸಬಹುದು; ಸಾಗರ ತಳಕ್ಕೆ ಧುಮುಕಿ ಮುತ್ತಿನ ನಿಧಿಗಳಾದ ಸಿಂಪುಗಳನ್ನು ಶೋಧಿಸಬಹುದು.

ಕೈನೋ ತನ್ನ ದೋಣಿಯನ್ನೊಮ್ಮೆ ಪ್ರೀತಿಯಿಂದ ನೇವರಿಸಿದ. ಜುಆನಾ ಮಗುವನ್ನು ದೋಣಿಯಲ್ಲಿ ಮಲಗಿಸಿ, ನೀರಿನಲ್ಲಿ ತುಸುದೂರ ಈಜುತ್ತ ಹೋಗಿ ಸ್ವಲ್ಪ ಸಮುದ್ರ ಸೊಪ್ಪನ್ನು ತಂದು ಅದರ ತಂಪು ಕಟ್ಟನ್ನು ಮಗುವಿನ ಗಾಯದ ಮೇಲೆ ಲೇಪಿಸಿದಳು. ಇದೇ ಉಪಾಯ ಡಾಕ್ಟರನ ಔಷಧಿಗಿಂತ ಪರಿಣಾಮಕಾರಿಯಾದದ್ದು; ಆದರೆ ಪ್ರಕೃತಿ. ಸರಳವಾದದ್ದೆಂದು ಅವಳಿಗೆ ಮಹತ್ವವೆನಿಸಲಿಲ್ಲ. ಅಗಲೇ ಮಗುವಿಗೆ ಗುಣವಾಗುತ್ತಲಿತ್ತು. ದೋಣಿಯಲ್ಲಿ ಕುಳಿತ ಕೈನೋ ಹುಟ್ಟು ಹಾಕಿದ. ತುಸು ದೂರ ಹೋದ ಮೇಲೆ ಕಡಲಿನಲ್ಲಿ ತಳಕ್ಕಿರುವ ಕಪ್ಪೆಚಿಪ್ಪುಗಳ ರಾಶಿಗಳು ಕಾಣಿಸಹತ್ತಿದವು. ಈ ಸಿಂಪಿಗಳಲ್ಲಿ ಅಡಗಿಕೊಂಡಿರುವ ಮುತ್ತುಗಳು ನಿಸರ್ಗದ ಚಮತ್ಕಾರಿಕ ಸೃಷ್ಟಿಯೇ ಸರಿ. ಕೆಲವೊಮ್ಮೆ ಕಪ್ಪೆಚಿಪ್ಪಿನಲ್ಲಿ ಮರಳುಕಣ ಹೊಕ್ಕು ಸಿಂಪಿಹುಳದ ಮಾಂಸಪಿಂಡಕ್ಕೆ ಬಾಧಿಸತೊಡಗಿದಾಗ ಸ್ವರಕ್ಷಣೆಗಾಗಿ ಆ ಪರಕೀಯಾಣುವಿನ ಸುತ್ತಲೂ ಮೆದುವಾದ ದ್ರವಲೇಪನದ ಫಲವೇ ಈ ಅಮೂಲ್ಯ ವಸ್ತು- ಮುತ್ತು. ಮುತ್ತುಗಳು ಲಭಿಸುವದು ಬಲು ಅಪರೂಪ. ಒಂದೊಂದು ಮುತ್ತು ಕಾಣುವದೂ ದೈವಯೋಗ, ದೇವರ ಕೃಪೆಯೇ ಅನ್ನಬಹುದು.

ಕೈನೋ ಬಟ್ಟೆಗಳನ್ನು ಕಳಚಿಟ್ಟು ಒಂದು ಕೈಯಲ್ಲಿ ಬುಟ್ಟಿ. ಇನ್ನೊಂದು ಕೈಯಲ್ಲಿ ಹಗ್ಗಕ್ಕೆ ಕಟ್ಟಿದ ಬಂಡೆಗಲ್ಲು ಹಿಡಿದುಕೊಂಡು ನೀರಿನಲ್ಲಿ ಧುಮುಕಿ ಮುಳುಗಿದ. ಮರಳಿನಲ್ಲಿ ಕಾಲೂರಿ ನಿಂತು, ಬೇಗನೆ ಸಿಂಪಿಗಳನ್ನು ಆರಿಸಿ ಬುಟ್ಟಿಯಲ್ಲಿ ತುಂಬಿದ. ಇಂದು ಮುತ್ತು ಸಿಗಲೆಂದು ಕೈನೋ ಜುಆನಾ ಇಬ್ಬರೂ ದೇವರಿಗೆ ಬೇಡಿಕೊಳ್ಳುತ್ತಲಿದ್ದರು. ತಮ್ಮ ಮಗುವನ್ನು ಗುಣಪಡಿಸುವ ಡಾಕ್ಟರಿಗೆ ದುಡ್ಡು ಕೊಡುವದಕ್ಕಾಗಿ ಅವರಿಗಿಂದು ಒಳ್ಳೇ ಮುತ್ತುಗಳು ಅವಶ್ಯವಾಗಿ ಸಿಗಲೇ ಬೇಕಿತ್ತು.

ಅಷ್ಟರಲ್ಲಿ ಕೈನೋ ಅರ್ಧ ತೆರೆದ ಒಂದು ದೊಡ್ಡ ಸಿಂಪನ್ನು ಕಂಡ. ಒಳಗೆ ಮಿಣುಕಿನ ದರ್ಶನವಾದೊಡನೆಯೇ ಕ್ಷಣಾರ್ಧದಲ್ಲಿ ಕಪ್ಪೆಚಿಪ್ಪಿನ ಬಾಯಿ ಮುಚ್ಚಿಬಿಟ್ಟಿತು. ಲಗುಬಗೆಯಿಂದ ಅದನ್ನು ಹಿಡಿದುಕೊಂಡು ಬುಟ್ಟಿಯಲ್ಲಿಟ್ಟು ನೀರಿನ ಮೇಲೇರಿ ಒಂದು ದೋಣಿ ಹತ್ತಿದ. ಅವನ ಕಣ್ಣುಗಳು ಸಂಭ್ರಮದಿಂದ ಹೊಳೆಯುತ್ತಿದ್ದವು. ಎದೆ ವೇಗದಿಂದ ಬಡಿದುಕೊಳ್ಳುತ್ತಿತ್ತು. ಅವನ ಭಾವೋದ್ವೇಗ ಅರ್ಥ ಮಾಡಿಕೊಂಡ ಜುಆನಾ ಉತ್ತೇಜಿತಳಾದಳು.

ಕೈನೋ ದೋಣಿಯಲ್ಲಿ ಕುಳಿತು ಆ ಕಪ್ಪೆಚಿಪ್ಪನ್ನು ಎತ್ತಿಕೊಂಡ. ಚಾಕುವಿನಿಂದ ಅದರ ಬಾಯಿ


ಸೀಳಿದಾಗ ಒಳಗೆ ಕಂಪಿಸುವ ಮಾಂಸದ ತಿರುಳಿನಲ್ಲಿ ಆ ಮುತ್ತು ಕಂಡಿತು; ಸಮುದ್ರದ ಹಕ್ಕಿಯ ಮೊಟ್ಟೆಯಷ್ಟು ದೊಡ್ಡ ಮುತ್ತು; ಬೆಳ್ಳಿಯಂತೆ ಬೆಳಗುವ ಮುತ್ತು: ಪೂರ್ಣಿಮೆಯ ಚಂದ್ರನಂಥ ಪರಿಪೂರ್ಣ ಮುತ್ತು; ಸೃಷ್ಟಿಯಲ್ಲಿಯೇ ಶ್ರೇಷ್ಠ ಮುತ್ತು.

ಜುಆನಾ ಉಸಿರೆಳೆದುಕೊಂಡು ಬಾಯಿ ಮೇಲೆ ಕೈಯಿಟ್ಟುಕೊಂಡಳು. ಕೈನೋ ಬೆರಗುಗೊಂಡು ಅಂಗೈಯಲ್ಲಿದ್ದ ಮುತ್ತನ್ನು ತಿರುತಿರುಗಿಸಿ ನೋಡಿದ. ಇಬ್ಬರೂ ನೆಟ್ಟ ದೃಷ್ಟಿಯಿಂದ ಮುತ್ತನ್ನೇ ದಿಟ್ಟಿಸಿ ನೋಡಿದರು. ಬಳಿಕ ಕೈನೋ ಮುತ್ತನ್ನು ಮುಷ್ಟಿಯಲ್ಲಿ ಮುಚ್ಚಿ ಹಿಡಿದು ಒಮ್ಮೆಲೆ ಭಾವೋದ್ರೇಕಗೊಂಡ. ಗೋಣು ಹಿಂದಕ್ಕೆ ಚೆಲ್ಲಿ ಜೋರಾಗಿ ಅರಚಿದ. ಅವನ ಕಣ್ಣು ಬೆಳ್ಳಗಾಗಿ ದೇಹವೆಲ್ಲ ಮರಗಟ್ಟಿದಂತಾಯಿತು. ಅವನ ಚೀತ್ಕಾರ ಕೇಳಿ ವಿಸ್ಮಯಗೊಂಡ ಉಳಿದೆಲ್ಲ ದೋಣಿಯಲ್ಲಿದ್ದ ಮೀನುಗಾರರು ಅವಸರದಿಂದ ಹುಟ್ಟು ಹಾಕುತ್ತ ಅವನತ್ತ ಧಾವಿಸಿದರು.

ಮಿಂಚಿನ ವೇಗದಿಂದ ಊರ ತುಂಬೆಲ್ಲ ಸುದ್ದಿ ಹಬ್ಬಿತು. ಕೈನೋ ಜುಆನಾ ತಮ್ಮ ಗುಡಿಸಲಿಗೆ ತಿರುಗಿ ಬರುವ ಮುಂಚೆಯೇ ಎಲ್ಲರ ಕಿವಿಗೂ ಮುಟ್ಟಿತು. ಕೈನೋಗೆ ಒಂದು ಅಮೂಲ್ಯ ಮುತ್ತು ದೊರಕಿದೆಯೆಂಬ ವಾರ್ತೆಯಿಂದ ಪ್ರತಿಯೊಂದು ಹೃದಯವೂ ಆವೇಗದಿಂದ ಮಿಡಿಯುತ್ತಿತ್ತು.

ಗುಡಿಸಲುಗಳ ಮೇರೆ ದಾಟಿ ಅಬ್ಬರಿಸುವ ಸಮುದ್ರದ ತೆರೆಯಂತೆ ನಗರವನ್ನೂ ತಲುಪಿತು. ಈ ಸುದ್ದಿ ಕೇಳಿದ ಭಿಕ್ಷುಕರು ಸಂತೋಷಪಟ್ಟರು. ಯಾಕೆಂದರೆ ಆಕಸ್ಮಿಕ ಭಾಗ್ಯ ಪಡೆದ ಬಡವನು ಒಳ್ಳೇ ದಾನಶೂರನೆಂದು ಬಲ್ಲರು. ಅಂಗಡಿಗಳಲ್ಲಿ ಕುಳಿತುಕೊಂಡು ಮುತ್ತಿನ ವ್ಯಾಪಾರಿಗಳು ಮನದಲ್ಲಿಯೇ ಮುತ್ತಿನ ಬೆಲೆ ಕಟ್ಟುತ್ತ ತಮಗಾಗಬಹುದಾದ ಲಾಭದ ಎಣಿಕೆ ಹಾಕುತ್ತಲಿದ್ದರು.

ಶ್ರೀಮಂತ ರೋಗಿಯ ಮನೆಯಲ್ಲಿದ್ದ ಆ ಡಾಕ್ಟರನ ಕಿವಿಗಳೂ ನೆಟ್ಟಗಾದವು. ಕೈನೋ ಯಾರೆಂದು ತಿಳಿದೊಡನೆ "ಓಹ್ ಆ ದೇಶೀಯ



ನನಗೆ ಗೊತ್ತು! ಚೇಳಿನ ವಿಷಬಾಧೆಯಾದ ಆತನ ಮಗುವಿಗೆ ನಾನೇ ಉಪಚರಿಸುತ್ತಿರುವದು ?" ಎಂದು ಗಂಭೀರವಾಗಿ ಗೋಣು ಹಾಕಿದ.

ಕೈನೋ ಕುರಿತು ಎಲ್ಲರಲ್ಲಿಯೂ ಆಸಕ್ತಿ ಹೆಚ್ಚಾಯಿತು. ಅವನಿಗೆ ದೊರಕಿಪ್ಪ ಆ ಅಪೂರ್ವ ಮುತ್ತು ಎಲ್ಲರ ಕುತೂಹಲವನ್ನು ಕೆರಳಿಸಿತ್ತು. ಒಮ್ಮಿಂದೊಮ್ಮೆಲೆ ಎಲ್ಲರೂ ಅವನ ಬಂಧುಬಳಗದವರಾದರು, ಹಿತೈಷಿಗಳಾದರು. ಅವನ ದ್ವೇಷಿಗಳು ಬದ್ಧ ವೈರಿಗಳೂ ಆದರು.

ಆದರೆ ಕೈನೋ ಜುಆನಾರಿಗೆ ಇದಾವುದರಮೂ ಅರಿವಿಲ್ಲ. ತಮ್ಮ ಸಂತೋಷದಲ್ಲಿ ಮೈಮರೆತು ಉಳಿದೆಲ್ಲರೂ ತಮ್ಮ ಸಂಭ್ರಮದಲ್ಲಿ ಸಹಭಾಗಿಗಳಾಗಿದ್ದಾರೆಂದು ಭಾವಿಸಿದ್ದರು. ಮಧ್ಯಾಹ್ನ ಸೂರ್ಯ ಪಶ್ಚಿಮದತ್ತ ಸಾಗಿರುವಾಗ ಕೈನೋ ಹೆಂಡತಿಯೊಡನೆ ಗುಡಿಸಲಿನಲ್ಲಿ ಕುಳಿತುಕೊಂಡಿದ್ದ. ಅವನ ಅಂಗೈಯಲ್ಲಿ ಆ ಮುತ್ತು ಕಂಗೊಳಿಸುತ್ತಿತ್ತು. ನೆರೆಹೊರೆಯವರೆಲ್ಲ ಅವನ ಮನೆಯಲ್ಲಿ ಕೂಡಿಕೊಂಡು ಮುತ್ತನ್ನೇ ಬೆರಗುಗಣ್ಣಿನಿಂದ ನೋಡುತ್ತಿದ್ದರು.

ಕೈನೋ ಅಂಗೈಯಲ್ಲಿ ಮಿನುಗುತ್ತಿರುವ ಮುತ್ತನ್ನೇ ದಿಟ್ಟಿಸುತ್ತ ಅನೇಕ ಸವಿಗನಸುಗಳನ್ನು ಕಂಡ. ತನ್ನ ಭಾಗ್ಯದ ಬಾಗಿಲು ತೆರೆದು ತನ್ನ ಹೆಂಡತಿ, ಮಗ ಮತ್ತು ತಾನು ಮೂವರಿಗೂ ಅಚ್ಚುಕಟ್ಟಾದ ಹೊಸ ಬಟ್ಟೆಬರೆಗಳು! ತನ್ನ ಕೈಯಲ್ಲಿ ಹೊಸ ಭರ್ಚಿ ಮತ್ತು ಬಹಳ ದಿನಗಳಿಂದ ಬಯಸಿದ ವಿದೇಶಿ ಬಂದೂಕು! ತನ್ನ ಮಗ ಕೊಯೊಟಿಟೋ ಠೀವಿಯಿಂದ ಶಾಲೆಗೆ ಹೋಗುತ್ತಿರುವುದು. ಓದು ಬರಹ ಕಲಿತು ಬುದ್ಧಿವಂತನಾಗಿ ನಗರದ ಆಫೀಸಿನಲ್ಲಿ ಕುಳಿತು ದೊಡ್ಡ ಹುದ್ದೆಯ ಸ್ಥಾನದಲ್ಲಿರುವ ಭವ್ಯ ದೃಶ್ಯವನ್ನೂ ಕಂಡ. ತನ್ನ ಸುಖಸ್ವಪ್ನಗಳೆಲ್ಲ ಸಫಲವಾಗುವ ವಿಚಾರದಿಂದ ದೇಹದಲ್ಲೆಲ್ಲ ವಿದ್ಯುತ್‌ಸಂಚಾರವಾಯಿತು. ಅವನ ಕಣ್ಣುಗಳಲ್ಲಿನ ವಿಚಿತ್ರ ಹೊಳಪು. ಮುಖದ ಮೇಲಿನ ಅಲೌಕಿಕ ಲಕ್ಷಣ ನೋಡಿ ಜುಆನಾಳ ಕಣ್ಣುಗಳೂ ಮಿನುಗುತ್ತಿದ್ದವು.

ನೆರೆಹೊರೆಯವರೆಲ್ಲ ಚಮತ್ಕಾರವನ್ನು ಕಂಡಂತೆ ಬೆಚ್ಚಿಬೆರಗಾಗಿದ್ದರು. "ಕೈನೋ, ನೀನಿನ್ನು ಸಿರಿವಂತನಾಗುತ್ತಿ. ನಿನ್ನ ಸಂಪತ್ತಿನಿಂದ ಏನೇನು ಮಾಡುತ್ತೀ?" ಎಂದು ಕುತೂಹಲದಿಂದ ಕೇಳಿದರು. ಕೈನೋ ತನ್ನ ಸ್ವಪ್ನವನ್ನು ಸಾರಾಂಶವಾಗಿ ಅವರಿಗೆ ಅರುಹಿದ. ಅವನ ಆಶೆ ಆಕಾಂಕ್ಷೆಗಳನ್ನು ತಿಳಿದು ಅವರೆಲ್ಲ ಆಶ್ಚರ್ಯಚಕಿತರಾಗಿ ಗುಂಪಿನಲ್ಲಿ ಗುಜುಗುಜು ಮಾತು ಆರಂಭವಾಯಿತು.

ಈಗ ಕೈನೋಗೆ ಒಮ್ಮೆಲೆ ಭಯವೆನಿಸಿ ಮುತ್ತನ್ನು ಮುಷ್ಟಿಯಲ್ಲಿ ಮುಚ್ಚಿ ಹಿಡಿದ. ತನ್ನ ಕನಸುಗಳು ನನಸಾದರೆ ತಾನು ಅದೃಷ್ಟವಂತ, ಜನರೆಲ್ಲ ತನ್ನನ್ನು ಗೌರವಿಸುವರು. ಒಂದು ವೇಳೆ ದುರ್ದೈವದಿಂದ ತನ್ನ ಗಾಳಿಗೋಪುರ ಕುಸಿದು ಬಿಟ್ಟರೆ ಜನರೆಲ್ಲ ಪರಿಹಾಸ್ಯಮಾಡಿ ತನ್ನ ಮೂರ್ಖತನಕ್ಕೆ ತಕ್ಕ ಶಾಸನವಾಯಿತೆಂದು ಗಹಗಹಿಸಿ ನಗುವರು ಎಂದು ಕೈನೋ ಕ್ಷಣ ಭಯವಿಹ್ವಲನಾದ.

ಪಶ್ಚಿಮದಿಗಂತದಲ್ಲಿ ಸೂರ್ಯ ಅಸ್ತಂಗತನಾಗಿ ಮಬ್ಬುಗತ್ತಲೆ ಆವರಿಸುತ್ತಲಿತ್ತು. ಜುಆನಾ ಮೆಲ್ಲನೆ ಎದ್ದು ಒಲೆಯಲ್ಲಿ ಬೆಂಕಿ ಹೊತ್ತಿಸಿ ಮಡಿಕೆಯಲ್ಲಿ ಅವರೇಕಾಳು ಕುದಿಯಲಿಕ್ಕಿಟ್ಟು ರೊಟ್ಟಿ ತಟ್ಟಹತ್ತಿದಳು. ನೆರೆಹೊರೆಯವರೂ ಮನಸ್ಸಿಲ್ಲದೆ ಎದ್ದು ತಮ್ಮ ತಮ್ಮ ಗುಡಿಸಲುಗಳಿಗೆ ತೆರಳಿದರು.

ಕೈನೋ ಬಾಗಿಲು ಮುಂದೆ ಹೋಗಿ ನಿಂತ. ಆಕಾಶದಲ್ಲಿ ಅಲ್ಲಲ್ಲಿ ನಕ್ಷತ್ರಗಳು ಮಿನುಗುತ್ತಿದ್ದವು. ಗಿಡಗಂಟಿಗಳಲ್ಲಿ ಜಿಟ್ಟೆಜೀರುಂಡೆಗಳ ಕೀರಲು ಕಿರುಚಾಟವಾಗಲೇ ಪ್ರಾರಂಭವಾಗಿತ್ತು. ತಂಪು ಹವೆ ಮೈ ಕೊರೆಯುವಂತಿತ್ತು. ಕೈನೋಗೆ ತಾನು ಏಕಾಕಿ ಎಂದೆನಿಸಿ ಮೈ ಜುಮ್ಮೆಂದಿತು. ಮುತ್ತನ್ನು ಮತ್ತಿಷ್ಟು ಬಿಗಿ ಮುಷ್ಟಿಯಲ್ಲಿ ಹಿಡಿದುಕೊಂಡ.

ಮಬ್ಬುಗತ್ತಲೆಯಲ್ಲಿ ಯಾರೋ ಇಬ್ಬರು ಬರುತ್ತಿರುವುದು ಕಾಣಿಸಿತು. ತನ್ನ ಗುಡಿಸಲು ಸಮೀಪಿಸಿದಂತೆ, ಮುಂದುಗಡೆಯಿದ್ದವನ ಕೈಯಲ್ಲಿದ್ದ ಲಾಂದ್ರದ ಬೆಳಕಿನಲ್ಲಿ, ಅವನು ಡಾಕ್ಟರನ ಸೇವಕನೆಂದು ಗೊತ್ತಾಯಿತು. ಪೆಟ್ಟಿಗೆ ಹಿಡಿದುಕೊಂಡು ಹಿಂದುಗಡೆ ಬರುತ್ತಿದ್ದವನು ಡಾಕ್ಟರ್. ಕೈನೋನ ಕೆತ್ತಿದ ಕೈ ಉರುಪಿಟ್ಟಿತು. ಹೃದಯದಲ್ಲಿ ಕೋಪ ಉಕ್ಕೇರಿ ಬಾಗಿಲಿಗೆ ಅಡ್ಡವಾಗಿ ನಿಂತ.

"ಬೆಳಿಗ್ಗೆ ನೀನು ಬಂದಾಗ ನಾನು ಮನೆಯಲ್ಲಿರಲಿಲ್ಲ, ಈಗಷ್ಟೇ ಸುದ್ದಿ ತಿಳಿದು ನಿನ್ನ ಮಗುವನ್ನು

ನೋಡಲು ಬಂದಿದ್ದೇನೆ," ಡಾಕ್ಟರ್ ಹಲ್ಲು ಕಿರಿದ. "ಮಗುವಿಗೆ ಈಗ ಗುಣವಾಗಿದೆ," ಕೈನೋ ಬಿಗುವಿನಿಂದಲೇ ಹೇಳಿದ.

"ಆದರೂ ಚೇಳುಕಡಿತ ನಂಬಲಸಾಧ್ಯ ಮಿತ್ರಾ!" ಡಾಕ್ಟರು ತುಂಟಾಟಿಕೆಯ ನಗೆ ಬೀರಿದ, "ಕೊನೆಯಲ್ಲಿ ಮಗುವಿಗೆ ಕುಂಟುಕಾಲೋ ಕುರುಡು ಕಣ್ಣೋ ಗೂನು ಬೆನ್ನೋ,...ಏನೆಂದು ಹೇಳಲಿಕ್ಕಾಗದುವದಿಲ್ಲ," ಎಂದು ತುಟಿ ಬಿರಿಯುತ್ತ ಹುಬ್ಬು ಏರಿಸಿ ಗೋಣು ಹಾಕಿ. "ಈ ಚೇಳು ಕಡಿತ ನಾನು ಚೆನ್ನಾಗಿ ಬಲ್ಲೆ, ಮಿತ್ರಾ!" ಎಂದ.

ಕೈನೋನ ಕೋಪ ಈಗ ಭೀತಿಯಾಗಿ ಮಾರ್ಪಟ್ಟಿತು. ಏನೆಂದರೂ ಡಾಕ್ಟರು ಬುದ್ಧಿವಂತ. ಮಗುವಿನ ಜೀವಕ್ಕೆ ನಿಜವಾಗಿಯೂ ಅಪಾಯವಿದ್ದರೆ? ...ಕೊಯೊಟಿಟೊನಿಗೆ ಹಾಗೇನಾದರೂ ಆದರೆ ಎಂಬ ವಿಚಾರ ಮೂಡಿ ಸರಿದು ನಿಂತು, ಡಾಕ್ಟರನಿಗೆ ಗುಡಿಸಲೊಳಗೆ ಪ್ರವೇಶಿಸಲು ದಾರಿ ಕೊಟ್ಟ.

ಲಾಂದ್ರದ ಬೆಳಕಿನಲ್ಲಿ ಡಾಕ್ಟರು ಹಾಯಾಗಿ ಮಲಗಿದ ಮಗುವಿನ ಭುಜ ತಲೆ, ಹೊಟ್ಟೆಯೆಲ್ಲ ಪರೀಕ್ಷಿಸಿದ. ಕಣ್ಣು ಬಿಡಿಸಿ, "ಓಹ್ ಆಗಲೇ ಕಣ್ಣು ನೀಲಿ ವರ್ಣವಾಗಿದೆ! ವಿಷವು ದೇಹದಲ್ಲೆಲ್ಲ ಆವರಿಸಿಬಿಟ್ಟಿದೆ" ಎನ್ನುತ್ತ ಪೆಟ್ಟಿಗೆಯಿಂದ ಒಂದು ಮಾತ್ರೆ ಹೊರತೆಗೆದು ಮಗುವಿಗೆ ನುಂಗಿಸಿ ನೀರು ಕುಡಿಸಿದ.

ಮಗು ಮತ್ತೆ ಅಳುತ್ತ, ಚೀರಲು ಆರಂಭಿಸಿತು. ಜುಆನಾ ಗಾಬರಿಗೊಂಡು, ತೊಟ್ಟಿಲಿನಿಂದ ಹೊರಗೆತ್ತಿ ಮೆಲ್ಲನೆ ಜೋಗುಳ ಹೇಳು ಹತ್ತಿದಳು. ಮಗುವಿನ ಮುಖ ಕೆಂಪೇರಿ ಬಾಯಿಯಿಂದ ದ್ರವ ಹರಿಯುತ್ತಿತ್ತು. ಮಗು ನೋವಿನಿಂದ ನರಳುತ್ತ ಮತ್ತಿಷ್ಟು ಕಿರುಚುತ್ತಲಿತ್ತು. ಕೈನೋವಿಗೆ ಡಾಕ್ಟರು, ಅವನ ಔಷಧಿಯ ಬಗ್ಗೆ ಶಂಕೆಯುಂಟಾಯಿತು. ಆದರೆ ಕೈಯಿನಿತ್ತೆಂದು ಕಳವಳದಿಂದ, ಕೈಕೈ ಹಿಸುಕಿಕೊಂಡ.

ಮಗುವಿನ ಕಾಯಿಲೆಯ ವಾರ್ತೆ ಗುಡಿಸಲುಗಳೆಲ್ಲ ಹಬ್ಬಿ, ನೆರೆಹೊರೆಯವರೆಲ್ಲ ಮತ್ತೆ ಕೈನೋನ ಮನೆಯಲ್ಲಿ ಸೇರಿ ಅವನಿಗೆ, ಜುಆನಾಳಿಗೆ ಸಮಾಧಾನದ ಮಾತುಗಳನ್ನು ಹೇಳತೊಡಗಿದರು.

ಅನಂತರ ಡಾಕ್ಟರು ಮಗುವಿಗೆ ಮತ್ತೇನೋ ಔಷಧಿ ಕುಡಿಸಿದ. ತುಸು ಹೊತ್ತಿನ ನಂತರ ಕಂದನ ಕಿರುಚಾಟ ಕಡಿಮೆಯಾಯಿತು.

"ಇನ್ನು ವಿಷ ಹಿಮ್ಮೆಟ್ಟುವದು,ನಾನು ಹೋರಾಟದಲ್ಲಿ ಯಶಸ್ವಿಯಾಗಿದ್ದೇನೆ" ಎಂದು ಡಾಕ್ಟರ್ ಹೆಮ್ಮೆಯಿಂದ, ಗಂಭೀರವಾಗಿ ನುಡಿದ. ಎಲ್ಲರ ಮುಖದಲ್ಲಿ ಸಮಾಧಾನ ಕಾಣಿಸಿಕೊಂಡಿತು. ಹೊರಟುನಿಂತಾಗ, "ನನ್ನ ದುಡ್ಡು...ನಿನಗೆ ಯಾವಾಗ...ಮುಟ್ಟಿಸಲಿಕ್ಕಾಗಬಹುದು?" ತಡವರಿಸುತ್ತ, ಸೌಜನ್ಯದಿಂದ ಕೇಳಿದ ಡಾಕ್ಟರ್.

"ನನ್ನ ಮುತ್ತು ಮಾರಾಟವಾದ ಕೂಡಲೇ" ಕೈನೋ ಚುಟುಕಾಗಿ ಉತ್ತರಿಸಿದ.

"ನಿನ್ನ ಹತ್ತಿರ ಅಂಥ ಮುತ್ತು ಇದೆಯೇ?" ಡಾಕ್ಟರ್ ಅರಿಯದವನಂತೆ ಕೇಳಿದ. "ಅವನಿಗಿಂದು ಭಾರೀ ದೊಡ್ಡ ಮುತ್ತು ಸಿಕ್ಕಿದೆ" ಎಂದರು ಕೆಲವರು.

"ಕೈನೋ ಒಳ್ಳೆ ಸಿರಿವಂತನಾಗುವನು!" ಉಳಿದವರು ದನಿಗೂಡಿಸಿದರು.

"ಹೌದಾ? ಹಾಗಾದರೆ ಅದನ್ನು ಭದ್ರವಾಗಿ ಇಟ್ಟುಕೊಳ್ಳಬೇಕು. ಬೇಕಾದರೆ ನನ್ನ ತಿಜೋರಿಯಲ್ಲಿ ಇಡಬಹುದು," ಎಂದ ಡಾಕ್ಟರ್

"ಬೇಡ ಬೇಡ, ನಾಳೆಯೇ ಮಾರಿಬಿಡುತ್ತೇನೆ," ಕೈನೋ ಆತಂಕದಿಂದ ಹೇಳಿದ. ಎಲ್ಲರೂ ಹೋದ ಬಳಿಕ ಕೈನೋ ತಾನು ಮಲಗುವ ಜಾಗದಲ್ಲಿ ಸ್ವಲ್ಪ ನೆಲ ಅಗೆದು ಮುತ್ತನ್ನು ಹರಕು ಬಟ್ಟೆಯಲ್ಲಿ ಸುತ್ತಿ ಹೂಳಿದ. ಅವನಿಗೀಗ ಎಲ್ಲರ ಮೇಲೆಯೂ ಸಂಶಯ, ಅವಿಶ್ವಾಸ, ಭಯ.

ರಾತ್ರಿಯೆಲ್ಲ ನಿದ್ರೆ ಬಾರದೇ ಒದ್ದಾಡಿದ. ಜುಆನಾಳದೂ ಅದೇ ಸ್ಥಿತಿ. ಈ ಮುತ್ತಿನಿಂದ ತಮಗೇನೋ ಕೇಡು; ತಮ್ಮ ಮಗುವಿಗೂ ಗಂಡಾಂತರವಿದೆ ಎಂಬ ಸಂದೇಹ ಅವಳ ಮನಸ್ಸನ್ನು ಬಾಧಿಸುತ್ತಲಿತ್ತು. ಆದರೆ ಈ ಮುತ್ತು ಸೌಭಾಗ್ಯ ತರುವದೆಂದೇ ಕೈನೋನ ದೃಢ ನಂಬಿಕೆ.

ಅರುಣೋದಯ ಸಮಯದಲ್ಲಿ ಕೈನೋ ಎದ್ದು, ಮುತ್ತನ್ನು ಮತ್ತೆ ಹೊರತೆಗೆದು ನೋಡಿದ. ಮಂದ ಬೆಳಕಿನಲ್ಲಿ ಅದರ ಉಜ್ವಲಕಾಂತಿ ಮನಕ್ಕೆ ಶಾಂತಿ ನೀಡಿತು. ಭವಿಷ್ಯದ ಸುಖ ಸುರಕ್ಷಿತತೆಯ ಭರವಸೆ ಕೊಟ್ಟಿತು; ಮಧುರ ಸಂಗೀತ

ದಂತೆ ಮೈಮರೆಸಿತು. ಕೈನೋ ಜುಆನಾ ಬಿಟ್ಟರೆ ನ್ನೊಬ್ಬರು ನೋಡಿ ನಸುನಕ್ಕರು.

*

ಅಂದು ಬೆಳಕು ಹರಿಯುತ್ತಲೇ ಕೈನೋ ಮುತ್ತನ್ನು ಮಾರುತ್ತಾನೆಂದು ಇಡೀ ನಗರ ಕ್ಕೆಲ್ಲ ತಿಳಿದಿತ್ತು. ನೆರೆಹೊರೆಯುವರು, ಮೀನು ಗಾರರು, ಅಂಗಡಿಕಾರರು, ಭಿಕ್ಷುಕರು ಹಾಗೂ ಮುತ್ತಿನ ವ್ಯಾಪಾರಿಗಳು ಅದೇ ಆಲೋಚನೆ ಯಲ್ಲಿದ್ದರು.

ಕೈನೋ, ಜುಆನಾರಿಗೆ ಅದು ಅತಿ ಮಹತ್ವದ ದಿನ; ಅವರ ಬಡತನದ ಕೊನೆಯ ದಿನ. ಜುಆನಾ ತನ್ನ ಮದುವೆಯ ಉಡುಪನ್ನು ಧರಿಸಿದ್ದಳು. ಮಗುವಿಗೆ ನಾಮಕರಣದ ದಿನದ ಬಟ್ಟೆಗಳನ್ನು ತೊಡಿಸಿದಳು. ಕೈನೋನ ಹಳೆಯ ಬಟ್ಟೆಗಳೂ ಶುಭ್ರವಾಗಿದ್ದವು.

ನೆರೆಹೊರೆಯುವರೂ ತಯಾರಾದರು. ಇಂಥ ವೇಳೆಯಲ್ಲಿ ತಾವೂ ಕೈನೋನ ಜತೆ ಹೋಗದಿ ದ್ದರೆ ಹುಚ್ಚುತನವಾದೀತು; ಸೌಜನ್ಯದ ಲಕ್ಷಣ ವಾಗಲಿಕ್ಕಿಲ್ಲವೆಂದು ಅವರ ವಿಚಾರ.

ಕೈನೋ ಘನತೆಯಿಂದ ಹೊರ ಹೊರಟ. ತನ್ನ ಅಂಗಿಯ ಒಳಗಡೆ ಜೇಬಿನಲ್ಲಿ ಒಂದು ಚಿಕ್ಕ ಚರ್ಮ ದ ಚೀಲದಲ್ಲಿ ಆ ಮುತ್ತನ್ನು ಭದ್ರವಾಗಿಟ್ಟು ಕೊಂಡಿದ್ದ. ಅವನ ಹಿಂದೆ ಜುಆನಾ ಮಗುವನ್ನು ಎತ್ತಿಕೊಂಡು ಹೊರಟಳು. ನೆರೆಹೊರೆಯುವರು ಗಂಡಸರು ಹೆಂಗಸರು, ಹುಡುಗರು, ಮುದುಕರು ಅವರ ಹಿಂದೆ ನಡೆದರು. ಸೂರ್ಯ ಮೇಲಕ್ಕೆ ಏರು ತ್ತಿದ್ದಂತೆ ಈ ಗಂಭೀರ ಮೆರವಣಿಗೆ ಮತ್ತೆ ನಗರ ವನ್ನು ಪ್ರವೇಶಿಸಿತು.

ಅವರು ಬರುತ್ತಿರುವ ವಾರ್ತೆ ಕೇಳಿದ ಮುತ್ತಿನ ವ್ಯಾಪಾರಿಗಳು ಒಮ್ಮೆಲೆ ಚುರುಕಾಗಿ, ತಮ್ಮ ಅಂಗ ಡಿಗಳಲ್ಲಿ ಮುಖದ ಮೇಲೆ ನಗೆ ಹೊತ್ತುಕೊಂಡು ಕುಳಿತರು. ಮುತ್ತನ್ನು ಆದಷ್ಟು ಕಡಿಮೆ ಬೆಲೆಗೇ ಕೊಂಡುಕೊಳ್ಳಬೇಕೆಂದೇ ಪ್ರತಿಯೊಬ್ಬನೂ ಲೆಕ್ಕ ಹಾಕುತ್ತಿದ್ದ.

ಮೊದಲು ಬಂದ ಆ ಚಿಕ್ಕ ಅಂಗಡಿಯಲ್ಲಿ ಕೈನೋ ಕಾಲಿಟ್ಟು ಅನುಮಾನಿಸುತ್ತ ನಿಂತ. ಮೇಜಿನ ಹಿಂದೆ ಕುರ್ಚಿಯಲ್ಲಿ ಸೆಟೆದು ಕುಳಿತ ದಪ್ಪಗಿನ ವ್ಯಾಪಾರಸ್ಥ, ತೀಕ್ಷ್ಣ ಸಂಕುಚಿತ ಕಣ್ಣು ಗಳಿಂದ ಅವನನ್ನು ದಿಟ್ಟಿಸುತ್ತ, "ಏನು ಬೇಕಾ ಗಿತ್ತು?" ಎಂದು ಬಿರುಸಾಗಿ ಕೇಳಿದ.

"ನನ್ನ ಹತ್ತಿರ ಒಂದು ಮುತ್ತು ಇದೆ" ಕೈನೋ ಮೆಲುಧ್ವನಿಯಲ್ಲಿ ನುಡಿದ.

"ಒಂದೇ ಮುತ್ತು ಇದೆಯೇ ?" ವ್ಯಾಪಾರಸ್ಥ ಕುಚೋದ್ಯವಾಗಿ ನಕ್ಕು, "ಕೆಲವರು ಹತ್ತು ಹನ್ನೆರಡು ಮುತ್ತುಗಳನ್ನು ತರುತ್ತಾರೆ. ಇರಲಿ ಎಲ್ಲಿ, ನಿನ್ನ ಮುತ್ತನ್ನಾದರೂ ನೋಡುವಾ."ಎಂದ.

ಕೈನೋ ನಿಧಾನವಾಗಿ ಒಳಗಡೆ ಜೇಬಿನಿಂದ ಚರ್ಮದ ಚೀಲವನ್ನು ಹೊರತೆಗೆದು, ಅದರಲ್ಲಿನ ಮುತ್ತನ್ನು ಮೇಜಿನ ಮೇಲಿರುವ ಕರಿಯ ಮಖ ಮಲ್ಲಿನ ತಟ್ಟೆಯಲ್ಲಿಟ್ಟು, ವ್ಯಾಪಾರಸ್ಥನ ಮುಖ ನೋಡಿದ. ಆ ಮುಖದಲ್ಲಿ ಬದಲಾವಣೆ ಏನೂ ಕಾಣಲಿಲ್ಲ; ಆದರೆ ಮೇಜಿನ ಕೆಳಗಿದ್ದ ವ್ಯಾಪಾರಿಯ ಕೈ ಬೆರಳುಗಳು ಮಾತ್ರ ಕಂಪಿಸುತ್ತಿದ್ದವು; ಎದೆ ಜೋರಾಗಿ ಬಡಿದುಕೊಳ್ಳುತ್ತಿತ್ತು. ಬಳಿಕ ಮುಂದೆ ಕೈ ಚಾಚಿ ಮುತ್ತನ್ನು ಎತ್ತಿಕೊಂಡು ತಿರುಗಿಸಿ ಸುತ್ತೆಲ್ಲ ನೋಡಿ ತಾತ್ಸಾರದಿಂದ ತಿರುಗಿ ತಟ್ಟೆಯಲ್ಲಿ ಎಸೆದ.

ಕೈನೋ ಉಸಿರು ಕಟ್ಟಿ ನಿಂತಿರುವಂತೆ, "ಇದೆಂಥ ಮುತ್ತು! ನನಗೆ ಬೇಕಿಲ್ಲ" ಎಂದು ಅಸಡ್ಡೆಯಿಂದ ನಗುತ್ತ ಭುಜ ಹಾರಿಸಿದ.

"ಇದು ಅತ್ಯಮೂಲ್ಯ ಮುತ್ತು,"ಅಂದ ಕೈನೋ.

"ಇದು ಕಾಗೆ ಬಂಗಾರ ಇದ್ದ ಹಾಗೆ" ಎಂದು ವಿಲಕ್ಷಣವಾಗಿ ನಕ್ಕು ವ್ಯಾಪಾರಿ "ವಿಚಿತ್ರವಸ್ತು ಅಷ್ಟೇ. ಇಷ್ಟು ದೊಡ್ಡ ಮುತ್ತು ಯಾರು ಕೊಂಡು ಕೊಳ್ಳುತ್ತಾರೆ?" ಎಂದ.

"ಆದರೆ ಇಂಥ ಉತ್ಕೃಷ್ಟ ಮುತ್ತನ್ನು ಜಗತ್ತಿ ನಲ್ಲಿಯೇ ಇದುವರೆಗೆ ಯಾರೂ ನೋಡಿಲ್ಲ."

"ಅದಕ್ಕೇ ಇದು ವಿಚಿತ್ರ ವಸ್ತು ಎಂದು ಹೇಳಿದೆ." ಯಾವುದಾದರೂ ಪ್ರದರ್ಶನಾಲಯದಲ್ಲಿ ಸಿಂಪು ಸಂಗ್ರದಲ್ಲಿಡುವಂತಹದು...ಬಹಳೆಂದರೆ ಒಂದು ಸಾವಿರ ಪೆಸೋ (ಮೆಕ್ಸಿಕನ್ ನಾಣ್ಯ)ಗಳನ್ನು ಕೊಟ್ಟೇನು."

ಕೈನೋನ ಮುಖ ಕಪ್ಪಿಟ್ಟಿತು. "ಇದರ ಬೆಲೆ ಐವತ್ತು ಸಾವಿರ ಪೆಸೋಗಳಿಗಿಂತಲೂ ಮಿಗಿಲೆಂದು ನಿಮಗೆ ಗೊತ್ತು; ಆದರೂ ನನ್ನನ್ನು ಮೋಸಗೊಳಿಸ ಬೇಕೆನ್ನುತ್ತೀರಿ," ಎಂದು ಕೆರಳಿ ಹೇಳಿದ.

ವ್ಯಾಪಾರಸ್ಥನೂ ತುಸು ಗಾಬರಿಯಾಗಿ, "ನನ್ನನ್ನು ಆಕ್ಷೇಪಿಸಬೇಡಪ್ಪಾ. ಮತ್ತೆ ಬೇರೆಯವರಿಗೂ ತೋರಿಸು. ಬೇಕಾದರೆ ಅವರನ್ನು ಇಲ್ಲಿಗೆ ಕರೆಸುತ್ತೇನೆ," ಎಂದು ತನ್ನ ಸೇವಕನನ್ನು ಕರೆದು, ಯಾರೋ ಮೂರು ಜನರನ್ನು ಕರೆಕಳಿಸಿದ.

ಹಿಂದುಗಡೆಯಿದ್ದ ಜನಸಮೂಹದಲ್ಲಿ ಪಿಸು ಮಾತುಗಳು ಆರಂಭವಾದವು. ಕೈನೋ ಮಾತ್ರ ಮೌನವಾಗಿ ನಿಂತುಕೊಂಡಿದ್ದ. ತನ್ನನ್ನು ಸುತ್ತುವರೆದ ಪಾಪ, ಅಧರ್ಮವನ್ನು ಗಮನಿಸಿ ಮನಸ್ಸಿನಲ್ಲಿ ಅತೀವ ಜಿಗುಪ್ಸೆ ಹುಟ್ಟಿತು. ತನ್ನ ಅಸಹಾಯಕತೆಗಾಗಿ ಸುಮ್ಮನೆ ಪರಿತಪಿಸುತ್ತಿದ್ದ.

ಆ ಮೂವರು ಮುತ್ತಿನ ವ್ಯಾಪಾರಿಗಳು ಬಂದೊಡನೆ ಅವರನ್ನು ಕರೆಸಿದವನೆಂದ, "ಈ ಮುತ್ತಿಗೆ ನಾನೊಂದು ಬೆಲೆ ಕಟ್ಟಿದ್ದೇನೆ. ಆದರೆ ಅದರ ಒಡೆಯನಿಗೆ ತೃಪ್ತಿಯಿಲ್ಲ, ಅದಕ್ಕೆಂದು ನೀವು ಪರೀಕ್ಷಿಸಿ ನಿಮ್ಮ ಬೆಲೆ ತಿಳಿಸಿರಿ."

ಒಬ್ಬ ಮುಂದೆ ಬಂದು ಮುತ್ತನ್ನು ತಿರುತಿರುಗಿಸಿ ನೋಡಿ, ತಿರಸ್ಕಾರದಿಂದ ತಟ್ಟೆಯಲ್ಲಿ ಚೆಲ್ಲಿದ. "ಇದು ಮುತ್ತಲ್ಲ; ವಿಕೃತ ವಸ್ತು; ನನಗೇನೂ ಬೇಕಿಲ್ಲ." ಮತ್ತೊಬ್ಬನು ಸೂಕ್ಷ್ಮದರ್ಶಕ ಕನ್ನಡಿಯಿಂದ ಅದನ್ನು ಪರೀಕ್ಷಿಸುತ್ತ, "ಇದು ಒಳ್ಳೆ ಮುತ್ತಲ್ಲ, ಮೆತ್ತಗೆ ಸೀಮೆ ಸುಣ್ಣದಂತಿದೆ; ಬೇಗನೆ ವಿವರ್ಣವಾಗುತ್ತದೆ" ಎಂದು ನಕ್ಕ.

ಮೂರನೆಯವ ಮುತ್ತನ್ನು ಹಿಡಿದು ನೋಡಿ "ನನ್ನ ಗಿರಾಕಿಯೊಬ್ಬನಿಗೆ ಇಂಥ ವಿಚಿತ್ರ ವಸ್ತುಗಳು ಇಷ್ಟ... ನಾನು ಐನೂರು ಪೆಸೊಗಳಿಗೆ ಕೊಂಡು ಆತನಿಗೆ ಆರುನೂರಕ್ಕೆ ಮಾರಿದರೆ ನನಗೊಂದು ನೂರರ ಲಾಭ," ಎಂದು ಕೈನೋನತ್ತ ನೋಡಿದ.

ಕೈನೋ ಅವನ ಕೈಯಿಂದ ಮುತ್ತನ್ನು ಸರ್ರನೆ ಕಿತ್ತುಕೊಂಡು. ತನ್ನ ಚರ್ಮಚೀಲದಲ್ಲಿಟ್ಟು ಅಂಗಿಯೊಳಗೆ ಸೇರಿಸಿದ. "ನೀವೆಲ್ಲ ವಂಚಕರು. ನನ್ನ ಮುತ್ತು ನಿಮ್ಮಂಥವರಿಗೆ ಮಾರುವುದಕ್ಕೆ ಯೋಗ್ಯವಲ್ಲ. ನಾನು ಪಟ್ಟಣಕ್ಕೆ ಹೋಗುತ್ತೇನೆ," ಎಂದು ಸಿಟ್ಟಿನಿಂದ ಹೇಳಿ, ತಿರುಗಿ ಪಿಸುಗುಟ್ಟುವ ಜನರ ನಡುವೆಯೇ ದಢದಢನೇ ಮುಂದು ಹಾದು ಓಡಿದ. ಜುಆನಾ ಅವನ ಬೆನ್ನು ಹತ್ತಿದಳು.

ಸಂಜೆಯ ಹೊತ್ತು ನೆರೆಹೊರೆಯವರ ಮನೆಯಲ್ಲೆಲ್ಲ ಮುತ್ತಿನ ಚರ್ಚೆಯೇ ನಡೆಯಿತು. ಮುತ್ತು ಅದ್ಭುತವಾಗಿದ್ದರೂ ಅದು ನಿಜವಾಗಿಯೂ ನಿರುಪಯುಕ್ತ ವಸ್ತುವೇನೊ ಎಂದು ಕೆಲವರು ಸಂಶಯಪಟ್ಟರು. ಕೈನೋ ಶುದ್ಧ ಮೂರ್ಖ, ಒಂದು ಸಾವಿರ ಪೆಸೋಗಳಿಗಾದರೂ ವ್ಯವಹಾರ ಮಾಡಿದ್ದಿದ್ದರೆ ಅಷ್ಟೇ ಲಾಭವಾಗುತ್ತಿತ್ತೆಂದು ಒಂದಿಬ್ಬರ ಅಭಿಪ್ರಾಯ. ಕೈನೋ ತುಂಬ ಜಾಣ, ಧೈರ್ಯವುಳ್ಳವನೆಂದೂ ಮತ್ತೆ ಕೆಲವರು ವರ್ಣಿಸಿದರು.

ಕೈನೋ ಚಾಪೆಯ ಮೇಲೆ ಅಡ್ಡಾಗಿ, ಆಲೋಚಿಸುತ್ತಿದ್ದ. ಪಟ್ಟಣವು ಬಹುದೂರ. ನದಿಯಾಚೆ, ಬೆಟ್ಟಗಳನ್ನು ದಾಟಿ, ಒಂದು ಸಾವಿರ ಮೈಲುಗಳಷ್ಟು ಕ್ರಮಿಸಬೇಕು. ಆ ವಿಲಕ್ಷಣ ತಾಣದ ಬಗ್ಗೆ ಅನೇಕ ಕಥೆ ಕೇಳಿದ್ದ. ಅವನ ಮನಸ್ಸಿನಲ್ಲಿ ವಿಪರೀತ ದುಗುಡ, ಭಯ, ಮುಂದಿನ ಎಲ್ಲ ದಾರಿ ಕಟ್ಟಿದಂತೆನಿಸಿ; ನಿರುತ್ಸಾಹ, ನಿರಾಶೆಯೂ ಆಗದಿರಲಿಲ್ಲ. ಆದರೆ ಆತ ಒಮ್ಮೆ ನಿರ್ಧಾರ ಮಾಡಿಯಾಗಿತ್ತು; ಇನ್ನು ಹಿಂದೆ ಹೆಜ್ಜೆ ಇಡುವಂತಿಲ್ಲ.

ಪತಿಯ ಚಿತ್ತಕ್ಷೋಭೆ ಗಮನಿಸಿದ ಜುಆನಾಳೂ ಸುಮ್ಮನೆ ಅವನ ಹತ್ತಿರ ಕುಳಿತುಬಿಟ್ಟಳು. ಮುಂಗತ್ತಲೆಯಲ್ಲಿ ಹೊರಗಡೆ ಯಾರೋ ನುಸುಳಿಕೊಂಡು ಬಂದಂತೆ ಭಾಸವಾಯಿತು. ಕೈನೋ ತಟ್ಟನೆ ಎದ್ದು ಬಾಗಿಲ ಹೊರಗೆ ಹೋದ. ತುಸು ಹೊತ್ತಿನಲ್ಲಿ ಹೊಡೆದಾಟ ಸಪ್ಪಳ ಕೇಳಿಸಿ. ಜುಆನಾ ಹೊರಗೆ ಓಡಿಹೋಗಿ ನೋಡಿದಾಗ, ಕೈನೋ ನೆಲದ ಮೇಲೆ ಬಿದ್ದುಬಿಟ್ಟಿದ್ದ. ಅವನ ಕೆನ್ನೆಯ ಮೇಲೆ ದೊಡ್ಡ ಗಾಯ, ಹಣೆಯ ಮೇಲಿಂದ ರಕ್ತ ಹರಿಯುತ್ತಿತ್ತು. ಮೈಮೇಲಿನ ಬಟ್ಟೆಯೆಲ್ಲ ಅಸ್ತವ್ಯಸ್ತವಾಗಿ ಹರಿದಿದ್ದವು.

ಅರ್ಧಮರ್ಧ ಸ್ಮೃತಿಯೂ ತಪ್ಪಿದ ಕೈನೋನನ್ನು ಮೆಲ್ಲನೆ ಎಬ್ಬಿಸಿ, ಮನೆಯೊಳಗೆ ಕರೆದುಕೊಂಡು ಹೋಗಿ, ಚಾಪೆಯ ಮೇಲೆ ಮಲಗಿಸಿ ತಣ್ಣೀರಿನಿಂದ ಮುಖ ತೊಳೆದಳು. ಅವನಿಗೆ ಪೂರ್ತಿ ಎಚ್ಚರವಾದಾಗ, "ಕೈನೋ ಈ ಮುತ್ತು ಖಂಡಿತ ಒಂದು ಶಾಪ. ನನ್ನ ಮಾತು ಕೇಳು ಕೈನೋ" ಎಂದು ಮೊರೆಯಿಟ್ಟಳು. "ಅದನ್ನು ನಾಶಮಾಡಿಬಿಡೋಣ. ಕಲ್ಲಿನಿಂದ ಕುಟ್ಟಿ ಪುಡಿಮಾಡೋಣ. ಎಲ್ಲಿಯಾದರೂ ಎಸೆದುಬಿಡೋಣ."

"ಸುಮ್ಮನಿರು ಜುಆನಾ ಹೀಗೆಲ್ಲ ಮಾತಾಡಬಾರದು. ಈ ಮುತ್ತು ಮಾರಿದ ಬಳಿಕ ಅವರ

ಹಿತವಷ್ಟೇ ನಮ್ಮ ಹತ್ತಿರ ಉಳಿಯುವದು'' ನಮ್ಮ ಕೊಯೊಟಿಟೋನ ಭವಿಷ್ಯದ ನಿಮಿತ್ತ ಈ ಸನವಕಾಶವನ್ನು ನಾವು ಕಳೆದುಕೊಳ್ಳಬಾರದು."

"ಆದರೆ ಪಟ್ಟಣಕ್ಕೆ ಹೋಗುವದು ಅಷ್ಟು ಸುಲಭವಲ್ಲ ಕೈನೋ."

"ನಾನು ಗಂಡಸು, ನನಗೆ ಯಾವ ಭಯವಿಲ್ಲ. ಕಂಡೂ ಕಂಡೂ ನಾನಿಲ್ಲಿ ಮೋಸಹೋಗಲಾರೆ. ನಾಳೆ ನಸುಕಿನಲ್ಲಿಯೇ ನಾವಿಬ್ಬರೂ ಪಟ್ಟಣಕ್ಕೆ ಹೊರಡೋಣ. ನನ್ನ ಜೊತೆ ನಿನಗೆ ಬರಲು ಭಯ ವಿಲ್ಲ, ತಾನೆ?"

"ಇಲ್ಲ" ತಲೆ ತಗ್ಗಿಸಿ ಮೆಲುದನಿಯಲ್ಲಿ ನುಡಿದಳು.

"ಹಾಗಾದರೆ ಈಗ ನಿದ್ರೆಮಾಡು'' ಎಂದು ಮೃದುವಾಗಿ ಅವಳ ಕೆನ್ನೆ ತಟ್ಟಿದ.

*

ಅಪರಾತ್ರಿಯ ವೇಳೆ ಮನೆಯಲ್ಲಿ ಮತ್ತೆ ಹೆಜ್ಜೆಯ ಸಪ್ಪಳ, ಮುತ್ತನ್ನ ಹೂಳಿಟ್ಟ ಮೂಲೆಯಲ್ಲಿ ನೆಲವನ್ನು ಮೆಲ್ಲನೆ ಕೆದರುವ ಶಬ್ದದಿಂದ ಕೈನೋನಿಗೆ ಎಚ್ಚರವಾಯಿತು. ಕತ್ತಲೆಯಲ್ಲಿ ಯಾವನೋ ಹೊರಗೆ ಓಡಿಹೋದದ್ದು ಮಸುಕಾಗಿ ಕಾಣಿಸಿ, ಕೈನೋ ರೊಚ್ಚಿಗೆದ್ದು, ಬೇಗನೇ ಚಾಕೂ ತೆಗೆದುಕೊಂಡು ಅವನ ಮೇಲೆ ಹರಿಹೋದ. ಇಬ್ಬರಲ್ಲಿಯೂ ಕದನ ನಡೆಯು. ಕೊನೆಗೆ ಕೈನೋ ಚಾಕುವಿನಿಂದ ಕಳ್ಳನ ಕತ್ತು ಇರಿದು ನೆಲಕ್ಕುರುಳಿಸಿದ.

ಮನೆಯ ಮುಂದೆ ಅಪರಿಚಿತನ ಮೃತದೇಹ ಬಿದ್ದಿದ್ದು ನೋಡಿ, ಜುಆನಾಳ ಎದೆ ಮರಗಟ್ಟಿದಂತಾಯಿತು. ಕೈನೋ ದಿಗ್ಭ್ರಮೆಗೊಂಡು ಮೂಕನಾಗಿದ್ದ. ಬೆಳದಿಂಗಳ ಕ್ಷೀಣಛಾಯೆಯಲ್ಲಿ, ಒಂದು ಕಲ್ಲಿನ ಮರೆಯಲ್ಲಿ, ಕಳ್ಳನ ಕೈಯಿಂದ ಜಾರಿ ಉರುಳಿದ ಮುತ್ತು ಮಿನುಗುವುದು ಕಾಣಿಸಿತು. ಅದನ್ನೆತ್ತಿಕೊಂಡು ಸುಮ್ಮನೆ ಗುಡಿಸಲೊಳಗೆ ಹೋದರು.

ಇನ್ನು ತಮಗೆ ಜೀವನದಲ್ಲಿ ಸುಖ ಶಾಂತಿಯಿಲ್ಲವೆಂದು ಇಬ್ಬರಿಗೂ ತಿಳಿಯಿತು. ಕೈನೋ ಕೊಲೆ ಮಾಡಿದ ಮನುಷ್ಯನ ಗುಂಪಿನವರು ತಮ್ಮಿಬ್ಬರನ್ನು ಜೀವಂತ ಉಳಿಯಲು ಬಿಡುವುದು ಅಶಕ್ಯ, ಬೇಕು ಹರಿಯುವುದರಲ್ಲಿಯೇ ತಾವು ಇಲ್ಲಿಂದ ಪರಾರಿಯಾಗಬೇಕು. ಕೈನೋ ವಿಷಾದದಿಂದ ಹೆಂಡತಿಗೆ ಹೇಳಿದ, "ಬೇಗನೇ ಮಗವನ್ನು ಕರೆದುಕೊಂಡು ಕಡಲತೀರದತ್ತ ನಡೆ; ನಮ್ಮ ದೋಣಿಯಲ್ಲಿ ಕುಳಿತು ದೂರ ಹೋಗಿಬಿಡೋಣ."

ಸಮುದ್ರದಂಡೆಗೆ ಧಾವಿಸಿ ಬಂದಾಗ, ಕೈನೋ ತನ್ನ ದೋಣಿಯ ತಳದಲ್ಲಿ ದೊಡ್ಡ ತೂತು ಕೊರೆದದ್ದನ್ನು ಕಂಡು ಕ್ರೋಧಾವೇಶದಿಂದ ಉನ್ಮತ್ತನಾದ. ಇದು ಮಾನವನ ದ್ವೇಷ, ಮತ್ಸರಗಳ ಪರಮಾವಧಿಯೆಂದು ಕೈನೋ ದುಃಖಸಂತಪ್ತನಾದ. ತಿರುಗಿ ನೋಡುವಷ್ಟರಲ್ಲಿ, ತನ್ನ ಗುಡಿಸಲು ಧಗಧಗನೇ ಉರಿಯುತ್ತಿರುವುದು ಕಾಣಿಸಿತು. ಆತನೀಗ ಸಂಪೂರ್ಣವಾಗಿ ನಿರಾಶ್ರಿತನಾಗಿದ್ದ. ಜಗತ್ತಿನಲ್ಲಿ ಇದಕ್ಕಿಂತ ಹೆಚ್ಚಿನ ಅತ್ಯಾಚಾರ, ಅಪಮಾನ ಬೇರೆ ಇರಲಿಕ್ಕಿಲ್ಲ ಎಂದೆನಿಸಿತು.

ಕೈನೋ ಧೈರ್ಯದಿಂದ ಮುಂದೆ ಹೆಜ್ಜೆಯಿಟ್ಟ. ಅವನ ಹಿಂದೆ ಜುಆನಾ ಮಗುವನ್ನು ಎದೆಗವಚಿಕೊಂಡು ನಡೆದಳು. ಇಬ್ಬರೂ ಸದ್ದಿಲ್ಲದೆ ಮೌನವಾಗಿ ತಮ್ಮ ಆಜನ್ಮ ನೆಲೆಯನ್ನು ತೊರೆದು ಉತ್ತರ ದಿಕ್ಕಿನತ್ತ ಜಾಗರೂಕತೆಯಿಂದ ಸಾಗಿದರು. ಕತ್ತಲು, ಬಿರುಸಿನಿಂದ ಬೀಸುವ ತಂಪುಗಾಳಿ, ಗಿಡಗಂಟಿಗಳಲ್ಲಿ ನರಿಮರಿಗಳ ಗೋಳಿನ ಸ್ವರ, ಮರಗಳಲ್ಲಿಯ ಗೂಬೆಗಳ ಕಿರಿಚಾಟ. ವಿಕಾರವಾಗಿ ಭಯಾನಕವೆನಿಸುವಂತಿತ್ತು. ನಕ್ಷತ್ರಗಳ ಮಂದ ಬೆಳಕಿನಲ್ಲಿ ಅವರು ರಾತ್ರಿಯೆಲ್ಲ ಮಾತಿಲ್ಲದೆ, ಲಗುಬಗೆಯಿಂದ ದಾಪುಗಾಲು ಹಾಕುತ್ತಿದ್ದರು.

ಎಷ್ಟೋ ಹೊತ್ತಿನ ಬಳಿಕ ಅರುಣೋದಯದ ಸೂಚನೆ ಕಂಡುಬಂದಿತು. ಬೆಳಗಾಗುವುದರಲ್ಲಿ ದಿನವಿಡೀ ತಾವು ಮರೆಯಾಗಿರಲು, ಕೈನೋ ಮರಗಳ ಒಂದುಗಡೆ ಒಂದು ದಟ್ಟ ಪೊದೆಯಲ್ಲಿ ಸ್ಥಳ ಹುಡುಕಿದ. ಅಲ್ಲಿಯೇ ವಿಶ್ರಮಿಸಿದರು.

ಮಧ್ಯಾಹ್ನದ ಬಿಸಿಲು ಪ್ರಖರವಾಗಿತ್ತು. ಕೈನೋ ಮರಗಳ ನೆರಳಿನಲ್ಲಿ ಅಡ್ಡಾಗಿದ್ದ. ಹುಲ್ಲಿನ ಮೇಲೆ ಮಗು ಕೈಕಾಲು ಕುಣಿಸುತ್ತ, ಚೆಲ್ಲಾಟದಲ್ಲಿ ತೊಡಗಿತ್ತು. ಜುಆನಾ ಅದನ್ನು ನೋಡಿ ಆನಂದಿಸುತ್ತಿದ್ದಳು.

ಸಂಜೆಯಾಗುತ್ತಲೇ ಕೈನೋ ಎದ್ದು ಕುಳಿತು, ರಸ್ತೆಯತ್ತ ದಿಟ್ಟಿಸಿ ನೋಡಹತ್ತಿದ. ಅವನ

ಭೀತಿಯನ್ನರಿತ ಜುಆನಾ ಮೆಲ್ಲನೆ ಕೇಳಿದಳು, "ಆ ಕಳ್ಳನ ತಂಡದವರು ನಮ್ಮ ಬೆನ್ನಟ್ಟಿ ಬರುವರೇ? ಸದ್ಯ ನಮ್ಮ ಶೋಧನೆಯಲ್ಲಿರಬಹುದೇ?"

"ಖಂಡಿತ ನಮ್ಮ ಬೆನ್ನು ಹತ್ತುವರು. ನಾವು ಸಿಕ್ಕುಬಿಟ್ಟರೆ ಅವರಿಗೊಂದು ಅಪಾರನಿಧಿ ಲಭಿಸುವುದು," ಕೈನೋ ನಿಟ್ಟುಸಿರೆಳೆದ.

"ಆದರೆ ಆ ಮುತ್ತು ನಿಜವಾಗಿಯೂ ಬೆಲೆಯುಳ್ಳದ್ದೇ?" ಜುಆನಾ ಸಂಶಯಪಟ್ಟಳು, "ಅದು ಬರೀ ಭ್ರಾಂತಿ, ಸ್ವಪ್ನಸೃಷ್ಟಿಯಾಗಿರಲು ಸಾಕು."

ಕೈನೋ ತನ್ನ ಕಂಬಳಿಯೊಳಗಿಂದ ಮುತ್ತನ್ನು ಹೊರತೆಗೆದು, ಮತ್ತೆ ಅಂಗೈಯಲ್ಲಿಟ್ಟು ನೋಡಿದ. ಸೂರ್ಯಪ್ರಕಾಶದಲ್ಲಿ ಮುತ್ತು ಇಮ್ಮಡಿಯಾಗಿ ಶೋಭಿಸಿತು. "ಇದು ಅತ್ಯಮೂಲ್ಯ ಮುತ್ತು: ಇಲ್ಲವಾದರೆ ಯಾರೂ ಕಳುವುಮಾಡಲು ಪ್ರಯತ್ನಿಸುತ್ತಿರಲಿಲ್ಲ" ಎಂದು ವಿಷಾದದಿಂದ ನಸುನಕ್ಕ.

ಕೈನೋ ನೋಡುತ್ತಿದ್ದಂತೆ, ದೂರದಲ್ಲಿ ಕಂಡ ದೃಶ್ಯ ಅವನ ಮೈ ಜುಮ್ಮೆನಿಸಿ, ಹೃದಯದಲ್ಲಿ ನಡುಕವುಂಟಾಯಿತು. ಮೂರು ಮಾನವ ಆಕೃತಿಗಳು ಮೆಲ್ಲನೆ ತಮ್ಮತ್ತ ಬರುತ್ತಿದ್ದವು. ಒಬ್ಬ ಕುದುರೆ ಸವಾರ, ಇಬ್ಬರು ಪಾದಚಾರಿಗಳು. ನೆಲದ ಮೇಲೆ ಕಾಲು ಹೆಜ್ಜೆಯ ಚಿಹ್ನಗಳನ್ನು ಪರಿಶೋಧಿಸುತ್ತಿದ್ದರು. ಅವರು ಪತ್ತೇಗಾರರೆಂದು ಕೈನೋ ಚೆನ್ನಾಗಿ ಬಲ್ಲ. ಬೇಟೆನಾಯಿಗಳಂತೆ ಚುರುಕಾದ ಈ ಮನುಷ್ಯವ್ಯಾಧರು ಜಾಡು ಹಿಡಿದುಕೊಂಡು, ಕೊನೆಗೆ ಪತ್ತೆ ಮಾಡೇಬಿಡುವರು. ಕುದುರೆಸವಾರನ ಕೈಯಲ್ಲಿ ಬಂದೂಕೂ ಇದ್ದಿತು. ಕೈನೋ ಭಯಭ್ರಾಂತಿಯಿಂದ ಹೆಂಡತಿಯತ್ತ ನೋಡಿ, "ನಡೆ ಜುಆನಾ, ಪತ್ತೆದಾರರು ಸಮೀಪಿಸುತ್ತಿದ್ದಾರೆ. ನಾವು ಬೆಟ್ಟಗಳಲ್ಲಿ ಹೋಗಿ ಅಡಗಿಕೊಳ್ಳೋಣ," ಅಂದ.

ಲಗುಬಗೆಯಿಂದ ತಮ್ಮ ಗಂಟು ಮೂಟೆ ಕಟ್ಟಿಕೊಂಡು, ಪಶ್ಚಿಮ ದಿಕ್ಕಿನಲ್ಲಿರುವ ಬೆಟ್ಟಗಳತ್ತ ಓಡೋಡುತ್ತಲೇ ಮುಂದೆ ನಡೆದರು. ಮರುಭೂಮಿಯನ್ನು ದಾಟಿದ ಬಳಿಕ, ದಾರಿಯು ಏರುದಿನ್ನೆಯಾಯಿತು. ಕಲ್ಲುಮುಳ್ಳುಗಳನ್ನು ತುಳಿಯುತ್ತ, ಬಂಡೆಗಲ್ಲುಗಳ ಮೇಲೆ ಎಡವುತ್ತ, ಏದುಸಿರು ಬಿಡುತ್ತ ಹಾಗೇ ಸಾಗಿದರು.

ಸೂರ್ಯಾಸ್ತವಾಗುತ್ತಿದ್ದಂತೆ, ಬೆಟ್ಟದಡಿಯನ್ನು ತಲುಪಿದರು. ಬೆಟ್ಟಗಳಲ್ಲಿ ಗುಹೆಯಂತಿರುವ ಒಂದು ಕತ್ತಲು ಕವಿದ ಸಂದಿನಲ್ಲಿ ಸ್ವಲ್ಪ ಹೊತ್ತಾದರೂ ತಲೆ ಮರೆಯಿಸಿಕೊಂಡಿರಲು ಸಾಧ್ಯವಾಗ



ಬಹುದೆಂದು ಕೈನೋ ಎಣಿಸಿದ. ದಣಿದು, ಬಾಯಾರಿ ಬಳಲಿದರೂ, ಪ್ರಯಾಸಪಟ್ಟು ದಿಬ್ಬವನ್ನು ಏರಿದರು. ಮೇಲೆ ಹತ್ತಿಬಂದಾಗ, ಮುಂಗತ್ತಲೆ ಆವರಿಸುತ್ತಲಿತ್ತು. ಜುಆನಾ ಅತ್ಯಂತ ಆಯಾಸದಿಂದ ಅಲ್ಲಿಯೇ ಧೊಪ್ಪನೆ ಕುಸಿದು ಬಿಟ್ಟಳು. ಮಗು ಒಂದೇ ಸಮನೆ ಅಳುತ್ತಲಿತ್ತು. ಕೈನೋ ನಿಂತು ನೆಟ್ಟ ದೃಷ್ಟಿಯಿಂದ ಬಂದ ದಾರಿಯನ್ನೇ ದಿಟ್ಟಿಸುತ್ತಿದ್ದ.

ದೂರದಲ್ಲಿ ಆ ಮೂರು ಆಕೃತಿಗಳು ಮತ್ತೆ ಕಂಡವು. ಇರುವೆಗಳಷ್ಟು ಚಿಕ್ಕದಾಗಿದ್ದವು. ಅವರ ಇನ್ನು ಸ್ವಲ್ಪ ಸಮಯದಲ್ಲಿಯೇ ಇಲ್ಲಿಗೆ ಖಂಡಿತ ಬಂದು ಬಿಡುವರು. ಕೈನೋ ಮನಸ್ಸಿನಲ್ಲೇ ಸ್ವರಕ್ಷಣೆಯ ಹಂಚಿಕೆ ಹಾಕುತ್ತಲಿದ್ದ.

ಕೆಲ ಹೊತ್ತಿನ ನಂತರ ಪತ್ತೇದಾರರು ಸಮೀಪಿಸುತ್ತ, ಕೆಳಗೆ ಅನತಿದೂರದಲ್ಲಿ ಕಾಣಿಸಹತ್ತಿದರು. ಅಲ್ಲಲ್ಲಿ ನಿಂತು ಆಲಿಸುತ್ತ, ಎಲ್ಲೆಡೆಗೂ ದೃಷ್ಟಿ ಹಾಯಿಸುತ್ತಿದ್ದರು. ಬಳಿಕ ಅಲ್ಲಿಯೇ ಕುಳಿತು, ಊಟ ಮುಗಿಸಿ, ಬೀಡಿ ಹೊತ್ತಿಸಿದರು. ಅವರ ಮೆಲ್ಲನೆಯ ಧ್ವನಿ ಕೈನೋಗೆ ಕೇಳಿಸುತ್ತಿತ್ತು. ಆನಂತರ ಇಬ್ಬರು ಕಾಲು ಚಾಚಿ ಮಲಗಿದರು: ಮೂರನೆಯವ ಕೈಯಲ್ಲಿ ಬಂದೂಕು ಹಿಡಿದು ಕಾವಲು ಮಾಡುವಂತಿದ್ದ.

ಕೈನೋ ತನ್ನ ಕಾರ್ಯ ವಿಧಾನದ ಲೆಕ್ಕ ಹಾಕಿದ. ಮೇಲಿನಿಂದ ಇಳಿದು ಅವರ ಮೇಲೆ ಧುಮುಕಿ ಮೊದಲು ಕಾವಲುಗಾರನ ಕೈಯಲ್ಲಿದ್ದ ಬಂದೂಕನ್ನು ವಶಪಡಿಸಿಕೊಳ್ಳಬೇಕು. ಬಳಿಕ ಅದರ ಗುಂಡಿನಿಂದ ತನ್ನ ಚಾಕುವಿನಿಂದಲೂ ಮೂವರನ್ನು ಕೊಂದುಬಿಡಬೇಕು. ಅಂದರೆ ಮಾತ್ರ ತನಗೂ ತನ್ನ ಕುಟುಂಬಕ್ಕೂ ಉಳಿಗಾಲ. ಇಲ್ಲವಾದರೆ ತಮ್ಮ ಜೀವಗಳು ಜೀವಕ್ಕಿಂತ ಹೆಚ್ಚಾದ ಮುತ್ತು ಅವರ ಸೊತ್ತಾಗುವುದು ಖಂಡಿತ.

ಕೈನೋ ಹೆಂಡತಿಯತ್ತ ತಿರುಗಿ ನೋಡಿದ. ಅವಳ ಅಗಲವಾದ ಕಣ್ಣುಗಳಲ್ಲಿ ಭಯ ತುಂಬಿತ್ತು. "ನಾನು ಹೋಗಬೇಕು ಜುಆನಾ," ಎಂದು ಮೆಲ್ಲನೆ ಉಸುರಿದ. "ಬೇಡ ಕೈನೋ. ಅವರು ನಿನ್ನನ್ನು ಕೊಂದೇಬಿಡುವರು," ಅವಳ ಧ್ವನಿ ಕಂಪಿಸುತ್ತಿತ್ತು. "ಇಲ್ಲ. ಈಗ ನಮಗಿರುವುದು ಇದೊಂದೇ ದಾರಿ. ಮಗು ಮಾತ್ರ ಸುಮ್ಮನಿರುವಂತೆ ಪ್ರಯತ್ನಿಸು. ಈಗ ಮಗು ಎಳ್ಳಷ್ಟೂ ಅಳಕೂಡದು," ಎಂದು ಎಚ್ಚರಿಸಿದ. ಕೈನೋ ಕಂದನ ಹಣೆಯ ಮೇಲೆ ಒಂದು ಕ್ಷಣ ಹಸ್ತವನ್ನಿರಿಸಿದ. ಹೆಂಡತಿಯ ಕೆನ್ನೆಯನ್ನೊಮ್ಮೆ ಮೃದುವಾಗಿ ನೇವರಿಸಿ ಹೊರಟ.

ಬೆಟ್ಟದ ಬಂಡೆಗಲ್ಲಿನ ಮೇಲಿನಿಂದ ಮೆಲ್ಲನೆ ನೆರಳಿನಂತೆ ಜಾರಿಕೊಂಡು ಇಳಿಯಹತ್ತಿದ. ಅವನ ಉಸಿರು ಕಟ್ಟಿ ಎದೆಬಡಿದುಕೊಳ್ಳುತ್ತಿತ್ತು. ಮುಖದ ಮೇಲೆ ಬೆವರಿನ ಹನಿಗಳು, ಮೂಡಿದ್ದವು. ಸಮನೆಲದ ಮೇಲೆ ಬಂದು ನಿಂತು. ವೈರಿಯತ್ತ ಸದ್ದಿಲ್ಲದೆ ಸರಿಯಹತ್ತಿದ. ಈಗ ತಮ್ಮಿಬ್ಬರ ನಡುವಿನ ಅಂತರ ಕೇವಲ ಹತ್ತಿಪ್ಪತ್ತು ಅಡಿಗಳಷ್ಟಾಗಬಹುದು. ಜಾಗರೂಕತೆಯಿಂದ ತನ್ನ ಕಾರ್ಯಾಚರಣೆಗೆ ಸಿದ್ಧವಾಗುತ್ತಲಿದ್ದ.

ಅಷ್ಟರಲ್ಲಿ ಮೇಲಿನಿಂದ ಕ್ಷೀಣ ಅಳುವಿನ ಧ್ವನಿ ಕೇಳಿದಂತಾಯಿತು. ಕೈನೋನ ಎದೆ ಜುಮ್ಮೆಂದಿತು. ಕಾವಲುಗಾರನ ಕಿವಿಗಳೂ ಚುರುಕಾಗಿ ಮೇಲುಗಡೆ ನೋಡಿದ. ಮಲಗಿದವನೂ ಎದ್ದು ಕುಳಿತು ಸುತ್ತಲೂ ಆಲಿಸಿ, "ಏನದು ಶಬ್ದ ?" ಎಂದ.

"ಏನೋ ಗೊತ್ತಿಲ್ಲ...ದರಿದ್ರ ನರಿಮರಿ ಇರಬಹುದು. ಮಗುವಿನಂತೆಯೇ ಗೋಳಿಡುತ್ತವೆ."

"ನರಿಮರಿ ಇರಬಹುದೇ? ಅಥವಾ......" ಮತ್ತೊಬ್ಬನೆಂದ.

"ನರಿಮರಿಯಿರಲಿ, ಏನೇ ಆಗಲಿ; ಇದು ಸುಮ್ಮನಿರಿಸುತ್ತದೆ" ಎನ್ನುತ್ತ ಕಾವಲುಗಾರ ತನ್ನ ಬಂದೂಕನ್ನು ತೋರಿಸಿ ಮೇಲೆ ಗುರಿಯಿಟ್ಟ.

ಕೈನೋ ಚಿರತೆಯಂತೆ ಕ್ಷಣಾರ್ಧದಲ್ಲಿ ಹಾರಿ ಬರುವಷ್ಟರಲ್ಲಿ ಗುಂಡು ಮಿಂಚಿನಂತೆ ಮೇಲೆ ಸಿಡಿದು ಹೋಯಿತು. ತಕ್ಷಣ ತನ್ನ ಚಾಕುವಿನಿಂದ ಕಾವಲಗಾರನ ಕುತ್ತಿಗೆ ಕೊಯ್ದು ಕೈಯಲ್ಲಿನ ಬಂದೂಕನ್ನು ಕಸಿದುಕೊಂಡು, ಅದರಿಂದ ಮತ್ತೊಬ್ಬನಿಗೆ ಏಟು ಹಾಕಿ, ಕೆಳಗೆ ಕೆಡವಿದ. ಮೂರನೆಯವ ಓಡಿ ಹೋಗುತ್ತಿದ್ದಂತೆ, ಅವನ ತಲೆಗೆ ಗುರಿಯಿಟ್ಟು, ಗುಂಡು ಹಾರಿಸಿದಾಗ, ಅವನೂ ನೆಲಕ್ಕುರುಳಿದ. ಮೂವರ ಕಥೆಯನ್ನು ಮುಗಿಸಿ, ಕೈನೋ ಏದುಸಿರು ಬಿಡುತ್ತ ದಂಗುಬಡಿದಂತೆ ಸುಮ್ಮನೆ ನಿಂತುಕೊಂಡ.

ಮೇಲುಗಡೆ ಮತ್ತೆ ಆ ಸ್ವರ ಕೇಳಿಸಿತು. ಆದರೆ ಮಗುವಿನ ರೋದನದ ಸ್ವರವಲ್ಲ: ಇದು ವಿಕಾರವಾದ ಗೋಳಾಡುವ ಆರ್ತನಾದ, ಶೋಕ ಸಂತಪ್ತ

ಮಾತೆಯ ಹೃದಯವಿದ್ರಾವಕ ಪ್ರಲಾಪ. ಕೈನೋನ ಕಣ್ಣು ಕತ್ತಲೆಗೂಡಿ ಕೆಳಗೆ ಕುಸಿದುಬಿದ್ದ.

*

ಅದೇ ಸಂಜೆ ಕೈನೋ ಮತ್ತು ಜುಆನಾ ಮನೆಗೆ ಮರುಳುತ್ತಿದ್ದಾರೆಂದು ಊರ ತುಂಬೆಲ್ಲ ಸುದ್ದಿ ಹಬ್ಬಿತು. ಜನರೆಲ್ಲರೂ ಅವನ್ನು ಬರಮಾಡಿ ಕೊಳ್ಳಲು ಉತ್ಸಾಹದಿಂದ ಹೊರಗೋಡಿದರು. ಆದರೆ ಅವರನ್ನು ಕಂಡೊಡನೆ ಗಾಬರಿಯಿಂದ ಸುಮ್ಮನೆ ಹಿಂದಕ್ಕೆ ಸರಿಯಹತ್ತಿದರು.

ಕೈನೋ, ಜುಆನಾ ಇಬ್ಬರೂ ಪಕ್ಕದಲ್ಲಿ ಮೆಲ್ಲನೆ ನಡೆದುಕೊಂಡು ಬರುತ್ತಿದ್ದರು. ಕೈನೋನ ಕೆರಳಿದ ಮುಖ ಬಿಗುವಾಗಿ, ರೌದ್ರಾವತಾರ ತಾಳಿತ್ತು. ಅವನ ಭುಜದ ಮೇಲೊಂದು ಬಂದೂಕು ನೇತಾಡುತ್ತಿತ್ತು. ಜುಆನಾಳ ಬಿಳಿಚಿದ ಮುಖ ಕೆಂಗೆಟ್ಟು ಕಣ್ಣುಗಳಲ್ಲಿಯೂ ಕರಾಳ ಪ್ರೇತ ಕಳೆ. ಅವಳ ಬೆನ್ನ ಮೇಲೆ ಸಡಿಲಾಗಿ ಅಲುಗಾಡು ತ್ತಿದ್ದ ಸಣ್ಣ ಭಾರವಾದ ಹೊರೆಯಲ್ಲಿ ರಕ್ತಮಯವಾದ ಸುತ್ತಿದ ಮಗುವಿನ ದೇಹ. ಅವರಿಬ್ಬರೂ ಯಾರಲ್ಲೂ ದೃಷ್ಟಿ ಹಾಯಿಸದೆಯೇ, ಸ್ವಪ್ನಗೊಂಡವರಂತೆ, ಮೌನದಿಂದ ಮುಂದೆ ಸಾಗುತ್ತಿದ್ದರು.

ನಗರದ ಪೇಟೆ ಬೀದಿಯಲ್ಲಿ ಹಾಯ್ದು, ಗುಡಿಸಲುಗಳನ್ನೆಲ್ಲ ದಾಟಿ, ಸಮುದ್ರ ದಂಡೆಯತ್ತ ನಡೆದು ನೀಲಿನಂಚಿನಲ್ಲಿ ತಡೆದು ನಿಂತರು. ಅಲ್ಲಿ ಜುಆನಾ ತನ್ನ ಮೂಟೆ ಕೆಳಗಿಳಿಸಿದಳು. ಕೈನೋ ಬಂದೂಕನ್ನು ಕೆಳಗಿಟ್ಟು. ಅಂಗಿಯೊಳಗಿನಿಂದ ಮುತ್ತನ್ನು ಹೊರತೆಗೆದು ಅಂಗೈಯಲ್ಲಿಟ್ಟು-ಕೊಂಡು ನೋಡಿದ. ಅದೆಷ್ಟು ಕಪ್ಪು ಅಸಹ್ಯವಾಗಿ ಕಂಡಿತು! ಅದರ ಉಗ್ರ ಸ್ವರೂಪದಲ್ಲಿ ಈಗ ಭೀಕರ ದೃಶ್ಯಗಳನ್ನು ಕಂಡ. ತಾನು ಕೊಂದ ದುಷ್ಟರ ಮುಖ: ಗುಂಡಿನೇಟಿನಿಂದ ತುಂಡರಿಸಿ ಹೋದ ತನ್ನ ಮುದ್ದು ಮಗುವಿನ ತಲೆ: ಮುಗ್ಧ ಹೆಂಡತಿಯ ಶೋಕಗ್ರಸ್ತ ಕಣ್ಣುಗಳ ದಾರುಣ ಚಿತ್ರಗಳೆಲ್ಲ ಅವನ ಕಣ್ಣ ಮುಂದೆ ಸುಳಿದಾಡಿ ದವು. ಆ ಮುತ್ತು ಅವನಿಗೆ ಸಾವು-ಕೇಡು-ಪಾಪ-ವಿನಾಶದ ಸಂಕೇತವಾಗಿ ಅದರ ವಿಲಕ್ಷಣ ಹೊಳಪು ಅಣಕಿಸುವಂತಿತ್ತು.

ಕೈನೋ ಜುಆನಾಳತ್ತ ತಿರುಗಿ ಅವಳ ಕಣ್ಣಲ್ಲಿ ಕಣ್ಣಿಟ್ಟು ನೋಡಿದ. ಕೊನೆಗೆ ಕಂಪಿಸುವ ಕೈಯನ್ನೆತ್ತಿ, ತನ್ನ ಶಕ್ತಿಯನ್ನೆಲ್ಲ ಒಟ್ಟುಗೂಡಿಸಿ ರಭಸದಿಂದ ಮುತ್ತನ್ನು ದೂರ ಎಸೆದ. ಮಿಂಚಿನಂತೆ ಚಿಮ್ಮಿ ಹೋದ ಮುತ್ತು ನೀರಿನಲ್ಲಿ ಮುಳುಗಿ ಸಾಗರತಳದಲ್ಲಿ ಮಾಯವಾಯಿತು. ನೀರಿನ ಮೇಲೆ ಅದು ಎಬ್ಬಿಸಿದ ಅಲೆಗಳು ಬಹಳ ಹೊತ್ತಿನವರೆಗೆ ಹಸುರಾದ ನೊರೆಯಿಂದ ತೀರದಲ್ಲಿ ಮಿನುಗುತ್ತಲಿದ್ದವು. ✡

ಕೆಲವು ಹೊಸತರಲ್ಲಿ ಕಾರುಗಳು ಚೆನ್ನಾಗಿಯೇ ಓಡುತ್ತವೆ, ತಕರಾರುಗಳು ಇಲ್ಲದೆ.

ಗಂಡಂದಿರೂ ಹಾಗೆಯೇ

* * *

ಅತಿ ಅನುರೂಪ ಗಂಡ ಸಿಗಲಿ ಎಂದು ಯುವತಿಯರು ಎಷ್ಟು ದಿನ ಬೇಕಾದರೂ ಕಾಯಲು ತಯಾರಿರುತ್ತಾರೆ. ಏತನ್ಮಧ್ಯೆ ಅವರ ವಿವಾಹ ಜರುಗಿಹೋಗುತ್ತದೆ.

* * *

ಅತ್ತೆ ಅಂದರೆ ಯಾರು?

ಇಬ್ಬರು ಕುಸ್ತಿ ಪಟುಗಳ ಮಧ್ಯೆ 'ರೆಫರಿ'ಯಾಗಿದ್ದರೂ ಒಬ್ಬರಲ್ಲಿ ಮಾತ್ರ ಒಲವುಳ್ಳವಳು.

* * *

ಗಂಡನೊಡನೆ ಸುಮಧುರ ಬಾಂಧವ್ಯ ಸಾಧಿಸಬೇಕಾದರೆ ಆತನನ್ನು ಸ್ವಲ್ಪ ಪ್ರೀತಿಸಿ ಹೆಚ್ಚು ಅರ್ಥ ಮಾಡಿಕೊಳ್ಳಬೇಕು. ಹೆಣ್ಣನ್ನು ಅದಷ್ಟು ಹೆಚ್ಚು ಪ್ರೀತಿಸಿ ಸ್ವಲ್ಪವೂ ಅರ್ಥ ಮಾಡಿಕೊಳ್ಳುವ ಗೋಜಿಗೆ ಹೋಗಬಾರದು.

ನಿಮ್ಮ ಶಬ್ದಭಂಡಾರ ಬೆಳೆಸಿ

ಶಬ್ದ ಭಾಂಡಾರವು ಹಣದ ಭಾಂಡಾರಕ್ಕಿಂತಲೂ ಅಮೂಲ್ಯವಾಗಿದೆ

ಇಲ್ಲಿ ಪ್ರತಿ ತಿಂಗಳೂ ಕೆಲವು ಶಬ್ದಗಳನ್ನು ಪರಿಚಯ ಮಾಡಿಕೊಡಲಾಗುವುದು. ಆಯಾ ಶಬ್ದದ ಮುಂದೆ ನಾಲ್ಕು ಅರ್ಥಗಳನ್ನು ಕೊಟ್ಟಿದ್ದು ಅವುಗಳಲ್ಲಿ ಒಂದು ಮಾತ್ರ ಸರಿಯಾಗಿರುತ್ತದೆ. ನಿಮಗೆ ಸರಿಯೆನಿಸಿದ ಅರ್ಥವನ್ನು ಮೊದಲು ಆರಿಸಿಕೊಳ್ಳಿರಿ. ಆಮೇಲೆ ಇದರ ಬೆನ್ನಿನ ಪುಟ ನೋಡಿರಿ. ಅಲ್ಲಿ ಸರಿಯಾದ ಅರ್ಥವನ್ನು ವಿವರಿಸಿದೆ.

೧. ಒಚ್ಚತ
(ಅ) ಅಚ್ಚುಕಟ್ಟು (ಆ) ಬೇಗಬೇಗ (ಇ) ಉಳಿತಾಯ (ಈ) ಕಾಣಿಗೆ

೨. ಒಜ್ಜಲು
(ಅ) ಭಾರ (ಆ) ಬಿಡಬೇಕಾದ್ದು (ಇ) ಒದ್ದೆ (ಈ) ಆವೇಶ

೩. ಮಂಡಿಸು
(ಅ) ಹಟ ಹಿಡಿ (ಆ) ಮುಂದಿರಿಸು (ಇ) ಅಡಿಗೆ ಮಾಡು (ಈ) ಮುರಿ

೪. ಮಂಡನ
(ಅ) ಹಟ (ಆ) ತಲೆ ಬೋಳಿಸುವುದು (ಇ) ತುಂಬಾ ಬಲ್ಲವ (ಈ) ಅಲಂಕಾರ

೫. ಜೋಂಪು
(ಅ) ಚಂದ (ಆ) ಹಗುರ ಪದಾರ್ಥ (ಇ) ಜಗಳ (ಈ) ತೂಕಡಿಕೆ

೬. ಜಪ್ಪು
(ಅ) ಕುಟ್ಟು (ಆ) ಸಿಪ್ಪೆ (ಇ) ಜಾಗ್ರತೆ (ಈ) ಮಂತ್ರ ಹೇಳು

೭. ಭಾನ
(ಅ) ಆಕಾಶ (ಆ) ಸೂರ್ಯ (ಇ) ತೋರುವಿಕೆ (ಈ) ಕಷ್ಟ

೮. ಭಾಸ
(ಅ) ಗೊಂದಲ (ಆ) ಒಡೆಯ (ಇ) ಮಾತು (ಈ) ಹೊಳೆಯುವುದು

೯. ಮಂದಾಗ್ನಿ
(ಅ) ಉರಿಯುವ ಬೆಂಕಿ (ಆ) ಬುದ್ಧಿಹೀನ (ಇ) ಅಪಚನ (ಈ) ಬೆಂಕಿಯ ಕೊಂಡ

೧೦. ಮಂತ್ರಾಲೋಚನೆ
(ಅ) ರಾಜಕಾರಣ (ಆ) ಗುಟ್ಟಿನಲ್ಲಿ ಚರ್ಚೆ (ಇ) ಊಹಾಪೋಹ (ಈ) ಗಂಟಲಲ್ಲೇ ನುಡಿಯುವುದು

೧೧. ಪರಿಕರ
(ಅ) ಸುತ್ತಲ ಸನ್ನಿವೇಶ (ಆ) ಸಲಕರಣೆ (ಇ) ವಿಘ್ನಗಳನ್ನು ದೂರ ಮಾಡುವುದು (ಈ) ಲಂಗ

೧೨. ಪರಾರಿ
(ಅ) ಓಡಿ ಹೋಗುವುದು (ಆ) ಬೇರೆ ಊರು (ಇ) ಗಣಪತಿ (ಈ) ಚಂದ್ರ

೧. **ಒಚ್ಚತ** (ಅ) ಅಚ್ಚುಕಟ್ಟು, ಒಪ್ಪ, ನೆಮ್ಮದಿ. ಉದಾ:— ಒಚ್ಚತವಾಗಿ ಸಂಸಾರ ಮಾಡು. [ಸಂ. ವತ್ಸತಾ?]

೨. **ಒಜ್ಜಲು** (ಇ) ಒದ್ದೆ, ತೇವ, ಕೆಸರು. ಉದಾ:— ಚರಂಡಿ ಉಕ್ಕಿ ಹರಿದು ರಸ್ತೆ ಒಜ್ಜಲಾಗಿತ್ತು. [ಸಂ. ಉದ್ರಲ–ನೀರಿಗೆ ಸಂಬಂಧಿಸಿದ್ದು]

೩. **ಮಂಡಿಸು** (ಅ) ಮುಂದಿರಿಸು, ಪ್ರತಿಪಾದಿಸು. ಉದಾ:— ನ್ಯಾಯಾಲಯದಲ್ಲಿ ವಾದವನ್ನು ಮಂಡಿಸಿದನು. [ಸಂ. ಮಂಡ್=ಹಂಚು]

೪. **ಮಂಡನ** (ಈ) ಅಲಂಕಾರ, ಅಲಂಕರಿಸುವಿಕೆ, ಆಭರಣ. ಉದಾ:— ಅವರು ಸಭೆಗೆ ಮಂಡನಪ್ರಾಯರಾಗಿದ್ದರು. [ಸಂ.]

೫. **ಜೊಂಪು** (ಈ) ತೂಕಡಿಕೆ; ಅಮಲು, ಮತ್ತು; ಮೈಮರೆವು. ಉದಾ:— ಕೂತಲ್ಲೇ ಜೊಂಪು ಹತ್ತಿತು. [ದೇಶ್ಯ]

೬. **ಜಪ್ಪು** (ಅ) ಕುಟ್ಟು, ಜಡಿ, ಹೊಡೆ; ಅಪ್ಪಳಿಸು. ಉದಾ:— ಹಣ ತಂದು ಸಾವುಕಾರನ ಮುಂದೆ ಜಪ್ಪಿದ. [ಕನ್ನಡ]

೭. **ಭಾನ** (ಇ) ತೋರುವಿಕೆ, ತೋಚುವಿಕೆ, ಹೊಳೆಯುವುದು; ಜ್ಞಾನ, ಎಣಿಕೆ. ಉದಾ:– ಮೈಮೇಲೆ ಭಾನವಿಲ್ಲ. [ಸಂ. ಭಾನ]

೮. **ಭಾಸ** (ಈ) ಹೊಳೆಯುವುದು, ಅನಿಸುವುದು, ಸ್ಫುರಿಸುವುದು. ಉದಾ:— ಸತ್ತವಳನ್ನು ಕಂಡಂತೆ ಭಾಸವಾಯಿತು. [ಸಂ. ಭಾಸ]

೯. **ಮಂದಾಗ್ನಿ** (ಇ) ಅಪಚನ, ಅಜೀರ್ಣ, ಉಂಡದ್ದು ಅರಗದಿರುವಿಕೆ. ಉದಾ:— ಅನ್ನವಿದ್ದವರಿಗೆ ಮಂದಾಗ್ನಿ ದೋಷ. [ಸಂ. ಮಂದ=ನಿರ್ಬಲ+ಅಗ್ನಿ=ಪಚನ ಶಕ್ತಿ]

೧೦. **ಮಂತ್ರಾಲೋಚನೆ** (ಅ) ಗುಟ್ಟಿನಲ್ಲಿ ಚರ್ಚೆ, ರಹಸ್ಯ ಮಾತುಕತೆ, ಉದಾ:– ವಿರೋಧಿ ನಾಯಕರನ್ನು ಮಂತ್ರಾಲೋಚನೆಗೆ ಕರೆದರು. [ಸಂ. ಮಂತ್ರ=ರಹಸ್ಯ ಚಿಂತನೆ+ಆಲೋಚನೆ]

೧೧. **ಪರಿಕರ** (ಅ) ಸಲಕರಣೆ, ಸಾಮಗ್ರಿ ಸಜ್ಜು. ಉದಾ:— ಪ್ರಬಂಧಕ್ಕೆ ಬೇಕಾದ ಪರಿಕರಗಳೆಲ್ಲ ಸಿದ್ಧವಾಗಿವೆ. [ಸಂ.]

೧೨. **ಪರಾರಿ** (ಇ) ಓಡಿ ಹೋಗುವುದು, ತಪ್ಪಿಸಿಕೊಂಡು ಕಣ್ಮರೆಯಾಗುವುದು. ಉದಾ:— ಕೈದಿ ಪರಾರಿಯಾಗಿದ್ದಾನೆ. [ಅರಬ್ಬಿ–ಫಿರಾಕ್=ಪಲಾಯನ].

ನಿಮ್ಮ ಶಬ್ದಶಕ್ತಿಯ ತರಗತಿ

ನೀವು ಎಷ್ಟು ಶಬ್ದಗಳಿಗೆ ಅರ್ಥ ಅರಿಸಿದ್ದು ಸರಿಯಾಗಿದೆಯೆಂದು ಎಣಿಸಿ ಕೆಳಗಿನಂತೆ ನಿಮ್ಮ ಶಬ್ದಶಕ್ತಿಯ ತರಗತಿಗಳನ್ನು ತಿಳಿಯಿರಿ.

೬—೮	ಸರಿಯಿದ್ದರೆ	...	ಸಾಧಾರಣ
೯—೧೦	,,	...	ಉತ್ತಮ
೧೧—೧೨	,,	...	ಅತ್ಯುತ್ತಮ

ನಿಮ್ಮ ಕಣ್ಣುಗಳು ನಿಮ್ಮ ಮನಸ್ಸಿನ ಕಿಟಿಕಿಗಳು...

ಚಂಡಮಾರುತದ ಚಿಹ್ನೆಗಳನ್ನು ನೋಡುತ್ತಿದ್ದೀರಾ? ಅಥವಾ ಕ್ಷುಬ್ಧ ವಾತಾವರಣದಲ್ಲಿ
ಪ್ರೇಮ ಪ್ರಕಾಶವನ್ನು, ಇಲ್ಲವೆ ಕಾರ್ಮೋಡಗಳ ಮಳೆಯ ಬಿಂದುಗಳು
ಅಪಾಯಕರವಾಗಿ ಒಂದುಗೂಡುವುದನ್ನು ಕಾಣುತ್ತಿದ್ದೀರಾ?
ಶಿಂಗಾರ್ ಡಿಲಕ್ಸ್ ಕಾಜಲ್ (ಕಾಡಿಗೆ) ಎಂದೆಂದೂ ಸುಂದರವಾಗಿಯೇ ಉಳಿಯುತ್ತವೆ...
ನಿಮ್ಮ ಕಣ್ಣುಗಳು ಯಾವುದೇ ಮನೋಭಾವದ ಸನ್ನೆಯನ್ನು ತೋರಿಸುವುದಾದರೂ ಕೂಡ.
ಅತ್ಯಂತ ಸೌಮ್ಯವಾಗಿದೆ (ಶುದ್ಧ ಸಸ್ಯೋತ್ಪನ್ನ). ಇದನ್ನು ಸುಲಭವಾಗಿ ಹಚ್ಚಬಹುದು,
ಸುಲಭವಾಗಿ ತೊಳೆದು ತೆಗೆಯಬಹುದು. ಅಲ್ಲದೆ ಎಷ್ಟೊಂದು ವಿಶ್ವಸನೀಯ!
ಇದರ ಪ್ಯಾಕ್ ಕೂಡ 'ಸ್ಟೆರಿಲೈಜ್' (ಕ್ರಿಮಿಶುದ್ಧಿ)ಗೊಳಿಸಲ್ಪಡುತ್ತದೆ! ಹರಡಿ ಕಲೆ ಮಾಡದ,
ಎದ್ದು ಹೋಗದ ಶಿಂಗಾರ್ ಡೀಲಕ್ಸ್ ಕಾಜಲ್ ಬಳಸಿರಿ. 'ಅವನಿಗೂ' ಅದು ಪ್ರಿಯವಾಗುವುದು.



everest/80/SH/431-kn

ಜನ-ಗಣ-ಮನ

ಬೋಳುವಾರು ಮಹಮದ್ ಕುಂಞಿ

ಇದು ಭಾರತ

ಗಕ್ಕನೆ ಬ್ರೇಕು ಹೊಡೆದಾಗ ಕೀರ್ರನೆ ಕಿರುಚಿಕೊಂಡಿತು: ಪೋಲೀಸು ಜೀಪು.

ಅಪರೂಪಕ್ಕೆ ಜುಮ್ಮಾ ನಮಾಜು ಮುಗಿಸಿಕೊಂಡು ಬಂದು ಬೀಡಿ–ಬ್ರಾಂಚಿನ ಮೆಟ್ಟಲೇರಿದ್ದ ಅದ್ರಾಮು ಕಂಗಾಲಾಗಿ ನಿಂತುಬಿಟ್ಟ. ಬೀಡಿ ನೂಲು ಸುತ್ತುತ್ತಿದ್ದ ಹತ್ತಾರು ಜೋಡಿ ಕೈಗಳಿಗೆ ಗರ ಬಡಿಯಿತು. ಮನೆಯೆದುರು ಹಸಿರು ವಾಹನವನ್ನು ಕಂಡ ಖಾದರ್ ದಿಗ್ಭ್ರಮೆಗೊಂಡು ಟಣ್ಣನೆ ಜಿಗಿದು ಮನೆಯೊಳಗೆ ನುಗ್ಗಿದ ಭರದಲ್ಲಿ ಅಂಗಳದಲ್ಲಿ ಎತ್ತರಕ್ಕೇರುತ್ತಿದ್ದ ಮುರಳಿನರಮನೆ ಜರ್ರನೆ ನೆಲವಾಯಿತು.

"ಯಾರಿದ್ದಾರೆ ಗಂಡಸರು ?"

ಜೀಪಿನ ಹಿಂಬಾಗಿಲಿನಿಂದ ಧುಮುಕಿದ ಪೀಸೀಯೊಬ್ಬ ಗಾಳಿಗೆ ಪ್ರಶ್ನೆಯೊಂದನ್ನು ಡಿಕ್ಕಿಸಿದ.

ಅತ್ತಿತ್ತ ಕತ್ತು ತಿರುವಿದ ಅದ್ರಾಮು ಪ್ರಶ್ನೆ ತನಗಿದ್ದಿರಬಹುದೆಂಬ ಅನುಮಾನದಿಂದ ರಸ್ತೆ ದಾಟಿ ಜೀಪಿನ ಬಳಿಗೆ ಬಂದ.

"ನೀನೆಯೋ ಈ ಮನೆಯ ಗಂಡಸು?"

"ಅಲ್ಲಪ್ಪ! ಯಾಕೆ ?"

"ಪೋಲಿಸ್ರಿಗೆ ಕೊಶ್ಚನ್ ಮಾಡ್ತಿಯಾ ಸುವ್ವರ್, ನಿಜ ಬೊಗಳು. ಈ ಮನೆಯಲ್ಲಿ ಯಾರ್‍ಯಾರು ಇದ್ದಾರೆ?"

"ಆಮಿನಮ್ಮ ಮತ್ತು ಅವಳ ಮಗ."

"ಕರಿ ಅವಳನ್ನು. ಸಾಹೇಬ್ರು ಬಂದದ್ದು ಕಣ್ಣಿಗೆ ಕಾಣಿಸುವುದಿಲ್ವಾ?"

"ಆಮಿನಮ್ಮಾ..., ಪೋಲೀಸ್ನೋರು ಕರೀತಾರೆ."

ಇದಿಯಾಗಿ ತೆರೆದುಕೊಂಡಿದ್ದ ಮುಂಬಾಗಿಲು ದಢಾರನೆ ಕೂಡಿಕೊಳ್ಳುವ ಮುನ್ನ, ನಲುವತ್ತರ ಕೋಲು ಮುಖವೊಂದು, ರಸ್ತೆಯಲ್ಲಿ ಗುಂಪು ಗಟ್ಟಿದ್ದ ಕೆಲವರ ಕಣ್ಣುಗೊಂಬೆಗಳಲ್ಲಿ ಅರೆಕ್ಷಣ ಹುಟ್ಟಿ ಸತ್ತಿತು. "ತೆಗಿಯೋ ಬಾಗಿಲು" ಪೀಸೀಯಿಂದ ಫಸ್ಟ್ ವಾರ್ನಿಂಗ್.

ಖಾದರನ ಅಳು ಕಿಟಕಿಯ ಸಂದಿಯಿಂದ ತಪ್ಪಿಸಿಕೊಂಡು ಬಂತು. ಬೀಡಿ ಬ್ರಾಂಚು ರಸ್ತೆಗೆ ಬಂತು.

ತಿರುವಿನಲ್ಲಿದ್ದ ಕೃಷ್ಣ ಭವನದಲ್ಲಿ 'ವ್ಯಾಸ್ ಆಫ್ ಪ್ರೊಫೆಸಿ' ಮಾಡುತ್ತಿದ್ದ ಸಿಲೋನು ಸತ್ತು ಹೋಗಿ, ಹೋಟೆಲಿನ ಬಾಗಿಲಲ್ಲಿ ನಾಲ್ಕೈದು ಅರ್ಧ ತುಂಬಿದ ಚಹದ ಗ್ಲಾಸುಗಳೊಂದಿಗೆ ಐದಾರು ತಲೆಗಳು ಕಾಣಿಸಿಕೊಂಡವು. ಬೀಡಿ ಬ್ರಾಂಚಿನ ಪಕ್ಕದಲ್ಲಿದ್ದ ಗೂಡಂಗಡಿ ಸಾಹುಕಾರ ಪುತ್ತು ಪೋಣಿ, ಶುಕ್ರವಾರ ಅಂಗಡಿ ಬಾಗಿಲು ತೆರೆದ ತಪ್ಪಿಗೆ,ಪೋಲೀಸ್ ರೂಪದಲ್ಲಿ ಅಲ್ಲಾಹುವೇ ಶಿಕ್ಷಿಸಲು ಬಂದಿರಬೇಕೆಂಬ ಭಯದಿಂದ 'ತೌಬಾ' ಹೇಳುತ್ತಾ ಅಂಗಡಿ ಮುಚ್ಚುವ ಯೋಚನೆಯಿಂದ ಹೊರಗಿನಿಂದ ಬಾಗಿಲಿಗೆ ಕೈ ಹಾಕುವವನು, ಪಕ್ಕದ [illegible] ಕಂಡು [illegible].

"ಸಾಹೇಬ್ರಿಗೆ ವಿಲ್ಸ್ ಬೇಕಂತೆ."



"ವಿಲ್ಸ್! ಇಲ್ಲ ಸಾರ್..., ಚಾರ್ಮಿನಾರ್ ಉಂಟು."

"ಸುಡುಗಾಡು ನಿನ್ದು..., ಹೂಂ, ಎಸಿ ಒಂದು ಪ್ಯಾಕು."

ಮುಂಜಾನೆಯಿಂದ ಆದ ವ್ಯಾಪಾರದಲ್ಲಿ ಇಷ್ಟು ಹೋದರೆ ಎಷ್ಟು ಬಂದೀತೆಂಬ ಲೆಕ್ಕಾಚಾರದಲ್ಲಿ ಕೂಡಿಸಬೇಕೋ ಕಳೆಯಬೇಕೋ ಎಂಬುದೂ ಅರ್ಥವಾಗದೆ ತಲೆ ಕೆರೆದುಕೊಂಡ.

ಜೀಪಿನ ಮುಂಭಾಗದಲ್ಲಿ ಕುಳಿತ ಎಸ್ಸೈಯ ಗಿರಿಜಾ ಮೀಸೆ, ಫುಟ್ ಬೋರ್ಡಿನಲ್ಲಿ ಪಡೆಯಾಡಿಸುತ್ತಿದ್ದ ಕರಿಬೂಟಿನಲ್ಲಿ ಸೂರ್ಯನೊಂದಿಗೆ ಫಳಫಳಿಸುತ್ತಿತ್ತು.

"ಏಯ್: ಬಾರೋ ಇಲ್ಲಿ. ಹೆಸ್ರೇನು?"

"ಅದ್ರಾಮು ಸಾರ್."

"ಎಷ್ಟು ಸಮಯದಿಂದ ನಿನ್ಗೆ ಈ ಹೆಂಗ್ಸಿನ ಗುರ್ತು ಉಂಟು?"

"ಆಂ!"

"ಹೇಳೋ ಸುವ್ವರ್. ಸಾಹೇಬ್ರು ಎನ್‌ಕ್ವೈರಿ ಮಾಡುವಾಗ ನಿನ್ನ ನಾಲಿಗೆಗೇನು ದನ ಮೆಟ್ಟ್ತದಾ?"

"ನನ್ಗೆ ಗುರ್ತು ಇಲ್ಲ ಸಾರ್."

"ಮೀನು ಹೊರಲಿಕ್ಕೆ ಲಾಯಕ್ಕು ಬೋಳಿಮಗ್ನೆ. ಮತ್ಯಾಕೆ ಬಂದಿ ಇಲ್ಲಿಗೆ?" ಬದುಕಿದೆ ಎಂದುಕೊಂಡು ಅದ್ರಾಮು ಹೆಜ್ಜೆಯೆತ್ತಿದ.

"ಏಯ್..., ಬಾರೋ ಇಲ್ಲಿ. ಎಲ್ಲಿಗೆ ಓಡುವುದು? ಐದು ಮಿನಿಟು ಕೊಡ್ತೇನೆ... ಈ ಮನೆಯ ಬಗ್ಗೆ ಎಲ್ಲ ಸಂಗ್ತಿ ಗೊತ್ತಿರೋ ಜನವನ್ನು ಕರ್ಕೊಂಡು ಬರಬೇಕು.. ಹುಂ...ನಡಿ."

ಬೆನ್ನು ತುರಿಸಿಕೊಂಡ ಅದ್ರಾಮು ನಾಲ್ಕು ಹೆಜ್ಜೆ ಬಲಕ್ಕೆ ನಡೆದವನು ಏನನ್ನೋ ಜ್ಞಾಪಿಸಿಕೊಂಡವನಂತೆ ಮರಳಿ ಬಂದು, "ಸೈಕಲ್ಲು ಹಾಸು ಖಾಸರಿಗೆ ಸಂಗ್ತಿಯೆಲ್ಲ ಗೊತ್ತುಂಟಾ ಏನೋ," ಎಂದ.

"ನನ್ನತ್ರ ಡ್ರಾಮಾ ಮಾಡ್ತಿಯಾ ಹೂರ್ಯಾಕಿ ಸವ್ನೆ.ಒದ್ದು ಕರ್ಕೊಂಡ್ಬಾ ನಿನ್ನ ಸೈಕಲ್ ಖಾಸನನ್ನು."

[illegible]

ಕರೀಂಖಾಸರ ಅರುವತ್ತರ ದೇಹ ಕೋಲಿನಾಸರೆಯಲ್ಲಿ ಜೀಪಿನ ಬಳಿಗೆ ಬಂದಾಗ, ಆವೇಶ ಬಂದವನಂತೆ ಎಸ್ಸೈ ಕೆಳಕ್ಕೆ ಹಾರಿದ.

"ಹೂಂ, ನೀವೆಯಾ ಸೈಕಲ್ ಪಾಪಿನವರು?"

"ಹೌದು ಸ್ವಾಮಿ."

"ಈ ಮನೆಯಲ್ಲಿರುವ ಹೆಂಗಸಿನ ಮೇಲೆ ಒಂದು ಕಂಪ್ಲೇಂಟು ಉಂಟು."

"ಕಂಪ್ಲೆಂಟಾ? ಅಮಿನಳ ಮೇಲೆ!"

"ಮತ್ತೆ ನಾನೇನು ಸುಳ್ಳು ಹೇಳ್ತೇವಾ?"

"!"

"ನಿಮ್ಗೆ ಈ ಹೆಂಗ್ಸಿನ ಗುರ್ತ್ ಹೇಗೆ ಆಯ್ತು?"

"ಹಾಂ...!"

"ಏನು ಕಿವಿ ಇಲ್ವ ನಿಮ್ಗೆ? ನಿಮ್ಗೇನು ಕತೆ ಹೇಳ್ಬೇಕಾ? ಈ ಮನೆಯಲ್ಲಿ ವಾಸವಾಗಿರುವ ಆಮಿನಮ್ಮ ಎಂಬ ಹೆಂಗಸಿನ ಪರಿಚಯ ನಿಮಗೆ ಎಷ್ಟು ಸಮಯದಿಂದ ಉಂಟು...? ಕೇಳಿಸ್ತದಾ?"

"ಕಿವಿ ಕೇಳಿಸ್ತದೆ ಸ್ವಾಮಿ ನನ್ಗೆ. ಆಮಿನಾ ಈ ಮನೆಗೆ ಬಂದ ದಿವದಿಂದ ನನಗೆ ಗೊತ್ತುಂಟು."

"ಅವಳು ಮೊದಲು ಎಲ್ಲಿದ್ಳು, ಏನ್ಮಾಡ್ತಿದ್ಳು ಎಂಬುದು ಗೊತ್ತುಂಟಾ?"

"ಇಲ್ಲ ಸ್ವಾಮಿ, ನನಗೆ ಅಗತ್ಯಾಂತ ಅನ್ಸಿಲ್ಲ. ಅದ್ಕೆ ವಿಚಾರಿಸಿಲ್ಲ."

"ನಮ್ಗೆ ಅಗತ್ಯ ಉಂಟು. ಈ ಮನೆಗೆ ಗಂಡಸು ಯಾರು?"

"ಯಾರೂ ಇಲ್ಲ."

"ಹಾಗಂದ್ರೆ!"

"ಯಾರೂ ಗಂಡಸು ಇಲ್ಲಾಂತ ಅರ್ಥ."

"ಸತ್ತಿದ್ದಾನೋ?"

"ಇರಬಹುದು."

"ಇಲ್ಲೊಂದು ಮಗು ಉಂಟಲ್ಲ ಅದು ಯಾರದ್ದು?"

"ಆಮಿನಳದ್ದು ...ಯಾಕೆ?"

"ಪ್ರಶ್ನೆ ಕೇಳಬೇಕಾದವರು ನಾವು. ನೀವಲ್ಲ."

"ಅಯ್ತು ಸ್ವಾಮಿ."

"ಈ ಮಗುವನ್ನು ಆಕೆ ಕದ್ಕೊಂಡು ಬಂದಿದ್ದಾಳೆ ಅಂತ ಕಂಪ್ಲೇಂಟು ಉಂಟು. ಏನು ಹೇಳ್ತೀರಿ?"

"!?"

"ಯಾಕೆ ಮಾತಾಡುವುದಿಲ್ಲಾ?"

"ಏನೂಂತ ಮಾತಾಡ್ಲಿ ಸ್ವಾಮಿ ನಾನು?"

ಎಸ್ಸೈಗೂ ಅದೇ ಪ್ರಾಬ್ಲಮ್. ಮುಂದೇನೂ ಪ್ರಶ್ನಿಸಲು ತಿಳಿಯದೆ ಪೀಸೀಯನ್ನು ಕರೆದು,

"ಏನೋ ಅದು? ಬಾಗಿಲು ತೆಗೆಯುವುದಿಲ್ಲಾಂತೆಯಾ?" ಎಂದ.

ಜನರ ಗುಂಪು ರಸ್ತೆಯಿಂದ ಅಂಗಳಕ್ಕೆ ಇಳಿಯಿತು.

"ಎಂತ ಉಂಟು ನಿಮ್ಗಲ್ಲಿ. ಸೀರೆ ಬಿಚ್ಚಿ ಡ್ಯಾನ್ಸು ಕುಣೀತೇನಾ ನಾನು?" ಎರಡು ಹೆಜ್ಜೆ ಯಕ್ಷಗಾನ ಮಾಡಿದ ಎಸ್ಸೈ, ರೋಲು ದೊಣ್ಣೆಯಿಂದ ಗಾಳಿಯನ್ನು ಮೂರು ರೌಂಡು ಸೀಳಿದ.

ಜಾತ್ರೆ ಚೆಲ್ಲಾಪಿಲ್ಲಿ.

"ತೆಗೀತೀಯಾ? ಬಾಗಿಲು ಒಡೀಬೇಕಾ?" ಬಡಬಡ ಬಾಗಿಲು ಬಡಿದ ಪೀಸೀ.

ಮನೆಯೊಳಗಿನ ಜೋಡಿ ಅಳುವಿಗೆ ಮುಳಿ ಸೂರು ಕಂಪಿಸಿತು. ಕಿಟಕಿಯಲ್ಲಿ ಮುಖವಿರಿಸಿದ ಖಾನರು,"ಬಾಗಿಲು ತೆಗಿ ಆಮಿನ. ಏನೂ ಆಗುವುದಿಲ್ಲ. ನಾನಿದ್ದೇನೆಲ್ಲ" ಎಂದರು.

ಅಳು ಬಾಗಿಲ ಬಳಿ ಬಂತು.

ಬಾಗಿಲು ತೆರೆಯಿತು.

ಸೊಂಟದಲ್ಲಿ ಖಾದರ್‌ನನ್ನು ಅಂಟಿಸಿಕೊಂಡ ಆಮಿನಮ್ಮ ಮೆಟ್ಟಲಿಳಿದಳು.

"ಆ ಹೆಂಗಸು ಮಗುವನ್ನು ಕರ್ಕೊಂಡು ಜೀಪು ಹತ್ತಿ. ನಿಮ್ದು ವಿಟ್ನೆಸ್ ಆಗಬೇಕು" ಎಂದ ಎಸ್ಸೈ ಜೀಪಿನೊಳಗೆ ನುಗ್ಗಿದ. ಕೊನೆಯ ತಿರುವಿನಲ್ಲಿ ಹೊಗೆ ಮಾತ್ರ ಕಾಣಿಸಿಕೊಂಡಾಗ ಅದ್ರಾಮ ಒಮ್ಮೆಲೇ ಅರಚಿದ,

"ಬ್ಯಾವರ್ಸಿ ಸೂಳೇ ಮಕ್ಳು."

ರಸ್ತೆಯ ಬದಿಯಲ್ಲಿ ಜೀಪು ಉಳಿಸಿಹೋಗಿದ್ದ ಚಕ್ರದ ಗುರುತಿಗೆ ಗುರಿ ಯಿಟ್ಟು ಕ್ಯಾಕರಿಸಿ ಉಗುಳಿದ.

*

ಕುರ್ಚಿಯಲ್ಲಿ ಕುಳಿತು ಕಾಲಾಡಿಸುತ್ತಾ, ಮೇಜಿನ ಮೇಲೆ ರೋಲುದೊಣ್ಣೆಯಿಂದ ಕರ್ಕಶ ಸ್ವರವೆಬ್ಬಿಸಿದ ಎಸ್ಸೈ ಪ್ರಶ್ನಿಸಿದ. "ಇವರ ಗುರ್ತ್ ಸಿಕ್ತದಾ ನಿನ್ಗೆ?"

ಆಮಿನಮ್ಮ ತಲೆಯೆತ್ತಿದಳು.

ಬೆತ್ತಲೆ ಎದೆಗೂಡಿನ ಮುದಿಯನೊಬ್ಬನನ್ನು ಗಾಜಿನೊಳಗೆ ಬಂಧಿಸಿ ನೆತ್ತಿಯ ಮೇಲೆ ಮೊಳೆ ಹೊಡೆದು ಗೋಡೆಗೆ ಅಂಟಿಸಿದ್ದರು. ಆವರೂ ಮುದುಕ ಪಟದಿಂದ ಮುಗುಳು ನಗುತ್ತಿದ್ದಾನೆ.

ಎಸ್ಸೈಗೆ ಎದುರಾಗಿ ಮರದ ಬೆಂಚಿನ ಮೇಲೆ ನಡು ವಯಸ್ಸಿನ ದಂಪತಿಗಳು.

ಗಂಡಸು ಎತ್ತಲೋ ನೋಡುತ್ತಿದ್ದಾನೆ.

ಹೆಂಗಸಿನ ಕಣ್ಣುಗಳಲ್ಲಿ ಯಾಚನೆ ಕರಗುತ್ತಿದೆ.

ಹಿಂದೆಲ್ಲೂ ನೋಡಿದ ನೆನಪಿಲ್ಲ.

"ಊಹುಂ" ಎಂದಳು ಅಮೀನಮ್ಮ.

"ಕಳ್ರ ಬಾಯಲ್ಲಿ ಸತ್ಯ ಸುಲಭದಲ್ಲಿ ಬಂದೀತಾ? ನಿಜ ಬೊಗಳು. ಇಲ್ಲದಿದ್ರೆ ಸೀಳಿ ಬಿಡ್ತೇನೆ ಇವರ ಮಗುವನ್ನು ಯಾಕೆ ಕದ್ದಿ?" ತೊಡೆಗಂಟಿಕೊಂಡಿದ್ದ ಬಾದರನನ್ನು ಹದ್ದಿನಂತೆ ಗಬಕ್ಕನೆ ಎತ್ತಿಕೊಂಡ ಅಮೀನಮ್ಮ ಬಲವಾಗಿ ಎದೆಗವಚಿಕೊಂಡಳು. ಉಸಿರುಗಟ್ಟಿದಂತಾಗಿ ಬಾದರ್ ಚೀತ್ಕಾರನೆ ಕಿರುಚಿದ.

"ಹಾಗಾದ್ರೆ ನೀನು ನಿಜ ಹೇಳುವುದಿಲ್ಲ ಅಲ್ವಾ?"

"......"

"ನಿನ್ನ ಗಂಡ ಎಲ್ಲಿದ್ದಾನೆ?"

"... ..."

"ಸತ್ತು ಹೋದ್ನ?"

"ಹುಂ."

"ಎಷ್ಟು ವರ್ಷವಾಯ್ತು?"

"..."

"ಒಂದು ಹತ್ತು ವರ್ಷ ಆಗಿರಬಹುದಲ್ವಾ?"

"ಹುಂ."

"ಈ ಮಗುವಿಗೆ ಎಷ್ಟು ಪ್ರಾಯ?"

"..."

"ಐದಾರು ಆಗಿರಬೇಕಲ್ಲಾ?"

"ಹೂಂ."

"ಹಾಗಾದ್ರೆ ಈ ಮಗು ಹೇಗೆ ಹುಟ್ಟಿತು?"

"!"

"ಯಾರಿಗಾದ್ರೂ ಕಾಲು ಎತ್ತಿದ್ಯಾ?"

"ಆಂ!"

"ಇನ್ನೂ ಇಲ್ವಾ? ಸರಿ ಹಾಗಾದ್ರೆ. ನನಗೇ ಕಲಿಸ್ತೀಯಾ?" ಎಂದು ವಿಕಾರವಾಗಿ ನಕ್ಕ ಎಸ್ಸೈ ಖಾನರನ್ನು ನೋಡಿ,

"ಬನ್ರೀ ಇಲ್ಲಿ. ಇಲ್ಲಿ ಸಹಿ ಹಾಕಿ ಹೊರಡಿ, ನಿಮ್ಮ ಸೈಕಲ್ ಬಿದ್ದಿಕ್ಕೆ."



ಎಸ್ಸೈ ಕಿರಿಬೆರಳಿರಿಸಿದ ಜಾಗದಲ್ಲಿ ಹೆಬ್ಬೆಟ್ಟು ಒತ್ತಿದ ಖಾನರು ತಲೆ ತಗ್ಗಿಸಿ ಹೊರನಡೆದರು.

*

ನಾವೆಲ್ಲ ಸಹೋದರರು

ಥೂಕ್ಕೆಂದು ಉಗಿಳಿದರು.

ಆಮಿನಮ್ಮ ಎಲೆಯಡಿಕೆಯರ್ಗಾ.ಬಿಟ್ಟಳು.

–ಇನ್ನು ಹೀಗೇ ಬಿಟ್ರೆ ತಲೆಗೆ ಹತ್ತಿ ಬಾಯಿಗೆ ಹೇಲು ಮಾಡ್ತಾರೆ.

–ನಾನು ಸುರುಸುವಿಗೆಲ್ಲ ನಂಬ್ಲೆ ಇಲ್ಲ ಮಾರಾಯ್ರೆ. ದೇವ್ರಾಣೆ ಹೌದು.

–ಆ ಜಾತಿ ಹೆಂಗಸ್ರೇ ಹಾಗೆ ಸ್ವಾಮೀ... ನಿಮ್ಗೆಗೊತ್ತಿಲ್ಲ, ಆ ಗ್ಯಾಸಿನ ಅಂಡೆಯ ಒಳ್ಗೆ ಎಂತ ಮಾಡಿದ್ರೂ ಸಂಗ್ತಿ ಗೊತ್ತಾಗುವುದಿಲ್ಲ. ಕುಂಡೆಗೆ ಲಾತ್ ಕೊಟ್ಟು ಓಡಿಸ್ಬೇಕು ಪಾಕಿಸ್ತಾನಕ್ಕೆ.

–ನಿಮ್ದು ಒಳ್ಳೆ ಗಮ್ಮತ್ ಮಾರಾಯ್ರು..., ಅಲ್ಲಿ ಇವರನ್ನು ಯಾರು ಸೇರಿಸಿಕೊಳ್ತಾರೆ. ನಮ್ಮಲ್ಲಿ ಹೊಲೆಯರು ಇಲ್ವಾ...? ಹಾಗೇ ಇವರು ಅಲ್ಲಿಗೆ ಹೋದ್ರೆ.

–ನನ್ಗೆ ಪಿತ್ತ ನೆತ್ತಿಗೇರಿದ್ದು ಯಾಕೆ ಗೊತ್ತುಂಟಾ? ಹೋಗಿ ಹೋಗಿ ಆ ಮುಂಡೆ ನಮ್ಮ ಜಾತಿ ಕೂಸನ್ನೇ ಆರಿಸಿ ಬಿಟ್ಟಳಲ್ವಾ ಅಂತ. ಕಾಣ್ಲಿಕ್ಕೆ ಎಷ್ಟು ಪಾಪ ಕಾಣ್ತಾಳೆ ಗೊತ್ತುಂಟಾ? ಹೇಳಿದ್ರೆ ನಂಬ್ಲಿಕ್ಕಿಲ್ಲ ಮಾರಾಯ್ರು ನೀವು.

–ಕರೆಕ್ಟ್‌ಮಾತು ನಿಮ್ದು. ಇದ್ಕೆ ನನ್ನ ಓಟುಂಟು. ಸುಮಾರು ನಾಲ್ಕು ವರ್ಷದಿಂದ ನೋಡಿದ್ದೇನೆ ನಾನು. ನಮ್ಮ ಅಂಗ್ಡಿದ್ದೇ ಸಾಮಾನು ಅವಳಿಗೆ. ನಾನು ಬೇಕಾದ್ರೆ ಧರ್ಮಸ್ಥಳಕ್ಕೆ ಆಣೆ ಮಾಡಿ ಹೇಳ್ತೇನೆ, ಒಂದು ನಯಾ ಪೈಸೆ ಅತ್ಲಗಿತ್ಲಗೆ ಮಾಡಿದ ಹೆಂಗ್ಸಲ್ಲ.

–ನಿಮ್ದು ಒಳ್ಳೆ ಸಂಗ್ತಿ ಮಾರಾಯ್ರೇ..., ಕಳ್ಳರೆಲ್ಲ ನಿಮ್ಮ ಅಂದಾಜಿನಲ್ಲಿ ಬೋರ್ಡ್ ಹಾಕ್ಕೊಂಡು ತಿರುಗ್ತಾರೆ ಅಂತ ಆಯ್ತು.

–ನಿಮ್ಗೆ ಒಂದು ಕತೆ ಗೊತ್ತುಂಟಾ? ಆ ಕೂಸಿನ ಮಿಣ್ಣೆಯು ಕೊಡಿ ಕಟ್ ಮಾಡಿಸ್ಬಿಟ್ಟದಾಳಂತೆ. ಅಣ್ಣ ನಿನ್ನೆ ರಾತ್ರಿ ಪ್ರೆಸ್‌ನಿಂದ ಬಂದವ್ನು.ಹೇಳಿದ. ನೀವು ಓದಿಲ್ವಾ. ಮೊನ್ನೆ ಪೇಪರ್‌ನಲ್ಲಿ ಬಂದದ್ದು? ಪವಿತ್ರ ಧರ್ಮಕ್ಕೆ ಮರಳಿ ಹದಿನೈದು ರವಿ ಅಂತ. ಆದ್ರೆ ಈಗ ಮಾತ್ರ ಕತೆ ಕೈಲಾಸ ಆಗಿದೆ.

–ಹಡ್ಜ ಆಯ್ತಲ್ಲ ಸ್ವಾಮಿ, ಇನ್ನೆಂತ ಮಾಡ್ತಾರಂತೆ?

–ಅದೆಲ್ಲ ದೊಡ್ಡ ಸಂಗ್ತಿ ಅಲ್ಲ ಮಾರಾಯ್ರೇ ಈಗೀಗ ಎಲ್ಲ ಜಾತಿಯಲ್ಲೂ ಹಾಗೆ ಮಾಡಿ-ಸ್ಕೊಳ್ತಾರೆ. ನನಗೊಂದು ಎಂಬಿಬಿಎಸ್ ಡಾಕ್ಟ್ರೇ ಸ್ವತಃ ಹೇಳಿದ್ದು. ಮದುವೆ ಆದವ್ರಿಗೆಲ್ಲ ಗೊತ್ತಿರ್ಪಹುದು. ಒಂದು ಗುಟ್ಟಿನ ಕೆಲ್ಸಕ್ಕೆ ಅದು ಭಾರಿ ಫಸ್ಟಂತೆ.

–ನಿಮ್ಮ ಗುಟ್ಟಿನ ಕೆಲ್ಸಕ್ಕೆ ಬೆಂಕಿ ಹಾಕ್ತು. ನನ್ನ ಪಾಯಿಂಟು ಬೇರೆಯೇ. ಐದು ವರ್ಷದ ಕೆಳ್ಗೆ ಮಗು ಕಾಣೆಯಾಗಿದ್ರೆ, ಇಷ್ಟು ದಿನ ಅವ್ರೇನು ಭಜನೆ ಮಾಡ್ತಿದ್ರಾ? ಕಂಪ್ಲೇಂಟು ಕೊಟ್ಟಿರಲಿಲ್ವಾ?

–ಈ ಪ್ಯಾಂಟು ಹೌದು. ಆದ್ರೆ ಈ ಹೆಂಗ್ಸು ಆ ಊರು ಬಿಟ್ಟು ಓಡಿದ ದಿವ್ಸವೇ ಮಗು ಯಾಕೆ ಕಾಣೆಯಾಯ್ತು? ಅದ್ರಲ್ಲೇ ಗೊತ್ತಾಗುವುದಿಲ್ವಾ ಯಾವುದು ನಿಜಾಂತ.

–ನೋಡಿ, ನಾನು ಹೇಳ್ತೇನೆ. ನಾವು ಹೀಗೆಲ್ಲ ಕ್ರಾಸ್ ಮಾಡ್ಕೊಂಡೇ ಹಾಳಾಗಿ ಹೋಗ್ತಿರೋದು. ಧರ್ಮ, ದೇಶ ಅಂದ್ರೆ ಚೂರೂ ಅಭಿಮಾನ ಇಲ್ಲ ನಮ್ಗೆ. ಕಂಪ್ಲೇಂಟು ಕೊಟ್ಟ ಕೂಡ್ಲೆ ಮಗು ಸಿಕ್ತದೇಂತ ಗ್ಯಾರಂಟಿ ಉಂಟಾ? ಈಗ ನೀವು ಹೇಳಿ, ಆ ಬ್ಯಾರಿಗೆ ಹುಟ್ಟಿದೋಳು, ನಮ್ಮ ಜಾತಿ ಒಂದು ಮಗುವನ್ನು ಜಾತಿಗೆಡ್ಸಿದ್ದು ನ್ಯಾಯವಾ?

–ನನ್ಗ್ಯಾಕೋ ಇದ್ರ ಬ್ಯಾಕ್‌ನಲ್ಲಿ ದೊಡ್ಡ ಒಂದು ಪ್ಲಾನು ಉಂಟೂಂತ ಗ್ಯಾರಂಟಿಯರ್ಗಾ.ದೆ. ಅದರ್ ವೈಸ್ ಆ ಒಂಟಿ ಹೆಂಗ್ಸಿಗೆ ಅಷ್ಟು ಕರೇಜ್ ಎಲ್ಲಿಂದ ಬರ್ತದೆ? ನೀವೇ ಡಿಸೈಡು ಮಾಡಿ: ಈ ಮಕ್ಕಿಗೆ ನಮ್ಮ ಲಾ ನಷ್ಟ ಆಗವುದಿಲ್ಲ. ಫ್ಯಾಮಿಲಿ ಪ್ಲಾನಿಂಗ್ ಕಂಪಲ್ಸರಿ ಅಲ್ಲ. ಅವ್ರ ಫ್ಯಾಮಿಲೀಸ್‌ಗೆ ನಮ್ಮ ರೀಪ್ ಮಾಡ ಬೇಕಾಕ್ತ?

–ಇದ್ಕೆ ಒಂದೇ ದಾರಿ. ನಾಲ್ಕು ಸ್ಟೂ-ಡೆಂಟ್ಸ್‌ಗೆ ಗಾಳಿ ಹಾಕಿದ್ರಾಯ್ತು. ಆ ಮುಂಡೆಯ ಮನೆಯನ್ನು ಇದ್ದಿರ್ಲೇ ಇಲ್ಲಾಂತ ಮಾಡಿಬಿಡ್ತಾರೆ.

–ನಿನ್ನ ಬ್ರೈನ್ ವರ್ಕ್ ಮಾಡುವುದಿಲ್ಲಾಂತ ಹೇಳುವುದು ಸುಳ್ಳಾ? ಅದು ಮನೆ ಯಾರ್ದು? ಅವಳಿರುವುದು ಸೇಟಿಗೆ. ಮನೆ ಬಿಟ್ ಆದ.

ಲಾಸ್ ನಮ್ಮವರಿಗೆ. ಅವಳಪ್ಪಲ್ಲಿ ಏಂತ ಉಂಟು? ನತ್ತಿಂಗ್.

–ಯಾವಾಗಂತೆ ಹೀಯರಿಂಗು?

*

ಇದು ನಮ್ಮ (ಸಂ)ವಿಧಾನ

"ಆರ್ಡರ್... ಆರ್ಡರ್..."

ಗುಸುಗುಸುವಿನ ಉಸಿರು ನಿಂತಿತು.

"ನಿನ್ನ ಹೆಸರು ಅಮಿನಾಬಿ, ಹೌದಾ?"

ಅಮಿನಮ್ಮ ತಲೆಯೆತ್ತಿದಳು.

ವಾರದ ಹಿಂದೆ ಪೋಲೀಸ್ ಸ್ಟೇಶನ್‌ನಲ್ಲಿ ಗೋಡೆಗಂಟಿದ್ದ ಎದೆಗೂಡಿನ ಮುದಿಯನ್ನು ಇಲ್ಲಿ ನೇಣು ಹಾಕಿದ್ದರು; ಆದರೂ ನಗುತ್ತಿದ್ದಾನೆ.

"ಹೌದು."

"ಹನ್ನೆರಡು ವರ್ಷಗಳ ಹಿಂದೆ ನೀನು ಮುತ್ತುಪ್ಪಾಡಿಯ ಅಬ್ದುಲ್ಲ ಎಂಬವನೊಂದಿಗೆ ಮದುವೆಯಾಗಿರುವಿ, ಹೌದಾ?"



"ಹೌದು."

"ನಿನ್ನ ಗಂಡ ಸಾಯುವ ತನಕ ನಿನಗೆ ಮಕ್ಕಳಿದ್ದಿರಲಿಲ್ಲ, ಹೌದಾ ?"

"ಹೌದು."

"ಆರು ವರ್ಷಗಳ ಹಿಂದೆ ನಿಮ್ಮ ಮಠಾರದಲ್ಲಿದ್ದ ಶಂಕರರಾವ್ ಎಂಬವರ ಮನೆಯಿಂದ ಅವರ ನಾಲ್ಕು ತಿಂಗಳ ಗಂಡು ಮಗುವನ್ನು ನೀನು ಅಪಹರಿಸಿಕೊಂಡು ಊರು ಬಿಟ್ಟು ಓಡಿ ಹೋಗಿರುವಿ. ಈಗ ನಿನ್ನೊಂದಿಗೆ ಬೆಳೆಯುತ್ತಿರುವ ಮಗುವಿನ ಹೆಸರು ಖಾದರ್, ಹೌದಾ?"

"ಆಂ!"

"ಹೌದಾ, ಅಲ್ಲವೋ ಹೇಳು?"

"ಹೌದು."

"ನೀನು ತಪ್ಪುಗಳನ್ನು ಒಪ್ಪಿಕೊಳ್ಳುತ್ತಿದ್ದೀಯಾ?"

"ಆಂ!"

"ಹೌದಾ, ಅಲ್ಲವೋ ಹೇಳು?"

"ಹೌದು."

"ನಿನಗೆ ಯಾರಾದರೂ ವಾರೀಸುದಾರರು ಇದ್ದಾರೊ?"

"ಹೌದು."

"ಹೌದು! ಯಾರಿದ್ದಾರೆ?"

"ನನ್ನ ಹೊಟ್ಟೆಯಲ್ಲಿ ಹುಟ್ಟಿದ ಮಗ, ಖಾದರ್..." ✡

ಅಜ್ಜಿ ಗಣಿತ

ಗಣಿತಶಾಸ್ತ್ರದಲ್ಲಿ ಜಗದ್ವಿಖ್ಯಾತಿ ಪಡೆದಿದ್ದ ಪ್ರೊಫೆಸರ್ ಮೊಮ್ಮಗನಿಗೆ ಆತನ ಅಜ್ಜಿ ಒಮ್ಮೆ, "ಮಗೂ, ನಿಜ ಜೀವನಕ್ಕೆ ಹೊಂದಿಕೊಳ್ಳದ ಇಂಥ ಸಿದ್ಧಾಂತಗಳಿಂದ ಮನುಷ್ಯನಿಗೆ ಅಷ್ಟೇನೂ ಲಾಭವಿಲ್ಲ," ಎಂದಿತು.

"ಒಬ್ಬನಿಗೆ ಒಂದು ಮನೆ ಕಟ್ಟಲು ೨೫೬ ದಿನಗಳು ಬೇಕಾದರೆ ಅದೇ ಮನೆ ಕಟ್ಟಲು ಇಬ್ಬರಿಗೆಷ್ಟು ದಿನ ಬೇಕು, ನಾಲ್ವರಿಗೆಷ್ಟು ದಿನ ಬೇಕುಎಂದು ಕೇಳುತ್ತಾ, ಅಜ್ಜಿ ಮೊಮ್ಮಗನ ಉತ್ತರಕ್ಕೆ ತಲೆದೂಗುತ್ತಾ ಕಡೆಗೊಮ್ಮೆ "೧,೫೪೩೨೦ ಜನಕ್ಕೆ ಆ ಮನೆ ಕಟ್ಟಲು ಎಷ್ಟು ಸಮಯ ಬೇಕು?" ಎಂದು ಕೇಳಿತು.

"ಒಂದು ನಿಮಿಷ" ತಟ್ಟನೇ ಉತ್ತರಿಸಿದ ಮೊಮ್ಮಗ. ಉತ್ತರ ಕೇಳಿ ನಕ್ಕ ಅಜ್ಜಿ "ಮಗೂ, ನೋಡು ಇಲ್ಲೇ ನಿನ್ನ ಪಾಂಡಿತ್ಯ ನಿಷ್ಪ್ರಯೋಜಕವಾಗುವುದು. ೧,೪೪,೩೨೦ ಜನರೇ ಏಕೆ, ಇಡೀ ಭೂಮಂಡಲದ ಜನರೆಲ್ಲಾ ಸೇರಿದರೂ ಒಂದು ನಿಮಿಷದಲ್ಲಿ ಮಾತ್ರ ಮನೆಯೊಂದನ್ನು ಕಟ್ಟಲು ಸಾಧ್ಯವೆ? ಅಸಾಧ್ಯ," ಎಂದಾಗ ಗಣಿತತಜ್ಞ ಬೆಪ್ಪಾಗಿದ್ದ.

—ಜಯಶ್ರೀ ಬಾಳಿಗಾ

* * *

ಬೋಲ್ಟನ್ (ಅಮೇರಿಕ) ನಗರದ ಗ್ರಂಥಾಲಯವನ್ನು ಹೊಸ ಕಟ್ಟಡಕ್ಕೆ ಸಾಗಿಸಬೇಕಿತ್ತು. ಆದರೆ ಕೋಟಿ ಸಂಖ್ಯೆಯ ಪುಸ್ತಕಗಳಲ್ಲದೆ ೧೩,೫೦೦ ಸಂಪುಟಗಳ ಕೆಲ ಹೊತ್ತಗೆಗಳನ್ನು ಹೊಂದಿದ್ದ ಆ ಗ್ರಂಥ ಸಂಗ್ರಹವನ್ನು ಸಾಗಿಸುವುದೊಂದು ಸಮಸ್ಯೆಯಾದಾಗ ಗ್ರಂಥಪಾಲ ರೇಮಂಡ್ ವೂಲೆ ಎಂಬಾತ, ಪ್ರತಿ ಸದಸ್ಯನಿಗೂ ಹತ್ತು ಪುಸ್ತಕಗಳನ್ನು ಒಂದು ತಿಂಗಳ ಅವಧಿಗೆ ಓದಲು ಕೊಟ್ಟು. ಓದಿದ ನಂತರ ಹೊಸ ಕಟ್ಟಡಕ್ಕೆ ತಂದೊಪ್ಪಿಸಬೇಕೆಂದು ವಿನಂತಿಸಿದನಂತೆ.

ವೈದ್ಯರೊಡನೆ ಗುಟ್ಟು ಬೇಡ

ಡಾ. ಎಸ್. ರಾಮರಾವ್

ರೋಗಿಯು ಕಾಯಿಲೆ ಇಂಥದು ಎಂದು ಪತ್ತೆಮಾಡಲು ಅನುಕೂಲವಾದ ಅನೇಕ ಆಧುನಿಕ ಸಲಕರಣೆಗಳು ಇಂದು ವೈದ್ಯಕೀಯಕ್ಕೆ ಲಭಿಸಿದೆ. ಇವುಗಳ ಬಳಕೆಯಿಂದ ಜಟಿಲವಾದ ಸೂಕ್ಷ್ಮದರ್ಶಕ ವೀಕ್ಷಣೆ, ಕ್ಷ ಕಿರಣ ಪರೀಕ್ಷೆ, ವೈದ್ಯುತ್ತಿಕ ಹೃದಯ ಲೇಖನ (ಎಲೆಕ್ಟ್ರೊ ಕಾರ್ಡಿಯೊಗ್ರಫಿ). ವೈದ್ಯುತ್ತಿಕ ಕಪಾಲ ಲೇಖನ (ಎಲೆಕ್ಟ್ರೊ ಎನ್‌ಸಿಫಲೊಗ್ರಫಿ) ವಿಕಿರಣಮಾಪನ ಮುಂತಾದ ವಿಶೇಷ ವಿಧಾನಗಳು ಸಾಧ್ಯವಾಗಿ ರೋಗ ನಿದಾನ, ಅಂದರೆ ಪತ್ತೆ, ಈಗ ಸುಲಭವೆನ್ನಿಸಿದೆ. ಹೀಗಿದ್ದರೂ ರೋಗ ಲಕ್ಷಣಗಳನ್ನು ಕೇಳಿ ವೈದ್ಯ ತಾನೇ ರೋಗಿಯ ದೇಹವನ್ನು ಮುಟ್ಟಿನೋಡಿ, ಕಣ್ಣುಗಳಿಂದ ವೀಕ್ಷಿಸಿ ಶಬ್ದವಿಶೇಷಗಳನ್ನು ಕೇಳಿ ಹೊಮ್ಮುತ್ತಿರಬಹುದಾದ ಕಂಪನ್ನು ಮೂಸಿ ಒಟ್ಟಿನಲ್ಲಿ ಪಡೆಯಬಹುದಾದ ಮಾಹಿತಿಗಳೇ ಅನೇಕ ಸಂದರ್ಭಗಳಲ್ಲಿ ಹೆಚ್ಚು ಅನುಕೂಲವಾಗಿರುತ್ತವೆ. ಇಂಥ ಮಾಹಿತಿಗಳನ್ನು ವೈದ್ಯ ತನ್ನ ಅನುಭವದ ಒರೆಗಲ್ಲಿಗೆ ಹಚ್ಚಿನೋಡುತ್ತಾನೆ; ಮೇಲುನೋಟಕ್ಕೆ ಅಕಾರಣವೇ ಎನ್ನಿಸುವಂತೆ ಕೆಲವು ಸಂದರ್ಭಗಳಲ್ಲಿ ತನ್ನ ಮನಸ್ಸಿಗೆ ಹೊಳೆಯಬಹುದಾದಂಥ ವಿಚಾರಗಳಿಂದ ಸ್ಫೂರ್ತಿಪಡೆಯುತ್ತಾನೆ. ಅಂತೂ ರೋಗಿಯನ್ನು ಕಾಡುತ್ತಿರುವ ವ್ಯಾಧಿ ಇಂಥದೇ ಇರಬೇಕೆಂಬ ಸಿದ್ಧಾಂತಕ್ಕೆ ಬರುತ್ತಾನೆ. ತನಗೆ ಇರುವ ತೊಂದರೆ ಏನು? ಎಷ್ಟು ದಿನಗಳಿಂದ ಇದೆ? ಹಿಂದೇನಾದರೂ ಇಂಥ ಇಲ್ಲವೆ ಇತರ ತೊಂದರೆ ಇತ್ತೆ? ಮನೆಯಲ್ಲಿ ಇತರರ ಆರೋಗ್ಯ ಹೇಗೆ? ಗೃಹಕೃತ್ಯದಲ್ಲಿ ಹೆಚ್ಚುಕಡಿಮೆಗಳೇನಾದರೂ ಸಂಭವಿಸಿದೆಯೆ ? ತಾನು ತಿಳಿದುಕೊಂಡಿರುವಂತೆ ರೋಗಕ್ಕೆ ಕಾರಣವಾಗಿರುವ ಸಂದರ್ಭವಿಶೇಷಗಳು ಏನಾದರೂ ಇವೆಯೆ? ಎಂಬ ತಪಶೀಲುಗಳನ್ನೆಲ್ಲ ರೋಗಿ ಮರೆಮಾಚದೆ ವೈದ್ಯನಿಗೆ ಒದಗಿಸುವುದು ಅಗತ್ಯ. ಹಾಗೆ ಒದಗಿಸುವುದರಿಂದ ವೈದ್ಯ ಅವಶ್ಯಕವಾದ ಪರೀಕ್ಷೆಗಳನ್ನು ಮಾಡಲೂ ರೋಗದ ವಿಷಯವಾಗಿ ಸರಿಯಾದ ನಿರ್ಧಾರಕ್ಕೆ ಬರಲೂ ಅನುಕೂಲವಾಗುತ್ತದೆ. ಕೆಲವು ವಿಷಯಗಳನ್ನು ವೈದ್ಯನಿಗೆ ಹೇಳಬೇಕಾಗಿಲ್ಲ ಎಂದು ರೋಗಿ ಕಾರಣಾಂತರದಿಂದ ಭಾವಿಸಿ ಅವುಗಳ ಪ್ರಸ್ತಾಪ ಮಾಡದೇ ಇರುವುದು ಅನೇಕ ವೇಳೆ ಉಂಟು; ಉದಾಹರಣೆಗೆ ಅವ್ಯಕ್ತ ಜಿಗುಪ್ಸೆ ಆಲಸ್ಯಗಳು, ಕಣ್ಣಿಗೆ ಕತ್ತಲೆ ಕವಿಯುವುದು. ಆಗಾಗಲೋ ಬರುವ ತಲೆನೋವು, ಉದರ ಶೂಲೆ, ಕಿವಿಯಲ್ಲಿ ವಿನಾಕಾರಣ ಶಬ್ದ ಕೇಳಿಸುವುದು, ಹಿಂದೆಂದೋ ಆಗಿದ್ದ ಆಮಶಂಕೆ, ಗದ್ದಕಟ್ಟು ಇತ್ಯಾದಿ ರೋಗ ಪ್ರಸಂಗಗಳು, ವೇಶ್ಯಾಸಂಬಂಧ, ಮದ್ಯಪಾನ, ಅಫೀಮು ಸೇವನೆ ಇತ್ಯಾದಿ ಅನೈಸರ್ಗಿಕ ಪ್ರಸಂಗಗಳು ವೈದ್ಯ ಸ್ವತಃ ಮಾಡುವ ದೈಹಿಕ ಪರೀಕ್ಷೆಯಿಂದಾಗಲಿ, ಇಂದು ಲಭ್ಯವಿರುವ ಆಧುನಿಕ ಸಲಕರಣೆಗಳ ಬಳಕೆ ಹಾಗೂ ವಿಶಿಷ್ಟ ತನಿಖಾ ಕ್ರಮಗಳಿಂದಾಗಲಿ ಈ ವಿಚಾರಗಳು ಪತ್ತೆ ಆಗುವುದಿಲ್ಲ. ರೋಗಕ್ಕೆ ಅವೇ ಪ್ರಧಾನ ಸೂಚನೆಗಳಾಗಿದ್ದರೆ ಅಂಥ ರೋಗದ ಅಸ್ತಿತ್ವ ತಿಳಿದುಬರುವುದಿಲ್ಲ. ಉಡಾಫೆಯಿಂದ ಅಥವಾ ಉದ್ದೇಶಪೂರ್ವಕವಾಗಿ

ರೋಗಿ ಇಂಥ ವಿಷಯಗಳನ್ನು ಮರೆಮಾಚಿದರೆ ವೈದ್ಯ ಕೇಳಿದಾಗಲೂ ನಿಜ ಹೇಳದಿದ್ದರೆ ಅವನಿಗೆ ರೋಗವಿಚಾರ ಖಚಿತವಾಗಿ ಗೊತ್ತಾಗದೆ ಮುಂದೆ ಪರಿಸ್ಥಿತಿ ಕ್ರೂರವಾಗಿ ಪರಿಣಮಿಸಿ ರೋಗ ಚಿಕಿತ್ಸಾತೀತ ಸ್ಥಿತಿ ಮುಟ್ಟಿದ್ದರೂ ಆಶ್ಚರ್ಯವಿಲ್ಲ. ನಿಜವಾಗಿ ನಡೆದ ಇಂಥ ಒಂದೆರಡು ಸಂದರ್ಭಗಳನ್ನು ಕೆಳಗೆ ಹೇಳಿದೆ.

ಮೈಸೂರಿನ ಹಳೆ ಅಗ್ರಹಾರದ ಬಡಾವಣೆಯಲ್ಲಿ ೪-೫ ವರ್ಷ ವಯಸ್ಸಿನ ಮಗು ರಸ್ತೆಯಲ್ಲಿ ಆಡುತ್ತಿದ್ದಾಗ ಒಂದು ಜಟಕಾ ಗಾಡಿಗೆ ಸಿಕ್ಕಿ ಬಿದ್ದುಬಿಟ್ಟಿತು. ಮಗುವಿನ ಮಂಡಿ ಮೊಳಕೈ ಮೇಲೆಲ್ಲ ತುಂಬ ತರಚಿ ಗಾಯವಾಗಿ ರಕ್ತ ಸುರಿಯಹತ್ತಿತು. ಮಗುವನ್ನು ದೊಡ್ಡ ಆಸ್ಪತ್ರೆಗೆ ಕರೆದುಕೊಂಡು ಹೋದರೆ ಮನೆಯ ಯಜಮಾನನಿಗೆ ಗೊತ್ತಾಗಿ ತನ್ನನ್ನು ಎಲ್ಲಿ ಬಯ್ಯುವನೋ ಎಂದು ಆ ಮಗುವಿನ ತಾಯಿ ಹತ್ತಿರವೇ ಇದ್ದ ಖಾಸಗಿ ವೈದ್ಯಶಾಲೆಗೆ ಕರೆದುಕೊಂಡು ಹೋದಳು. ತರಚಿದ ಗಾಯ ಅಷ್ಟೇ ಅಂತ ಉದಾಸೀನ ಮಾಡಬೇಡಿ; ಜನ ಕುದುರೆಗಾಡಿ ಮೋಟಾರು ವಾಹನಗಳು ಎಲ್ಲ ಓಡಾಡುವ ರಸ್ತೆಯಲ್ಲಿ ಆದ ಗಾಯ. ಧನುರ್ವಾಯು (ಟಿಟನಸ್) ಬರುವ ಸಂಭವ ಇದೆ. ಆದ್ದರಿಂದ ಗಾಯಕ್ಕೆ ಔಷಧಿ ಹಾಕುವುದು ಅಷ್ಟೇ ಅಲ್ಲದೆ ಧನುರ್ವಾಯುನಿವಾರಕ (ಇನ್‌ಜೆಕ್ಷನ್) ಆಗತ್ಯ ಎಂದು ವೈದ್ಯರು ಹೇಳಿದರು. ಆಕೆ 'ಏನೂ ಬೇಡ; ಗಾಯಕ್ಕೆ ಒಂದಿಷ್ಟು ಔಷಧಿ ಹಾಕಿ ಸಾಕು' ಎಂದು ಮೊದಲು ಹೇಳಿದರೂ ವೈದ್ಯರ ಬಲವಂತದಿಂದ ಕೊನೆಗೆ ಚುಚ್ಚುಮದ್ದು ಮಾಡಿಸುವುದಕ್ಕೆ ಒಪ್ಪಿಕೊಂಡಳು. ಚುಚ್ಚುಮದ್ದು ಕೊಡುವ ಮುನ್ನ ವೈದ್ಯ 'ಸಣ್ಣ ವಯಸ್ಸಿನಲ್ಲಿ ಮಗುವಿಗೆ ಟ್ರಿಪಲ್ ವ್ಯಾಕ್ಸಿನ್ ಕೊಟ್ಟಿತ್ತೆ?' ಎಂದು ಕೇಳಿದರು. ಆಕೆ 'ಹೌದು. ಈಗ ಮೂರು ವರ್ಷಗಳ ಹಿಂದೆ ಇಲ್ಲೇ ಡಾ. ಪ್ರತ್ಯಕ್ಷ ಅವರಲ್ಲಿ ಕೊಡಿಸಿತ್ತು' ಎಂದಳು. 'ಆ ಹೆಸರಿನ ಡಾಕ್ಟರು ಈ ಸುತ್ತಲೂ ಎಲ್ಲೂ ಇಲ್ಲವಲ್ಲ' ಎಂದು ಈ ವೈದ್ಯರು ಹೇಳಿದ್ದಕ್ಕೆ ಆಕೆ 'ಅವರ ಹೆಸರು ನನಗೆ ಸರಿಯಾಗಿ ಗೊತ್ತಿಲ್ಲ' ಎಂದಳು. ಪ್ರತ್ಯಕ್ಷ ಅವರ ವಿಳಾಸ ಏನು' ಎಂದು ಕೇಳಿದ್ದಕ್ಕೆ ಆಕೆ ಹೇಳಿದ ವಿಳಾಸ ಈ ವೈದ್ಯರ ಮನೆಯ ಹತ್ತಿರವೇ ಆಗಿತ್ತು. ಅಲ್ಲಿ ಇವರಲ್ಲದೆ ಬೇರೆ ವೈದ್ಯರು ಇಲ್ಲ. ಆದ್ದರಿಂದ ಇವರು ಆಕೆಗೆ 'ನೋಡಮ್ಮ, ಈ ರೀತಿ ಮುಚ್ಚುಮರೆ ಮಾಡಬೇಡಿ, ನಿಜ ಹೇಳಿ; ವಿಷಯ ತಿಳಿಯದೆ ನಾನು ಇನ್‌ಜೆಕ್ಷನ್ ಕೊಟ್ಟರೆ ಏನಾದರೂ ಪ್ರಮಾದ ಆಗಿಬಿಡಬಹುದು' ಎಂದು ಹೇಳಿದ ಮೇಲೆ ಆಕೆ ಬಲು ಅಳುಕಿನಿಂದ ಇದ್ದ ಸ್ಥಿತಿಯನ್ನು ಹೇಳಿದಳು. ಮಗುವಿನ ಪ್ರಸವಕ್ಕೆ ಆಕೆ ತವರಿನ ಹಳ್ಳಿಗೆ ಹೋಗಿದ್ದಳಂತೆ. ಮಗು ಹುಟ್ಟಿ ಮೂರು ನಾಲ್ಕು ತಿಂಗಳುಗಳ ನಂತರ ಪತಿಗೃಹಕ್ಕೆ ತೆರಳಬೇಕಾಗಿರುವಲ್ಲಿ ಮಾವ ಅಳಿಯ ಇವರುಗಳ ನಡುವೆ ಏನೋ ಮನಸ್ತಾಪಗಳು ಹುಟ್ಟಿ ಆಕೆ ಪತಿಯ ಮನೆಗೆ ಹೋಗಲು ೩ ವರ್ಷಗಳು ಸಾಧ್ಯವಾಗಲಿಲ್ಲವಂತೆ; ಸ್ಥಿತಿ ಅನಂತರ ಹೇಗೋ ಸಮಾಧಾನವಾಗಿ ಆಕೆ ಮಗುವನ್ನು ಕರೆದುಕೊಂಡು ಗಂಡನ ಮನೆಗೆ ಬಂದಳಂತೆ; ಆದರೂ ಸ್ಥಿತಿ ಇನ್ನೂ ಹಲವಾರು ತಿಂಗಳುಗಳು ಬಿಗಡಾಯಿಸಿಯೇ ಇದ್ದು ಈಗ ತಾನೇ ತಿಳಿಯಾಗುತ್ತಿದೆಯಂತೆ; ಈ ಗಲಾಟೆಗಳಲ್ಲಿ ಹಳ್ಳಿಗಾಡಿನಲ್ಲೆ ಬಾಲ್ಯವನ್ನು ಕಳೆದ ಮಗುವಿಗೆ ಟ್ರಿಪಲ್ ವ್ಯಾಕ್ಸಿನ್ ಕೊಡಿಸುವುದಿರಲಿ ಸಿಡುಬುಲಸಿಕೆಯನ್ನೂ ಹಾಕಿಸಿರಲಿಲ್ಲವಂತೆ, ತಿಳಿದಾಕೆ ತಾನು ಮಗುವಿಗೆ ಟ್ರಿಪಲ್ ವ್ಯಾಕ್ಸಿನ್ ಕೊಡಿಸಿಲ್ಲ ಇದು ಏಕೆ ಎಂದು ಕೇಳಿದರೆ ಹೇಗೆ ಹೇಳುವುದು? ಆದ್ದರಿಂದ ವಿಷಯವನ್ನು ಮುಚ್ಚು ಮರೆಮಾಡಿ ಬಾಯಿಗೆ ಬಂದ ಡಾಕ್ಟರರ ಹೆಸರು ಹೇಳಿ ಅವರ ಕೈಲಿ ಇನ್‌ಜೆಕ್ಷನ್ ಮಾಡಿಸಿತ್ತು ಎಂದು ಹೇಳಿದ್ದಳಂತೆ. ಇನ್‌ಜೆಕ್ಷನ್ ಕೊಡಿಸಿದ್ದು ನಿಜವೇ ಆಗಿದ್ದರೆ ಈಗ ಮಗುವಿಗೆ ಟಿಟನಸ್‌ಟಾಕ್ಸಾಯ್ಡ್ ಎಂಬ ಮದ್ದಿನ ಇಂಜೆಕ್ಷನ್ ಸಾಕಾಗಿತ್ತು. ಇಂಜೆಕ್ಷನ್ ಕೊಡಿಸಿದ್ದು ಸುಳ್ಳಾಗಿದ್ದರೆ ಈಗ ಟಿಟನಸ್ ಆಂಟಿ ಟಾಕ್ಸಿನನ್ನೋ ಆಂಟಿಟಾಕ್ಸಿನ್ ಟಾಕ್ಸಾಯ್ಡ್ ಮಿಶ್ರಣವನ್ನು ಚುಚ್ಚುಮದ್ದಾಗಿ ಕೊಡಬೇಕಾಗಿತ್ತು. ಟ್ರಿಪಲ್ ವ್ಯಾಕ್ಸಿನ್ ಕೊಟ್ಟಿದೆ ಎಂಬ ತಪ್ಪು ಮಾಹಿತಿಯನ್ನು ನಂಬಿ ಮಗುವಿಗೆ ಈಗ ಟಾಕ್ಸಾಯ್ಡ್ ಮಾತ್ರ ಕೊಟ್ಟಿದ್ದರೆ ಬಹುಶಃ ಧನುರ್ವಾಯು ಬರುವುದನ್ನು ತಪ್ಪಿಸುವುದಕ್ಕೆ ಆಗುತ್ತಿರಲಿಲ್ಲ; ಅಲ್ಲದೆ ಹೀಗೆ ಬಂದದ್ದು ಮಾರಕವಾಗಿಯೂ ಪರಿಣಮಿಸಬಹುದಿತ್ತು. ವೈದ್ಯರು ಮಗುವಿನ ತಾಯಿಗೆ

ಇದನ್ನು ವಿಶದಪಡಿಸಿ ತಕ್ಕ ಇನ್‌ಜೆಕ್ಷನ್ ಕೊಟ್ಟದ್ದಲ್ಲದೆ ಶೀಘ್ರದಲ್ಲೇ ಮಗುವಿಗೆ ಸಿಡುಬು ಲಸಿಕೆ ಹಾಕಿಸುವುದೂ ಅಗತ್ಯ ಎಂದು ಒತ್ತಿ ಹೇಳಿದರು.

ಇನ್ನೊಂದು ಪ್ರಸಂಗ. ಅಯ್ಯನವರು ಫ್ಯಾಕ್ಟರಿಯ ಸಾರ್ವಜನಿಕ ಸಂಪರ್ಕಾಧಿಕಾರಿ. ಬಲು ಹುಮ್ಮಸ್ಸಿನಿಂದ ಕೆಲಸ ಮಾಡುತ್ತಿದ್ದು ಮೇಲಾಧಿಕಾರಿಗಳು ಹಾಗೂ ಸಾರ್ವಜನಿಕರು ಎಲ್ಲರಿಗೂ ಬೇಕಾಗಿದವರಾಗಿದ್ದರು. ಪ್ರತಿಭಾವಂತನೆಂದು ಮೆಚ್ಚಿಗೆ ಪಡೆದು ಮುಂಬಡತಿಗಳಿಗೆ ಸುಗಮ ಹಾದಿ ಮಾಡಿಕೊಳ್ಳಬೇಕೆಂದೂ ಮನಸ್ಸಿನ ಒಳಆಸೆ. ಅಯ್ಯನವರ ಮನೆಯಾಕೆ ಒಂದು ದಿನ ಅವರ ಖಾಸಗೀ ವೈದ್ಯರಿಗೆ ಫೋನ್ ಮಾಡಿದರು: ಯಜಮಾನರಿಗೆ ಹಠತ್ತಾಗಿ ತೀವ್ರ ಎದೆನೋವು ಬಂದಿದೆ, ತತ್‌ಕ್ಷಣ ಬರಬೇಕು ಎಂದು. ವೈದ್ಯರು ಹೋಗಿ ನೋಡಿದಾಗ ಅಯ್ಯನವರು ತಮ್ಮ ಎದೆಯನ್ನು ಒತ್ತಿ ಹಿಡಿದು ಎದೆಯಲ್ಲಿ ಬಹಳ ನೋವು ಎಂದು ಹೇಳಿ ಹಾಸಿಗೆಯಲ್ಲಿ ಅಲುಗಾಡದೆ ಮಲಗಿದ್ದರು. ನೋವು ಬೆನ್ನಿನ ಕಡೆ ಥಳಕು ಹೊಡೆದಂತೆಯೂ ಭಾಸವಾಗುತ್ತಿತ್ತಂತೆ. ಮುಖ ಅತಿ ಗಾಬರಿಯಿಂದಲೋ ಎಂಬಂತೆ ಬಿಳಿಚಿ ಬೆವತುಹೋಗಿತ್ತು; ಹಣೆ ಮುಟ್ಟಿದರೆ ತಣ್ಣಗಿತ್ತು. ನಾಡಿ ಅಸ್ತವ್ಯಸ್ತವಾಗಿ ಮಿಡಿಯುತ್ತಿತ್ತು. ಅಯ್ಯನವರಿಗೆ ಹೃದಯಾಘಾತವಾಗಿರುವ ವಿಷಯ ವೈದ್ಯರಿಗೆ ಸ್ಪಷ್ಟವಾಯಿತು. ಅವರನ್ನು ವೈದ್ಯರು ತತ್‌ಕ್ಷಣ ಆಸ್ಪತ್ರೆಗೆ ದಾಖಲು ಮಾಡಿಸಿ ಅಗತ್ಯ ತುರ್ತು ಚಿಕಿತ್ಸೆಗಳಿಗೆ ಏರ್ಪಾಡು ಮಾಡಿಸಿದರು. ಎದೆನೋವಿನ ವಿಷಯವಾಗಿ ಹಿಂದೆಂದಾದರೂ ಹೀಗೆ ಆಗಿತ್ತೇ ಎಂದು ವೈದ್ಯರು ಮನೆಯಾಕೆಯನ್ನು ಪ್ರಶ್ನಿಸಿದಾಗ ಆಕೆ 'ನನಗೆ ಏನೂ ಗೊತ್ತಿಲ್ಲ, ಫ್ಯಾಕ್ಟರಿ ಕೆಲಸ ಅಂತ ಯಜಮಾನರು ಯಾವಾಗಲೂ ಗಡಿಬಿಡಿಯಲ್ಲೆ ಇರುತ್ತಾರೆ; ಹೊತ್ತುಹೊತ್ತಿಗೆ ಊಟ ವಿಶ್ರಾಂತಿಗಳಿಲ್ಲ; ನಿದ್ರೆಯಲ್ಲೂ ಅವರಿಗೆ ಫ್ಯಾಕ್ಟರಿ ಯೋಚನೆಯೇ ಎಂದು ತೋರುತ್ತೆ. ಏಕೆ ಇಷ್ಟು ಮಟ್ಟಿಗೆ ಫ್ಯಾಕ್ಟರಿ ವಿಷಯ ತಲೆಗೆ ಹಚ್ಚಿಕೊಳ್ಳುತ್ತೀರಿ, ಫ್ಯಾಕ್ಟರಿಯಲ್ಲಿ ನಿಮ್ಮ ಸರೀಕರು ಹಾಯಾಗಿ ಇಲ್ಲವೆ? ಅಂದರೆ ನಿನಗೆ ಗೊತ್ತಾಗುಲ್ಲ ಸುಮ್ಮನಿರು; ಹಾಗೆ ಜೇಬಾಬಿಟ್ಟಿ ಇರಲು ನನಗೆ ಮನಸ್ಸು ಒಪ್ಪುವುದಿಲ್ಲ; ಇಷ್ಟರ ಮೇಲೆ ನಾನು ಮಾಡುವ ಕೆಲಸ ನನಗೆ ಸುಖವಾಗಿದೆ; ಅದಕ್ಕೆ ನಾನು ಹಾಗೆ ಓಡಾಡುತ್ತೇನೆ' ಅನ್ನುತ್ತಾರೆ. 'ದೇಹ ಶ್ರಮವಾದರೂ ಆಗುವುದಿಲ್ಲವೆ?' ಅಂದರೆ ಏನು ಮಹಾ ಎಂದು ಹಾರಿಸಿಬಿಡುತ್ತಾರೆ. 'ಎಂದಾದರೊಮ್ಮೆ ಅವರಿಗೆ ಹೀಗೆ ಆಗುತ್ತದೆ ಅಂತ ನನ್ನ ಮನಸ್ಸಿಗೆ ಯಾವಾಗಲೂ ಹೊಳೆಯಲೇ ಇಲ್ಲ' ಎಂದರು. ಅಯ್ಯನವರಿಗೆ ಗುಣಮುಖವಾಗುತ್ತಿದೆ ಎಂಬುದು ಖಾತರಿ ಆದಮೇಲೆ ವೈದ್ಯರು ಅವರನ್ನೇ ಎದೆನೋವಿನ ವಿಚಾರವಾಗಿ ತಪಶೀಲುಗಳನ್ನು ಕೇಳಿದರು. ಅದರಿಂದ ತಿಳಿದುಬಂದಿದ್ದು ಇದು: ಫ್ಯಾಕ್ಟರಿಯಲ್ಲಿ ಸಿಬ್ಬಂದಿಗೆ ಸೇರಿದ ಎಲ್ಲರೂ ವರ್ಷಕ್ಕೆ ಒಂದು ಸಲ ಕಡ್ಡಾಯವಾಗಿ ವೈದ್ಯರಿಂದ ದೇಹ ಪರೀಕ್ಷೆ ಮಾಡಿಸಿಕೊಳ್ಳಬೇಕಾಗಿತ್ತು. ಅಯ್ಯನವರೂ ಅಂಥ ಕಡ್ಡಾಯ ವೈದ್ಯ ಪರೀಕ್ಷೆಗೆ ಒಳಗಾಗಿದ್ದರೂ ಮುಂದೆಂದೋ ಅವರಿಗೆ ಹೃದಯಾಘಾತ ಆಗಬಹುದೆಂಬುದರ ಸೂಚನೆ ಯಾವುದೂ ಪತ್ತೆ ಆಗಿರಲಿಲ್ಲ. ಫ್ಯಾಕ್ಟರಿಯ ವೈದ್ಯರು ಅಯ್ಯನವರ ದೈಹಿಕ ಪರೀಕ್ಷೆ, ಕ್ಷ ಕಿರಣ ಪರೀಕ್ಷೆ, ಇಲೆಕ್ಟ್ರೋಕಾರ್ಡಿಯೋಗ್ರಾಮಿನ ಪರೀಕ್ಷೆ ಎಲ್ಲವನ್ನು ಮಾಡಿದ್ದರೂ ಯಾವ ಸುಳಿವೂ ಸಿಕ್ಕಿರಲಿಲ್ಲ. ಆದ್ದರಿಂದ ಅವರು ಅಯ್ಯನವರನ್ನು 'ಪಾಸು' ಮಾಡಿದ್ದರು. ಫ್ಯಾಕ್ಟರಿ ವೈದ್ಯರು ಪರೀಕ್ಷಿಸುತ್ತಿದ್ದ ವೇಳೆ ಅಯ್ಯನವರು ಅವರಿಗೆ ಒಂದು ಮುಖ್ಯ ವಿಷಯ ಹೇಳುವುದನ್ನು ಉದ್ದೇಶಪೂರ್ವಕವಾಗಿಯೇ ಮರೆಮಾಚಿದ್ದರು. ಅಯ್ಯನವರಿಗೆ ಆಗಾಗ್ಗೆ ರಾತ್ರಿ ಪುಷ್ಕಳ ಭೋಜನವಾದ ನಂತರ ಕೊಂಚ ದೇಹ ಶ್ರಮವಾದ ನಂತರ ಇಲ್ಲವೇ ರಸ್ತೆಯ ತಿಟ್ಟು ಹತ್ತಿದ ನಂತರ ಸ್ವಲ್ಪ ಎದೆ ನೋವು ಕಾಣಿಸಿಕೊಳ್ಳುತ್ತಿತ್ತು ಮತ್ತು ಸ್ವಲ್ಪ ಹೊತ್ತಿನಲ್ಲೆ ತಾನಾಗಿಯೇ ಸಮಾಧಾನವಾಗುತ್ತಿತ್ತು. ಈ ವಿಷಯವನ್ನು ಫ್ಯಾಕ್ಟರಿ ವೈದ್ಯರಿಗೆ ತಿಳಿಸೋಣ ಏಕೆ? ಅವರು ಅಯ್ಯನವರ ಹೃದಯ ದುರ್ಬಲವಾಗಿದೆ ಎಂದು ಬರೆದಿಡುವುದು ಏಕೆ? ಅದನ್ನು ನೋಡಿ ಫ್ಯಾಕ್ಟರಿ ಆಡಳಿತದವರು ತನ್ನ ಕೆಲಸ ಬದಲಿಸಿದರೊ? ಇದರಿಂದ ತನಗೆ ಹಿತವೆನ್ನಿಸುತ್ತಿದ್ದ ಜನಸಂಪರ್ಕ, ವೈಭವದ ಭೋಜನಕೂಟಗಳು ಇವುಗಳಿಗೆ ಕತ್ತರಿ ಬೀಳುತ್ತಲ್ಲ; ತನ್ನ ವರ್ಚಸ್ಸು ಕಡಿಮೆ ಆಗಿ ಬಡತಿಯೂ ದೊರಕದೆ ಹೋಗಬಹುದಲ್ಲವೆ? ಇಲ್ಲ

ಏಕೆ? ಎಂದು ಅಯ್ಯನವರು ತಮ್ಮ ಎದೆನೋವಿನ ವಿಷಯ ಮರೆಮಾಚಿದ್ದರು. ಎದೆಯ ದೌರ್ಬಲ್ಯದ ವಿಷಯ ಫ್ಯಾಕ್ಟರಿ ವೈದ್ಯರಿಗೆ ಪತ್ತೆ ಆಗದೆ ಅವರು ಕೊಟ್ಟ ಆರೋಗ್ಯದ ಸರ್ಟಿಫಿಕೇಟಿನ ಬಲದಿಂದ ಅಯ್ಯನವರು ತಮ್ಮ ಸಂಪರ್ಕಾಧಿಕಾರಿ ಕೆಲಸದಲ್ಲೆ ಮುಂದುವರಿದರು. ಇಂದು ಹೀಗಾಯಿತು.

ಅಯ್ಯನವರು ಎದೆನೋವಿನ ವಿಷಯ ಮರೆಮಾಚಿದುದರ ಪರಿಣಾಮ ಇಷ್ಟಕ್ಕೇ ಮುಗಿಯಲಿಲ್ಲ. ದೀರ್ಘಕಾಲಿಕವಾಗಿಯೇ ಅವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯಬೇಕಾಯಿತು. ಅನಂತರ ವಿಶ್ರಾಂತಿ ಆರೈಕೆಗಳಿಗಾಗಿ ಇನ್ನಷ್ಟು ಕಾಲ ಕಳೆಯಬೇಕಾಯಿತು. ಈ ಕಾಲದಲ್ಲಿ ತಾವು ಕೂಡಿಟ್ಟಿದ್ದ ಹಣವನ್ನು ತೆಗೆದು ಅಗಾಧವಾಗಿ ಖರ್ಚುಮಾಡಬೇಕಾಗಿ ಬಂತು. ಆರೋಗ್ಯ ಸುಧಾರಿಸಿ ಫ್ಯಾಕ್ಟರಿ ಕೆಲಸಕ್ಕೆ ಹಿಂತಿರುಗಿದ ಮೇಲೆ ಅವರು ಹೆದರಿಕೊಂಡಿದ್ದಂತೆಯೇ ಆಯಿತು. ಇವರು ಹೃದ್ರೋಗಿ ಎಂದು ಮಾನಸಿಕ, ದೈಹಿಕ ಶ್ರಮಗಳಿಲ್ಲದ ಕೆಲಸದ ಹುದ್ದೆಗೆ ಆಡಳಿತವರು ಇವರನ್ನು ಬದಲಾಯಿಸಿದರು. ಆಸೆಪಟ್ಟುಕೊಂಡಿದ್ದ ಬಡತಿಗೂ ಕಲ್ಲು ಬಿತ್ತು. ಮೊದಲೇ ಫ್ಯಾಕ್ಟರಿ ವೈದ್ಯರಿಗೆ ಎದೆನೋವಿನ ವಿಚಾರ ತಿಳಿಸಿದ್ದರೆ ಅವರ ಶಿಫಾರಸಿನಿಂದ ಶ್ರಮವಿಲ್ಲದ ಇನ್ನೊಂದು ಹುದ್ದೆಗೆ ಸುಳಿವು ಕೊಡದಂತೆ ಜಾರಿಕೊಂಡು ಬಡತಿಯನ್ನು ಖಾತರಿಪಡಿಸಿಕೊಳ್ಳಬಹುದಾಗಿತ್ತು. ಆಸ್ಪತ್ರೆಯ ವಾಸ ಖರ್ಚು ಎಲ್ಲವನ್ನೂ ತಪ್ಪಿಸಿಕೊಳ್ಳಬಹುದಾಗಿತ್ತು.

ವ್ಯಕ್ತಿಯೇ ಬಾಯಿ ಬಿಟ್ಟು ಹೇಳಿ ವೈದ್ಯರಿಗೆ ತಿಳಿಸಬೇಕಾದ ಇನ್ನೊಂದು ಸಂದರ್ಭ. ಲಕ್ಷ್ಮಮ್ಮ ಚೊಚ್ಚಲು ಬಸುರಿ. ಆಕೆಯ ಗರ್ಭಾವಸ್ಥೆಯ ಕೊನೆ ವಾರಗಳಲ್ಲಿ ಆಕೆಯ ಯೋನಿಯಿಂದ ಸ್ವಲ್ಪ ಸ್ವಲ್ಪ ರಕ್ತಸ್ರಾವ ಆಗುತ್ತಿತ್ತು. ಆದರೆ ಕಿಬ್ಬೊಟ್ಟೆ, ಬೆನ್ನು, ಯೋನಿಯಲ್ಲಿ ನೋವು ಕಂಡುಬರುತ್ತಿರಲಿಲ್ಲ, ಕೆಲವು ಸ್ತ್ರೀಯರಲ್ಲಿ ಗರ್ಭಾವಸ್ಥೆಯಲ್ಲಿ ಮೊದಲಿನಿಂದಲೂ ಆಗಾಗ್ಗೆ ಸ್ವಲ್ಪ ರಕ್ತಸ್ರಾವವಾಗುವುದೆಂಬುದನ್ನೂ ಇದು ಪ್ರಮಾದವಾಗಿ ಪರಿಣಮಿಸದೆ ದಿನ ತುಂಬಿದ ಮೇಲೆ ಅವರಿಗೆ ಸುಖಪ್ರಸವವಾಗುವುದೆಂಬುದನ್ನೂ ಲಕ್ಷ್ಮಮ್ಮ ತನಗೆ ಈಗ ಆಗುತ್ತಿರುವ ರಕ್ತಸ್ರಾವದಿಂದ ಏನೂ ತೊಂದರೆ ಆಗದು, ಎಲ್ಲೂ ಯಾವ ರೀತಿಯ ನೋವು ಇಲ್ಲದೇ ಇರುವುದೇ ಇದಕ್ಕೆ ಸಾಕ್ಷಿ ಎಂದುಕೊಂಡು ತಾನೂ ಮಾಮೂಲಾಗಿ ಪ್ರಸವಪೂರ್ವ ಪರೀಕ್ಷೆ ಮಾಡಿಸಿಕೊಳ್ಳುವ ಸಂದರ್ಭಗಳಲ್ಲಿ ವೈದ್ಯರಿಗೆ ರಕ್ತಸ್ರಾವವಾಗುತ್ತಿದ್ದ ವಿಷಯ ತಿಳಿಸಲೇ ಇಲ್ಲ. ಇದರಿಂದ ಆಕೆಯ ಹೆರಿಗೆ ಕಾಲದಲ್ಲಿ ಅನಿರೀಕ್ಷಿತವಾಗಿ ಕಷ್ಟಗಳು ಕಂಡುಬಂದು ಕೊನೆಗೆ ಸತ್ತ ಮಗು ಹುಟ್ಟಿತು. ಅಲ್ಲದೆ ಅನಂತರ ಲಕ್ಷ್ಮಮ್ಮ ಚೇತರಿಸಿಕೊಳ್ಳುವುದೂ ಪ್ರಯಾಸವಾಯಿತು.

ಲಕ್ಷ್ಮಮ್ಮನಲ್ಲಿ ಕಂಡುಬಂದ ಸ್ಥಿತಿಗೆ ಪ್ಲೆಸೆಂಟ್ ಪ್ರೀವಿಯ ಎಂದು ಹೆಸರು. ಇದು ಕೆಲವು ಗರ್ಭಿಣಿಯರಲ್ಲಿ ಕಂಡುಬರುವ ಒಂದು ಬಗೆಯ ಕಷ್ಟ ಪ್ರಸವಪೂರ್ವ ಸ್ಥಿತಿ. ಇಂಥ ಸಂದರ್ಭವಿದ್ದಾಗ ಪ್ರಸವ ಸಮಯದಲ್ಲಿ ಹಠಾತ್ತಾಗಿ ಕಷ್ಟ ಒದಗಿಬಂದು ಮಗು ತಾಯಿ ಇಬ್ಬರಿಗೂ ಜೀವಾಪಾಯ ಒದಗಿಸಬಹುದು. ಪ್ಲೆಸೆಂಟ್‌ಪ್ರೀವಿಯ ಇರುವ ಸ್ಥಿತಿ ಗರ್ಭಿಣಿಯ ಹೊಟ್ಟೆ ಪರೀಕ್ಷೆ ವಗೈರೆಗಳಿಂದ ವೈದ್ಯರಿಗೆ ಗೊತ್ತಾಗುವುದಿಲ್ಲ. ಗರ್ಭಾವಸ್ಥೆಯ ಕೊನೆ ವಾರಗಳಲ್ಲಿ ವಿನಾಕಾರಣ ಮತ್ತು ಎಲ್ಲೂ ಯಾವ ನೋವು ಇಲ್ಲದೆ ಯೋನಿಯಿಂದ ಆಗಾಗ್ಗೆ ಸ್ವಲ್ಪ ರಕ್ತಸ್ರಾವವಾಗುತ್ತಿರುವುದೇ ಪ್ಲೆಸೆಂಟ್‌ಪ್ರೀವಿಯ ಸ್ಥಿತಿಯ ಅತಿ ಮುಖ್ಯ ಸೂಚನೆ. ರಕ್ತಸ್ರಾವವಾಗುತ್ತಿರುವುದು ಗರ್ಭಿಣಿಯ ಹೇಳಿಕೆಯಿಂದ ಮಾತ್ರ ವೈದ್ಯರಿಗೆ ಗೊತ್ತಾಗಬಹುದಾದ ವಿಷಯ. ಹಾಗೆ ಗೊತ್ತಾದರೆ ಅವರು ಪ್ಲೆಸೆಂಟ್‌ಪ್ರೀವಿಯದ ಅಸ್ತಿತ್ವವನ್ನು ಶಂಕಿಸಿ ಸೂಕ್ತ ಕ್ರಮವನ್ನು ಕೈಕೊಂಡು ಪೂರ್ವಸಿದ್ಧತೆ ಮಾಡಿಕೊಂಡಿರಬಹುದು.

ಪ್ಲೆಸೆಂಟ್‌ಪ್ರೀವಿಯ ಸ್ಥಿತಿಯಂತೆಯೆ ಗರ್ಭಿಣಿಯರಲ್ಲಿ ಗರ್ಭಾವಸ್ಥೆಯ ಕೊನೆಯವಾರಗಳಲ್ಲಿ ಅನೇಕ ತೊಂದರೆಗಳು ಕಂಡುಬರಬಹುದು. ಅವನ್ನು ಹೇಳಿದರೆ ವೈದ್ಯರು ಯೋನಿ ಪರೀಕ್ಷೆ ಮತ್ತು ಇತರ ಪರೀಕ್ಷೆಗಳಿಗೆ ಈಡುಮಾಡಿಬಿಡುತ್ತಾರೆ ಎನ್ನುವ ನಾಚಿಕೆ, ಹೆದರಿಕೆ ಇಲ್ಲವೆ ಬೇಜಾರಿನಿಂದ ವ್ಯಕ್ತಿ ಬಾಯಿ ಬಿಡದೆ ವಿಷಯಗಳನ್ನು

ಮಾಡುವುದರಿಂದ ಪ್ರಸವಕಾಲದಲ್ಲಿ ಅನಿರೀಕ್ಷಿತ ಸನ್ನಿವೇಶಗಳು ಹಠಾತ್ತಾಗಿ ಕಂಡುಬಂದು ಎಲ್ಲರೂ ಕಣ್ಣುಕಣ್ಣು ಬಿಡುವಂತಾಗಬಹುದು. ಆದ್ದರಿಂದ ಇಂಥ ಯಾವ ವಿಷಯಗಳನ್ನೂ ಮರೆಮಾಚು ವುದು ತಪ್ಪು.

ಲೈಂಗಿಕ ರೋಗಗಳ ವಿಷಯದಲ್ಲಿ ಆ ರೋಗ ಉಳ್ಳವರು ಮತ್ತು ಅನುಭವಿಸುತ್ತಿರುವವರು ತಾವು ಲೈಂಗಿಕ ರೋಗವನ್ನು ಅಂಟಿಸಿಕೊಂಡಿರ ಬಹುದಾದ ಸಂದರ್ಭ ಸನ್ನಿವೇಶಗಳನ್ನು ಮರೆ ಮಾಚುವುದು ಸಾಮಾನ್ಯ. ವೈದ್ಯರು ತಮ್ಮ ವಿಷಯದಲ್ಲಿ ಕೀಳುಭಾವನೆ ತಾಳುತ್ತಾರೆ ಎಂಬ ಅಳುಕಿನಿಂದ ಹೀಗೆ ಮರೆಮಾಚುತ್ತಾರೋ ಅಥವಾ ವೈದ್ಯರಿಂದ ಬೇರೆಯವರಿಗೆ, ಅದರಲ್ಲೂ ತಮ್ಮ ನೆಂಟರಿಷ್ಟರಿಗೆ ವಿಷಯ ತಿಳಿದು ಅದ ರಿಂದ ನಾಚಿಕೆಗೇಡಾಗುತ್ತದೆ ಎಂಬ ಭಾವನೆಯಿಂದ ಮರೆಮಾಚುತ್ತಾರೋ ತಿಳಿಯದು. ರೋಗಕ್ಕೆ ಕಾರಣವಾದ ಸಂದರ್ಭದ ಔಚಿತ್ಯಾನುಚಿತ್ಯದ ತುಲನೆ ವೈದ್ಯನದ್ದಲ್ಲ. ರೋಗಕ್ಕೆ ಚಿಕಿತ್ಸೆ ಒದಗಿ ಸುವುದು ರೋಗ ಪುನಃ ಬಾರದಂತೆ ನಿವಾರಣೋ ಪಾಯದ ಸಲಹೆ ಮಾಡುವುದು ಇವು ಮಾತ್ರ ಆತನ ಹೊಣೆ. ಆದ್ದರಿಂದ ವೈದ್ಯ ಕೀಳು ಭಾವನೆ ತಾಳುತ್ತಾನೆಂದು ಹಿಂಜರಿಯಬಾರದು. ರೋಗಿ ರೋಗದ ವಿಷಯವಾಗಿ ತನಗೆ ತಿಳಿಸಿದ ವಿಚಾರ ಗಳನ್ನು ವೈದ್ಯ ಯಾರಿಗೂ ಹೇಳಕೂಡದೆಂಬುದು ಒಂದು ಮುಖ್ಯ ವಿಧಿ. ಆದ್ದರಿಂದ ಗುಟ್ಟು ರಟ್ಟಾ ಗುವುದೆಂಬ ಹೆದರಿಕೆಯೂ ಸಲ್ಲ.

ಲೈಂಗಿಕ ರೋಗ ಉಳ್ಳ ಸ್ತ್ರೀಯರಲ್ಲಿ ರೋಗ ಬಾಧೆಗಳು ಸಾಮಾನ್ಯವಾಗಿ ಹೆಚ್ಚು ಇರುವುದಿಲ್ಲ. ಆದ್ದರಿಂದ ಆಕೆ ಈ ರೋಗದ ವಿಷಯ ತಾನಾ ಗಿಯೇ ವೈದ್ಯರ ಹತ್ತಿರ ಸಾಮಾನ್ಯವಾಗಿ ಹೇಳಿ ಕೊಳ್ಳುವುದಿಲ್ಲ. ಪದೇ ಪದೇ ಗರ್ಭಪಾತವಾಗು ವುದಕ್ಕೆ ಅಲ್ಲದೇ ಗರ್ಭಧಾರಣೆಯೇ ಆಗದಿರುವ ದಕ್ಕೆ ಲೈಂಗಿಕ ರೋಗ ಒಂದು ಪ್ರಮುಖ ಕಾರಣ. ಆದ್ದರಿಂದ ಮಕ್ಕಳು ಹುಟ್ಟದ ಆದರೆ ಮಕ್ಕಳಿ ಗಾಗಿ ಪರಿತಪಿಸುವ ಸ್ತ್ರೀಯರಲ್ಲಿ ಲೈಂಗಿಕರೋಗದ ಇರುವಿಕೆ ಅಥವಾ ಇಲ್ಲದಿರುವಿಕೆಯ ವಿಷಯದಲ್ಲಿ ವೈದ್ಯರು ಖಾತರಿಮಾಡಿಕೊಳ್ಳಬೇಕಾದುದು ಅಗತ್ಯ. ಇಂಥ ಸಂದರ್ಭದಲ್ಲಿ ತಾವಾಗಿಯೇ ವಿಷಯವನ್ನು ಹೇಳದೇ ಇದ್ದರೆ ಇಲ್ಲವೆ ವೈದ್ಯರು ಕೇಳಿದಾಗ ಮರೆಮಾಚಿ ಸುಳ್ಳು ಹೇಳಿದರೆ ಅದರಿಂದ ತಮ್ಮ ಕಷ್ಟನಿವಾರಣೆಗೆ ಎಷ್ಟು ಅನಾನುಕೂಲ ಎಂದು ಅರಿತುಕೊಳ್ಳಬಹುದು.

ಅನೇಕ ವೇಳೆ ರೋಗಿ ಉದ್ದೇಶಪೂರ್ವಕವಾಗಿ ಮರೆಮಾಚದೆ ಇದ್ದರೂ ಇದೇನು ಮಹಾ ವಿಷ ಯ ಎಂದೋ ರೋಗಕ್ಕೆ ಇದೇನೂ ಸಂಬಂಧ ಪಟ್ಟಿಲ್ಲ ಎಂದೋ ಅಥವಾ ವೈದ್ಯರಿಗೆ ಸಣ್ಣದು ದೊಡ್ಡದು ಎಲ್ಲವನ್ನು ಹೇಳಿ ಏಕೆ ಬೇಜಾರು ಮಾಡಬೇಕೆಂದೋ ಯಾವುದೇ ವಿಚಾರಗಳನ್ನು ವೈದ್ಯರಿಗೆ ತಿಳಿಸದೇ ಇರಬಹುದು. ವೈದ್ಯರಿಗೆ ಬೇಜಾರು ಮಾಡಿಕೊಳ್ಳುವ 'ಹಕ್ಕು' ಇಲ್ಲ. ನೀವು ಹೇಳುವ ವಿಷಯ ಮುಖ್ಯವೋ ಪ್ರಕೃತಕ್ಕೆ ಸಂಬಂಧಪಟ್ಟದ್ದೋ ಅಲ್ಲವೋ ಎಂಬೆಲ್ಲವನ್ನೂ ವೈದ್ಯರ ನಿರ್ಧಾರಕ್ಕೆ ಬಿಡಿ. ಅವರು ರೋಗ ಏನೆಂದು ಗುರುತಿಸಿ ನಿಮ್ಮ ದೇಹಾಲಸ್ಯಕ್ಕೆ ಚಿಕಿ ತ್ಸಾಕ್ರಮಗಳನ್ನು ಒದಗಿಸಿ ನಿಮ್ಮ ಆರೋಗ್ಯ ಕುದುರುವಂತೆ ಮಾಡಿ ಕೃತಾರ್ಥರಾಗುವಂತೆ ಸಹ ಕರಿಸಿ. ನಿಮ್ಮ ಜ್ಞಾಪಕಕ್ಕಾಗಿ ಈ ಕೆಳಗೆ ಏನು ಮಾಡಬೇಕು ಏನು ಮಾಡಬಾರದು ಎಂಬ ಬಗೆ ಒಂದು ಪಟ್ಟಿಯನ್ನು ಕೊಟ್ಟಿದೆ.

ವೈದ್ಯರು ನಿಮ್ಮ ನಿಜವಾದ ಸ್ನೇಹಿತರು. ನಿಮ್ಮ ಅವಹೇಳನ ಮಾಡುವದು ಅಥವಾ ನಿಮ್ಮ ತೇಜೋ ವಧೆಮಾಡುವದು ಅವರಿಗೆ ಬೇಕಿಲ್ಲ. ನಿಮ್ಮ ರೋಗ ಎಂಥದೆಂಬುದನ್ನು ಸರಿಯಾಗಿ ತಿಳಿದು ಅದಕ್ಕೆ ತಕ್ಕ ಚಿಕಿತ್ಸೆ ಮಾಡಿ ನಿಮಗೆ ಆರಾಮವಾಗು ವಂತೆ ಮಾಡುವುದೇ ಅವರ ಗುರಿ. ಆದ್ದರಿಂದ ನಿಮ್ಮ ಆ ಗಳಿಗೆಯ ತೊಂದರೆಗಳು ಏನು, ಯಾವ ಬಾಧೆಗಳಿಗಾಗಿ ನೀವು ವೈದ್ಯರ ಹತ್ತಿರ ಬಂದಿರಿ, ನಿಮ್ಮನ್ನು ಪ್ರಧಾನವಾಗಿ ಪೀಡಿಸುವವು ಯಾವವು ಎನ್ನುವುದನ್ನು ಯಾವ ಕಾರಣಗಳಿಂದಲೂ ಮರೆ ಮಾಚದೆ ಹೇಳಿ. ನಿಮ್ಮ ಗುರುತಿನವರು ಯಾರೊ ಇಂಥ ವೈದ್ಯ ಗಟ್ಟಿಗ ಎಂದು ಹೇಳಿದರೆಂದೋ ಮಾಮೂಲು ವೈದ್ಯನಿಗಿಂತ ಇವರು ಉತ್ತಮವೇ ಎಂದು ಪರೀಕ್ಷಿಸಲೆಂದೋ ಒಬ್ಬ ವೈದ್ಯನ ಹತ್ತಿರ ಹೋಗಬೇಡಿ.

ನಿಮ್ಮ ರೋಗದ ವಿಷಯಗಳನ್ನು ವೈದ್ಯರಿಗೆ ತಿಳಿಸುವಾಗ ಖಚಿತವಾದ ಮಾತುಗಳಿಂದ ತಿಳಿಯು

ಪಡಿಸಿ ವಿವರಣೆಗಳನ್ನು ಬಳಿಸಿಬಳಿಸಿ ಕೊಡುತ್ತ ಹೋಗಬೇಡಿ. ದ್ವಂದ್ವಾರ್ಥ ಬರುವಂಥ ಇಲ್ಲವೆ ಮುಗುಮ್ಮಾಗಿ ತೇಲಿಸಿ ಹೇಳುವಂಥ ವಿವರಣೆ ಬೇಡ. ಹೆಚ್ಚು ವಿವರಗಳನ್ನು ವೈದ್ಯ ಅಪೇಕ್ಷಿಸಿದಾಗ (ಅದರಲ್ಲೂ ಲೈಂಗಿಕ ವಿಚಾರವಾಗಿ) ಅಳುಕು, ಗಾಬರಿ, ನಾಚಿಕೆ ಇಂಥ ಭಾವನೆಗಳಿಂದ ಯಾವ ವಿಷಯವನ್ನು ಐಚ್ಛಿಕವಾಗಿ ಮುಚ್ಚುಮರೆಮಾಡ ಬೇಡಿ. ವೈದ್ಯರು ಬಳಸುವ ಶಬ್ದಗಳನ್ನು ನಿಮಗೆ ತಿಳಿದಂತೆ ನೀವೇ ಅರ್ಥೈಸಿಕೊಂಡು ನಿಮ್ಮ ರೋಗದ ವಿವರಣೆ ಕೊಡುವಾಗ ಅಂಥ ಶಬ್ದಗಳನ್ನು ಬಳಸಬೇಡಿ. ಹಾಗೆ ಬಳಸಿದರೆ ಅನರ್ಥವೇ ಅಧಿಕ.

ದೇಹ ಪರೀಕ್ಷೆಮಾಡುವಾಗ ವೈದ್ಯರೊಡನೆ ಸಹಕರಿಸಿರಿ. ಹೆದರಿಕೆಯಿಂದ ಅಥವಾ ನಾಚಿಕೆಯಿಂದ ಮೈಮುದುರಿಕೊಂಡು ದೇಹಪರೀಕ್ಷೆಗೆ ಅಡ್ಡಿಯಾಗಬೇಡಿ. ರೋಗದ ಪತ್ತೆಗಾಗಿ ವೈದ್ಯ ಯಾವ ವಿಶಿಷ್ಟ ಪರೀಕ್ಷೆಗಳನ್ನು ಮಾಡಬೇಕೋ ಅದನ್ನು ಮಾಡಿಯೋ ಅಥವಾ ಮಾಡಿಸಿಯೋ ತೀರುತ್ತಾನೆಂದು ದೃಢವಾಗಿರಿ. ನಿಮಗೆ ಕ್ಷ ಕಿರಣ ಪರೀಕ್ಷೆ ಅಥವಾ ಇನ್ನಾವುದೋ ವಿಶಿಷ್ಟ ಪರೀಕ್ಷೆ ಆಗಬೇಕೆಂದು ವೈದ್ಯರಿಗೆ ಸೂಚಿಸಬೇಡಿ.

ರೋಗ ತಪಾಸಣೆಗಾಗಿ ಮತ್ತು ಚಿಕಿತ್ಸೆಗಾಗಿ ವೈದ್ಯರು ಅನುಸರಿಸುವ ವಿಧಿಗಳು ಅವು ಸುಲಭ ಹಾಗೂ ಅತಿಸಾಮಾನ್ಯವಾದುವಾಗಲಿ, ಹೆಚ್ಚು ಹಣ ವ್ಯಯ ಆಗುವ ವಿಶೇಷ ರೀತಿಯದ್ದಾಗಲಿ ಅಗತ್ಯಕ್ಕೆ ತಕ್ಕಂತೆ ಮಾತ್ರ ವಿಧಿಸಿದ್ದಾಗಿರುವವು ಎಂಬುದನ್ನು ನಿಶ್ಶಂಕೆಯಿಂದ ನಂಬಿ. ಯಾವುದೇ ವಿಶೇಷ ಕ್ರಮವನ್ನು ರೋಗತಪಾಸಣೆಗಾಗಲಿ ಚಿಕಿತ್ಸೆಗಾಗಲಿ ವೈದ್ಯ ವಿಧಿಸಲಿಲ್ಲ ಎಂಬುದರಿಂದ ಆತ ನಿಮ್ಮ ರೋಗದ ವಿಚಾರದಲ್ಲಿ ಅನನುಭವಿ ಎಂದಾಗಲಿ ಉದಾಸೀನನಾಗಿದ್ದಾನೆಂದಾಗಲಿ ಭಾವಿಸಬೇಡಿ.

ವೈದ್ಯರು ಕೊಡುವ ಚಿಕಿತ್ಸೆಯ ವಿಷಯದಲ್ಲಿ ನಿಮಗೆ ಸ್ವಲ್ಪ ಕಷ್ಟವೆನ್ನಿಸಿದರೂ ಸಹಿಸಿಕೊಂಡು ಅವರ ಸಲಹೆಗಳನ್ನು ಚಾಚೂ ತಪ್ಪದಂತೆ ಅನುಸರಿಸಿ, ಕುಡಿಯುವ ಔಷಧಿ ಸಿಹಿಯಾಗಿರಬೇಕೆಂದಾಗಲಿ ಮಾತ್ರೆಗಳೇ ಅಥವಾ ಚುಚ್ಚುಮದ್ದೇ ಆಗಬೇಕೆಂದಾಗಲಿ ಅಪೇಕ್ಷಿಸಬೇಡಿ.

ಮನೋವೈಪರೀತ್ಯಗಳು ದೈಹಿಕ ರೋಗಗಳಂತೆಯೇ ಬುದ್ಧಿಜೀವಿಗಳಿಗೆ ಬರುವ ರೋಗಗಳೆಂಬುದನ್ನು ಗ್ರಹಿಸಿ. ಮನೋವೈಪರೀತ್ಯಗಳನ್ನು ವೈದ್ಯರಿಗೆ ತಿಳಿಸದೆ ಇರಬೇಡಿ. ✡



ಟೆಕ್ಸಾಸ್ ನಿವಾಸಿಗಳು ಬಹಳ ಶ್ರೀಮಂತರಂತೆ. ಒಬ್ಬ ವಿದೇಶೀಯ ಟೆಕ್ಸಾಸಿನವನೊಬ್ಬನನ್ನು "ನೀವು ಇಷ್ಟು ಶ್ರೀಮಂತರಾಗಿರಲು ಕಾರಣ ಏನು?" ಎಂದು ಪ್ರಶ್ನಿಸಿದ. "ನೋಡಿ, ನಾವೆಲ್ಲ ಮಳೆಗಾಲಕ್ಕಾಗಿ ದುಡಿದು ಕೂಡಿಡುತ್ತೇವೆ. ವರ್ಷವಿಡೀ ಕೂಡಿಡುತ್ತಲೇ ಹೋಗುತ್ತೇವೆ. ಆದರೆ ಮಳೆಗಾಲವೆಂಬುದೇ ಇಲ್ಲಿ ಗೊತ್ತಿಲ್ಲವಾದ್ದರಿಂದ ನಾವು ಕೂಡಿಟ್ಟದ್ದು ಕೋಟಿಯಾಗುತ್ತದೆ..."

—ಎ ಸಿ. ಸ್ಮಿತ್

* * *

"ತಜ್ಞ ಯಾರು ?"

"ಯಾವುದರ ಬಗ್ಗೆಯೂ ಏನೂ ಗೊತ್ತಿಲ್ಲದವನು ಮತ್ತು ಸಾಕಷ್ಟು ಹಣ ಕೊಡುವುದಾದರೆ ಕೂಡಲೇ ಬೇಕಾದ್ದನ್ನು ಹುಡುಕಿ ಹೇಳುವವನು"

—ರೆಕ್ಸ್ ಫ್ಲೆಚರ್



ಸ್ತ್ರೀಯರ ಚೆಲುವು
ಅತ್ಯಂತ ಸುಂದರ
ಸನ್ನಿವೇಶಗಳಲ್ಲಿ
ಖಟಾವ್
ಪಾಲ್ಗೊಳ್ಳುತ್ತದೆ.

ಖಟಾವ್‌ನ ಟೆರ್‌ಕೋಸಾ ಸೀರೆಗಳು

Rediffusion/K/1222.KN.

ಯುವ ಜನಾಂಗದ
ಹೊಸ ಆಕರ್ಷಣೆ

ಜೀನ್ಸ್

ಟಿ. ಎಂ. ಸುಬ್ಬರಾಯ

ಲೆವಿ ಸ್ಟ್ರಾಸ್, ೧೮೫೦ರಲ್ಲಿ ಕೇವಲ ಆರು ಡಾಲರ್‌ಗಳಿಗೆ ನಾರಿನ ಒರಟು ಇಜಾರದ ಜೋಡಿಯೊಂದನ್ನು ಮಾರಾಟ ಮಾಡಿದಾಗ ಮುಂದಿನ ಒಂದು ಶತಮಾನದ ಅವಧಿಯಲ್ಲಿ ಫ್ಯಾಷನ್ನಿನ ಲೋಕದಲ್ಲಿ ಹೊಸ ಅಲೆಯೊಂದನ್ನು ಹಾಯಿಸುತ್ತೇನೆ ಎನ್ನುವ ಕಲ್ಪನೆ ಅವನಿಗಿದ್ದಿಲ್ಲ. ಅವನ ಹೆಸರಿನ ಲೆವಿಸ್ ಸ್ಟ್ರಾಸ್ ಆ್ಯಂಡ್ ಕಂಪನಿ ಇಂದು ಮಾರುವ ೨೫೦,000,000 ಸಿದ್ಧ ಉಡುಪುಗಳಲ್ಲಿ ಈ ಒರಟು ಇಜಾರಗಳೇ ೮೩,000000 ಜೋಡಿ! ಅಲ್ಲಲ್ಲಿ ತೇಪೆ ಹಾಕಿದ, ಆಕಾಶನೀಲಿ ಬಣ್ಣದ ಈ ಇಜಾರಗಳಿಗೆ ಆಕರ್ಷಣೀಯ ಹೆಸರು "ಜೀನ್ಸ್." ಪ್ರಪಂಚದಾದ್ಯಂತ ಇವುಗಳಿಗೆ ಭಾರಿ ಬೇಡಿಕೆ. ಇವುಗಳನ್ನು [illegible] ಜೀನ್ಸನ್ನು ಇಂದು ಟೋಕಿಯೋದ ಬೀದಿಗಳಲ್ಲಿ ಕಾಣಬಹುದು. ಅಮೇರಿಕದ ರೈತರೂ ಕಾರ್ಮಿಕರೂ ಇದನ್ನು ಧರಿಸುತ್ತಾರೆ. ಭಾರತೀಯ ವಿದ್ಯಾರ್ಥಿಗಳಲ್ಲಿ ಜೀನ್ಸಿನ ವ್ಯಾಮೋಹ ಹೆಚ್ಚುತ್ತಿದೆ.

ಜೀನ್ಸನ್ನು ತಯಾರಿಸುವ ಎಷ್ಟೋ ಕಾರಖಾನೆಗಳು ವಿಶ್ವದ ಹಲವು ರಾಷ್ಟ್ರಗಳಲ್ಲಿ ತಲೆಯೆತ್ತಿವೆಯಾದರೂ ಲೆವಿಸ್ ಸ್ಟ್ರಾಸ್ ಕಂಪನಿಯದು ಅವರಲ್ಲಿ ಏಕಸ್ವಾಮ್ಯ ಅಧಿಕಾರವಾಗಿಯೇ ಉಳಿದಿದೆ. ಅವರಷ್ಟೇ ಗಣ್ಯವೆನಿಸಿದ ಇನ್ನೆರಡು ಕಂಪನಿಗಳೆಂದರೆ, ರ್‍ಯಾಂಗ್‌ಲರ್ಸ್ ಮತ್ತು ಫಾಲಮರ್ಸ್. ಲೆವಿಸ್ ಸ್ಟ್ರಾಸ್ ಕಂಪನಿಯೊಂದೇ ಪ್ರಪಂಚದಾದ್ಯಂತ ಸುಮಾರು ಮೂವತ್ತೈದು ದೇಶಗಳಲ್ಲಿ ಐವತ್ತಕ್ಕೂ ಹೆಚ್ಚು ತನ್ನ ಶಾಖಾ ಕಚೇರಿಗಳನ್ನು ತೆರೆದಿದೆ. ಇವುಗಳಲ್ಲಿ ಕಂಪನಿಯ ಪತಿಯಿಂದ ಕೆಲಸ ಮಾಡುವ ಇಪ್ಪತ್ತೆರಡು ಸಾವಿರಕ್ಕೂ ಹೆಚ್ಚು ಮಂದಿ ಪ್ರತಿನಿಧಿಗಳಿದ್ದಾರೆ. ಇದು ಹೇಗೆ ಆರಂಭವಾಯಿತು? ಮತ್ತು ಇಷ್ಟೆಲ್ಲಾ ಹೇಗೆ ಸಾಧ್ಯವಾಯಿತು?

ಲೆವಿ ಸ್ಟ್ರಾಸ್ ಹುಟ್ಟಿನಲ್ಲಿ ಬವೇರಿಯನ್ ಯಹೂದ್ಯ. ೧೮೪೭ರಲ್ಲಿ ಐರೋಪ್ಯ ದೇಶಕ್ಕೆ ವಲಸೆ ಹೊರಟು, ತನ್ನ ಸಹೋದರರಿಬ್ಬರು ಮೊದಲೇ ನೆಲೆ ನಿಂತಿದ್ದ ನ್ಯೂಯಾರ್ಕಿಗೆ ಹೋದ. ಅಲ್ಲಿಂದ ಸ್ಯಾನ್ ಫ್ರಾನ್ಸಿಸ್ಕೋಗೆ ಪಯಣಿಸುತ್ತಿದ್ದಾಗ ಮಾರ್ಗ ಮಧ್ಯದಲ್ಲಿ ಗಣಿ ಕಾರ್ಮಿಕನೊಬ್ಬನಿಗೆ ತನ್ನ ಹಿಪ್ಪೆ ಒರಟು ಇಜಾರಗಳನ್ನು ಮಾರಿದ. ಬೇರೆ ಯುವರಿಂದ ಆ ಬಗ್ಗೆ ಬೇಡಿಕೆ ಬಂದಾಗ ತನ್ನ ತಮ್ಮಂದಿರಲ್ಲಿ ಇದ್ದ ಅದೇ ಬಗೆಯ ಒರಟು ಇಜಾರಗಳನ್ನು ಕಳಿಸಿಕೊಡುವಂತೆ ಅವರಿಗೆ ಬರೆದ. ಮೊದಲು ಮಾರಿದ್ದ ನೀಲಿ ಬಣ್ಣದ ಇಜಾರಗಳ ಬದಲು ಫ್ರಾನ್ಸಿನ ನೀಮ್‌ನಲ್ಲಿ ತಯಾರಾದ ಹತ್ತಿಯ ಕಂದು ಬಣ್ಣದ ಸರ್ಜ್ ಡಿ ನೀಮ್ ಎನ್ನುವ ಹೆಸರಿನ ಇಜಾರಗಳನ್ನು ಅವರು ಕಳಿಸಿಕೊಟ್ಟರು.

೧೮೭೦ರಲ್ಲಿ ವರ್ಜೀನಿಯಾ ನಗರದ ದರ್ಜಿ ಡೇವಿಸ್ ಈತನ ಸಹಾಯಕ್ಕೆ ಬಂದ. ಲೇವಿಯು ಇಷ್ಟದನ್ವಯ ಮೊದಲು ಇಜಾರಗಳಿಗೆ ಜೇಬುಗಳ ಬೆಸುಗೆ ಹಾಕಿದ. ಇದರಿಂದ ಲೇವಿಯ ಇಜಾರಗಳ ಬೇಡಿಕೆ ದ್ವಿಗುಣವಾಯಿತು. ಪರಿಣಾಮವಾಗಿ ಡೇವಿಸ್ ಮ್ಯಾನೇಜರ್ ಪದವಿಗೇರಿದ.

ತರುವಾಯ ಇಬ್ಬರೂ ಕೂಡಿಕೊಂಡು ಉಡುಪಿನ ಇತಿಹಾಸದಲ್ಲಿ ಹೊಸ ಆಯಾಮವನ್ನುಂಟು ಮಾಡಿದರು.

ಪ್ರಪಂಚದಲ್ಲಿ ಅಸಂಖ್ಯಾತ ಜೀನ್ ತಯಾರಕರಿದ್ದಾರೆ. ಆದರೆ ನಾಜೂಕಿನ, ಸುಂದರವಾದ ಜೀನ್‌ಗಳನ್ನು ತಯಾರಿಸಲು ಹೊರಟವರು ಯಶಸ್ಸುಗಳಿಸುವುದಿಲ್ಲ. ಯಾಕೆಂದರೆ ಒರಟಾದ, ನಾಜೂಕಲ್ಲದ, ಬೇಕಾಬಿಟ್ಟಿ ಉಪಯೋಗಿಸಲು ಅನುಕೂಲವಾದ ಜೀನ್‌ಗಳಿಗೇ ಬಹು ಬೇಡಿಕೆ.

ಒರಟು ಮಾದರಿಯ ಜೀನ್ಸ್‌ಗಳು ಕತೆ ಸೃಷ್ಟಿಸಿವೆ; ಪ್ರಖ್ಯಾತವಾಗಿವೆ. ಲೆವಿಸನ ಕಾಲದಲ್ಲಿ ಬಳಸಿದ್ದ ಜೀನ್ಸ್‌ಗಳಿಗೆ ಸ್ಯಾನ್ ಫ್ರಾನ್ಸಿಸ್ಕೋ ಮ್ಯೂಜಿಯಂಗಳಲ್ಲಿ ಜಾಗ ಗಿಟ್ಟಿದೆ. ರೈಲಿನಿಂದ ತಪ್ಪಿಸಿಕೊಂಡು ಹೋಗುತ್ತಿದ್ದ ಕೇಡಿ ದಂಪತಿಗಳನ್ನು ಈ ಜೀನ್ ಸಹಾಯದಿಂದ ಒಬ್ಬ ಪ್ರಯಾಣಿಕ ಹಿಡಿದು ಹಾಕಿದ್ದ. ಕೆಸರಿನಲ್ಲಿ ಹೂತುಬಿದ್ದಿದ್ದ ತನ್ನ ಕಾರನ್ನು ಮೇಲೆತ್ತಲು ಜೀನ್ಸ್‌ನ್ನು ಹಗ್ಗವಾಗಿ ಬಳಸಿದ್ದ ಮತ್ತೊಬ್ಬ. ಇವಕ್ಕಿಂತ ಅದ್ಭುತ ಕತೆ ಕಟ್ಟಡ ನಿರ್ಮಾಪಕನೊಬ್ಬನದು. ಐವತ್ತೆರಡು ಅಂತಸ್ತುಗಳ ಕಟ್ಟಡದ ಮೇಲಿನಿಂದ ಆ ಬೀಳಲಿದ್ದ ವ್ಯಕ್ತಿಯನ್ನು ಕಾಪಾಡಲು ಜೀನ್ಸನ್ನೇ ಉಪಯೋಗಿಸಲಾಯಿತಂತೆ!

ರಚನಾ ವಿನ್ಯಾಸದಲ್ಲೂ ಒರಟುತನದಲ್ಲೂ ವೈವಿಧ್ಯವನ್ನು ಮೆರೆಸುತ್ತಿರುವ ಜೀನ್ಸ್ ಹೆಚ್ಚಾಗಿ ಆಕಾಶ ನೀಲಿ ಬಣ್ಣದಲ್ಲಿ ಗಣನೀಯ ಮಾನ್ಯತೆ ಗಳಿಸಿವೆ. ಲೆವಿಸ್ ಅಥವಾ ರ್‍ಯಾಂಗ್‌ಲರ್ಸ್‌ನ ಕಂಪನಿಯಷ್ಟು ಪ್ರಖ್ಯಾತಿಯನ್ನು ಪಡೆಯದೆ ಇದ್ದರೂ ಬ್ರಿಟನ್ನಿನ ಎಫ್. ಯು. ಎಸ್. ಕಂಪನಿ ತನ್ನ ಮಾರುಕಟ್ಟೆಯ ಜಾಲವನ್ನು ವಿಸ್ತೃತಗೊಳಿಸುತ್ತದೆ. ಇದು ತಯಾರಿಸುವ ಗ್ಯಾಬರ್ಡೀನ್ ಜೀನ್ಸ್‌ಗಳು ಭಾರತಕ್ಕೂ ಬಂದಿವೆ. ಲಂಡನ್ ಜೀನ್ಸ್ ನಗರಕ್ಕೆ ಬಂತು ಎಂಬುದು ಅದರ ಪ್ರಚಾರ! ಜೀನ್ ಜಂಕ್ಷನ್, ಜೀನ್ ಏಜ್, ವಿಂಗ್ಸ್ ವ್ಯಾನ್ ಸೋಬರ್ಸ್, ಆವಿಸ್ ಜೀನ್ಸ್ ಜೀನ್ಸಿನ ಇನ್ನಿತರ ತಯಾರಕರು.

ಭಾರತದಲ್ಲಿ ವಿಂಗ್ಸ್ ಮತ್ತು ವ್ಯಾನ್ ಸೋಬರ್ಸ್ ಅಧಿಕ ಪ್ರಮಾಣದಲ್ಲಿ ಜೀನ್ ತಯಾರಕರು. ಆದರೆ ಹೆಚ್ಚಾಗಿ ಇವರ ಉತ್ಪಾದನೆಗೆ ಬೇಡಿಕೆ ಇದ್ದದ್ದು ಅರವತ್ತರ ಮಧ್ಯದಲ್ಲಿ ಅವರು ತಯಾರಿಸುತ್ತಿದ್ದುದು ಕೌಬಾಯ್ ಜೀನ್ಸ್. ಇಂದು ವಿಂಗ್ಸ್ ವಾಂಟೆಡ್ ಮಾದರಿಯನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದ್ದಾರೆ. ಭಾರತದಲ್ಲಿ ಜೀನ್ಸ್ ಕತೆ ಹಾಸುಹೊಕ್ಕಾಗಿರುವುದು ಲೋಲಿಟಾ ಮತ್ತು ರಝೀಕ್ ಗಾಮುಚ್‌ನೊಂದಿಗೆ. ಇವರ ಜೀನ್ ಜಂಕ್ಷನ್ ಇಂದು ಹೆಚ್ಚು ಪ್ರಚಾರದಲ್ಲಿದೆ.

ನವಪೀಳಿಗೆಯ ತರುಣ, ತರುಣಿಯರು ಇಂದು ಜೀನ್ಸ್ ಧಾರಿಗಳು. ಅಂಗಡಿ ಮುಂಗಟ್ಟುಗಳು ಜೀನ್ಸಿನಿಂದ ಶೋಭಾಯಮಾನ. ದುಬಾರಿಯಾದರೂ ಇಂದು ಅವು ಅತಿ ಜನಪ್ರಿಯ. ಈಗ ಜೀನ್ಸ್ ನವ ತರುಣ ತರುಣಿಯರ ಆಕರ್ಷಣೆ ಹಾಗೂ ಅಗತ್ಯ. ✡

(ಕೃಪೆ: ಯುತ್ ಟೈಮ್ಸ್)



ಅಮ್ಮನವರು ಮಹಿಳಾ ಮಂಡಳದ ಅಧ್ಯಕ್ಷೆ. ಪತಿರಾಯ ಮನೆಗೆ ಬಂದಾಗ, ಕೆಲಸದ ಹುಡುಗಿ, 'ಈಗಷ್ಟೇ ಅವ್ನೋರು ಮೀಟಿಂಗಿಗೆ ಹೋದ್ರು. ಒಳ್ಗೆ ಫ್ಲಾಸ್ಕಲ್ಲಿ ಟೀ ಇದೆಯಂತೆ,' ಅಂದಳು.

ಒಳಗೆ ಫ್ಲಾಸ್ಕಿತ್ತು. ಒಲೆ ಮೇಲೆ ಅನ್ನ ಕುದೀತಿತ್ತು. ಫ್ಲಾಸ್ಕ್ ಕೆಳಗೊಂದು ಚೀಟಿ. 'ಅಡ್ಗೇನ ಹೊತ್ತಿಸಬೇಡಿ. ಅದು ನಾನು ಮಾಡೋ ಕೆಲ್ಸ' ಎಂದಿತ್ತು ಅದರಲ್ಲಿ.

ಮಸಾಲೆಯ ಚಕ್ಕಿ

ದಾಲ್ಚಿನ್ನಿ

ಎಂ. ಎಸ್. ಲಕ್ಷ್ಮಣಾಚಾರ್

ಹಲವಾರು ಪಾಚಕ ವಸ್ತುಗಳ ತಯಾರಿಕೆಯಲ್ಲೂ ಗೃಹವೈದ್ಯಕೀಯ ಪದಾರ್ಥಗಳ ತಯಾರಿಕೆಯಲ್ಲೂ ಸಾಮಾನ್ಯವಾಗಿ ಬಳಸಲ್ಪಡುತ್ತಿರುವ ಸುಗಂಧಯುಕ್ತ 'ಚಕ್ಕಿ'ಯೇ ದಾಲ್ಚಿನ್ನಿ. ಶ್ರೀಲಂಕಾ ದ್ವೀಪ ದಾಲ್ಚಿನ್ನಿಯ ತವರೆಂದು ನಿರ್ಧಾರವಾಗಿದ್ದರೂ ೧೬ ನೆಯ ಶತಮಾನಕ್ಕೆ ಮುಂಚೆಯೇ ಭಾರತದಲ್ಲಿ ಮಲಬಾರ್ (ಕೇರಳ) ಪ್ರದೇಶವು ದಾಲ್ಚಿನ್ನಿಗೆ ಹೆಸರುವಾಸಿಯಾಗಿತ್ತೆಂದು ಅನೇಕರು ಅಭಿಪ್ರಾಯಪಟ್ಟಿದ್ದಾರೆ. ಪೌರಸ್ತ್ಯ ದೇಶಗಳಲ್ಲಿನ ದಾಲ್ಚಿನ್ನಿಯ ವ್ಯಾಪಾರವು ಅಂದು ಕೇರಳದ ಕಲ್ಲಿಕೋಟೆಯ ಬಂದರಿನ ಮೂಲಕ ನಡೆಯುತ್ತಿತ್ತಂತೆ. ಆದರೆ ಇನ್ನು ಕೆಲವು ದಾಖಲೆಗಳ ಪ್ರಕಾರ ಭಾರತದಲ್ಲಿ ದಾಲ್ಚಿನ್ನಿಯ ಕೃಷಿ ಪ್ರಾರಂಭವಾದದ್ದು ೧೭೯೨ ರಲ್ಲೆಂದು ತಿಳಿದು ಬಂದಿದೆ. ಕಾಡಿನಲ್ಲೇ ಬೆಳೆಯುತ್ತಿದ್ದ ಈ ಮರದ ತೊಗಟೆಯನ್ನು ಸುಲಿದು ತೆಗೆದು ಉಪಯೋಗಿಸುತ್ತಿದ್ದರೇ ವಿನಾ ಇದರ ಕೃಷಿ ಕ್ರಮಬದ್ಧವಾಗಿರಲಿಲ್ಲ.

ಇತ್ತೀಚೆಗಿನವರೆಗೂ ಭಾರತದಲ್ಲಿ ದಾಲ್ಚಿನ್ನಿಯ ಕೃಷಿಯನ್ನು ಉತ್ತರ ಕೇರಳ ಮತ್ತು ತಮಿಳು ನಾಡಿನ ನೀಲಗಿರಿ ಜಿಲ್ಲೆಯಲ್ಲಿ ಮಾತ್ರ ನಡೆಸಲಾಗುತ್ತಿತ್ತು. ಆದರಿಂದು ಇದನ್ನು ದಕ್ಷಿಣ ಕೇರಳ, ಕರ್ನಾಟಕ ಮತ್ತು ತಮಿಳು ನಾಡಿನ ಇತರ ಭಾಗಗಳಲ್ಲೂ ಕೈಕೊಳ್ಳಲಾಗಿದೆ. ಹೀಗಾಗಿ ಭಾರತದಲ್ಲಿ ಪ್ರಸ್ತುತ ೪೦೦ ಹೆಕ್ಟೇರ್ ಪ್ರದೇಶದಲ್ಲಿ ದಾಲ್ಚಿನ್ನಿಯನ್ನು ಬೆಳೆಯಲಾಗುತ್ತಿದೆ. ಅದರಿಂದ ಸುಮಾರು ೮೦ ಟನ್ನಿನಷ್ಟು ದಾಲ್ಚಿನ್ನಿ ತೊಗಟೆಯನ್ನೂ ೧ ಟನ್ನಿನಷ್ಟು ದಾಲ್ಚಿನ್ನಿ ಎಣ್ಣೆಯನ್ನೂ ಉತ್ಪಾದಿಸುತ್ತಿರುವುದಾಗಿ ಅಂದಾಜು ಮಾಡಲಾಗಿದೆ.

ಲಾರೆಸಿಯಾ ಕುಟುಂಬಕ್ಕೆ ಸೇರಿದ ಸಿನಾಮೊಮಮ್ ಜೈಲಾನಿಕಮ್ ಉಪವರ್ಗದ ಸಸ್ಯ



ದಾಲ್ಚಿನ್ನಿಯ ಎಲೆ, ಹೂವು

ದಾಲ್ಚಿನ್ನಿ. ಶ್ರೀಲಂಕಾ ಇದರ ತವರು. ಕೇರಳದ ತಲ್ಲಿಚೇರಿಯಲ್ಲದೆ ಜಾವಾ, ವೆಸ್ಟ್ ಇಂಡೀಜ್ ದ್ವೀಪಗಳು, ಬ್ರಾಝಿಲ್ ಮತ್ತು ಇಜಿಪ್ತ್ ದೇಶಗಳಲ್ಲೂ ದಾಲ್ಚಿನ್ನಿ ಬೆಳೆಯುತ್ತದೆ. ಆದರೆ ಶ್ರೀಲಂಕಾ ದಾಲ್ಚಿನ್ನಿಯನ್ನುಳಿದು ಮಿಕ್ಕ ಯಾವೂ ವಾಣಿಜ್ಯ ಕ್ಷೇತ್ರದಲ್ಲಿ ಹೆಸರಾಗಿಲ್ಲ. ೧೯೪೦ ರಲ್ಲಿ ಅಮೇರಿಕವೊಂದೇ ೧೮೪,೬೭೩ ಪೌಂಡು ದಾಲ್ಚಿನ್ನಿಯನ್ನು ಆಮದು ಮಾಡಿಕೊಂಡಿತು. ಶ್ರೀಲಂಕಾ ದಾಲ್ಚಿನ್ನಿ ಅಥವಾ ಸಿಲೋನ್ ಸಿನಾಮನ್ ತೆಳುವಾದ, ಸುಲಭವಾಗಿ ತೊಗಟೆ ಎಬ್ಬಿಸಬಹುದಾದದ್ದು. ಇದಕ್ಕೆ ತಿಳಿ ಹಳದಿ ಕಂದು ಬಣ್ಣವಿರುತ್ತದೆ. ಸಮುದ್ರ ಮಟ್ಟದಿಂದ ಸುಮಾರು ೧೦೦೦ ಮೀಟರ್‌ವರೆಗೆ ಎತ್ತರ ಪ್ರದೇಶದಲ್ಲಿ ಎಲ್ಲಾ ಬಗೆಯ ಮಣ್ಣಿನಲ್ಲೂ ಈ ಗಿಡಗಳನ್ನು ಬೆಳೆಯಬಹುದಾದರೂ ೧೫೦-೨೫೦ ಸೆಂಟಿಮೀಟರ್ ಮಳೆಯುಳ್ಳ, ಜೈವಿಕ ಪದಾರ್ಥಗಳು ನೆಲದಲ್ಲೇ ಸಾವಕಾಶವಾಗಿ ಕೊಳೆತು ಕಪ್ಪೇರಿದ ಮಣ್ಣು ಇರುವ ಪ್ರದೇಶವು ಈ ಬೆಳೆಗೆ ಅತ್ಯಂತ ಪ್ರಶಸ್ತವಾದದ್ದು. ಸದಾ ಹಸಿರಾಗಿರುವ ಸಾಧಾರಣವಾಗಿ ಸುಮಾರು ೬-೯ ಮೀಟರ್ ಎತ್ತರ ಬೆಳೆಯುವ (ಗರಿಷ್ಠ ಎತ್ತರ ೧೫ ಮೀಟರ್‌ಗಳು.) ದಪ್ಪ ಕಾಂಡವನ್ನು ಹೊಂದಿದ್ದು ಅಡಿಯಿಂದಲೇ ಬಹಳಷ್ಟು ರೆಂಬೆಗಳನ್ನು ಹೊಂದಿ ಪೊದೆಯಾಗಿ ಬೆಳೆಯುವ ಈ ಗಿಡದ ಎಲೆಗಳು ಅರೆದರೆ ಸಾಂಬಾರದ ವಾಸನೆಯೊಂದಿಗೆ ಖಾರವಾಗಿಯೂ ಇರುತ್ತವೆ. ಗಿಡದ ಕಾಂಡಗಳಿಂದ ಹಸಿರು ತೊಗಟೆಯನ್ನು ಒಣಗಿಸಿದಾಗ ಸುವಾಸನೆಯನ್ನು ಆಘ್ರಾಣಿಸಬಹುದು. ಗಿಡಕ್ಕೆ ಗೊಬ್ಬರದ ಅವಶ್ಯಕತೆ ಇಲ್ಲವಾದರೂ ಗೊಬ್ಬರ ಹಾಕಿದರೆ ಮತ್ತಷ್ಟು ಹುಲುಸಾಗಿ ಬೆಳೆಯುತ್ತದೆ. ಅಲ್ಲದೆ ರೋಗಗಳೂ ಈ ಗಿಡಕ್ಕೆ ಪಟ್ಟಾಗಿ ತಗಲುವದಿಲ್ಲ.

ಹೊಸ ಮಳೆಯ ಆರಂಭದಲ್ಲಿ ದಾಲ್ಚಿನ್ನಿ ಗಿಡಗಳು ಚಿಗುರುತ್ತವೆ. ಈ ಸಮಯದಲ್ಲಿ ಎಳೆಯ ಕೆಂಪು ಎಲೆಗಳನ್ನು ಕಾಣಬಹುದು. ನಲವತ್ತು ದಿವಸಗಳು ಕಳೆದರೆ ಈ ಎಳೆಯ ಎಲೆ ಬಲಿತು ಅಚ್ಚಹಸಿರು ಬಣ್ಣವನ್ನು ತಾಳುತ್ತವೆ. ಆಗ ಮರದ ಕಾಂಡಕ್ಕೂ ತೊಗಟೆಗೂ ಮಧ್ಯದಲ್ಲಿ ಒಂದು ಬಗೆಯ ಅಂಟಿನ ಸಸ್ಯರಸವು ಹರಿಯತೊಡಗುತ್ತದೆ. ಈ ಸಮಯದಲ್ಲಿ ಮೇಲಿನ ತೊಗಟೆಯನ್ನು ಸುಲಭವಾಗಿ ಸುಲಿಯಬಹುದು. ಈ ಸಸ್ಯರಸವು ಆರೇಳು ತಿಂಗಳು ಸಿಲ್ಲುತ್ತದೆ. ಇದನ್ನು ಪರೀಕ್ಷಿಸಲು ಸಣ್ಣ ಅಲಗು ಕತ್ತಿಯಿಂದ ರೆಂಬೆಯ ಅಡಿಯ ಭಾಗವನ್ನು ಓರೆಯಾಗಿ ಮೇಲಕ್ಕೆ ಕತ್ತರಿಸಿ ಆ ಭಾಗವನ್ನು ಅಗಲಿಸಿ ನೋಡಿ ಒಳಗಿನ ಮರವನ್ನು ಮುಟ್ಟಿ ನೋಡಿದರೆ ಒದ್ದೆಯಾಗಿಯೂ ಅಂಟಾಗಿಯೂ ಕಾಣುತ್ತದೆ. ಅಗಲೇ ಸಿಪ್ಪೆ ಸುಲಿಯಲು ಸುಲಭ.

ಚೆನ್ನಾಗಿ ಬಲಿತ ರೆಂಬೆಗಳನ್ನು ಕಡಿದು ತೆಗೆದು ಎಲೆ, ಚಿಕ್ಕ ಪುಟ್ಟ ಚಿಗುರುಗಳನ್ನು ಬೇರ್ಪಡಿಸಿ ಒಂದು ವಿಶಿಷ್ಟ ಬಗೆಯ ಸಣ್ಣ ಕತ್ತಿಯನ್ನು ಉಪಯೋಗಿಸಿ ಬಲಿತ ರೆಂಬೆಯಿಂದ ತೊಗಟೆಯನ್ನು ಬೇರ್ಪಡಿಸುತ್ತಾರೆ. ಹಾಗೆ ಸುಲಿದ ಉರುಳೆಯಾಕಾರದ ತೊಗಟೆಗಳನ್ನು ಬಿಸಿಲಿನಲ್ಲಿ ಚೆನ್ನಾಗಿ ಒಣಗಿಸಿದಾಗ ಅವು ಕುಗ್ಗಿ ಕೊಳವೆಯಾಕಾರವನ್ನು ತಾಳುತ್ತವೆ. ಇವುಗಳಿಗೆ 'ಕ್ವಿಲ್ಸ್' ಎಂದು ಕರೆಯುತ್ತಾರೆ. ಸಣ್ಣ ಕೊಳವೆಗಳನ್ನು ದೊಡ್ಡದರೊಳಕ್ಕೆ ನುಸುಳಿಸಿ ಕಾಂಪೌಂಡ್ ಕ್ವಿಲ್ಸುಗಳನ್ನು ತಯಾರಿಸುತ್ತಾರೆ. ಹೀಗೆ ತಯಾರಿಸಿದ ಕ್ವಿಲ್ಸುಗಳು ಅತಿಶ್ರೇಷ್ಠ ತರಗತಿಯವು. ಉಳಿದ ಸಣ್ಣಪುಟ್ಟ ತೊಗಟೆ ಚೂರುಗಳನ್ನು, ಒಡೆದು ಹೋದ ಚೂರುಗಳು ಕೀಳುದರ್ಜೆಗೆ ಸೇರಿದವು.

ಬಲಿತ ರೆಂಬೆಗಳಿಂದ ಬೇರ್ಪಡಿಸಿದ ಎಲೆ, ಚಿಕ್ಕಪುಟ್ಟ ಚಿಗುರುಗಳನ್ನು ಅರ್ಧ ನೆರಳಿನಲ್ಲಿ ಒಂದೆರಡು ದಿನ ತೇವ ಹೋಗುವ ವರೆಗೆ ಒಣಗಿಸಿ ಅದನ್ನು ಡಿಸ್ಟಿಲರಿಯಲ್ಲಿ ಹಾಕಿ ಎಣ್ಣೆಯನ್ನು ಭಟ್ಟಿ ಇಳಿಸುತ್ತಾರೆ ಇದೇ ದಾಲ್ಚಿನ್ನಿಯ ಎಲೆ. ಎಣ್ಣೆ ತೆಗೆದು ಕರಗಿದ ನಂತರ ಉಳಿಯುವ ಎಲೆಯನ್ನು ಡಿಸ್ಟಿಲರಿಗಳಲ್ಲಿ ಇದ್ದಲಿನ ಬದಲಾಗಿಯೋ ಅಥವಾ ಗಿಡಗಳಿಗೆ ಗೊಬ್ಬರವಾಗಿಯೋ ಹಾಕಬಹುದು. ಕೀಳ್ತರದ ದಾಲ್ಚಿನ್ನಿ ತೊಗಟೆಯನ್ನು ಪುಡಿ ಮಾಡಿ ಅದರಿಂದ ಭಟ್ಟಿ ಇಳಿಸಿ ದಾಲ್ಚಿನ್ನಿಯ ತೊಗಟೆ ಎಣ್ಣೆ ತೆಗೆಯುತ್ತಾರೆ. ಇದು ಬಹು ಬೆಲೆಯುಳ್ಳದ್ದು.

ದಾಲ್ಚಿನ್ನಿ ತೊಗಟೆಯನ್ನು ಪಲ್ಯಗಳ ಮಸಾಲೆ ಪುಡಿಯಲ್ಲೂ ಮತ್ತಿತರ ಬಗೆಯ ಭಕ್ಷ್ಯಗಳನ್ನು

ತಯಾರಿಸುವಾಗೂ ಬಳಸುತ್ತಾರೆ. ಹೃದಯೋತ್ತೇಜಕ ಔಷಧಿಗಳ ತಯಾರಿಕೆಯಲ್ಲೂ ಅಜೀರ್ಣ, ಅತಿಸಾರ, ವಾಂತಿ ಮುಂತಾದ ರೋಗಗಳಿಗೆ ಔಷಧಿಯಾಗಿಯೂ ಇದನ್ನು ಉಪಯೋಗಿಸುತ್ತಾರೆ. ದಾಲ್ಚಿನ್ನಿಯ ಎಲೆಗಳಿಂದ ತೆಗೆದ ಎಣ್ಣೆಯನ್ನು ಸಿಹಿ ತಿಂಡಿಗಳಿಗೆ ಮತ್ತು ಮಿಠಾಯಿ ಮುರಬ್ಬಗಳಿಗೆ ಸುವಾಸನೆ ಕೊಡಲೆಂದೂ ಚಾಕಲೇಟುಗಳಿಗೆ ರುಚಿ ಬರಲೂ ಅಲ್ಲದೆ ಕೆಲವೆಡೆ ಮದ್ಯದ ತಯಾರಿಕೆಯಲ್ಲೂ ದಾಲ್ಚಿನ್ನಿ ಬಳಸಲ್ಪಡುತ್ತದೆ. ಮೈ ಸಾಬೂನಿಗೆ ವಾಸನೆ ಹೆಚ್ಚಾಗಲೂ ದಾಲ್ಚಿನ್ನಿ ಎಣ್ಣೆಯನ್ನು ಹಾಕುವುದುಂಟು. ಪರಿಮಳ ತೈಲ ನಿರ್ಮಾಣಗಳಲ್ಲೂ ಉಪಯೋಗಿಸುತ್ತಾರೆ. ವಾತರೋಗಕ್ಕೆ ದಾಲ್ಚಿನ್ನಿ ತೈಲದ ಮಾಲೀಶ್ ಫಲಪ್ರದವಾದದ್ದು. ಶುಕ್ಲ ರೋಗಕ್ಕೆ ಕೊಡುವ ಇಂಜೆಕ್ಷನ್ನಿನಲ್ಲಿ ಅದನ್ನು ಆಂಟಿಸೆಪ್ಟಿಕ್ ಆಗಿ ಉಪಯೋಗಿಸುತ್ತಾರೆ. ಟೈಫಾಯಿಡ್ ಜ್ವರದಲ್ಲಿ ಜೀವಾಣುನಾಶಕವಾಗಿ ಉಪಯೋಗಿಸುತ್ತಾರೆ. ವಸಡುಗಳನ್ನು ಬಲಶಾಲಿಯಾಗಿ ಮಾಡಿ ದುರ್ಗಂಧವನ್ನು ನಿವಾರಿಸುವ ಗುಣವುಳ್ಳ ಕಾರಣ ಈ ತೈಲವನ್ನು ಚೂಯಿಂಗಗಮ್‌ನ ತಯಾರಿಕೆಯಲ್ಲಿ ಉಪಯೋಗಿಸುತ್ತಾರೆ. ದಾಲ್ಚಿನ್ನಿ ಎಣ್ಣೆಯಲ್ಲಿ ಶೇಕಡ ೯೦ ರಷ್ಟು 'ಯೂಜಿನಾಲ್' ಇದ್ದು ಅದನ್ನು ವ್ಯಾಸಲೀನ್ ತಯಾರಿಕೆಯಲ್ಲೂ ಉಪಯೋಗಿಸುತ್ತಾರೆ

ರಂಡಟ್ರ ಸಿನಾಮನ್ ಎಸ್ಟೇಟ್

ಉತ್ತರ ಕೇರಳದಲ್ಲಿ ದಾಲ್ಚಿನ್ನಿ ಕೃಷಿಯು ಪ್ರಮುಖವಾಗಿ ನಡೆದು ಬರುತ್ತಿರುವ ಏಕೈಕ ದೊಡ್ಡ ಪ್ರಮಾಣದ ಎಸ್ಟೇಟ್ ಅಂದರೆ "ರಂಡಟ್ರ ಸಿನಾಮನ್ ಎಸ್ಟೇಟ್." ಇದು ಕಣ್ಣಾನೂರು ಜಿಲ್ಲೆಯ ಕಲಶೇರಿಯ ಬಳಿ ಅಂಜರಕಂಡಿಯಲ್ಲಿದೆ. ಮೊದಲು ಈ ದೊಡ್ಡ ಎಸ್ಟೇಟ್ ಯೂರೋಪಿಯನ್ನರ ಒಡೆತನದಲ್ಲಿತ್ತು.

ಈಸ್ಟ್ ಇಂಡಿಯಾ ಕಂಪನಿ ಬಂದ ಹೊಸತರಲ್ಲಿ ಈ ಎಸ್ಟೇಟ್ ಅಂಜರಕಂಡಿ ಪ್ಲಾಂಟೇಷನ್ ಎಂಬ ಹೆಸರಿನಲ್ಲಿ ಪ್ರಸಿದ್ಧವಾಗಿತ್ತು. ಮೂಲತಃ ಸ್ಕಾಟ್ಲೆಂಡ್‌ನವನಾದ ಮಾರ್ಡೆಕ್ ಬ್ರೌನ್ ಎಂಬ ವರ್ತಕ ಕಂಪನಿಯವರಿಗೆ ಸೇರಿದ ಸೈನ್ಯ ವಿಭಾಗದಲ್ಲಿದ್ದ. ಈತನನ್ನು ೧೭೯೭ರಲ್ಲಿ ಅಂಜರಕಂಡಿ ಪ್ಲಾಂಟೇಷನ್ನಿನ ಮೇಲ್ವಿಚಾರಕ ವ್ಯವಸ್ಥಾಪಕನನ್ನಾಗಿ ಕಂಪನಿಯವರು ನೇಮಕಮಾಡಿದರು. ಈ ಪ್ಲಾಂಟೇಶನ್ನಿನಲ್ಲಿ ಕಾಫಿ, ದಾಲ್ಚಿನ್ನಿ, ಮೆಣಸು, ಜಾಯಿಕಾಯಿ ಕಾಸಿಯಾ (ಕೀಳ್ತರದ ದಾಲ್ಚಿನ್ನಿ) ಕಬ್ಬು ಮತ್ತು ಗಂಧದ ಮರಗಳನ್ನು ಬೆಳೆಯಲಾಗುತ್ತಿತ್ತು. ಸಸ್ಯಶಾಸ್ತ್ರದಲ್ಲಿ ಸಾಮಾನ್ಯ ಜ್ಞಾನ ಮತ್ತು ಕೃಷಿಯಲ್ಲಿ ಅತೀವ ಆಸಕ್ತಿಯುಳ್ಳ ಬ್ರೌನನಿಗೆ ಕೆಲಸವು ಅತ್ಯಂತ ಪ್ರಿಯವೆನಿಸಿತು. ಆದರೆ ಈಸ್ಟ್ ಇಂಡಿಯಾ ಕಂಪನಿಗೆ ಬರುಬರುತ್ತಾ ಈ ಪ್ಲಾಂಟೇಷನ್ನಿನಿಂದ ಯಾವ ಆದಾಯವೂ ಇಲ್ಲದಂತಾಯಿತು. ಪ್ಲಾಂಟೇಷನ್ನಿನ ಮಣ್ಣು ಮತ್ತು ಅಲ್ಲಿಯ ಹವಾಗುಣವು ದಾಲ್ಚಿನ್ನಿಯ ಕೃಷಿಗೆ ಯೋಗ್ಯವೆಂದು ತಿಳಿದು ಬ್ರೌನ್ ಶ್ರೀಲಂಕಾದಿಂದ ದಾಲ್ಚಿನ್ನಿ ಗಿಡಗಳನ್ನು ತಂದು ಇಲ್ಲಿ ನೆಟ್ಟು ಕೃಷಿ ಮಾಡತೊಡಗಿದನು. ಆದರೆ ೧೭೯೭ರಲ್ಲಿ ತೋಟದ ಲಾಭನಷ್ಟಗಳನ್ನು ಪರಿಶೀಲಿಸಿದ ಕಂಪನಿಯ ಡೈರೆಕ್ಟರರು ಈ ಉದ್ಯಮವನ್ನು ಇನ್ನು ನಡೆಸುತ್ತಾ ಹೋಗುವುದು ಕಂಪನಿಗೆ ಶ್ರೇಯಸ್ಕರವಲ್ಲವೆಂದು ಶಿಫಾರಸು ಮಾಡಿದರು. ೧೭೯೯ರಲ್ಲಿ ಕಂಪನಿಯವರು ೪೦೦ ಎಕರೆಗಿಂತ ಹೆಚ್ಚು ವಿಸ್ತಾರವಿದ್ದ ಪ್ಲಾಂಟೇಷನ್ ಹಾಗೂ ಅದರ ಸುತ್ತಮುತ್ತಲಿನ ಕಾಡು ಪ್ರದೇಶದ ಪೂರ್ಣ ಜವಾಬ್ದಾರಿಯನ್ನು ಬ್ರೌನನಿಗೇ ೯೯ ವರ್ಷಗಳ ವರೆಗೂ ಗುತ್ತಿಗೆಯಾಗಿ ಬಿಟ್ಟುಕೊಟ್ಟರು. ಬ್ರೌನ್ ಈ ಅವಧಿಯಲ್ಲಿ ಕಂಪನಿಯವರು ಇಲ್ಲಿಯವರೆಗೂ ಖರ್ಚು ಮಾಡಿರುವ ಒಂದೂವರೆ ಲಕ್ಷ ರೂಪಾಯಿಗಳನ್ನು ಕಂತುಗಳಲ್ಲಿ ಮರಳಿಸಬೇಕೆಂದೂ ಪ್ರತಿವರ್ಷವೂ ೭೦೦ ರೂಪಾಯಿಗಳನ್ನು ತೆರಿಗೆಯಾಗಿ ಕೊಡಬೇಕೆಂದೂ ಕರಾರಾಗಿತ್ತು.

೧೮೦೦ರಲ್ಲಿ ಕಂಪನಿಯವರ ಸ್ವೇಚ್ಛಾಧಿಪತ್ಯದ ವಿರುದ್ಧವಾಗಿ ಈ ನಾಡಿನ ಜನರ ಹೋರಾಡಿದಾಗ ಈ ತೋಟವನ್ನು ಆಕ್ರಮಿಸಿದರು. ಆಗ ಉಂಟಾದ ನಾಶನಷ್ಟಗಳಿಂದ ಚೇತರಿಸಿಕೊಳ್ಳುವಷ್ಟರಲ್ಲಿಯೇ ಪಳಶ್ಶಿರಾಜ (ಕೇರಳವರ್ಮ)ನ ನೇತೃತ್ವದಲ್ಲಿ ಮತ್ತೊಂದು ಆಕ್ರಮಣವು ನಡೆದು ಪ್ಲಾಂಟೇಷನ್ನಿಗೆ ಭಾರೀ ನಷ್ಟವುಂಟಾಯಿತು. ಅನಂತರದ ಹತ್ತು ಹದಿನೈದು ವರ್ಷಗಳ ಕಾಲ ಬ್ರೌನ್ ತನ್ನ ಪ್ಲಾಂಟೇಷನ್ನಿನ ಪುನರುಜ್ಜೀವನ ನಡೆಸುವುದರಲ್ಲಿ ನಿರತರಾಗಿರಬೇಕಾಯಿತು. ಆಗಲೇ ಅವನು ಇಂದೂ ಕಾಣಬಲ್ಲ ಮೂರಂತಸ್ತಿನ ಒಂದು ಮಹಡಿಮನೆಯು

ನ್ನು ಇಲ್ಲಿ ಕಟ್ಟಿಸಿದ್ದು. ಬ್ರೌನ್ ಸಾಹೇಬನ ಅಧಿಕಾರಕ್ಕೆ ಬಂದನಂತರ ಈ ಪ್ಲಾಂಟೇಷನ್ನಿನಲ್ಲಿ ಬಹುಮಟ್ಟಿಗೆ ದಾಲ್ಚಿನ್ನಿಯನ್ನೇ ಬೆಳೆಸಲಾಗುತ್ತಿದ್ದುದರಿಂದ ಈ ಪ್ಲಾಂಟೇಷನನ್ನು ಬ್ರೌನ್ ಸಿನಾಮನ್ ಎಸ್ಟೇಟ್ ಎಂದೇ ಕರೆಯತೊಡಗಿದರು.

ಬ್ರೌನನಿಗೆ ಆ ಎಸ್ಟೇಟ್ ಬಳಿ ವಾಸವಾಗಿದ್ದ ಈಳವ ಜಾತಿಗೆ ಸೇರಿದ ಸ್ತ್ರೀಯಿಂದ ಒಬ್ಬ ಮಗನು ಹುಟ್ಟಿದ್ದನು. ಅವನ ಹೆಸರು ಹೆನ್ರಿ ಕಾರ್ಲ್ಟಿಕ್ ಬ್ರೌನ್. ಬ್ರೌನನಿಗೆ ಯೂರೋಪಿಯನ್ ಪತ್ನಿಯಿಂದ ಹುಟ್ಟಿದ ಮಗಳಿದ್ದಳು. ೧೮೩೫ ರಲ್ಲಿ ಮಾರ್ಡೋಕ ಬ್ರೌನ್ ತೀರಿಹೋದಾಗ ವಿದೇಶದಲ್ಲಿ ಓದುತ್ತಿದ್ದ ಹೆನ್ರಿ ಆ ಎಸ್ಟೇಟಿನ ಹಕ್ಕುದಾರನಾದನು. ಬ್ಯಾರಿಸ್ಟರ್ ಬಿರುದು ಪಡೆದಹೆನ್ರಿ ವಿದೇಶದಿಂದ ವಾಪಸು ಬಂದು ಎಸ್ಟೇಟಿನ ಮೇಲ್ವಿಚಾರಣೆ ನಡೆಸತೊಡಗಿದನು.

ಕೆಲವು ವರ್ಷಗಳ ನಂತರ ಬ್ರೌನನ ಮಗಳು ಹೆನ್ರಿಯನ್ನು ವಿವಾಹಕ್ಕೆ ಕೊಂದಳು. ಹಾಗೆ ನೋಡಿದರೆ ಎಸ್ಟೇಟು ಅಂದಿನ ಮಲಬಾರಿನಲ್ಲಿದ್ದ ಈಳವ ಜಾತಿಯವರಿಗೇ ಸೇರಬೇಕಾದದ್ದು ಸಂಪ್ರದಾಯ. ಅದನ್ನು ಪಡೆಯಲು ಅವರು ಆಗ ಪ್ರಯತ್ನಿಸದೇ ಬಹು ವರ್ಷಗಳ ನಂತರ ಒಡೆತನ ಬಯಸಿ ಕೋರ್ಟಿಗೆ ಹೋದರು. ಅವರಿಗದು ದೊರಕಲಿಲ್ಲ.


ಬ್ರೌನ್ ಎಸ್ಟೇಟ್ ಇದ್ದದ್ದು ಅಂಜರಕಂಡಿಯ ಬಳಿಯ ರಂಡತ್ತರ ಎಂಬ ಪ್ರದೇಶದಲ್ಲಿ. ರಂಡತ್ತರ ಎಂದರೆ ಮಲಯಾಳಿ ಭಾಷೆಯಲ್ಲಿ ಎರಡು ನೆಲ ಎಂದರ್ಥ. ಆ ಪ್ರದೇಶದಲ್ಲಿ ಹರಿಯುತ್ತಿದ್ದ ನದಿಯ ಇಕ್ಕಡೆಗಳಲ್ಲೂ ಈ ಎಸ್ಟೇಟ್ ಹರಡಿದ್ದರಿಂದಲೇ ಅದಕ್ಕೆ ಆ ಹೆಸರು ಬಂದದ್ದು. ಆದರೆ ಈ ರಂಡತ್ತರ ಎನ್ನುವುದು ಯೂರೋಪಿಯನ್ನರ ಬಾಯಲ್ಲಿ ರಂಡಟ್ರ ಎಂದೇ ಉಚ್ಚಾರಣೆಯಾಗುತ್ತಿದ್ದುದರಿಂದ ಬ್ರೌನ್ ಎಸ್ಟೇಟ್ ರಂಡಟ್ರ ಸಿನಾಮನ್ ಎಸ್ಟೇಟ್ ಎಂಬ ಹೆಸರಿನಲ್ಲಿ ಪ್ರಸಿದ್ಧವಾಯಿತು.

ಬ್ರೌನ್ ವಂಶದಲ್ಲಿ ಕೊನೆಯದಾಗಿ ಅಧಿಕಾರ ನಡೆಸಿದ ಕ್ರೇನ್ ಬ್ರೌನ್ ದಂಪತಿಗಳು ಅನಾನುಕೂಲಗಳಿಂದಾಗಿ ಎಸ್ಟೇಟನ್ನು ಬಿಟ್ಟು ಸ್ವದೇಶಕ್ಕೆ ಮರಳಿದರು. ಹಾಗೆ ಬಿಟ್ಟು ಹೋಗುವಾಗ ಕೊಟ್ಟಾಯಂನ ಜಾಕಬ್ ಕುಟುಂಬಕ್ಕೆ ತೋಟದ ಅಧಿಕಾರವನ್ನು ವರ್ಗಾಯಿಸಿದರು.

ಈಗ ಪ್ಲಾಂಟೇಷನ್ನಿನ ಮೇಲ್ವಿಚಾರಣೆಯನ್ನು ಪ್ರಸಿದ್ಧ ಹೋಟೆಲಾದ 'ಮಹಾರಾಣಿ ಹೋಟೆಲ್' ಮಾಲೀಕರು ಮಾಡುತ್ತಿದ್ದಾರೆ. ✡



ಮದುವೆಯಾದ ಹೊಸತು. ಒಂದು ಸಂಜೆ ಆತ ನಗುತ್ತ, ಕುಣಿಯುತ್ತ ಮನೆಗೆ ಬಂದ. ಜೇಬಿನಿಂದ ಒಂದಷ್ಟು ಹಣ ತೆಗೆದು, 'ಬೋನಸ್ ಬಂತು. ಫಸ್ಟ್ ಬೋನಸ್,' ಅಂದ. 'ಈ ಹಣ ಏನ್ಮಾಡೋಣ?' ಆಕೆ ಕೇಳಿದಳು. 'ಬ್ಯಾಂಕಿನಲ್ಲಿಡೋಣ' ಅಂದ. 'ಛಿ, ಬೋನಸ್ ಅಂದ್ರೆ ಒಂದು ರೀತಿ ಗಿಫ್ಟು. ಅದನ್ನ ನಮ್ಮಲ್ಲಿರದೆ ಇರೋ ಅಂಥಾದ್ದರ ಸಲುವಾಗೀ ವಿನಿಯೋಗಿಸ್ಬೇಕು' ಅಂದಳು. 'ಹೌದು. ನೀ ಹೇಳೋದೂ ನಾ ಹೇಳೋದು ಒಂದೆ. ಬ್ಯಾಂಕ್ ಅಕೌಂಟ್ ನಮ್ಮಲ್ಲಿಲ್ಲ. ಅದಕ್ಕೇ ಬ್ಯಾಂಕಲ್ಲಿಡೋಣ'



ಉತ್ತಮ ಪೌಡರುಗಳಿಗೆ ಬೆಲೆ ಹೆಚ್ಚು.
ಅಗ್ಗವಾದ ಪೌಡರುಗಳು ಕೀಳು ದರ್ಜೆಯವಾಗಿರುತ್ತವೆ
ಆದರೆ
ಸ್ವಸ್ತಿಕ್ ಒಗೆಯುವ ಪೌಡರ್
ಎಲ್ಲಕ್ಕಿಂತ ಭಿನ್ನವಾಗಿದೆ
SWASTIK
SWASTIK detergent washing powder
washes much more
costs much less
2 ಕಿಲೋ, 1 ಕಿಲೋ, 500 ಗ್ರಾಮ್ ಮತ್ತು 200 ಗ್ರಾಮ್‌ನ ಹೊಸ ಪೊಲಿಪ್ಯಾಕ್‌ಗಳಲ್ಲಿ
ಏಕೆಂದರೆ ಇದರಲ್ಲಿ ಮಿತವ್ಯಯದ ಜೊತೆಗೆ ಉತ್ತಮಿಕೆಯ ಅಪೂರ್ವ ಸಂಗಮವಾಗಿದೆ. ಎಂದರೆ, ಇದು ಸಾಕಷ್ಟು ಅಗ್ಗವೂ ಆಗಿದೆ. ಉತ್ತಮವೂ ಆಗಿದೆ!
ನೀಲಿ
ಸ್ವಸ್ತಿಕ್
ಡಿಟರ್ಜೆಂಟ್ ಒಗೆಯುವ ಪೌಡರ್

ಭಾರಿ ಬೆಲೆಯ ಹಸ್ತಾಕ್ಷರಗಳು

ಹ. ಚ. ಸತ್ಯನಾರಾಯಣ ಉರಾಳ

ಆಧುನಿಕ ಮಾನವ ಅನೇಕ ಹವ್ಯಾಸಗಳನ್ನು ಬೆಳೆಸಿಕೊಂಡಿದ್ದಾನೆ.

ಆದರೆ ಈ ಹವ್ಯಾಸ ಎಷ್ಟು ದುಬಾರಿಯಾಗಿದೆಂಬುದನ್ನು ಬಲ್ಲಿರಾ? ರಾಜಾಜಿಯವರು ತಮ್ಮ ಹಸ್ತಾಕ್ಷರ ಹಾಕಿಸಿಕೊಳ್ಳಲು ಕೇಳುತ್ತಿದ್ದವರ ಬಳಿ ಹತ್ತು ರೂಪಾಯಿ ಕೇಳುತ್ತಿದ್ದರು. ಆಚಾರ್ಯ ವಿನೋಬಾ ಭಾವೆಯವರೂ ಅಷ್ಟೆ. ಕೆಲವು ಮುಖಂಡರು ತಮ್ಮ ಹಸ್ತಾಕ್ಷರಗಳನ್ನು ಕೇವಲ ಇಪ್ಪತ್ತೈದು ರೂಪಾಯಿಗಳಿಗೂ ಮಾರಿರುವುದುಂಟು! ಆದರೆ ಜಗತ್ತಿನ ಕೆಲವು ಹಸ್ತಾಕ್ಷರಗಳಿಗೆ ಬಂದಿರುವ ಬೆಲೆಯನ್ನು ನೀವು ತಿಳಿದರೆ ಖಂಡಿತ ಆಶ್ಚರ್ಯಪಡುವಿರಿ.

೧೯೨೭ನೇ ಇಸವಿಯಲ್ಲಿ ಅಮೇರಿಕದ ಚಾರ್ಲ್ಸ್ ಎ. ಲಿಂಡ್‌ಬರ್ಗ್‌ನು ಅಟ್ಲಾಂಟಿಕ್ ಸಾಗರದ ಮೇಲೆ ವಿಮಾನದಲ್ಲಿ ಹಾರಿ ಹೋದ ನಂತರ ಅವನ ಹಸ್ತಾಕ್ಷರಕ್ಕೆ ಎಲ್ಲಿಲ್ಲದ ಬೇಡಿಕೆಗಳು ಬರತೊಡಗಿದವು. ಜನರು ಅವನ ಹಸ್ತಾಕ್ಷರಕ್ಕಾಗಿ ಹಾತೊರೆಯುತ್ತಿದ್ದರೆ ಆ ಮಹಾಶಯ ಅವರುಗಳಿಂದ ತಪ್ಪಿಸಿಕೊಂಡಿರುತ್ತಿದ್ದ. ಆದರೆ ನ್ಯೂಜೆರ್ಸಿಯ ವ್ಯಾಪಾರಸ್ಥನೊಬ್ಬ ಲಿಂಡ್‌ಬರ್ಗ್‌ನಿಗೆ ರಿಜಿಸ್ಟರ್ಡ್ ಪತ್ರವೊಂದನ್ನು ಕಳಿಸಿ, ಅಕನಾಲೆಡ್ಜ್ ಫಾರಂನಲ್ಲಿ ಲಿಂಡ್‌ಬರ್ಗ್ ಹಾಕಿದ ರುಜುವಿನಿಂದಲೇ ತೃಪ್ತಿಪಟ್ಟುಕೊಂಡ. ಅಮೇರಿಕದ ಅಧ್ಯಕ್ಷ ಹಾರ್ಡಿಂಜ್‌ರಿಂದ ಹಿಡಿದು ಐಸೆನ್‌ಹೋವರವರೆಗೂ ಒಬ್ಬರ ರುಜುವಾದರೂ ಸ್ಪಷ್ಟವಾಗಿರುತ್ತಿದ್ದಿಲ್ಲ. ಆದರೆ ಹೋವರರ ರುಜು ಚೆನ್ನಾಗಿತ್ತು.

ಹಸ್ತಾಕ್ಷರಕ್ಕೆ ಹೆಚ್ಚು ಬೆಲೆ ಬರಬೇಕಾದರೆ ಅದನ್ನು ಹಾಕಿದವರ ದೊಡ್ಡತನವಾಗಲಿ ಜಾಣತನವಾಗಲಿ ಮುಖ್ಯವಲ್ಲ. ಜಾರ್ಜಿಯಾ ಪ್ರಾಂತ್ಯವು ಸ್ವತಂತ್ರಗೊಂಡಾಗ ಅಮೇರಿಕ ಸ್ವಾತಂತ್ರ್ಯ ಘೋಷಣೆಗೆ ಸಹಿ ಹಾಕಿದ ಬಟನ್ ಗ್ವಿನ್ನೆಟ್‌ರ ಹಸ್ತಾಕ್ಷರಕ್ಕೆ ಇಂದು ೫,೦೦೦ ಡಾಲರ್ ಬೆಲೆಯಿದೆ. ಅಂದು ಸ್ವಾತಂತ್ರ್ಯ ಘೋಷಣೆಗೆ ಹಾಕಿದ್ದ ೫೦ ಸಹಿಗಳಲ್ಲಿ ಇಂದು ೪೭ ಮಾತ್ರ ಲಭ್ಯವಾಗಿವೆ. ಅವುಗಳಲ್ಲಿ ಗ್ವಿನ್ನೆಟ್ಟರದು ಬಹಳ ಮುದ್ದಾದದ್ದು. ಅದೇ ಸಮಯದಲ್ಲಿ ಘೋಷಣೆಗೆ ಪೆನ್‌ಸಿಲ್ವೇನಿಯಾ ಪರವಾಗಿ ರುಜು ಮಾಡಿದ ರಾಬರ್ಟ್ ಮಾರಿಸ್‌ನ ಹಸ್ತಾಕ್ಷರಕ್ಕೆ ಇಂದು ಕೇವಲ ಹತ್ತು ಡಾಲರ್ ಬೆಲೆ. ಯಾರ ಹಸ್ತಾಕ್ಷರ ಬಹಳ ಹಳೆಯದು ಎಂಬುದರ ಬಗ್ಗೆ ಯಾರಿಗೂ ಗೊತ್ತಿಲ್ಲ. ಕ್ರಿ. ಪೂ. ೩,೦೦೦ರಲ್ಲಿ ಬೆಬಿಲೋನಿನಲ್ಲಿ ಮಣ್ಣಿನ ಫಲಕಗಳ ಮೇಲೆ ಇರುವ ವರ್ತಕರ ಸಹಿಗಳು ಬಹಳ ಹಳೆಯವೆಂದು ಭಾವಿಸಲಾಗಿದೆ. ಅವು ಈಗ ಬ್ರಿಟಿಷ್ ಮ್ಯೂಜಿಯಂನಲ್ಲಿವೆ.

ಹಸ್ತಾಕ್ಷರಕ್ಕೆ ಬೆಲೆ ಬರುವುದು ಅದರ ದುರ್ಲಭತೆ, ಐತಿಹಾಸಿಕ ಮೌಲ್ಯ ಮತ್ತು ಸಂಗ್ರಾಹಕರ ಬೇಡಿಕೆಯಿಂದ. ದಸ್ತಾವೈಜುಗಳು ಮತ್ತು ಪತ್ರಗಳ ಮೇಲಿನ ರುಜುಗಳು ಬರೀ ಹಸ್ತಾಕ್ಷರಕ್ಕಿಂತ ಹೆಚ್ಚು ಬೆಲೆಯನ್ನು ತರುವವು. ಕೊಲಂಬಸನು ದಸ್ತಾವೈಜಿನ ಮೇಲೆ ಹಾಕಿದ್ದ ರುಜುವನ್ನು ಹರಾಜಿಗೆ ಹಾಕಿದಾಗ ೫೦,೦೦೦ ಡಾಲರ್ ಬೆಲೆ ಬಂತು

೪೦೦೦ ವರ್ಷಗಳ ಹಿಂದಿನ ಈಜಿಪ್ಟಿಯನ್ನರ ಹಸ್ತಾಕ್ಷರಗಳು ಇಂದು ಮಾರುಕಟ್ಟೆಯಲ್ಲಿ ಹೇರಳವಾಗಿ ದೊರಕುತ್ತಿವೆ. ಆದರೆ ಎಂಟನೆಯ ಶತಮಾನದಲ್ಲಿ ಚಾರ್ಲ್ಸ್ ಮೇಜನು ಮೂರು ಚರ್ಮ ಕಾಗದಗಳ ಮೇಲೆ ಹಾಕಿದ ರುಜುಗಳಿಗೆ ೧೧,೦೦೦ ಡಾಲರುಗಳ ಬೆಲೆಯೂ ಸಿಗುತ್ತದೆ. ದಸ್ತಾವೈಜಿನ ಮೇಲೆ ಪ್ರಸಿದ್ಧ ನಾಟಕಕಾರ ವಿಲಿಯಂ ಷೇಕ್ಸ್‌ಪಿಯರ್ ಹಾಕಿರುವ ರುಜುವಿಗೆ ಇಂದು ಎರಡು ಲಕ್ಷ ಡಾಲರು ಬೆಲೆಯಿದೆ. ಹಸ್ತಾಕ್ಷರಗಳಿಗೆ ದೊರೆತಿರುವ ಬೆಲೆಗಳಲ್ಲಿ ಇದೇ ಭಾರೀ ಮೊತ್ತದ್ದು,

ಇಂದು ಜಗತ್ತಿನಾದ್ಯಂತ ಹಸ್ತಾಕ್ಷರ ಸಂಗ್ರಾಹಕರು ಹರಡಿಕೊಂಡಿದ್ದಾರೆ. ಕೆಲವರು ಸಂಗ್ರಹಿಸುವ ರುಜುಗಳು ಅವರವರ ಸ್ವಭಾವ ಮತ್ತು ರುಚಿಗೆ ತಕ್ಕಂತೆ ಇರುವವು. ನೌಕಾ ವಿಷಯಗಳಲ್ಲಿ ಹೆಚ್ಚು ಆಸಕ್ತಿ ವಹಿಸುತ್ತಿದ್ದ ಫ್ರಾಂಕ್ಲಿನ್ ರೂಜ್‌ವೆಲ್ಟರು ಅಮೇರಿಕ ನೌಕಾದಳದ ಅನೇಕರು ಸಹಿಗಳನ್ನು ಸಂಗ್ರಹಿಸಿದ್ದರು. ಕೆಲವರು ನಟ–ನಟಿಯರ ಸಹಿ ಸಂಗ್ರಹಿಸಿದ್ದರೆ, ಮತ್ತೆ ಕೆಲವರು ವಿಜ್ಞಾನಿಗಳ ಭಾವಚಿತ್ರ ಹಾಗೂ ಹಸ್ತಾಕ್ಷರಗಳನ್ನು ಮಾತ್ರ ಸಂಗ್ರಹಿಸುವರು.

ಬ್ರಿಟನ್ನಿನ ಪ್ರಧಾನಿಯಾಗಿದ್ದ ಸರ್ ವಿನ್‌ಸ್ಟನ್ ಚರ್ಚಿಲ್ಲರು ತಾವು ವ್ಯವಹಾರ ನಡೆಸಿದ ಪ್ರತಿಯೊಬ್ಬ ಮುಖಂಡನ ಹಸ್ತಾಕ್ಷರವನ್ನೂ ಪಡೆದಿದ್ದರು. ಅವರಿಗೆ ಈ ಹವ್ಯಾಸದ ಬಗ್ಗೆ ತುಂಬಾ ಹೆಮ್ಮೆಯಿತ್ತು. ಒಂದು ಬಾರಿ ವರದಿಗಾರನೊಬ್ಬ, ನಿಮ್ಮ ಸಂಗ್ರಹಕ್ಕೆ ಇನ್ನೂ ಯಾವ ಮುಖಂಡರದ್ದು ಸೇರಬೇಕೆಂದು ಮಾರ್ಮಿಕವಾಗಿ ಪ್ರಶ್ನಿಸಿದ. ಪ್ರಶ್ನೆಯ ಧಾಟಿಯನ್ನು ಗುರುತಿಸಿದ ಚರ್ಚಿಲ್ಲರು ತಕ್ಷಣವೇ 'ಹಿಟ್ಲರನದು' ಎಂದರು. ಕಿಲಾಡಿ ಪ್ರಶ್ನೆಗಾರ ಕೂಡಲೆ. "ಏನು ಹಿಟ್ಲರನ ಹಸ್ತಾಕ್ಷರವೇ?" ಎಂದ. ಚರ್ಚಿಲ್ಲರು ಯಾವುದೇ ರೀತಿಯ ಭಾವನೆಯನ್ನೂ ವ್ಯಕ್ತ ಪಡಿಸದೆ, "ಅಲ್ಲ, ಅವನ ತಲೆ," ಎಂದರಂತೆ.

ಹಸ್ತಾಕ್ಷರ ಸಂಗ್ರಹಿಸುವುದು ಬರೀ ಹವ್ಯಾಸಕ್ಕಾಗಿ ಅಲ್ಲ. ಅದು ಒಂದು ಬಂಡವಾಳದ ಹೂಡಿಕೆಯೂ ಹೌದು. ಸ್ಟಾಂಪ್ ಕೂಡಿಸಿ ಧನವಂತರಾಗುವರಂತೆ. ಹಸ್ತಾಕ್ಷರ ಸಂಗ್ರಹಿಸುವುದೂ ಒಂದು ವಿಧದ ವ್ಯಾಪಾರ. ಪಾಶ್ಚಾತ್ಯ ದೇಶಗಳಲ್ಲಿ ಹಸ್ತಾಕ್ಷರಗಳನ್ನು ಮಾರುವ ಅಂಗಡಿಗಳು ಪ್ರತಿಯೊಂದು ನಗರಗಳಲ್ಲೂ ಕಾಣಬರುತ್ತವೆ. ಅನೇಕರು ಧನವಂತರೂ ಆಗಿದ್ದಾರೆ. ೧೯೫೫ರಲ್ಲಿ ಪೂರ್ವ ಜರ್ಮನಿಯಲ್ಲಿದ್ದ ಒಬ್ಬ ಕೈಗಾರಿಕೋದ್ಯಮಿಯನ್ನು ಕಮ್ಯೂನಿಸ್ಟರು ಅವನ ಆಸ್ತಿಯೆಲ್ಲ ಕಿತ್ತುಕೊಂಡು ಹೊರದೂಡಿದರು. ಅವನು ಪೂರ್ವ ಜರ್ಮನಿಯನ್ನು ತ್ಯಜಿಸುವಾಗ ಆತನ ಕೆಲವು ಸ್ವಂತ ಸಾಮಾನುಗಳನ್ನು ತೆಗೆದುಕೊಂಡು ಹೋಗಲು ಅನುಮತಿಯಿತ್ತರು. ಆತ ಮಾರ್ಟಿನ್ ಲೂಥರನ ಹಸ್ತಾಕ್ಷರಗಳಿದ್ದ ಎರಡು ಪತ್ರಗಳನ್ನು ಪೋಲೀಸರ ಕಣ್ಣು ತಪ್ಪಿಸಿ ಒಯ್ದು. ಪಶ್ಚಿಮ ಜರ್ಮನಿಯಲ್ಲಿ ಒಂದೊಂದು ಹಸ್ತಾಕ್ಷರಕ್ಕೆ ೬೦೦೦ ಡಾಲರ್ ಬೆಲೆ ಬಂದಿತು.

ಹಸ್ತಾಕ್ಷರಗಳ ಬೇಡಿಕೆ ಹೆಚ್ಚಿದ ಹಾಗೆಲ್ಲ, ಫೋರ್ಜರಿ ಹಸ್ತಾಕ್ಷರಗಳು ನಿಧಾನವಾಗಿ ಬಳಕೆಗೆ ಬರತೊಡಗಿದವು. ಮೂವತ್ತೊಂದು ವರ್ಷಗಳ ಹಿಂದೆ ಅಮೇರಿಕದಲ್ಲಿ ಕಣ್ಮರೆಯಾದ ಜೋಸೆಫ್ ಕೋಸೆಯೆಂಬವನು ಬೆಂಜಮಿನ್ ಫ್ರಾಂಕ್ಲಿನ್, ಅಬ್ರಹಾಂ ಲಿಂಕನ್, ಅಲೆನ್ ಪೋ ಮುಂತಾದ ಪ್ರಮುಖರ ಹಸ್ತಾಕ್ಷರಗಳನ್ನು ಕಳ್ಳ ರುಜು ಮಾಡಿ ಮಾರಿದ್ದ. ಎಲ್ಲಕ್ಕಿಂತ ಚಾಣಾಕ್ಷತನದ ಫೋರ್ಜರಿಯೆಂದರೆ ೧೮ ನೇ ಶತಮಾನದಲ್ಲಿ ವಿಲಿಯಂ ಹೆನ್ರಿ ಐರ್ಲೆಂಡ್ ಎಂಬುವನು ಷೇಕ್ಸ್‌ಪಿಯರ್ ಕವಿಯ ರುಜುವನ್ನು ಕಾಪಿ ಮಾಡಿದ್ದು. ಅಲ್ಲಿಯವರೆವಿಗೆ ಷೇಕ್ಸ್‌ಪಿಯರ್‌ನ ಐದು ಹಸ್ತಾಕ್ಷರಗಳು ಮಾತ್ರ ಲಭ್ಯವಿದ್ದುವು. ಐರ್ಲೆಂಡನು ತನ್ನ ತಂದೆಗಾಗಿ ಆರನೆಯದನ್ನು ಸೃಷ್ಟಿ ಮಾಡಿದ. ಅಷ್ಟೇ ಅಲ್ಲ. ಹಸ್ತಪ್ರತಿಗಳನ್ನು ಷೇಕ್ಸ್‌ಪಿಯರನ ಹ್ಯಾಮ್ಲೆಟ್, ಕಿಂಗ್ ಲಿಯರ್, ಪೋರ್ಟ್‌ಜೆನ್ ನಾಟಕಗಳನ್ನು ಫೋರ್ಜರಿ ಮಾಡಿದ. ✡

ಲೈಡನ್ ವಿಶ್ವವಿದ್ಯಾಲಯದ ಕಥೆ

ರೇಣುಕ

ಬೆಟ್ಟಗುಡ್ಡಗಳಿಲ್ಲದ ಬಯಲು ಪ್ರದೇಶ ಹಾಲೆಂಡ್. ಸಮುದ್ರಮಟ್ಟಕ್ಕೆ ಇದರ ಎತ್ತರ ಸರಾಸರಿ ಮೂವತ್ತೇಳು ಅಡಿಗಳಷ್ಟು ಮಾತ್ರ. ದೇಶದ ಬಹಳಷ್ಟು ಭೂಮಿ ಸಮುದ್ರಮಟ್ಟ-ಕ್ಕಿಂತಲೂ ಕೆಳಗಿದ್ದು ಆಗಾಗ ಏಳುವ ಬಿರುಗಾಳಿಯಿಂದ ಸಮುದ್ರದ ಅಲೆಗಳು ಉರುಳಿ ಬಂದು ತಗ್ಗಿನ ಪ್ರದೇಶವೆಲ್ಲ ಜಲಮಯವಾಗುತ್ತಿತ್ತು. ದೇಶದ ತಗ್ಗುಪ್ರದೇಶದ ಮೇಲಿನ ಸಮುದ್ರದ ಈ ಆಕ್ರಮಣವನ್ನು ತಡೆಗಟ್ಟಲು ಅಲ್ಲಿನ ಜನರು ಸುಮಾರು ೧೫೦೦ ಮೈಲುಗಳಷ್ಟು ಉದ್ದದ ಬಲವಾದ ಒಡ್ಡನ್ನು ನಿರ್ಮಿಸಿದರು.

ಸಮುದ್ರದ ದಂಡೆಯುದ್ದಕ್ಕೂ ಈ ಬೃಹತ್ತಾದ ಒಡ್ಡನ್ನು ನಿರ್ಮಿಸಲು ಬಹಳಷ್ಟು ಹಣ, ಕಾಲ ವ್ಯಯವಾಯಿತಾದರೂ ಜನರ ಶ್ರಮ ವ್ಯರ್ಥವಾಗಲಿಲ್ಲ. ಒಡ್ಡಿನ ಹಿಂಭಾಗದ ತಗ್ಗಿನ ಪ್ರದೇಶದಲ್ಲಿ ಜನರು ಮನೆಗಳನ್ನು ಕಟ್ಟಿಕೊಂಡು ವಾಸಿಸಲಾರಂಭಿಸಿದರು. ಒಂದು ಕಾಲದಲ್ಲಿ ಸಮುದ್ರದ ಅಡಿಯಲ್ಲಿ ಮಲಗಿದ್ದ ಈ ಭೂಪ್ರದೇಶ ಹಸಿರು ಹೊಲ ಗದ್ದೆ, ತೋಟಗಳಿಂದ ಕಂಗೊಳಿಸಲಾರಂಭಿಸಿತು. ಸಮುದ್ರದಿಂದ ರಕ್ಷಿಸಲ್ಪಟ್ಟ ಈ ಪ್ರದೇಶದಲ್ಲಿನ ಕಳಕಳಿಸುವ ವೃಕ್ಷರಾಜಿಗಳ ನಡುವೆ ಹಾಲೆಂಡಿನ ಪ್ರಮುಖ ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಕೇಂದ್ರವಾದ ಲೈಡನ್ ಪಟ್ಟಣವಿದೆ. ಈ ಪಟ್ಟಣ ದಕ್ಷಿಣ ಹಾಲೆಂಡಿನಲ್ಲಿ ಹೇಗ್‌ನಿಂದ ಈಶಾನ್ಯಕ್ಕೆ ಹತ್ತು ಮೈಲುಗಳ ದೂರದಲ್ಲಿದೆ.

ಈ ಪಟ್ಟಣವು ಅಗಲವಾದ ರಸ್ತೆಗಳಿಂದ ಮತ್ತು ಹಸಿರು ಹೂದೋಟಗಳಿಂದ ಹಾಲೆಂಡಿನಲ್ಲೆಲ್ಲಾ ಸುಂದರವಾದ ಪಟ್ಟಣವೆನಿಸಿಕೊಂಡಿದೆ. ಪಟ್ಟಣದ ನಡುವಿನಲ್ಲಿ ದಿಬ್ಬದ ಮೇಲೊಂದು ಎತ್ತರವಾದ ಗೋಪುರವಿದ್ದು ಅನತಿದೂರದಲ್ಲಿರುವ ಸಾಗರವನ್ನು ವೀಕ್ಷಿಸಲು ಪಟ್ಟಣದ ಜನರು ಈ ಗೋಪುರವನ್ನು ಹತ್ತಿಬರುತ್ತಾರೆ. ಲೈಡನ್ ಪಟ್ಟಣಕ್ಕೆ ಕಿರೀಟಪ್ರಾಯವಾಗಿ ಅಂತರರಾಷ್ಟ್ರೀಯ ಖ್ಯಾತಿಯ ವಿಶ್ವವಿದ್ಯಾಲಯವೊಂದಿದೆ. ಇದೇ ಲೈಡನ್ ವಿಶ್ವವಿದ್ಯಾಲಯ.

ಹದಿನಾರನೆಯ ಶತಮಾನದಲ್ಲಿ ಜೋಸೆಫ್ ಜಸ್ಟಸ್ ಸ್ಕಾಲಿಗರ್ (೧೫೪೦_೧೬೦೯) ಹ್ಯೂಗೋಗ್ರೋಟಿಯಸ್ (೧೫೮೩-೧೬೪೫) ಜಕೋಬಸ್ ಅರ್ಮಿನಿಯಸ್ (೧೫೬೦-೧೬೦೯) ಮೊದಲಾದ ಯುರೋಪಿನ ಖ್ಯಾತಿವೆತ್ತ ಮಾನವ ಪಂಥಿಗಳ ಜ್ಞಾನದಾಹವನ್ನು ತಣಿಸುವ ಪವಿತ್ರ ಕ್ಷೇತ್ರವಾಗಿದ್ದುದರ ಹಿರಿಮೆ ಈ ವಿಶ್ವವಿದ್ಯಾಲಯದ್ದಾಗಿದ್ದಿತು. ಹದಿನೆಂಟನೆಯ ಶತಮಾನದಲ್ಲಿ ಹರಮನ್ ಬೋಯರ್‌ಹವ್‌ರವರ ಇಪ್ಪತ್ತೈದು ವರ್ಷಗಳಷ್ಟು ದೀರ್ಘಕಾಲದ ಅವಧಿಯ ನಿರ್ದೇಶನದಲ್ಲಿ ಲೈಡನ್ ವಿಶ್ವವಿದ್ಯಾಲಯ ಯುರೋಪಿನ ಪ್ರಮುಖ ವೈಜ್ಞಾನಿಕ ಮತ್ತು ವೈದ್ಯಕೀಯ ಕೇಂದ್ರವಾಗಿ ಅಂತರರಾಷ್ಟ್ರೀಯ ಮನ್ನಣೆ ಗಳಿಸಿತು.

ಇಂದಿಗೂ ಲೈಡನ್ ವಿಶ್ವವಿದ್ಯಾಲಯ ಕಾನೂನು, ಪೌರಸ್ತ್ಯ ಸಂಸ್ಕೃತಿ, ತತ್ವಶಾಸ್ತ್ರದರ್ಶನ ಮತ್ತು ವೈದ್ಯವಿಜ್ಞಾನ ಕ್ಷೇತ್ರಗಳ ವಿಭಾಗಗಳಲ್ಲಿ ಶ್ರೇಷ್ಠ ಮಟ್ಟವನ್ನು ಕಾಯ್ದುಕೊಂಡು ಬರು

ತ್ತಿದೆ. ವಿಶ್ವವಿದ್ಯಾಲಯದ ಗ್ರಂಥಾಲಯವೊಂದು ಅಪೂರ್ವ ಜ್ಞಾನಭಂಡಾರವೆನಿಸಿದೆ. ಇಲ್ಲಿ ವೈಶಿಷ್ಟ್ಯಪೂರ್ಣವಾದ ಗ್ರಂಥಸಂಗ್ರಹವಿದೆ. ಇಲ್ಲಿನ ವಿವಿಧ ವಿಷಯುಗಳಿಗೆ ಸಂಬಂಧಿಸಿದ ಗ್ರಂಥಗಳ ಸಂಖ್ಯೆ ಹತ್ತು ಲಕ್ಷಕ್ಕೂ ಮೀರಿದೆ. ಇದರಲ್ಲಿ ೧೪೦೦೦ ಪುರಾತನ ಹಸ್ತಪ್ರತಿಗಳು ಮತ್ತು ೪೦,೦೦೦ ನಕ್ಷೆಗಳೂ ಸೇರಿವೆ. ಈ ವಿಶ್ವ ವಿದ್ಯಾಲಯಕ್ಕೆ ಸೇರಿದಂತೆ ಖಗೋಳ ವೇಧಶಾಲೆ ಸಸ್ಯಶಾಸ್ತ್ರಕ್ಕೆ ಸಂಬಂಧಿಸಿದ ಉದ್ಯಾನಗಳಿವೆ. ಯುರೋಪಿಯನ್, ಗ್ರೀಕ್, ರೋಮನ್ ಮತ್ತು ಇಜಿಪ್ತ ದೇಶಗಳಿಗೆ ಸಂಬಂಧಿಸಿದ ಪ್ರತ್ಯೇಕ ವಿಭಾಗಗಳುಳ್ಳ, ಅಪೂರ್ವವಾದ ಪ್ರಾಚೀನ ವಸ್ತು ಸಂಗ್ರಹಾಲಯವೂ ಈ ವಿಶ್ವವಿದ್ಯಾಲಯದಲ್ಲಿದೆ. ಧಾತು ಶಾಸ್ತ್ರ ಮತ್ತು ಭೂಗರ್ಭ ಶಾಸ್ತ್ರಕ್ಕೆ ಸಂಬಂಧಿಸಿದ ವಿಜ್ಞಾನ ಸಂಸ್ಥೆಗಳು ಈ ವಿಶ್ವವಿದ್ಯಾಲಯದ ಅಂಗಗಳಾಗಿ ಕಾರ್ಯ ನಿರ್ವಹಿಸುತ್ತಿವೆ. ಈ ಶತಮಾನದ ಮಧ್ಯಭಾಗದಲ್ಲಿ (೧೯೫೫) ಇಲ್ಲಿ ಕಲಿಯುತ್ತಿರುವ ಜ್ಞಾನಪಿಪಾಸುಗಳ ಸಂಖ್ಯೆ ೪೫೦೦ಕ್ಕೂ ಹೆಚ್ಚು.

ಈ ಮಹಾನ್ ವಿಶ್ವವಿದ್ಯಾಲಯ ಲೈಡನ್ ಪಟ್ಟಣದಲ್ಲಿ ಸ್ಥಾಪಿತವಾದುದಕ್ಕೊಂದು ಐತಿಹಾಸಿಕ ಹಿನ್ನೆಲೆಯಿದೆ.

ಸ್ಪೇನಿನ ದೊರೆ ಎರಡನೇ ಫಿಲಿಪ್ಪನ ಕ್ರೂರ ಸೈನಿಕ ಶಾಸನದಿಂದ ಬೇಸತ್ತ ಹಾಲೆಂಡಿನ ಕೆಳನಾಡ ಪ್ರಾಂತಗಳ ಡಚ್ಚರು ವಿಲಿಯಂ ದಿ ಸೈಲಂಟ್ ಎಂಬ ದೇಶಪ್ರೇಮಿಯ ನಾಯಕತ್ವದಲ್ಲಿ ಒಂದೆದ್ದು ಏಳು ವರ್ಷಗಳಷ್ಟು ದೀರ್ಘಕಾಲ ಸ್ಪೇನಿನ ಸೈನಿಕ ಪ್ರಭುತ್ವದ ವಿರುದ್ಧ ಸತತವಾಗಿ ಹೋರಾಡಿದರು. ಈ ಹೋರಾಟದಲ್ಲಿ ಸಾವಿರಾರು ಡಚ್ಚರು ಸ್ಪೇನ್ ಸೈನಿಕರಿಂದ ಹತರಾದರು. ಸ್ಪೇನಿನ ಸೈನಿಕ ಶಾಸನದ ದಬ್ಬಾಳಿಕೆಯಲ್ಲಿ ಜನರ ಬಾಳುವೆ ಅಸಹನೀಯವಾಯಿತು.

ಕ್ರಿ. ಶ. ೧೫೭೪ರ ಬೇಸಿಗೆಯ ಕಾಲ. ಸ್ಪೇನಿನ ಸೇನೆ ಲೈಡನ್ ಪಟ್ಟಣವನ್ನು ಮುತ್ತಿತ್ತು. ಜನರು ಕೋಟೆಯ ಬಾಗಿಲುಗಳನ್ನು ಭದ್ರಪಡಿಸಿಕೊಂಡು ಒಳಗೆ ಸೇರಿಕೊಂಡಿದ್ದರು. ಆಹಾರ ಸಾಮಗ್ರಿಗಳನ್ನು ಹೊರಗಿನಿಂದ ಕೋಟೆಯೊಳಗೆ ಸರ್ಪ ಕಾವಲಿದ್ದರು. ಆಹಾರ ಸಾಮಗ್ರಿಗಳು ತೀರಿದೊಡನೆ ಜನರು ತಾವಾಗಿಯೇ ಕೋಟೆಯ ಬಾಗಿಲು ತೆರೆದು ಶರಣಾಗುವರೆಂದು ಭಾವಿಸಿ ಸ್ಪೇನ ದೇಶದ ಸೈನಿಕರು ಮುತ್ತಿಗೆಯನ್ನು ಮುಂದುವರಿಸಿದ್ದರು. ಆದರೆ ಅವರಿಗೆ ಲೈಡನ್ ಪಟ್ಟಣದ ಜನರ ಅಚಲ ದೇಶಪ್ರೇಮದ ಬಗ್ಗೆ ಹೆಚ್ಚು ಅರಿವಿರಲಿಲ್ಲ. ಹಸಿವಿನಿಂದ ಸತ್ತರೂ ಪಟ್ಟಣವನ್ನು ಶತ್ರುಗಳಿಗೊಪ್ಪಿಸಬಾರದೆಂದು ನಿರ್ಧರಿಸಿದ್ದರು, ಲೈಡನ್ ಪಟ್ಟಣದ ಧೀರ ಜನರು.

ಒಂದೆರಡು ತಿಂಗಳುಗಳಲ್ಲಿ ಲೈಡನ ಪಟ್ಟಣವಾಸಿಗಳ ಬಳಿಯಿದ್ದ ಆಹಾರಸಾಮಗ್ರಿಗಳೆಲ್ಲ ಮುಗಿದುಹೋದವು. ತಿನ್ನಲು ಆಹಾರವಿಲ್ಲದೆ ಹೇಗೆ ಜೀವಿಸಬೇಕೆಂದರಿಯದ ಜನರು ವ್ಯಾಕುಲ ಚಿತ್ತರಾದರು. ಕೊನೆಗೆ ಜನರೆಲ್ಲಾ ಒಂದೆಡೆ ಕಲೆತು ಸಮಾಲೋಚಿಸಿ, ಹಾಲೆಂಡಿನ ಇತರ ಪಟ್ಟಣಗಳ ಜನರಿಗೆ ತಮ್ಮ ದಾರುಣ ಪರಿಸ್ಥಿತಿಯನ್ನು ವಿವರಿಸಿ ನೆರವನ್ನು ಬೇಡಿ ಪತ್ರಗಳನ್ನು ಬರೆದರು. ಕೋಟೆಯನ್ನಾವರಿಸಿಕೊಂಡು ಶತ್ರು ಸೈನಿಕರು ಹಗಲು ರಾತ್ರಿ ಕಾವಲು ಕಾಯುತ್ತಿದ್ದುದರಿಂದ ಪತ್ರಗಳನ್ನು ತೆಗೆದುಕೊಂಡು ಪತ್ರವಾಹಕರಾರೂ ಹೊರಗೆ ಹೋಗುವ ಹಾಗಿರಲಿಲ್ಲ. ಆದ್ದರಿಂದ ಅವರು ಬರೆದ ಪತ್ರಗಳನ್ನು ಸಣ್ಣಗೆ ಸುರುಳಿ ಸುತ್ತಿ ಪಾರಿವಾಳಗಳ ರೆಕ್ಕೆಗಳಡಿಯಲ್ಲಿಟ್ಟು ಕಟ್ಟಿ ಹಾರಿಸಿದರು. ಆ ಪತ್ರ ವಾಹಕ ಪಾರಿವಾಳಗಳು ಕೋಟೆಯ ಹೊರಗೆ ಬೀಡುಬಿಟ್ಟಿದ್ದ ಶತ್ರು ಸೈನಿಕರ ತಲೆಗಳ ಮೇಲೆಯೇ ಹಾರಿಕೊಂಡು ತಮ್ಮ ಗುರಿಯತ್ತ ಸಾಗಿದವು.

ಹಾಲೆಂಡಿನ ಇತರ ಪಟ್ಟಣಗಳ ಜನರು ಪಾರಿವಾಳಗಳನ್ನು ಹಿಡಿದುಕೊಂಡು ಅವುಗಳ ರೆಕ್ಕೆಯಡಿಯಲ್ಲಿ ಕಟ್ಟಿದ್ದ ಪತ್ರಗಳನ್ನು ಬಿಚ್ಚಿಕೊಂಡು ಓದಿದರು. ಲೈಡನ್ ಪಟ್ಟಣದ ತಮ್ಮ ದೇಶಬಾಂಧವರಿಗೊದಗಿದ ವಿಪತ್ತಿಗಾಗಿ ಪರಿತಾಪಪಟ್ಟರು. ಆದರೆ ಅವರು ಸಂಕಷ್ಟದಲ್ಲಿ ಸಿಲುಕಿಕೊಂಡಿದ್ದ ತಮ್ಮ ದೇಶಬಾಂಧವರಿಗಾಗಿ ಯಾವ ನೆರವನ್ನೂ ಕಳುಹಿಸಲು ಸಾಧ್ಯವಿರಲಿಲ್ಲ. ಆಹಾರ ಸಾಮಗ್ರಿಗಳನ್ನು ಲೈಡನ್ ಪಟ್ಟಣಕ್ಕೆ ಕಳುಹಿಸಿಕೊಡದ ಮುನ್ನ ಪಟ್ಟಣವನ್ನು ಸುತ್ತುವರಿದಿದ್ದ ಬಲಿಷ್ಠ

ಆದರೆ ಸುಸಜ್ಜಿತ ಶತ್ರು ಸೇನೆಯನ್ನು ಹೊಡೆದೋಡಿಸುವಷ್ಟು ಜನಬಲ ಅವರಲ್ಲಿರಲಿಲ್ಲ. ಆಗ ಅವರೆಲ್ಲ ಶತ್ರುಗಳಿಂದ ಮುತ್ತಲ್ಪಟ್ಟ ಲೈಡನ್ ಪಟ್ಟಣದ ವಿಮೋಚನೆಗಾಗಿ ಹಾಲೆಂಡಿನ ಉದ್ಧಾರಕನೆಂದು ಪರಿಗಣಿಸಲಾಗಿದ್ದ ಉಜ್ವಲ ರಾಷ್ಟ್ರಪ್ರೇಮಿ ವಿಲಿಯಂ ದಿ ಸೈಲೆಂಟ್‌ನೆಡೆಗೆ ತಿರುಗಿದರು.

ವಿಲಿಯಂ ದಿ ಸೈಲೆಂಟನದು ವಿಚಿತ್ರ ಸಾಂಸ್ಕೃತಿಕ ಹಿನ್ನೆಲೆಯುಳ್ಳ ವಿಶಿಷ್ಟ ವ್ಯಕ್ತಿತ್ವ. ಆತನು ಹುಟ್ಟಿನಿಂದ ಜರ್ಮನ್. ಮಾತೃಭಾಷೆ ಫ್ರೆಂಚ್. ಹಾಲೆಂಡನ್ನು ಮಾತೃಭೂಮಿಯೆಂದು ಸ್ವೀಕರಿಸಿದ್ದರೂ ಇಡೀ ಯೂರೋಪಿನ ಹಿತಾಸಕ್ತಿಗಳ ಬಗ್ಗೆ ಕಾಳಜಿಯುಳ್ಳ ಉದಾತ್ತ ವ್ಯಕ್ತಿಯಾಗಿದ್ದ ಆತ. ವಿಲಿಯಂ ದಿ ಸೈಲೆಂಟನು ಆರೆಂಜ್ ಸಂಸ್ಥಾನದ ಶ್ರೀಮಂತ ಕುಟುಂಬದಿಂದ ಬಂದವನಾದರೂ ಅಸಾಧಾರಣ ಬುದ್ಧಿಮತ್ತೆ ಮತ್ತು ಉದಾತ್ತ ಗುಣಗಳಿಂದಾಗಿ ಹಾಲೆಂಡಿನ ಸಾಮಾನ್ಯ ವರ್ಗದ ಜನರ ಗೌರವಾದರಗಳಿಗೆ ಪಾತ್ರನಾಗಿದ್ದನು.

ಸ್ಪೈನಿನ ದೊರೆ ಎರಡನೇ ಫಿಲಿಪ್ಪನ ಕ್ರೂರ ದಬ್ಬಾಳಿಕೆಯ ವಿರುದ್ಧ ಸಿಡಿದೆದ್ದ ವಿಲಿಯಂ ಕೆಳನಾಡಿನ ಹದಿನೇಳು ಪ್ರಾಂತಗಳನ್ನು ಸ್ಪೈನ್ ಪ್ರಭುತ್ವದ ಹಿಡಿತದಿಂದ ವಿಮೋಚನೆಗೊಳಿಸಲು ಕಂಕಣಬದ್ಧನಾಗಿದ್ದ. 'ಸೀಬೆಗ್ಗರ್ಸ್' ಎಂಬ ಹೆಸರಿನ ಡಚ್ ನಾವಿಕರನ್ನು ಮತ್ತು ಜಿನೀವಾದ ಮತ ಸುಧಾರಕ ಜಾನ್ ಕಲ್ವಿನ್ನನ ಅನುಯಾಯಿಗಳಾದ 'ಕಲ್ವಿನಿಸ್ಟ್' ಪಂಥೀಯರನ್ನು ಸಂಘಟಿಸಿ ದೇಶದಲ್ಲೆಲ್ಲ ಸಶಸ್ತ್ರ ಕ್ರಾಂತಿ ಎಬ್ಬಿಸಿದ ವಿಲಿಯಂ ತನ್ನ ಈ ಹೋರಾಟದಲ್ಲಿ ಅನೇಕ ಏಳು ಬೀಳುಗಳನ್ನು ಕಾಣಬೇಕಾಯಿತು. ಕೆಳನಾಡಿನ ಪ್ರಾಂತಗಳ ಅನೇಕ ಪಟ್ಟಣಗಳನ್ನು ಇವನ ಅನುಯಾಯಿಗಳು ವಶಪಡಿಸಿಕೊಂಡರು.

ಸ್ಪೈನಿನ ದೊರೆ ಫಿಲಿಪ್ಪನು ಪ್ರಭುತ್ವದ ಎದುರು ನಿಂತ ವಿಲಿಯಂನನ್ನು ಬಂಡುಕೋರನೆಂದು ಸಾರಿ ಅವನನ್ನು ಶಿಕ್ಷಿಸಲು ದೊಡ್ಡ ಸೈನ್ಯವನ್ನೇ ಕಳುಹಿಸಿದ. ಕೆಳನಾಡಿನ ಪ್ರಾಂತಗಳಾದ ಹಾಲೆಂಡ್ ಯುಟ್ರೆಚ್, ಜೀಲೆಂಡಗಳು ವಿಲಿಯಂನನ್ನು ತಮ್ಮ ಪ್ರಾಂತಗಳ ಏಕಮೇವ ನಾಯಕನೆಂದು ಅಂಗೀಕರಿಸಿ ಸ್ಪೈನಿನ ಪ್ರಭುತ್ವದ ನೊಗವನ್ನು ಕಿತ್ತೊಗೆಯಲು ಬದ್ಧಕಂಕಣರಾಗಿ ಹೋರಾಡತೊಡಗಿದರು. ವಿಲಿಯಂನ ಶ್ರದ್ಧೆ, ರಾಜತಂತ್ರ ನೈಪುಣ್ಯ ಮತ್ತು ಯುಕ್ತಾಯುಕ್ತ ಪರಿಜ್ಞಾನದಿಂದ ಮುಂದೆ ಸ್ವತಂತ್ರ ಡಚ್ ರಾಜ್ಯ ಅಸ್ತಿತ್ವಕ್ಕೆ ಬರಲು ಕಾರಣವಾಯಿತು.

ಮಿತಭಾಷಿಯಾಗಿದ್ದ ವಿಲಿಯಂ ಕಾರ್ಯಸಾಧನೆಯಾಗುವವರೆಗೂ ತನ್ನ ಯೋಜನೆಗಳ ಗುಟ್ಟನ್ನು ರಕ್ಷಿಸಿಡುವುದರಲ್ಲಿ ನಿಪುಣನಾಗಿದ್ದನಾದ್ದರಿಂದ 'ವಿಲಿಯಂ ದಿ ಸೈಲೆಂಟ್' ಎಂಬ ಅಭಿಧಾನದಿಂದ ಜನಪ್ರಿಯನಾಗಿದ್ದನಾತ.

ಶತ್ರುಗಳ ಮುತ್ತಿಗೆಯಲ್ಲಿ ಅನ್ನಾಹಾರಗಳಿಲ್ಲದೆ ನಿಧಾನವಾಗಿ ಸಾವಿನ ಅಂಚಿಗೆ ಸಾಗುತ್ತಿದ್ದ ಲೈಡನ್ ಪಟ್ಟಣದ ಜನರ ವಿಮೋಚನೆಗಾಗಿ ವಿಲಿಯಂ



ಬೇರೇನಿಲ್ಲ... 'ಹೊಸರುಚಿ' ಪುಸ್ತಕ ತಂದಿದ್ದಾಳೆ, ಅಷ್ಟೆ.

ಯೋಜನೆಯೊಂದನ್ನು ಸಿದ್ಧಪಡಿಸಿದ. ಆ ಯೋಜನೆಯ ಪ್ರಕಾರ ಸಮುದ್ರದಲೆಗಳನ್ನು ತಡೆಯಲು ನಿರ್ಮಿಸಿದ್ದ ಒಡ್ಡನ್ನು ಅಲ್ಲಲ್ಲಿ ಒಡೆದು ಆ ಮೂಲಕ ಸಮುದ್ರ ನೀರು ಲೈಡನ್ ಪಟ್ಟಣದೆಡೆಗೆ ಮುನ್ನುಗ್ಗುವಂತೆ ಮಾಡುವುದೇ ಅದರ ಉದ್ದೇಶವಾಗಿತ್ತು. ಇದರಿಂದ ಹೊಲ ಗದ್ದೆಗಳು, ತೋಟಗಳು ಹಾನಿಗೊಳಗಾಗುವ ಸಂಭವವಿದ್ದರೂ ಜನರು ಶತ್ರುಗಳ ಮುತ್ತಿಗೆಯ ಕುತ್ತಿನಿಂದ ಪಾರಾಗಬಹುದಿತ್ತು. ಪಟ್ಟಣವನ್ನು ಸುತ್ತುವರಿದಿದ್ದ ಶತ್ರು ಸೈನಿಕರು ಮುನ್ನುಗ್ಗುವ ಸಮುದ್ರದ ನೀರಿನ ರಭಸಕ್ಕೆ ಎದುರು ನಿಲ್ಲಲಾರದೆ ಪಲಾಯನ ಮಾಡಬೇಕಿತ್ತು. ಇಲ್ಲವೆ ಜಲಸಮಾಧಿಯಾಗದೆ ಬೇರೆ ದಾರಿಯಿರಲಿಲ್ಲ ಅವರಿಗೆ.

ಸಮುದ್ರದ ಮೂಲಕ ನೆರವನ್ನೊದಗಿಸುವ ಯೋಜನೆಯ ವಿವರಗಳುಳ್ಳ ಪತ್ರಗಳನ್ನು ಹೊತ್ತ ಪಾರಿವಾಳಗಳು ಲೈಡನ್ ಪಟ್ಟಣದಭಿಮುಖವಾಗಿ ಹಾರಿಹೋದವು. ಹಸಿವಿನಿಂದ ಗತಪ್ರಾಣರಾಗಿದ್ದ ಲೈಡನ್ ಪಟ್ಟಣದ ಜನ ಪಾರಿವಾಳಗಳು ಹೊತ್ತು ತಂದ ಸಂದೇಶದಿಂದ ಸುತ್ತಲೂ ಕವಿದಿದ್ದ ಗಾಢಾಂಧಕಾರದಲ್ಲಿ ಹಠಾತ್ತಾಗಿ ಬೆಳಕು ಕಂಡಂತೆ ಸಂತೋಷಪಟ್ಟರು.

ಶತ್ರುಗಳು ಲೈಡನ್ ಪಟ್ಟಣವನ್ನು ಮುತ್ತಿ ನಾಲ್ಕು ತಿಂಗಳುಗಳು ಉರುಳಿದರೂ ಪಟ್ಟಣ ವಶವಾಗದೆ ಮುತ್ತಿಗೆ ಮುಂದುವರಿದಿತ್ತು. ಜನರಿಗೆ ತಿನ್ನಲು ಪಟ್ಟಣದಲ್ಲಿ ಇನ್ನೇನು ಉಳಿದಿರಲಿಲ್ಲ. ಪಟ್ಟಣದಲ್ಲಿದ್ದ ನಾಯಿ, ಬೆಕ್ಕು, ಇಲಿ, ಕುದುರೆಗಳನ್ನು ಕೊಂದು ತಿಂದು ಜನರು ಸಾವನ್ನು ಮುಂದೂಡಿ ಸಮುದ್ರ ತಮ್ಮ ನೆರವಿಗೆ ಬರುವುದನ್ನೇ ಎದುರು ನೋಡತೊಡಗಿದರು.

ಹಸಿವಿನಿಂದ ಸೊರಗಿದ ಜನರ ಹೊಟ್ಟೆ ಬೆನ್ನಿಗೆ ಅಂಟಿದ್ದಿತು. ಕುಳಿತಲ್ಲಿಯೇ ಕುಸಿದು ದಿನಗಳನ್ನೆಣಿಸತೊಡಗಿದರು. ಅಳಲಿಕ್ಕೂ ಶಕ್ತಿ ಸಾಲದೆ ಎಳೆಯ ಮಕ್ಕಳು ಪಿಳಪಿಳನೆ ಶೂನ್ಯವನ್ನು ದಿಟ್ಟಿಸುತ್ತಾ ತಾಯಂದಿರ ತೊಡೆಗಳ ಮೇಲೆ ಪವಡಿಸಿದ್ದುವು.

ಹಸಿದ ಜನರು ಪ್ರತಿದಿನ ಪಟ್ಟಣದ ನಡುವಿನಲ್ಲಿದ್ದ ಗೋಪುರವನ್ನು ಹತ್ತಿ ಸಮುದ್ರದ ಅಲೆಗಳು ಪಟ್ಟಣದಭಿಮುಖವಾಗಿ ಉರುಳಿ ಬರುವುದನ್ನೇ ಎದುರು ನೋಡತೊಡಗಿದರು. ಸಮುದ್ರಕ್ಕಡ್ಡವಾಗಿ ಕಟ್ಟಿದ್ದ ಒಡ್ಡನ್ನು ಅಲ್ಲಲ್ಲಿ ಒಡೆಯಲಾಗಿತ್ತು. ದುರ್ದೈವದಿಂದ ಭೂಮಿಯ ಮೇಲಿನಿಂದ ಸಮುದ್ರದಭಿಮುಖವಾಗಿ ಬಲವಾಗಿ ಗಾಳಿ ಬೀಸುತ್ತಿದ್ದುದರಿಂದ ಅಲೆಗಳು ಹಿಂದಕ್ಕೆ ಉರುಳಿ ಹೋಗುತ್ತಿದ್ದುವಲ್ಲದೆ ಪಟ್ಟಣದಭಿಮುಖವಾಗಿ ಉರುಳಿ ಬರುವ ಸಾಧ್ಯತೆ ಕಾಣದಾಯಿತು. ಸಮುದ್ರದ ಅಲೆಗಳು ಲೈಡನ್ ಪಟ್ಟಣಗರಿಗೆ ಅನುಕೂಲಕರವಾಗಿ ಉರುಳಿ ಬರುವ ಮುನ್ನ ಜನರೆಲ್ಲ ಹಸಿವಿನಿಂದ ಸಾಯುವುದರಲ್ಲಿ ಸಂಶಯವಿರಲಿಲ್ಲ.

ಹಸಿವನ್ನು ತಾಳಲಾರದೆ ವಿವೇಚನೆಯನ್ನು ಕಳೆದುಕೊಂಡು ಹಲವು ಮಂದಿ ಕೋಟೆಯ ಬಾಗಿಲನ್ನು ತೆರೆದು ಶತ್ರುಗಳಿಗೆ ಶರಣಾಗಲು ಪ್ರಯತ್ನಿಸಿದರು. ಆಗ ಬರ್ಗೋಮಾಸ್ಟರ್ ಪೀಟರ್ ವಾನ್ ಎಂಬ ಉಜ್ವಲ ದೇಶಪ್ರೇಮಿ ಡಚ್ಚನೊಬ್ಬ ಕೋಟೆಯ ಬಾಗಿಲನ್ನು ತೆರೆಯಲು ಪ್ರಯತ್ನಿಸಿದ ಜನರನ್ನು ತಡೆದು ತನ್ನನ್ನು ಕೊಂದು ತನ್ನ ದೇಹವನ್ನೇ ತಿಂದು ಹಸಿವನ್ನು ಅಡಗಿಸಿಕೊಂಡು ಶತ್ರುಗಳಿಗೆ ಶರಣಾಗುವ ಪ್ರಯತ್ನವನ್ನು ಬಿಡಬೇಕೆಂದು ಬೇಡಿಕೊಂಡನಂತೆ. ಆಗ ಆ ಶಿಳಿಗೇಡಿಗಳ ಮನ ಕರಗಿ ಅನುಚಿತಕಾರ್ಯದಿಂದ ಹಿಂದೆಗೆದರೆಂದು ಹೇಳುವ ಕತೆಯೊಂದು ಡಚ್ಚರಲ್ಲಿ ಇಂದಿಗೂ ಪ್ರಚಲಿತವಿದೆ.

ಕೊನೆಗೂ ಸಾವಿನ ಅಂಚಿನಲ್ಲಿದ್ದ ಲೈಡನ್ ಪಟ್ಟಣದ ಜನರ ಮೊರೆ ಸಮುದ್ರದೇವನಿಗೆ ಕೇಳಿಸಿರಬೇಕು. ಅಕ್ಟೋಬರ್ ತಿಂಗಳ ಎರಡನೆಯ ತಾರೀಖು (೧೫೭೪) ಮಧ್ಯರಾತ್ರಿ ಸಮೀಪಿಸುತ್ತಿದ್ದಂತೆ ಸಮುದ್ರದ ಮೇಲೆ ಬಲವಾದ ಬಿರುಗಾಳಿ ಎದ್ದಿತು. ರಾಕ್ಷಸಾಕಾರದ ಸಮುದ್ರದಲೆಗಳು ಬಿರಿದ ಒಡ್ಡಿನ ದ್ವಾರದ ಮೂಲಕ ರಭಸದಿಂದ ಉರುಳಿಕೊಂಡು ಲೈಡನ್ ಪಟ್ಟಣದ ಕೋಟೆಗೆ ಅಭಿಮುಖವಾಗಿ ಮುನ್ನುಗ್ಗಿದವು. ಕ್ಷಣಮಾತ್ರದಲ್ಲಿ ಧಾವಿಸಿ ಬಂದ ಸಮುದ್ರದ ಅಲೆಗಳಿಂದ ಸ್ಪೈನ್ ಸೇನೆ ದಿಕ್ಕೆಟ್ಟು ಓಡಲಾರಂಭಿಸಿತು. ಬಹುಮಂದಿ ಸೈನಿಕರು ಯುದ್ಧಾಶ್ವಗಳು ಜಲಸಮಾಧಿಯಾದರು. ಶತ್ರುಗಳ ಐದು ತಿಂಗಳ ಕಾಲ ಮುತ್ತಿಗೆ ಗುರುತಿಲ್ಲದಂತೆ ಸಮುದ್ರದ ನೀರಿನಲ್ಲಿ ಕೊಚ್ಚಿಹೋಯಿತು. ಪೂರ್ವಸಿದ್ಧತೆಯಲ್ಲಿದ್ದ ವಿಲಿಯಂನ ಅನುಯಾಯಿಗಳಾದ 'ಸೀಬೆಗ್ಗರ್ಸ್' ಪಡೆಯವರು ಆಹಾರ ಸಾಮಗ್ರಿಗಳನ್ನು ಹೊತ್ತು ವೇಗವಾಗಿ ಚಲಿಸುವ ಚಿಕ್ಕ ದೋಣಿಗಳಲ್ಲಿ ಕುಳಿತು ಮುನ್ನುಗ್ಗುತ್ತಿದ್ದ ಸಮುದ್ರದ ನೀರಿನ ಮೇಲೆ ಲೈಡನ್ನಿಗೆ ಧಾವಿಸಿ ಬಂದರು.

ಕೊನೆಗೂ ವಿಲಿಯಂನ ಬುದ್ಧಿವಂತಿಕೆಯಿಂದ ಲೈಡನ್ ಪಟ್ಟಣ ರಕ್ಷಿಸಲ್ಪಟ್ಟಿತು. ಅನತಿ ಕಾಲದಲ್ಲಿ ಪಟ್ಟಣದ ಜನರೆಲ್ಲ ಒಟ್ಟುಗೂಡಿ ಒಡೆದ ಒಡ್ಡನ್ನು ದುರಸ್ತಿ ಮಾಡಿದರು. ಮತ್ತೆ ಸ್ವಲ್ಪ ಕಾಲದಲ್ಲಿಯೇ ಲೈಡನ್ ಪಟ್ಟಣ ಹಸಿರು ಮುಕ್ಕಳಿಸುತ್ತ ಕಂಗೊಳಿಸಲಾರಂಭಿಸಿತು.

ಪ್ರಾಣದ ಮೇಲಿನ ಹಂಗು ತೊರೆದು ಐದು ತಿಂಗಳಷ್ಟು ದೀರ್ಘಕಾಲ ಪಟ್ಟಣವನ್ನು ರಕ್ಷಿಸಿದ ಲೈಡನ್ ಜನರ ದೇಶಪ್ರೇಮ, ಧೈರ್ಯಸ್ಥೈರ್ಯಗಳನ್ನು ಮೆಚ್ಚಿ ವಿಲಿಯಂನು ಆ ಧೀರರಿಗೆ ಕೊಡುಗೆಯೊಂದನ್ನು ಕೊಡಲು ನಿರ್ಧರಿಸಿದ. ವಿಲಿಯಂ ಅವರ ಮುಂದೆ ಎರಡು ಕೊಡುಗೆಗಳನ್ನಿರಿಸಿ ಅವುಗಳಲ್ಲೊಂದನ್ನು ಆಯ್ಕೆ ಮಾಡಿಕೊಳ್ಳುವಂತೆ ಹೇಳಿದ. ಅವುಗಳಲ್ಲಿ ಮೊದಲನೆಯದು, ಲೈಡನ್ ಪಟ್ಟಣದ ಜನರು ಸರಕಾರಕ್ಕೆ ಕೊಡುವ ತೆರಿಗೆಗಳನ್ನು ಮನ್ನಾ ಮಾಡುವುದು. ಎರಡನೆಯದು ಲೈಡನ್ ಪಟ್ಟಣದಲ್ಲೊಂದು ವಿಶ್ವವಿದ್ಯಾಲಯವನ್ನು ಸ್ಥಾಪಿಸುವುದು. ದೂರದರ್ಶಿಗಳಾಗಿದ್ದ ಲೈಡನ್ ಪಟ್ಟಣವಾಸಿಗಳು ಎರಡನೆಯ ಕೊಡುಗೆಯನ್ನೇ ಆಯ್ಕೆ ಮಾಡಿಕೊಂಡರು. ಅದರ ಫಲ ಇಂದು ಹಾಲೆಂಡಿನ ಶೈಕ್ಷಣಿಕ ಕ್ಷೇತ್ರದಲ್ಲಿ ಬೃಹದಾಕಾರವಾಗಿ ಬೆಳೆದು ವಿಶ್ವಮಾನ್ಯತೆ ಪಡೆದಿರುವ ಲೈಡನ್ ವಿಶ್ವವಿದ್ಯಾಲಯ. ✡

ನೀರುಕಳೆಯ ನಿಯಂತ್ರಣಕ್ಕೆ ನೀರುಹಕ್ಕಿಗಳು

ಎನ್. ಗೋಪಾಲಕೃಷ್ಣ

ಕೆರೆ, ನದಿ, ನಾಲೆಗಳಲ್ಲಿ ಅನೇಕ ಜಾತಿಯ ನೀರು ಕಳೆಗಳು ಸೊಂಪಾಗಿ ಬೆಳೆದು ನೀರು ಸರಾಗವಾಗಿ ಹರಿಯಲು ಅಡ್ಡಿ ಉಂಟುಮಾಡುವುದರಿಂದ ಅನೇಕ ಕೆಲಸ-ಕಾರ್ಯಗಳಿಗೆ ತೊಡಕು.

ಪಾರ್ಥೇನಿಯಂ ಕಳೆಯಾದರೂ ಭೂಮಿಯ ಮೇಲೆ ಬೆಳೆಯುತ್ತದೆ. ಇದನ್ನು ಕೈಗಳಿಂದಲೂ ಕಿತ್ತುಹಾಕಬಹುದು. ಆದರೆ ನೀರಿನಲ್ಲಿ ಬೆಳೆಯುವ ಅಂತರಗಂಗೆಯಂಥ ಕಳೆಗಳ ಸಮಸ್ಯೆ ಇನ್ನೊಂದು ದೊಡ್ಡ ಸಮಸ್ಯೆಯೇ ಆಗಿದೆ.

ನೀರುಕಳೆಗಳಿಂದ ಉಂಟಾಗುವ ತೊಂದರೆಗಳು ಅಪಾರ: ನೀರಾವರಿಗೆ ಅನಾನುಕೂಲ, ಮೀನು ಹಿಡಿಯುವವರಿಗೆ ತೊಂದರೆ, ದೋಣಿ ನಡೆಸಲು ಜಲಮೂಲ ರೋಗಗಳ ವೃದ್ಧಿ – ಹೀಗೆ ಅನೇಕ. ಕಳೆಗಳು ಬೆಳೆದು ನಿಂತ ಪರಿಣಾಮವಾಗಿ ಅನೇಕ ಕಾಲುವೆ, ನದಿಗಳಲ್ಲಿ ನೀರು ಹರಿಯದೆ ನೀರಾವರಿ ಸಾಧನಗಳು ನಿರುಪಯುಕ್ತ ಎನಿಸಿರುವುದು ವಾಸ್ತವ ಸಂಗತಿ.

ಇವೆಲ್ಲ ಅಡ್ಡಿ ಆತಂಕಗಳಿಂದ ಪಾರಾಗಲು ನೀರುಕಳೆಗಳ ನಿಯಂತ್ರಣ ಅಗತ್ಯ. ಕಳೆ ನಿಯಂತ್ರಣಕ್ಕಾಗಿಯೇ ಸೂಕ್ತವಾದ ಯಂತ್ರಗಳೂ ರೂಪುಗೊಂಡಿವೆ. ಯಂತ್ರಗಳ ಉಪಯೋಗದಿಂದ ಕಳೆಗಳನ್ನು ಸಂಪೂರ್ಣವಾಗಿ ನಿಯಂತ್ರಿಸಿದ ಉದಾಹರಣೆಗಳೂ ಇವೆ. ಬೆಂಗಳೂರಿನ ಬಳಿಯ ಹೆಬ್ಬಾಳದ ಕೆರೆ ಅಂತರಗಂಗೆ ಕಳೆಯಿಂದ ಆವೃತವಾಗಿ, ಆ ಕೆರೆಯ ನೀರಿಗೆ ತೊಂದರೆ ಬಂದೊದಗಿತ್ತು. ಯಂತ್ರಗಳನ್ನು ಬಳಸಿ ಆ ಕೆರೆಯಲ್ಲಿ ಬೆಳೆದಿದ್ದ ಕಳೆಯನ್ನು ಸಂಪೂರ್ಣವಾಗಿ ನಿರ್ಮೂಲನ ಮಾಡಲಾಯಿತು.

ಬಾತು, ಹಂಸ, ನೀರುಹಕ್ಕಿಗಳು ನೀರುಕಳೆಗಳ ನಿಯಂತ್ರಣಕ್ಕೆ ಬಳಸಲಾಗುತ್ತಿರುವ ಹಕ್ಕಿಗಳು. ಹವಾಯಿ ದ್ವೀಪದಲ್ಲಿ ವರ್ಷಕ್ಕೆ ೧.೮ ಮೀಟರ್ ಎತ್ತರ (ನೀರಿನಿಂದ ಮೇಲಕ್ಕೆ) ಬೆಳೆಯುವ ಪ್ಯಾರಾ ಗ್ರಾಸ್ ಮತ್ತು ಕ್ಯಾಟ್ ಟೈಲ್ ಸಸ್ಯಗಳನ್ನು ನಿಯಂತ್ರಿಸುವುದು ಕಷ್ಟವಾಗಿತ್ತು. ಒಂದು ಹೆಕ್ಟೇರು ವಿಸ್ತೀರ್ಣವುಳ್ಳ ಈ ಕೆರೆಯಲ್ಲಿ ೬೫ ಬಿಳಿಯ ಚೈನೀಜ್ ಬಾತುಮರಿಗಳನ್ನು ಬಿಡಲಾಯಿತು. ಸುಮಾರು ಎರಡೂವರೆ ವರ್ಷಗಳ ಅವಧಿಯಲ್ಲಿ ಈ ಬಾತುಗಳು ನೀರುಕಳೆಯನ್ನು ನಿಯಂತ್ರಿಸಿದವು.

ತೇವಾಂಶವಿರುವ, ನೀರಿರುವ ಪ್ರದೇಶದಲ್ಲಿ ಬಾತು, ಹೆಬ್ಬಾತುಗಳು ವಾಸಿಸುತ್ತವೆ. ಬಾತು ಮೊಟ್ಟೆ ಪುಷ್ಟಿಕರವೆಂದು ಪರಿಗಣಿಸಲಾಗಿದೆ. ಬಾತುಕೋಳಿಯ ಮಾಂಸಕ್ಕೂ ಬೇಡಿಕೆ ಇದೆ. ಇವುಗಳ ಪುಕ್ಕ ಜಲಾಭೇದ್ಯವಾದುದು. ಹೆಚ್ಚು ಮಳೆ ಬೀಳುವಲ್ಲಿಯೂ ಇವು ಬದುಕುತ್ತವೆ. ರೈತರು ಬಾತುಕೋಳಿ ಸಾಕುವುದನ್ನು ತಮ್ಮ ಉಪಕಸುಬಾಗಿ ಮಾಡಿಕೊಂಡಿರುವುದೂ ಉಂಟು.

ಉಷ್ಣ ವಲಯಗಳಲ್ಲಿ ಬಾತುಕೋಳಿಯ ಸಾಕಣೆ ಇದೆ. ನೀರುಕಳೆಗಳ ನಿಯಂತ್ರಣದಲ್ಲಿ ಬಾತುಗಳ ಪಾತ್ರ ಹಿರಿದಾಗಿರುವುದು ಗಮನಾರ್ಹ. ಹೆಬ್ಬಾತುಗಳನ್ನು ಅವುಗಳ ಮಾಂಸಕ್ಕೋಸ್ಕರ ಸಾಕಲಾಗು

ತ್ತದೆ. ಇವುಗಳೂ ನೀರುಕಳೆಗಳನ್ನು ವಿಶೇಷವಾಗಿ ತಿನ್ನುತ್ತವೆ.

ಚಳಿಗಾಲದಲ್ಲಿ ವಲಸೆ ಬರುವ ಸಾವಿರಾರು ನೀರುಹಕ್ಕಿಗಳನ್ನು ಬಾತುಕೋಳಿಗಳು ಆಕರ್ಷಿಸುತ್ತವೆ. ಈ ನೀರುಹಕ್ಕಿಗಳು ನೀರಿನಲ್ಲಿ ಬೆಳೆಯುವ ಕಳೆಗಳ ನಿಯಂತ್ರಣದಲ್ಲಿ ಸಹಕಾರಿಯಾಗುತ್ತವೆ. ಆದರೆ, ನೀರು ಕಳೆ ಹೆಚ್ಚಾಗಿ ಬೆಳೆಯಲು ಪ್ರಾರಂಭವಾಗುವ ಬೇಸಿಗೆಯಲ್ಲಿ ಕೆರೆ, ಕೊಳಗಳನ್ನು ಬಿಟ್ಟು ಅವು ವಾಪಸು ಹೊರಟು ಹೋಗುತ್ತವೆ.

ಚೀನಾ ದೇಶದಲ್ಲಿ ಬತ್ತದ ಗದ್ದೆಗಳಲ್ಲಿ ಕೀಟಗಳ, ಬಸವನ ಹುಳಗಳ, ಕಳೆಗಳ ಹಾವಳಿಯನ್ನು ತಪ್ಪಿಸಲು ಬಾತುಕೋಳಿಗಳನ್ನು ಗದ್ದೆಯೊಳಕ್ಕೆ ಬಿಡಲಾಗುತ್ತದೆ. ಈ ಬಾತುಗಳು ಕಳೆ, ಕ್ರಿಮಿಕೀಟಾದಿಗಳನ್ನು ತಿನ್ನುತ್ತವೆಯೇ ವಿನಾ, ಬತ್ತದ ಪೈರಿಗೆ ಹಾನಿ ಮಾಡುವುದಿಲ್ಲ. ಬತ್ತದ ಗದ್ದೆಗಳಲ್ಲಿ ಬೆಳೆಯುವ ಅರ್ಧಪಾಲು ಕಳೆಗಳನ್ನು ಇವು ನಾಶ ಮಾಡುತ್ತವೆ. ಉಳಿದರ್ಧ ಭಾಗವನ್ನು ಕೈಯಿಂದ ಕೀಳಬಹುದು. ಔಷಧಿಗಳ ಅಗತ್ಯವಿರುವುದಿಲ್ಲ. ಮುಂದೆ ಆ ಬಾತುಗಳು ಒಂದು ಕೆ.ಜಿ. ತೂಕ ಬಂದ ಮೇಲೆ ಅವುಗಳನ್ನು ಮಾರುತ್ತಾರೆ. ಇದರಿಂದಾಗಿ ಅಲ್ಲಿ ಅನೇಕ ಜನ ಬಾತುಕೋಳಿಗಳನ್ನು ಸಾಕುತ್ತಾರೆ.

ನೀರುಕಳೆಗಳ ನಿಯಂತ್ರಣದಲ್ಲಿ ಹಂಸಗಳ ಉಪಯೋಗ ಅಪರೂಪವೆಂದೇ ಹೇಳಬೇಕು. ೧೯೬೭ ರಲ್ಲಿ ಗ್ರೀಸ್ ದೇಶದ ನಿಸ್ಸಿಯಾ ಎಂಬ ಸರೋವರ ನೀರುಕಳೆಯಿಂದ ತುಂಬಿಹೋಗಿ, ಕೊನೆಗೆ ಆ ಸರೋವರದೊಳಕ್ಕೆ ನೂರು ಹಂಸಗಳನ್ನು ಬಿಡಲಾಗಿ, ಕೆಲವೇ ವಾರಗಳಲ್ಲಿ ಆ ಹಂಸಗಳು ಕಳೆಯನ್ನೆಲ್ಲ ನಿರ್ನಾಮ ಮಾಡಿದುವಂತೆ. ಹಂಸಗಳು ಬಹುಕಾಲ ಕೊಳಗಳಲ್ಲಿ ಉಳಿಯುವಂತೆ ಮಾಡಲು ಅವುಗಳ ಒಂದೊಂದು ರೆಕ್ಕೆಯನ್ನು ಹಾರಲು ಸಾಧ್ಯವಾಗದಂತೆ ಕುಂಠಿತಗೊಳಿಸಲಾಗುತ್ತದೆ. ಅವುಗಳಿಗೆ ಬೇರೇನೂ ಆಹಾರ ಕೊಡದಿದ್ದಾಗ ಕೊಳಗಳಲ್ಲಿ ಬೆಳೆಯುವ ಕಳೆಗಳನ್ನೇ

ತಿನ್ನುತ್ತವೆ. ಬೇರೆ ಆಹಾರವನ್ನು ಕೊಟ್ಟಲ್ಲಿ ಅವು ಕಳೆಗಳನ್ನು ತಿನ್ನಲು ಹಿಂಜರಿಯುತ್ತವೆ.

ಮೀನುಗಳಿಂದಲೂ....

ನೀರುಕಳೆಗಳನ್ನೇ ವಿಶೇಷವಾಗಿ ತಿಂದು ಬೆಳೆಯುವ ಗ್ರಾಸ್‌ಕಾರ್ಪ್ (ಹುಲ್ಲುಗೆಂಡೆ) ಮೀನು ನೀರು ಕಳೆಗಳ ನಿಯಂತ್ರಣದಲ್ಲಿ ಸಹಕಾರಿ. ಈ ಮೀನು ೩೨ ಕೆ. ಜಿ. ಭಾರವಾಗುವಷ್ಟು ಬೆಳೆಯುತ್ತದೆಯಂತೆ. ಅನೇಕ ರಾಷ್ಟ್ರಗಳಲ್ಲಿ ಇದೀಗ ಈ ಮೀನನ್ನು ನೀರುಕಳೆಗಳ ನಿಯಂತ್ರಣಕ್ಕೆ ಪರೀಕ್ಷಿಸಲಾಗುತ್ತಿದೆ.

ನೀರಿನೊಳಗೆ ಮುಳುಗಿರುವ ಕಳೆಗಳನ್ನು ಈ ಮೀನು ತಿನ್ನುತ್ತದೆ. ಇದಕ್ಕೆ ಹಲ್ಲುಗಳು ಗಂಟಲಿನಲ್ಲಿದ್ದು ಇದು ತಿನ್ನಬೇಕಾದರೆ ಆಹಾರ ಗಂಟಲಿನ ವರೆಗೂ ಹೋಗಬೇಕು. ಸಾಮಾನ್ಯವಾಗಿ ಇದು ಗಿಡದ ಎಲೆ, ಕಾಂಡಗಳೆಲ್ಲವನ್ನೂ ಉದ್ದುದ್ದವಾಗಿ ಬಾಯಿಗೆ ಸೇರಿಸುತ್ತದೆ. ಅಗಲ ಎಲೆಯ ಗಿಡಗಳನ್ನೂ ನೀರಿನಿಂದ ಮೇಲಕ್ಕೆ ಬೆಳೆದು ನಿಂತಿರುವ ಗಿಡಗಳನ್ನೂ ಇದು ಮುಟ್ಟದು. ಹೈಡ್ರಿಲ್ಲಾ, ವಾಟರ್ ಮಿಲ್, ಫಾಯಿಲ್ ಚಾರಾ ಮತ್ತು ನೀರಿನೊಳಗೆ ಮುಳುಗಿ ಬೆಳೆಯುವ ಇನ್ನಿತರ ಕಳೆಗಳನ್ನೂ ಗ್ರಾಸ್‌ಕಾರ್ಪ್ ತಿನ್ನುತ್ತದೆ.


ಸಣ್ಣ ಮೀನುಗಳು ತಮ್ಮ ಶರೀರದ ತೂಕಕ್ಕಿಂತ ಅನೇಕ ಪಟ್ಟು ಹೆಚ್ಚು ತೂಕದ ಕಳೆಗಳನ್ನು ತಿನ್ನುತ್ತವೆ. ದೊಡ್ಡ ಮೀನುಗಳು ತಮ್ಮ ಶರೀರದ ಭಾರದಷ್ಟೇ ಕಳೆಗಳನ್ನು ದಿನವೂ ತಿನ್ನುತ್ತವೆ.

ಗ್ರಾಸ್‌ಕಾರ್ಪ್ ಅಲ್ಲದೆ ಗ್ರೇಜರ್ಸ್ ಮೋಜರ್ಸ್ ಇನ್ನಿತರ ಸಸ್ಯಾಹಾರಿ ಮೀನುಗಳೂ ನೀರು ಕಳೆಯ ನಿವಾರಣೆಯ ಪರೀಕ್ಷೆಗೆ ಒಳಪಟ್ಟಿವೆ. ಆಫ್ರಿಕ ಮತ್ತು ಪಶ್ಚಿಮ ಏಶಿಯದಲ್ಲಿ ಸಾಮಾನ್ಯವಾಗಿ ಕಾಣಬರುವ ತಿಲಾಪಿಯಾ ಮೀನು ನೀರು ಕಳೆಯನ್ನು ವಿಶೇಷವಾಗಿ ತಿನ್ನುವುದೆಂದು ತಿಳಿಯಲಾಗಿದೆ. ಸುಮಾರು ಎರಡು ಸಾವಿರ ವರ್ಷಗಳ ಹಿಂದೆ ಯೇಸು ಕ್ರಿಸ್ತನು ಜನಸಮುದಾಯಕ್ಕೆ ಆಹಾರ ರೂಪವಾಗಿ ತಿನ್ನಿಸಿದ ಮೀನು ತಿಲಾಪಿಯಾ ಮೀನೇ ಇರಬಹುದೆಂದು ನಂಬಲಾಗಿದೆ. ನ್ಯೂಗಿನಿಯ ಕೆಲವು ಬುಡಕಟ್ಟು ಜನಾಂಗದವರು ತಿನ್ನಲು ಬಳಸುವ ಕ್ರೇ ಫಿಷ್ ಎಂಬ ಮೀನು ಕೆಲವು ಅಪಾಯಕಾರಿ ಕಳೆಗಳನ್ನೂ ತಿನ್ನುತ್ತದಂತೆ.

ಸಂಶೋಧನೆ ಅಗತ್ಯ

ಸಸ್ಯಾಹಾರಿ ಮೀನುಗಳ ಬಗ್ಗೆ, ಎಂಥೆಂಥ ಮೀನುಗಳು ಎಂಥೆಂಥ ಸಸ್ಯಗಳನ್ನು ತಿನ್ನುತ್ತವೆಂಬ ಬಗ್ಗೆ ಕೂಲಂಕಷ ಅಧ್ಯಯನ ಅಗತ್ಯ. ಪರಿಣಾಮಕಾರಿಯಾಗಿ ಕಳೆಗಳನ್ನು ನಿಯಂತ್ರಿಸಬಲ್ಲ ಮೀನುಗಳು ಇದ್ದು, ಅವುಗಳನ್ನು ನಾವು ಪತ್ತೆ ಹಚ್ಚಿದ್ದೇವೆಯೇ ಎಂದು ನೋಡಬೇಕು. ಇಂಥ ಸಂಶೋಧನೆಯಿಂದ ನೀರುಕಳೆಗಳ ನಿಯಂತ್ರಣಕ್ಕೆ ಸೂಕ್ತ ಪರಿಹಾರ ದೊರೆಯುವುದಲ್ಲದೆ, ನೈಸರ್ಗಿಕ ಸಂಪತ್ತಿನ ಸಂಪೂರ್ಣ ಸದುಪಯೋಗ ಮಾಡಿಕೊಂಡಂತಾಗುತ್ತದೆ.

ಅಂತೆಯೇ ನೀರುಹಕ್ಕಿಗಳ ಉಪಯೋಗದಿಂದ ನೀರುಕಳೆಯ ನಿವಾರಣೆಯ ದಿಶೆಯಲ್ಲಿ ಹೆಚ್ಚಿನ ಅಧ್ಯಯನ ಅಗತ್ಯ. ನೀರುಹಕ್ಕಿಗಳು ಎಂಥ ಕಳೆಗಳನ್ನು ಎಷ್ಟು ಪ್ರಮಾಣದಲ್ಲಿ ತಿನ್ನುತ್ತವೆ ಎಂಬ ಬಗ್ಗೆಯೂ ಅಧ್ಯಯನ ನಡೆಯಬೇಕಾಗಿದೆ. ಸಂಶೋಧಕರು ರೈತರ, ವಿಶ್ವವಿದ್ಯಾಲಯಗಳ, ಸಸ್ಯಶಾಸ್ತ್ರಜ್ಞರ ನೆರವಿನಿಂದ ಕೆಲಸ ಮಾಡಬೇಕಾಗುತ್ತದೆ. ಭಾರತದಂಥ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ನೀರುಕಳೆಗಳ ನಿರ್ಮೂಲನ ಕ್ಷೇತ್ರದಲ್ಲಿ ಅತಿ ಹೆಚ್ಚಿನ ಸಂಶೋಧನೆ ನಡೆಯಬೇಕಾಗಿದೆ. ✡



'ಕರಡಿ' ಎಂಬ ಗ್ರಾಮವೊಂದು ವಿಜಾಪುರ ಜಿಲ್ಲೆಯಲ್ಲಿದೆ. ಅಲ್ಲಿರುವ ನಂದಿ ದೇವಾಲಯದಲ್ಲಿ ಕರಡಿ ಮುಖದ ನಂದಿ ವಿಗ್ರಹವಿದೆ.

ನೆಪೋಲಿಯನ್ ಸತ್ತದ್ದೆಲ್ಲಿ?

ಶಿವರಾಮು ಜೋಶಿ

ನೆಪೋಲಿಯನ್ ತೀರಿಕೊಂಡ ಇನ್ನೂರು ವರ್ಷಗಳ ನಂತರವೂ ಆತನ ಮರಣವು ಒಂದು ನಿಗೂಢ ಸಮಸ್ಯೆಯೇ ಆಗಿ ಉಳಿದಿದೆ.

ಮೇಯಿಸ್ ನದೀ ತೀರದ ಬೇಲೆಕೋರ್ಟ್ ಹಳ್ಳಿಯ ಗ್ರಾಮಪತ್ರಗಳ ಒಂದು ಮಾಸಲು ಪುಟದಲ್ಲಿ ನೆಪೋಲಿಯನ್ ಬೋನಾಪಾರ್ಟನ ವಿಸ್ಮಯಕಾರಿ ಮೃತ್ಯುವಿನ ರಹಸ್ಯದ ಕುರಿತಾಗಿ ಸುಳಿವು ಸಿಗಬಹುದು. ಈ ಪುಟದಲ್ಲಿ ಫ್ರಾಂಕೋಯಿ ಯುಗೋ ರೋಜೆಡ್‌ನ ಜನನದ ಬಗ್ಗೆ ಹೀಗೆ ದಾಖಲು ಸಿಗುತ್ತದೆ. "ಈ ಗ್ರಾಮದಲ್ಲಿ ಜನನ ೧೭೭೧ ರಲ್ಲಿ... ಮರಣ ಸೇಂಟ್ ಹೆಲೆನಾದಲ್ಲಿ." ಅವನು ಸತ್ತ ದಿನಾಂಕ ಮಾತ್ರ ಗುರುತು ಸಿಗದಂತಿದೆ. ಸುಡುಬಿಸಿಲಿನಿಂದ ಬೇಯುವ ಆ ದ್ವೀಪದಲ್ಲಿ ಅವನು ಯಾವ ಕಾರಣದಿಂದ ಯಾವಾಗ ಸತ್ತನೆಂಬುದು ತಿಳಿಯದಂತಿದೆ. ಒಂದು ದಾಖಲೆಯಂತೆ ರೋಜೆಡ್ ೧೮೨೧ ಮೇ ೫ ರಂದು ಸತ್ತಿರಬಹುಬಹುದಾದ ಪ್ರಮೇಯವಿಲ್ಲದಿಲ್ಲ. ಆದರೆ ಫ್ರಾಂಕೋಯಿ ಯುಗೋ ಯಾರು ? ನೆಪೋಲಿಯನ್ನನ ಮರಣಕ್ಕೂ ಇವನ ಸಾವಿಗೂ ಏನು ಸಂಬಂಧ ?

ಇಲ್ಲಿಯೇ ಇರುವುದು ಸ್ವಾರಸ್ಯ.

ತನ್ನ ವಿರೋಧಿಗಳಿಂದ ಯಾವ ಕಾಲಕ್ಕಾದರೂ ಜೀವಕ್ಕೆ ಸಂಚಕಾರ ಬಂದೀತು, ಇಂತಹುದರಲ್ಲಿ ತನ್ನಂತೆಯೇ ಕಾಣುವ ನಾಲ್ಕಾರು ಜನರು ಸುತ್ತಮುತ್ತಲೂ ಇರುವ ಹಾಗೆ ನೋಡಿಕೊಂಡರೆ ಜೀವಕ್ಕೆ ಅಪಾಯ ಒದಗಬಹುದಾದ ಸಂಭವ ಸ್ವಲ್ಪಾದರೂ ಕಡಿಮೆಯಾಗುತ್ತದೆಂದು ಮುಂದಾಲೋಚಿಸಿದ್ದ ನೆಪೋಲಿಯನ್ ತನ್ನಂತೆಯೇ ಕಾಣುವ ನಾಲ್ವರನ್ನು ಕೂಡಿ ಹಾಕಿದ್ದ. ಫ್ರಾಂಕೋಯಿ ರೋಜೆಡ್ ಇವರಲ್ಲೊಬ್ಬ. ಒಬ್ಬ ವಾಟರ್ಲೂ ಯುದ್ಧಕ್ಕೆ ಸ್ವಲ್ಪ ಮುಂಚೆ ವಿಷಪ್ರಾಶನದಿಂದ ಮರಣಿಸಿದ. ಒಬ್ಬ ಕುದುರೆ ಸವಾರಿಯಲ್ಲಿ ಕಾಲು ಮುರಿದುಕೊಂಡು ಬಿದ್ದ. ಇನ್ನೊಬ್ಬ ಬಂದೂಕಿನ ಗುಂಡಿಗೆ ಸಿಕ್ಕು ಸತ್ತ. ನೆಪೋಲಿಯನ್ನನ ದೈವ ಮುಗಿದಾಗ ಫ್ರಾಂಕೋಯಿ ರೋಜೆಡ್ ಮಾತ್ರ ಉಳಿದುಕೊಂಡಿದ್ದ. ಅವನು ಬೇಲೆಕೋರ್ಟ್ ಗ್ರಾಮದ ಒಂದು ಕುಟೀರದಲ್ಲಿ ತನ್ನ ಅವಿವಾಹಿತ ಸಹೋದರಿಯೊಂದಿಗೆ ಜೀವಿಸಲು ತೆರಳಿದ.

ನೆಪೋಲಿಯನ್ನನು ಬ್ರಿಟಿಶರಿಗೆ ಶರಣಾಗತನಾದಾಗ ಸೇಂಟ್ ಹೆಲೆನಾ ದ್ವೀಪಕ್ಕೆ ಕೊಂಡೊಯ್ಯಲಾಯಿತು. ಹಿಂದೆ ಎಲ್ಬಾದಿಂದ ತಪ್ಪಿಸಿಕೊಂಡಂತೆ ಮತ್ತೆ ಅವನು ತಪ್ಪಿಸಿಕೊಂಡು ಹೋಗಬಾರದೆಂದು ಈ ಸಲ ಬ್ರಿಟಿಶರೂ ಫ್ರೆಂಚರೂ ಸೇರಿಯೇ ಎಚ್ಚರಿಕೆ ವಹಿಸಿದ್ದರು. ಫ್ರೆಂಚರು ದ್ವೀಪದ ಒಳಗೂ ಬ್ರಿಟಿಶರು ದ್ವೀಪದ ಸುತ್ತಲೂ ಕಾವಲು ಹಾಕಿದರು.

ನೆಪೋಲಿಯನ್ನನಿಗೆ ಮಿತ್ರರಿದ್ದರು, ಹಣವಿತ್ತು ಮತ್ತು ಇದಕ್ಕೆ ಮಿಗಿಲಾಗಿ ಸಹನೆ ಎಂಬುದಿತ್ತು. ಮುಂದೊಂದು ದಿನ ಇವೆಲ್ಲವೂ ಸಕಾಲದಲ್ಲಿ ಸಹಾಯಕ್ಕೆ ಬಂದವು.

೧೮೧೮ರಲ್ಲಿ ಫ್ರೆಂಚ್ ಜನರಲ್ ಗೋರಗಾರ್ಡ್ ಸೇಂಟ್ ಹೆಲೆನಾ ಮೇಲಿನ ಕಾವಲು ಅಧಿಕಾರಿಯ ಕೆಲಸಕ್ಕೆ ರಾಜೀನಾಮೆ ಕೊಟ್ಟ. ಅವನ ಜಾಗೆಗೆ

ಜನರಲ್ ಬರ್ಟ್ರಾಂಡ್ ಬಂದ. ಗೋರಗಾರ್ಡ್ ನಿವೃತ್ತನಾಗಿ ಪ್ಯಾರಿಸ್ಸಿಗೆ ತೆರಳಿದ. ಇವನು ಪ್ಯಾರಿಸ್ಸಿಗೆ ಬಂದು ಎರಡು ತಿಂಗಳಿಗೆ ಬೇಲೆಕೋರ್ಟ್ ಗ್ರಾಮಕ್ಕೆ ಒಂದು ಸುಂದರ ಕುದುರೆಗಾಡಿ ಬಂದು ನಿಂತಿತು. ಕುದುರೆ ಗಾಡಿಯವ ಬೇಲೆಕೋರ್ಟ್‌ನಲ್ಲಿ ಫ್ರಾಂಕೊಯಿ ರೋಬೆಡನ ಮನೆ ಯಾವುದೆಂದು ಕೇಳತೊಡಗಿದ. ಆತ ಈ ಕುದುರೆ ಗಾಡಿಯಲ್ಲಿ ಯಾರು ಇದ್ದರು ಮತ್ತು ಅವರು ನೆಪೋಲಿಯನ್ನನನ್ನು ಹೋಲುವ ವ್ಯಕ್ತಿಯನ್ನು ಏಕೆ ಹುಡುಕುತ್ತಿದ್ದರು ಎಂಬುದನ್ನು ಯಾರಿಗೂ ಹೇಳಲಿಲ್ಲ. ಬಹಳ ಪೀಡಿಸಿದಾಗ ಜನರ ಕುತೂಹಲವನ್ನು ತಣಿಸಲು ಆತನೊಬ್ಬ ವೈದ್ಯ, ತನ್ನ ಸ್ನೇಹಿತನಿಗಾಗಿ ಕೆಲವು ಮೊಟಗಳನ್ನು ಖರೀದಿಸಲು ಬಂದಿದ್ದನಷ್ಟೇ ಎಂದು ಮಾತ್ರ ಹೇಳಿದ್ದ.

ಅದೇ ವರ್ಷದ ಗ್ರೀಷ್ಮ ಕಾಲದ ಒಂದು ರಾತ್ರಿ ರೋಬೆಡ್ ಮತ್ತು ಅವನ ಸೋದರಿ ಅಲ್ಲಿಂದ ಮಾಯವಾದರು. ಪುನಃ ಅವರನ್ನು ಬೇಲೆ-ಕೋರ್ಟಿನಲ್ಲಿ ಯಾರೂ ಕಾಣಲಿಲ್ಲ. ಆ ಮೇಲೆ ಅವನ ಸೋದರಿಯು ಟೂರ್ಸ್‌ನಲ್ಲಿ ಸುಖವಾಗಿ ಜೀವಿಸುತ್ತಿದ್ದುದು ಗೊತ್ತಾಯಿತು. ತನ್ನ ಜೀವನ ವೆಚ್ಚವನ್ನು ವೈದ್ಯನೊಬ್ಬ ಅಂಚೆ ಮೂಲಕ ಕಳಿಸುತ್ತಾನೆಂದು ಆಕೆ ಹೇಳಿದಳು. ಅವನೊಂದಿಗಿದ್ದ ಸಂಬಂಧ ತಂದೆ ಮಗಳ ಸಂಬಂಧ ಎಂದು ಆಕೆ ಹೇಳುತ್ತಿದ್ದರೂ ಆ 'ತಂದೆ' ಮಗಳನ್ನು ಕಾಣಲು ಬಂದಿದ್ದನ್ನು ಜನ ಒಮ್ಮೆಯಾದರೂ ನೋಡಲಿಲ್ಲ. ಬದಲು ಒಬ್ಬ ದೂತ ಪ್ರತಿ ತಿಂಗಳು ತಪ್ಪದೇ ಬಂದು ಅವಳಿಗೆ ಹಣ ಕೊಟ್ಟು ಹೋಗುತ್ತಿದ್ದ. ಅವಳ ಸೋದರ ರೋಬೆಡ್ ಏನಾದ ? ಎಂದು ಜನರು ಕೇಳಿದಾಗ ಫ್ರಾಂಕೋ ಸಮುದ್ರದ ಕಡೆ ಹೋಗಿಬಿಟ್ಟಿದ್ದಾನೆ. ಆದರೆ ಅವನು ಎಲ್ಲಿಗೆ ಹೋಗುತ್ತೇನೆಂದಾಗಲೀ ಯಾವಾಗ ಅಥವಾ ಹೇಗೆ ಹೋದನೆಂಬುದಾಗಲೀ ಹೇಳಲಿಲ್ಲ. 'ಅವನು ತುಟಿ

ಬಿಚ್ಚುವವನಲ್ಲ ನೋಡಿ' ಎಂದು ಮಾತ್ರ ಆಕೆ ಹೇಳುತ್ತಿದ್ದಳು.

ಸೇಂಟ್ ಹೆಲೆನಾದಿಂದ ತಪ್ಪಿಸಿಕೊಳ್ಳಲು ನೆಪೋಲಿಯನ್ನನಿಗೆ ಒಬ್ಬ ತನ್ನ ಹಾಗೆ ಕಾಣುವವ, ಒಂದು ಹಡಗು, ಕೆಲವು ಸ್ನೇಹಿತರು ಮತ್ತು ಸ್ವಲ್ಪ ಹಣ ಹೀಗೆ ನಾಲ್ಕು ಸಂಗತಿಗಳು ಅಗತ್ಯವಿತ್ತು. ಈಗ ಅವನ ಬಳಿ ಎಲ್ಲಾ ಇದ್ದವು.

೧೮೧೮ ರ ಹೇಮಂತ ಋತುವಿನಲ್ಲೊಂದು ದಿನ ರೋಬೆಡ್ ಕಾಣೆಯಾದ. ಇದಾದ ಒಂದು ತಿಂಗಳ ನಂತರ ಜನರಲ್ ಬರ್ಟ್ರಾಂಡನ ಹೆಂಡತಿ ತನ್ನ ಸ್ನೇಹಿತರಿಗೆ ಒಂದು ಪತ್ರ ಬರೆದು ಅದರಲ್ಲಿ "ಗೆಲವು ನಮ್ಮದು, ನೆಪೋಲಿಯನ್ ದ್ವೀಪದಿಂದ ನಿರ್ಗಮಿಸಿದ್ದಾನೆ" ಎಂದು ತಿಳಿಸಿದಳು.

ಆ ವರ್ಷದ ಕೊನೆಯ ದಿನಗಳಲ್ಲಿ ರೇವಾರ್ಡ್ ಎಂಬ ಒಬ್ಬ ಒಳ್ಳೆಯ ಉಡುಪು ಧರಿಸಿದ ಅಪರಿಚಿತ ವ್ಯಕ್ತಿ ಇಟಲಿಯ ವೆರೋನಾ ಎಂಬ ನಗರಕ್ಕೆ ಆಗಮಿಸಿದ. ತಾನು ಫ್ರಾನ್ಸಿನ ಉತ್ತರ ದಿಕ್ಕಿನಿಂದ ಬಂದ ವ್ಯಾಪಾರಿ, ವಿಧುರ, ಚಿಕ್ಕದೊಂದು ವ್ಯಾಪಾರ ಆರಂಭಿಸಲು ಬಂದಿದ್ದಾಗಿ ಹೇಳಿಕೊಂಡ. ಆತ ಪಾಲುಗಾರನೊಂದಿಗೆ ವಜ್ರಗಳ ವ್ಯಾಪಾರ ನಡೆಸತೊಡಗಿದ. ಮಿಸ್ಟರ್ ಪೆಟ್ರುಸಿ ಎನ್ನುವುದು ಅತನ ಹೆಸರು. ನೆಪೋಲಿಯನ್ನನನ್ನು ಹೋಲುತ್ತಿದ್ದ ರೇವಾರ್ಡನನ್ನು ಈತ ಚೇಷ್ಟೆಯಿಂದ 'ಮಹಾಪ್ರಭು' ಎಂದು ಕರೆಯುತ್ತಿದ್ದ.


೧೮೨೩ ರ ಆಗಸ್ಟ್ ೨೩ ರಂದು ರೇವಾರ್ಡನ ಬಳಿಗೆ ಒಬ್ಬ ದೂತ ಬಂದು ಮೊಹರ್‌ಬಂದ್ ಲಕೋಟೆಯ ಸಂದೇಶವನ್ನು ಕೊಟ್ಟ. ಅದನ್ನೋದಿದ ರೇವಾರ್ಡ್ ಬಹಳ ಚಿಂತೆಗೀಡಾದ. ಪೆಟ್ರುಸಿಗೆ ತಾನು ಒಂದು ಅತಿ ಮುಖ್ಯ ಕೆಲಸಕ್ಕಾಗಿ ಹೋಗಬೇಕಾಗಿದೆಯೆಂದು ಹೇಳಿ, ಮೂರು ತಿಂಗಳೊಳಗಾಗಿ ತಾನು ಹಿಂತಿರುಗುವುದಾಗದಿದ್ದರೆ ಲಕ್ಕೋಟೆಯನ್ನು ಫ್ರಾನ್ಸಿನ ರಾಜನಿಗೆ ಒಪ್ಪಿಸಬೇಕೆಂದು ಹೇಳಿ ಅದನ್ನು ಪೆಟ್ರುಸಿಯ ಕೈಗಿತ್ತ.

ಇದಾಗಿ ಹನ್ನೆರಡು ದಿನಗಳ ನಂತರ ೧೮೨೩ರ ಸೆಪ್ಟೆಂಬರ್ ೪ ರಂದು ಹನ್ನೊಂದು ಗಂಟೆಯ ಸುಮಾರಿಗೆ ನೆಪೋಲಿಯನ್ನನ ಮಗ ಅಸ್ವಸ್ಥನಾದ ಶೋನ್‌ಬ್ರುನ್ ಕೋಟೆಯಲ್ಲಿ ಜ್ವರದಿಂದ ನರಳುತ್ತಿದ್ದ. ದೀಪಗಳು ಬೆಳಗುತ್ತಿದ್ದವು. ತೋಟದ ಬಳ್ಳಿಗಳಲ್ಲಿ ಸರಸರ ಶಬ್ದವನ್ನು ಕಾವಲುಗಾರ ಕೇಳಿದ. ಯಾವುದೋ ಛಾಯೆ ನೆಲಕ್ಕೆ ಜಿಗಿದು ಕೋಟೆಯ ಕಡೆಗೆ ಓಡುತ್ತಿರುವುದನ್ನು ನೋಡಿದ ಕಾವಲುಗಾರ ಗುಂಡು ಹಾರಿಸಿದ. ಆಗಂತುಕ ಸತ್ತು ಬಿದ್ದ. ಅವನ ಕೆಳ ಹೊಟ್ಟೆಯಲ್ಲಿ ಗುಂಡು ಹೊಕ್ಕಿತ್ತು. ಪಹರೆಯವರ ಕ್ಯಾಪ್ಟನ್ ಕೆಳಗೆ ಬಿದ್ದ ದೇಹದ ಕಡೆ ನೋಡಿ ಕರ್ನಲ್‌ನನ್ನು ಕರೆದ. ಕೂಡಲೇ ಫ್ರೆಂಚ್ ರಾಯಭಾರಿ ಕಚೇರಿಯವರು ಮೇಲ್ವಿಚಾರಣೆ ನಡೆಸಿದರು. ಅಪರಿಚಿತನ ಆ ದೇಹ ನೆಪೋಲಿಯನ್ನನ ಹೆಂಡತಿ ಕೇಳುವವರೆಗೆ ಫ್ರೆಂಚ್ ರಾಯಭಾರಿ ಅಧಿಕಾರಿಗಳ ವಶದಲ್ಲಿ ಉಳಿಯಿತು. ನೆಪೋಲಿಯನ್‌ನ ಹೆಂಡತಿಯ ಕೋರಿಕೆಯಂತೆ ಅವಳ ಕುಟುಂಬದ ಜಾಗೆಯಲ್ಲಿ ಅದನ್ನು ಹುಗಿಯಲಾಯಿತು.

ಇತ್ತ ರೇವಾರ್ಡ್ ವೆರೋನಾಕ್ಕೆ ಮರಳಲೇ ಇಲ್ಲ. ಪೆಟ್ರುಸಿ ಆ ಮೊಹರ್ ಬಂದ್ ಪತ್ರವನ್ನು ಫ್ರಾನ್ಸ್ ದೇಶದ ರಾಜನಿಗೆ ಒಪ್ಪಿಸಿ ಅಪಾರ ಹಣ ಪಡೆದ.

ಸೇಂಟ್ ಹೆಲೆನಾದಲ್ಲಿ ನೆಪೋಲಿಯನ್, ಎಂಬ ಕೈದಿಗೆ ಮರಣ ಬಂತು. ಆದರೆ ಅವನ ಬರವಣಿಗೆ ನೆಪೋಲಿಯನ್ನನಂತೆ ಎಂದೂ ಇರಲಿಲ್ಲ. ಮಾತನಾಡುವ ಧಾಟಿಯೂ ಬೇರೆಯೇ ಇತ್ತು. ೧೮೨೧ರಲ್ಲಿ ಸೇಂಟ್ ಹೆಲೆನಾದಲ್ಲಿ ಆತ ಹೊಟ್ಟೆಯ ಕ್ಯಾನ್ಸರಿನಿಂದ ಮರಣಿಸಿದ.

೧೯೫೭ರಲ್ಲಿ ಬ್ರಿಟಿಶ್ ಸರಕಾರವು ತನ್ನ ಬಳಿ ನೆಪೋಲಿಯನ್ನನ ಕರುಳಿನ ಒಂದು ಭಾಗ ಇರುವುದಾಗಿ ಹೇಳಿತು. ಅದನ್ನು ತಜ್ಞರು ಪರಿಶೀಲಿಸಿದಾಗ ಅದರ ಒಂದು ಭಾಗ ಗುಂಡಿನೇಟಿನಿಂದ ತುಂಡಾಗಿದ್ದು ಬೆಳಕಿಗೆ ಬಂತು. ✿



ಭೂತಕ್ಕೆ ಬಲಿ

'ಕಾಕೆಮಾನಿ'

ಮಾರ, ತನ್ನ ಕೈ ಹಿಡಿದ ಮಡದಿಯೊಡನೆ ಸಂಸಾರ ಹೂಡಿ ಇನ್ನೂ ಒಂದು ವರ್ಷವಾಗಿರಲಿಲ್ಲ. ಅದೇನು ದುರದೃಷ್ಟವೋ ಆತನ 'ಪಿರೆ' (ಗುಡಿಸಲು)ಯ ಸುತ್ತು ಮಧ್ಯರಾತ್ರಿಯಲ್ಲಿ ಯಾರೋ ಓಡಾಡುವ ಶಬ್ದ, ಬಾಗಿಲಿಗೆ ಪಟಪಟನೆ ಹೊಡೆಯುವ ಕಿರುಕುಳ, ಪಿರೆಯ ಒಳಗೆ ಮಡಕೆ- ಕುಡಿಕೆಗಳಿಗೆ ಜೀವ ಬಂದಂತೆ ದಡಬಡನೆ ಉರುಳಿ ಬಿದ್ದು, ನುಚ್ಚು ನೂರಾಗುವ ವೈಪರೀತ್ಯದಿಂದ ಮಾರನಿಗೆ ದಿಕ್ಕೇ ತೋಚದಂತಾಗಿತ್ತು. ನನ್ನನ್ನು ಈ ಸ್ಥಳದಿಂದ ಒಕ್ಕಲೆಬ್ಬಿಸಲು ಯಾರಾದರೂ ಹೂಡಿದ ತಂತ್ರವಿರಬೇಕೆಂದು ಊಹಿಸಿ, ತನ್ನ ಯಜಮಾನನಿಗೆ ಹೇಳಿ, ಅವರ ಕೋವಿಯನ್ನು ತಂದು ಪಿರೆಯ ಹೊರಗೆ ಕಾದು ಕೂತ ದಿನಗಳೆಷ್ಟೊ! ಆದರೂ, ಕಣ್ಣಿಗೆ ಕಾಣದ ಯಾವುದೋ ಒಂದು ಶಕ್ತಿ ಆತನ ಪಿರೆಯಲ್ಲಿ ಕಿರುಕುಳವೆಬ್ಬಿಸಿತ್ತು.

ತನ್ನ ಒಂಟಿ ಜೀವನ ಸಾಗಿಸಲು ಕಷ್ಟವೆಂದು ಕಂಡ ಮಾರ ಹೊಸದಾಗಿ ಪಿರೆ ಕಟ್ಟಿ, ಹತ್ತಿರದ ಪಣಿಯರ ಗುಂಪಿನ ತನ್ನ ಜಾತಿ ಪದ್ಧತಿಗನುಸಾರವಾಗಿ ಹುಡುಗಿಯನ್ನು ಅಪಹರಿಸಿ ತಂದಿದ್ದ. ಹಾರಿಸಿ ತಂದ ಯುವತಿಯನ್ನು ಹತ್ತು ದಿನಗಳವರೆಗೆ ಕಾಡಿನಲ್ಲಿ ಗುಪ್ತವಾಗಿರಿಸಿ, ಕಡೆಗೆ ಆ ಗುಂಪಿನ ಹಿರಿಯರಲ್ಲಿ 'ಪಾಟಾಳಿ' (ತಂತ್ರ ಮಂತ್ರ ಪ್ರವೀಣ) ಯಲ್ಲಿ ಕ್ಷಮೆ ಕೋರಿ, ಕಪ್ಪು ಹಣ (ದಂಡ) ತೆತ್ತು, ಸಂಪ್ರದಾಯಕ್ಕನುಗುಣವಾಗಿ, ತನ್ನ ಪಿರೆಗೆ ಆಕೆಯನ್ನು ವರಿಸಿ ತಂದಿದ್ದ. ಪಣಿಯರ ಜಾತಿಯಲ್ಲಿ ಮದುವೆಗೆ ಯೋಗ್ಯವಾದ ತರುಣಿಯನ್ನು ಅವಳ ಹಂಗಡದಿಂದ ಕದ್ದು ಕಂಡು, ಕಾಡಿನಲ್ಲಿ ಗೋಪ್ಯವಾಗಿರಿಸಿ, ಕಪ್ಪು ಹಣ ಹಿರಿಯರಿಗೆ ತೆತ್ತು, ಆಚಾರಕ್ಕೆ ಅನುಗುಣವಾಗಿ ಕೈಹಿಡಿದಿದ್ದರೂ ಈ ಕಿರುಕುಳವೇಕೆಂದು ಮಾರ ಚಿಂತೆಗೀಡಾಗಿದ್ದ. ಈ ವಿಚಾರವನ್ನು ತನ್ನ ಯಜಮಾನನಿಗೂ ಜಾತಿಯ ಹಿರಿಯರಿಗೂ ಹೇಳಿ, ತಂತ್ರ ಮಂತ್ರಗಳನ್ನೂ ಮಾಡಿಸಿದ್ದ.

ಇದೊಂದೇ ವಿಚಾರ ಮಾರನನ್ನೂ ಕಾಡಿಸುತ್ತಿದ್ದರೆ, ಆತ ನಿಶ್ಚಿಂತನಾಗಿರಬಲ್ಲವನಾಗಿದ್ದ. ಆದರೆ ಆತನ ಮಡದಿ ಬೊಳ್ಚಿಗೆ ಮಧ್ಯರಾತ್ರಿಯ ಕಾಲದಲ್ಲಿ ಎಂತಹದೋ ಮೈಮೇಲೆ ಬಂದು ತಲೆಗೆದರಿ, ಇಲ್ಲದ ಸಲ್ಲದ ಮಾತುಗಳನ್ನಾಡಿ, ಈ ಕುಟುಂಬವನ್ನೇ ನಾಶ ಮಾಡುವುದಾಗಿ ಹೇಳಿಕೊಳ್ಳುತ್ತಿತ್ತು. ತನ್ನ ಪಣಿಚಿಯು ತುಂಬು ಗರ್ಭಿಣಿಯಿದ್ದು ಈ ಸಂದರ್ಭದಲ್ಲಿ ಇಂತಹ ವಿಪರೀತವಾದದ್ದು. ಮಾರನಿಗೆ ದಿಕ್ಕೇ ತೋಚದಂತಾಗಿತ್ತು. ತನ್ನ ಜಾತಿಯ ಮಂತ್ರಗಾರನನ್ನು ತಂದು ಯಜಮಾನನಿಂದ ಸಾಲ ಪಡೆದು, ಯಾವುದಾದರೊಂದು ವ್ಯವಸ್ಥೆ ಮಾಡದಿದ್ದರೆ ಪ್ರಸಂಗ ಕೈಮೀರುವಂತಿತ್ತು.

ಅಂದು ರಾತ್ರೆ ಮಾರನ ಪಿರೆಯಲ್ಲಿ ಕಟ್ಟ ಚಾತಿಂಜ್ಯೆ (ದೆವ್ವ ಬಿಡಿಸುವಿಕೆ) ನಡೆಸಲು ಸಿದ್ಧತೆಗಳಾದವು. ಸುತ್ತುಮುತ್ತಲಿನ ಆತನ ಬಂಧು ಬಳಗದವರು ಪಿರೆಯಲ್ಲಿ ನೆರೆದಿದ್ದರು. ಅಂಗಳದಲ್ಲಿ

ಪಾತಾಳಿ'ಯು ಏನೇನೋ ಭೂತಗಳ ಚಿತ್ರಗಳನ್ನು ಬರೆದು, ಒಂದು ದೊಡ್ಡ ಪರಿವಾಣದಲ್ಲಿ ನೀರು ತುಂಬಿಸಿ, ಕ್ರಿಯೆ ನಡೆಸುತ್ತಿದ್ದ. ಪಿರೆಯ ಮುಂದುಗಡೆಯಿರುವ ಹಲಸಿನ ಮರದಡಿಯಲ್ಲಿ ಚೀನಿ ದುಡಿಮೊಳಗಿದ್ದವು. ಕೆಲವರು ಅದನ್ನನು ಸರಿಸಿ ಕುಣಿಯುತ್ತಿದ್ದರು.

ಎಲ್ಲ ವ್ಯವಸ್ಥೆಗಳಾದ ಮೇಲೆ, ಮಾರನ ಹೆಂಡತಿಯನ್ನು ಹೊರಗೆ ತಂದರು. ಅದಾಗಲೇ ಆಕೆಗೆ ಪ್ರಜ್ಞೆಯಿರಲಿಲ್ಲ. ತುಂಬು ಗರ್ಭಿಣಿ. ಬಡಕಲಾಗಿದ್ದಳು. ಆಕೆಯ ಕೈಗಳನ್ನು ಹಿಡಿದು ಕರೆತಂದು ಪಾತಾಳಿಯು ತೋರಿಸಿದ ನೀರು ತುಂಬಿದ ಪರಿವಾಣದ ಮೇಲೆ ಕುಳ್ಳಿರಿಸಿದರು. ಒಂದು ದೊಡ್ಡ ಮಡಿಕೆಯ ಮೇಲೆ ವಿಕಾರ ರೂಪದ ಚಿತ್ರಗಳನ್ನು ಬರೆದಿದ್ದು, ಅದನ್ನು ಪಾತಾಳಿಯು ಮಂತ್ರಿಸಿ, ಆಕೆಯಿಂದ ಎರಡಡಿ ದೂರದಲ್ಲಿ ಮಡಗಿ,ನಾಲ್ಕು ಚೌಕಟ್ಟಿನ ಬಾಳೆಯ ದಿಂಡಿಗೆ (ತೆಂಗಿನ ಕಡ್ಡಿ ಎಣ್ಣೆ, ಬಟ್ಟೆ, ಸುತ್ತಿ ಬೆಳಕು ಮಾಡುವುದು) ಚುಚ್ಚಿ ಆಕೆಯ ಮುಖಕ್ಕೆ ಕುರ್ದಿ (ಅರಶಿನ ಸುಣ್ಣನೀರು)ಯನ್ನು ಚಿಮಿಕಿಸಿ ಒಂದು ಕೋಳಿಯನ್ನು ಅದಕ್ಕೆ ಬಲಿ ಕೊಟ್ಟಾಗ ಆತನಿಗೆ ಆವೇಶ ಬಂದಿತ್ತು.

ಮಂತ್ರವಾದಿಯು ಇಂತಹ ಸಂದರ್ಭದಲ್ಲಿ ಭೂತದ ಪ್ರಭಾವವನ್ನರಿಯುತ್ತಾನೆ. ತನ್ನ ಕೈ ಬೀಳುವ ಭೂತವ್ರೋ ಎಂದು ಪರೀಕ್ಷಿಸಲು ಮತ್ತು ಸುತ್ತುಮುತ್ತು ಈ ನಡವಳಿಕೆಯನ್ನು ಉರಿಗಣ್ಣಿನಿಂದ ನೋಡುವ ಭೂತ, ಪ್ರೇತ, ಪಿಶಾಚಿಗಳ ತೃಪ್ತಿಗಾಗಿ ಬಲಿ ಕೊಟ್ಟ ಕೋಳಿಯ ಮುಂಡವನ್ನು ಎತ್ತಿ ಎಸೆಯುತ್ತಾನೆ. ರುಂಡವಿಲ್ಲದ ಕೋಳಿ ತೆಗೆದೊಗೆದಾಗ, ನೆಲಕ್ಕೆ ಬಿದ್ದು ಮೇಲಕ್ಕೆ ಹಾರಲು ಪ್ರಯತ್ನಿಸಿದಾಗ, ಅದು ಹಾರಿದ ಅಳತೆಯನ್ನು ನೋಡಿ ಭೂತ ಎಷ್ಟು ಪ್ರಬಲವಾಗಿದೆಯೆಂಬುದನ್ನು ನಿರ್ಧರಿಸುತ್ತಾನೆ.

ಬಲಿ ಕೊಟ್ಟು ಮೇಲೆಸೆದ ಕೋಳಿಯು ಆಳೆತ್ತರ ಹಾರಿದ್ದನ್ನು ಕೂಡ ಪಾತಾಳಿಯ ಜಂಘಾಬಲವೇ ಉಡುಗಿತು. ಭೂತದ ಶಕ್ತಿ, ಗಾತ್ರದ, ಅರಿವಾದ ಪಾತಾಳಿಯು, ಮತ್ತೊಂದು ಕೋಳಿಯನ್ನು ಬಲಿ ಕೊಡಲು ಆದೇಶವಿತ್ತ. ಇಷ್ಟರಲ್ಲಿ ಸುಮ್ಮನೆ ಕೂತಿದ್ದ ದೆವ್ವ ಹಿಡಿದ ಬೊಳ್ಳಿ, ಜಗ್ಗನೆ ಮೈ ಕೊಡವಿ, ಮಂತ್ರಿಸಿ ಮಡಗಿದ್ದ ಮಡಿಕೆಯನ್ನೊದ್ದು, ಅಲ್ಲೇ ಬಿದ್ದಿದ್ದ ಕತ್ತಿಯನ್ನು ಕೈಗೆತ್ತಿಕೊಂಡು ಪಾತಾಳಿಯತ್ತ ಬೀಸಿದಳು. ಇದರಿಂದ ದಂಗಾದ ಪಾತಾಳಿಯು ತಲೆ ತಪ್ಪಿಸಿಕೊಂಡು, ತನ್ನ ಕೈಯಲ್ಲಿದ್ದ ಮಂತ್ರಿಸಿದ ಅಕ್ಕಿಯನ್ನು ಆಕೆಯ ಮೇಲೆಸೆದನು. ಬೊಳ್ಳಿಯ ಮೇಲೆ ಬಂದ ಭೂತ, ಚೀನೀ ದುಡಿ ವಾದ್ಯಕ್ಕನುಗುಣವಾಗಿ ಕುಣಿಯಹತ್ತಿತು. ಕುಣಿದು ಕುಪ್ಪಳಿಸಿ, "ನನಗೆ ರಕ್ತ ಬೇಕು," ಎಂದು ಆರ್ಭಟಿಸಿತು. ಪಾತಾಳಿಯ ಆದೇಶದಂತೆ ಒಂದು ಕೋಳಿಯನ್ನು ಆಕೆಯ ಕೈಗಿತ್ತಾಗ, 'ಭೂತ' ಅದರ ಕುತ್ತಿಗೆಯನ್ನು ಬಾಯಿಂದ ಕರಕರನೆ ಕಡಿದು,ಹೀರಿ, ಕಟಕಟನೆ ಹಲ್ಲು ಕಡಿದು, "ಇನ್ನೂ ಬೇಕು," ಎಂದಿತು.

ಇದನ್ನೆಲ್ಲ ನೋಡುತ್ತಿದ್ದ ಮಾರನಿಗೆ ಮಂಕು ಕವಿದಿತ್ತು. ಶರೀರದ ಶಕ್ತಿಯುಡುಗಿತ್ತು. ತನ್ನ ಜೀವನದ ರುದ್ರನಾಟಕವೇ ಅಂಗಳದಲ್ಲಿ ನಡೆಯುತ್ತಿದ್ದರೂ, ಯಾರೂ ಆ ತುಂಬು ಗರ್ಭಿಣಿಯನ್ನು ತಡೆಯಲು ಪ್ರಯತ್ನಿಸಲಿಲ್ಲ. ಮಾರನಿಗೆ ತಡೆಯಲಾಗಲಿಲ್ಲ. ಅಂಗಳಕ್ಕಿಳಿದು, ಆಕೆಯ ಹಿಂಬದಿಯಿಂದ ಬಂದು, ಆಕೆಯು ಎತ್ತಿಕೊಂಡಿದ್ದ ಕತ್ತಿಯನ್ನು ಕಸಿದುಕೊಂಡ. ಆ ಭೂತವು ಪ್ರತಿಭಟಿಸಲಿಲ್ಲವಾದರೂ ಕುಪ್ಪಳಿಸಿ, ಕೇಕೆ ಹಾಕುತ್ತಿದ್ದವಳನ್ನು ಹೇಗಾದರೂ ಶಾಂತಗೊಳಿಸಬೇಕಾದರೆ ಇದ್ದ ದಾರಿಯೊಂದೆ: ಒಬ್ಬಿಬ್ಬರು ಯುವಕರ ಸಹಾಯದಿಂದ, ಬೊಳ್ಳಿಯನ್ನು ಪಿರೆಯೊಳಕ್ಕೊಯ್ದು ನಡುಗಂಬಕ್ಕೆ ತಾಗಿಸಿ, ಕಟ್ಟಿ ಆಕೆಯ ಮುಖಕ್ಕೆ ಕುರ್ದಿನೀರನ್ನು ಚಿಮುಕಿಸಿದರು. ಆಕೆಯ ಆವೇಶ ಹಲ್ಲುಕಡಿಯುತ್ತಿತ್ತು. ಪಾತಾಳಿಯು ತನ್ನಿಂದ ಈ ದೆವ್ವ ಬಿಡಿಸಲಾಗುವುದಿಲ್ಲವೆಂದು ಹೇಳಿ ತೆಪ್ಪಗಾದನು.

ಕಂಬಕ್ಕೆ ಕಟ್ಟಿದ್ದ ಬೊಳ್ಳಿ, ಬೊಬ್ಬಿಡುತ್ತಿದ್ದಳು. ಬಲಿ ಕೇಳುತ್ತಿದ್ದಳು. ಪಾತಾಳಿಯೇ ತನಗೆ ಸಾಧ್ಯವಿಲ್ಲವೆಂದ ಮೇಲೆ ಯಾರೇನು ಮಾಡಲು ಸಾಧ್ಯ? ಪಿರೆಯ ಬಾಗಿಲು ಮುಚ್ಚಿ ಬಲಿ ಕೊಟ್ಟ ಮೂರು ಕೋಳಿಗಳನ್ನು ಮಾಂಸ ಮಾಡಿ, ಊಟದ ಏರ್ಪಾಡು ಮಾಡಹತ್ತಿದರು. ಪಿರೆಯೊಳಗಿನ ಕೂಗು, ಆರ್ಭಟ ಸಮಯ ಕಳೆದಂತೆ ಕಡಿಮೆಯಾಯಿತು.

ಮಧ್ಯರಾತ್ರಿ ಕಳೆದಾಗ, ಎಲ್ಲರೂ ಊಟ ಮಾಡಿ ಅಲ್ಲಲ್ಲಿ ಮಲಗಲು ಸನ್ನದ್ಧರಾಗುತ್ತಿದ್ದರು. ಹಿರಿಯೋಗಡೆ ಯಾವುದೇ ರಂಪ ರಗಳೆ ಕೇಳುತ್ತಿರಲಿಲ್ಲ. ಜೀನಿ, ದುಡಿಯುವವರು ಬೆಂಕಿ ಹಾಕಿಕೊಂಡು ಚಳಿ ಕಾಯಿಸುತ್ತಿದ್ದರು. ಪಾಟಾಳಿಯು ಹಲಸಿನ ಮರದಡಿಯಲ್ಲಿ ಹುಲ್ಲು ಹಾಕಿ ಪವಡಿಸಿದ್ದನು.

ಬೆಳಗ್ಗೆದ್ದು ನೋಡುವಾಗ ಮಾರನಿಗೆ ದಿಕ್ಕೇ ತೋಚದಂತಾಯಿತು. ಆಗಿಹೋದ ಅನಾಹುತವನ್ನು ಕಂಡು, ದಿಕ್ಕೆಟ್ಟು ಮಾರ ಹೊರಗಿನವರನ್ನು ಕೂಗಿಕೊಂಡ. ಕಂಬಕ್ಕೆ ಕೈಕಟ್ಟಿಕೂರಿಸಿದ ಹೊಲ್ತಿ ರಕ್ತದ ಮಡುವಿನಲ್ಲಿ ಪ್ರಜ್ಞಾಹೀನಳಾಗಿ ಮಲಗಿದ್ದಳು. ಆಕೆಯ ವಸ್ತ್ರಗಳೆಲ್ಲ ಅಸ್ತವ್ಯಸ್ತವಾಗಿ, ಸುತ್ತಲೂ ರಕ್ತ ಹರಡಿತ್ತು. ಈ ನಿಸ್ಸಹಾಯ ಸ್ಥಿತಿಯಲ್ಲಿ ತುಂಬು ಗರ್ಭಿಣಿ ಹೆತ್ತಿದಳು. ಪ್ರಜ್ಞೆಯಿಲ್ಲದ ಆಕೆಯ ಕೈಗಳನ್ನು ಕಂಬಕ್ಕೆ ಕಟ್ಟಿದ್ದರಿಂದ ಮಗುವು ಹೇಗೋ



ಯಾವಾಗಿನಿಂದ ತಲೆಶೂಲೆ ಅಂತ ಡಾಕ್ಟ್ರು ಕೇಳ್ತಿದ್ದಾರೆ. ಹೇಳಿಬಿಡಲೇನೇ– 'ನಮ್ಮಮ್ಮ ಬಂದಾಗಿನಿಂದ' ಅಂತ.

ಹೊರ ಬಂದು ತಾಯಿಯ ತೊಡೆಗಳ ನಡುವೆ ಸಿಕ್ಕಿಕೊಂಡು ಸತ್ತಿತ್ತು. ಪ್ರಸವ ವೇದನೆಯ ಜೀನಿ ಜೀರೆ, ಅದರೊಡನೆ ಭೂತದ ಮುಂಕೊಂಡು. ಕೈಗಳನ್ನು ಕಟ್ಟಿದ ಬಂಧನವಿನ್ನೊಂದು. ನಿಸ್ಸಹಾಯಳಾದ ಆಕೆಯು ಕೂಗಿಕೊಂಡರೂ, ಅಂಗಳದಲ್ಲಿ ಬೆಂಕಿ ಕಾಯಿಸುತ್ತಿದ್ದವರು ಇನ್ನೂ ಭೂತ ಇಳಿಯಲಿಲ್ಲವೆಂದು ಗ್ರಹಿಸಿಕೊಂಡದ್ದು ಈ ರಾದ್ಧಾಂತಕ್ಕೆ ಕಾರಣವಾಗಿತ್ತು.

ಹೊರಗಿದ್ದವರೆಲ್ಲ ಒಳ ಬಂದು ಈ ದೃಶ್ಯವನ್ನು ಕಂಡು ದಂಗಾದರು. ಕಟ್ಟಿದ ಹಗ್ಗವನ್ನು ಬಿಚ್ಚಿದಾಗ ಕೈಯ ಮಣಿಕಟ್ಟಿನ ಚರ್ಮ ಸುಲಿದಿತ್ತು. ರಕ್ತ ಸೋರುತ್ತಿತ್ತು. ಈ ಪ್ರಸವ ವೇದನೆ ಮತ್ತು ಭೂತದ ಹುಚ್ಚಾಟದಲ್ಲಿ ಆಕೆ ತುಂಬಾ ಹೆಣಗಾಡಿ, ಪ್ರಜ್ಞಾಹೀನಳಾಗಿಯೇ ಬಿದ್ದಿದ್ದಳು. ಸತ್ತ ಮಗುವನ್ನೆತ್ತಿ ಅಲ್ಲಿಯ ರಕ್ತದಿಂದ ಹೊಲಸಾದ ನೆಲವನ್ನು ಹೆಂಗಸರು ಶುಚಿ– ಮಾಡುವವರೊಳಗೆ, ಮಾರನು ಯಜಮಾನನಲ್ಲಿ ತನ್ನ ಮಡದಿಯನ್ನು ಉಳಿಸಿಕೊಡಬೇಕೆಂದು ಅಂಗಲಾಚುತ್ತಿದ್ದ. ಕೊನೆಗೆ ಆತ ಆಕೆಯನ್ನು ಆಸ್ಪತ್ರೆಗೆ ಸಾಗಿಸಲು ಆದೇಶ ನೀಡಿದ.

ತಾನು ಕಾಣುತ್ತಿದ್ದ ಹೊಂಗನಸು, ನೋಡನೋಡುತ್ತಿದ್ದಂತೆ ತನ್ನ ಪ್ರೀತಿಯ ಪತ್ನಿಯ ಜೀವಕ್ಕೆ ಎರವಾದ ಈ ಪ್ರಕರಣದಿಂದ ಮಾರ ತಲ್ಲಣಿಸಿದ್ದ. ಎಡವಿದ ಕಾಲೇ ಮತ್ತೆ ಮತ್ತೆ ಎಡವುವಂತೆ, ಜೀವನದಲ್ಲಿ ಕಹಿ ಉಂಡವನೇ ಮತ್ತೆ ಕಹಿಯುಣ್ಣುವುದು ರೂಢಿಯೇನೋ! ತಾನು, ತನ್ನ ಹಣಿಚಿ, ಚಿಕ್ಕ ಹಿರೆ, ಇಷ್ಟೇ ಸಂಪತ್ತಿನಿಂದ ತೃಪ್ತ ಜೀವನ ನಡೆಸೇನೆಂದು ನಂಬಿದ್ದ ಮಾರನ ಆಶಾಗೋಪುರ ಕಳಚಿ ಬಿದ್ದಿತ್ತು. ತನ್ನ ಯಜಮಾನನಲ್ಲಿ ಚಿಕ್ಕಂದಿನಿಂದಲೇ ಮನೆಮಗನಂತೆ ಬದುಕಿ, ಅವರ ವಿಶ್ವಾಸ ಗಳಿಸಿ, ತೃಪ್ತ ಜೀವನ ನಡೆಸುತ್ತಿದ್ದ. ಯಜಮಾನನ ಆಸ್ತಿ, ಪಾಸ್ತಿ, ಮನೆ, ಮಠ, ಎಲ್ಲದರಲ್ಲಿಯೂ ಮಾರನ ಜವಾಬ್ದಾರಿಯಿತ್ತು. ತಾನು ಆಳು, ಈ ಮನೆಯ ಉಪ್ಪುಂಡು ಬೆಳೆದವನೆಂಬ ಉಪಕಾರ ಸ್ಮರಣೆಯೊಂದೇ ಆತನಿಗೆ ಊರುಗೋಲಾಗಿತ್ತು. ತನ್ನವರಾರೂ ಇಲ್ಲದಿದ್ದರೂ, ತನ್ನ ಜನಾಂಗದವರೊಡನೆ ಸೇರದೆ.

ಒಂಟಿಯಾಗಿಯೇ ನಿಂತು, ತನ್ನ ಭವಿಷ್ಯ ರೂಪಿಸಿಕೊಳ್ಳಲು ಬೊಳ್ಳಿಯನ್ನು ಕೈ ಹಿಡಿದಿದ್ದ.

ಆದರೆ ಕಣ್ಣಿಗೆ ಕಾಣದ ಕೈವಾಡವೊಂದು ತನ್ನ ಜೀವನ ನೌಕೆಯನ್ನು ಸುಳಿಗೆ ಸಿಕ್ಕಿಸಿತ್ತು. ತಾನು ದಡ ಸೇರುವೆನೇ? ಎಂದು ಮಾರ ಚಿಂತಿಸುತ್ತಿದ್ದ.

ಬೊಳ್ಳಿ ಆಸ್ಪತ್ರೆಯಿಂದ ಬಂದಾಗ ತುಂಬಾ ಪೈರಾಣಾಗಿಯೇ ಇದ್ದಳು. ಬಡಕಲು ದೇಹ ಹೊತ್ತು ತನ್ನ ಪಿರೆಗೆ ಬಂದ ರಾತ್ರಿಯೇ ಮತ್ತೊಮ್ಮೆ ಯಥಾ ಪ್ರಕಾರ ಭೂತ ಮೈಮೇಲೇರಿ ಬಂತು. ರಾತ್ರಿಯಿಡೀ, 'ಬಲಿ ಬೇಕು, ರಕ್ತ ಬೇಕು' ಎಂದು ಮಾರನನ್ನು ಹಿಂಸಿಸುತ್ತಿತ್ತು. ತಲೆಗೆದರಿ, ಕಟಕಟನೆ ಹಲ್ಲು ಕಡಿದು, 'ನಿನ್ನ ವಂಶವನ್ನೇ ನಿರ್ಮೂಲ ಮಾಡುತ್ತೇನೆ' ಎಂದು ಹೆದರಿಸುತ್ತಿತ್ತು.

ಮಾರ, ಬೆಳಗಾದ ಕೂಡಲೇ, ಯಜಮಾನನಲ್ಲಿ ಅತ್ತು, ಕರೆದು ತನ್ನ ಸ್ಥಿತಿಯನ್ನು ಹೇಳಿಕೊಂಡ. ಇದಕ್ಕೆ ತಕ್ಕ ಬಂದೋಬಸ್ತು ಮಾಡದಿದ್ದರೆ, ತನ್ನ ಪ್ರೀತಿಯ ಪತ್ನಿಯು ಭೂತಕ್ಕೆ ಬಲಿಯಾಗುತ್ತಾಳೆಂದು ಹೆದರಿದ ಮಾರ ಯಜಮಾನನ ಕಾಲಿಗೆ ಬಿದ್ದ.

ವೈಸಾಡಿನ ಇಪ್ಪಿಮಲೆಯ ಪಾಟಾಳಿಯನ್ನು ಯಜಮಾನರೇ ಕರೆ ಕಳುಹಿಸಿದರು. ಅವನು ಬಂದ ದಿವಸ ಮಾರನ ಪಿರೆಯಲ್ಲಿ ಜಾತ್ರೆಯೇ ನೆರೆದಿತ್ತು. ಸುತ್ತುಮುತ್ತಲಿನ ಪಣೆಯರು, ಮಿತ್ರರು ಭೂತ ಬಿಡಿಸುವ ಚಮತ್ಕಾರವನ್ನು ನೋಡಲು ಉತ್ಸುಕರಾಗಿದ್ದರು.

ಪಣೆಯರ ಚೀನಿ, ದುಡಿ, ಹಲಸಿನ ಮರದಡಿಯಲ್ಲಿ ಮೊರೆಯುತ್ತಿತ್ತು. ಬೊಳ್ಳಿಯನ್ನು ತಂದು ಮೂರು ಕಾಲಿನ ಮಣೆ (ಮುಕ್ಕಾಲಿ) ಯಲ್ಲಿ ಕೂಡಿಸಿದ್ದರು. ಪಾಟಾಳಿಯು ಮುಖಕ್ಕೊಂದು ವಿಕಾರವಾದ ಮುಖವಾಡವನ್ನು ಕಟ್ಟಿಕೊಂಡು, ಚೀನಿ, ದುಡಿ ಹೊಡೆತಕ್ಕೆ ಸರಿಯಾಗಿ ಕುಣಿಯುತ್ತಿದ್ದನು. ಗಳಿಗೆಗೊಮ್ಮೆ ಅವನು ಕುರ್ದಿ ನೀರನ್ನು ಬೊಳ್ಳಿಯ ಮುಖಕ್ಕೆ ಎರಚುತ್ತಿದ್ದ. ರಾಗವಾಗಿ ವಾದ್ಯಕ್ಕೆ ಸರಿಯಾಗಿ, ಹಾಡುತ್ತಾ,

"ವಾಲನಾಡೆ ತಾಯಿ, ವಾಲನಾಡೆ,
ಪುಳ್ಳೆನ ಮೇಲೆ ಮೈಮರೆಂದು

ಎಂದು ಕಾಲಿಗೆ ಕಟ್ಟಿದ ಗೆಜ್ಜೆ ನಿನದಿಸುತ್ತ ಮೈಮರೆತು ಕುಣಿಯುತ್ತಿದ್ದ. ಈ ಪಾಟಾಳಿಯು ಅಂದಿನ ಪಾಟಾಳಿಯಂತಿರಲಿಲ್ಲ. ಕಟ್ಟುಮಸ್ತಾದ ಆಳು, ಹೋ– ಹೋ– ಎಂದುಕುಣಿದಾಗ ಎಲ್ಲರೂ ಅವನನ್ನೇ ನಿಬ್ಬೆರಗಾಗಿ ನೋಡುತ್ತಿದ್ದರು. ಬೊಳ್ಳಿಯ ಬಿಳಿಚಿಕೊಂಡ ಮುಖ ಉಗ್ರವಾಗಿತ್ತು. ಆಕೆಯೂ ತಲೆದೂಗುತ್ತಿದ್ದಳು. ಆಕೆಯ ಕೇಶರಾಶಿಯು ಹೆಗಲ ಮೇಲೆ ಬಿದ್ದಿತ್ತು. ಪಾಟಾಳಿಯು ತನ್ನ ಕೈಯಲ್ಲಿದ್ದ ಏಳು ಬಣ್ಣದ ನೂಲೊಂದನ್ನು ಮಂತ್ರಿಸಿ ಗಂಟು ಹಾಕುತ್ತಾ ಕುಣಿಯುತ್ತಿದ್ದ. ಕಡೆಗೊಮ್ಮೆ ನೂಲನ್ನು ಕುರ್ದಿ ನೀರಲ್ಲಿ ಅದ್ದಿ, ಬೊಳ್ಳಿಯ ಕುತ್ತಿಗೆಗೆ ಕಟ್ಟಿ ಅರಸಿನ ಮಿಶ್ರಿತ ಅಕ್ಕಿಯನ್ನು ಆಕೆಯ ತಲೆ ಮೇಲೆರೆದ.

ಬೊಳ್ಳಿಯ ಭೂತ ಕುಳಿತಲ್ಲಿಂದ ಎದ್ದಿತು. ಕಾಲೆತ್ತಿ ಕುಣಿಯತೊಡಗಿತು. ಬಾಯಲ್ಲಿ ಏನೇನೋ ಹೇಳಿಕೊಳ್ಳುತ್ತಾ ತನ್ನ ತಲೆಗೂದಲನ್ನು, ಕಿತ್ತೆಸೆಯುವಂತೆ ಕುಕ್ಕಿ, ಬಲಿಬೇಕೆಂದು ಚೀತ್ಕಾರ ಮಾಡಿತು. ಪಾಟಾಳಿಯ ಆದೇಶದಂತೆ ತೆಂಗಿನ ಚಿಪ್ಪಿನಲ್ಲಿ ಸೇಂದಿಯನ್ನು ಕೊಡಲಾಯಿತು. ಒಂದು ಕೋಳಿಯನ್ನು ಆಕೆಯ ಮುಖದ ಮೇಲೆ ನಿವಾಳಿಸಿ, ಬಲಿ ಕೊಡಲಾಯಿತು. ಕುತ್ತಿಗೆ ಕೊಯ್ದು ಕೋಳಿಯನ್ನು ಆಕೆಯ ಕೈಗಿತ್ತಾಗ, ತುಂಡಾದ ಕೊರಳನ್ನು ಬಾಯಿಗೆ ಹಾಕಿ ರಕ್ತ ಹೀರಿತು. ಈಗ ಬೊಳ್ಳಿಯ ದೆವ್ವ ನಿಜ ಸ್ವರೂಪ ತಳೆದಿತ್ತು.

ಕುಣಿತವು ಜೋರಾದಂತೆ, ಪಾಟಾಳಿಯ ಆದೇಶದಂತೆ ಚೀನಿ, ದುಡಿಯವರು ರಸ್ತೆಗಿಳಿದರು. ಭೂತವು ಪಾಟಾಳಿಯು ಕುಣಿಯುತ್ತಾ ಹಿಂಬಾಲಿಸಿದರು. ದೆವ್ವ ಬಂದ ಬೊಳ್ಳಿಯ ನಡುವಿಗೆ ಒಂದು ಹಗ್ಗವನ್ನು ಕಟ್ಟಿ ಇಬ್ಬರು ಹಿಡಿದಿದ್ದರು.

ಕೆರೆಯ ದಂಡೆಗೆ ಬಂದ ಪಾಟಾಳಿಯು ಜೋರಾಗಿ ಹೂಂಕರಿಸಿ, ಗೆಲುವಿನ ಕುಣಿತ ಕುಣಿಯತೊಡಗಿದ. ಕೆರೆ ದಂಡೆಯ ಮೇಲೆ ಮೈಮರೆತು ಕುಣಿಯುತ್ತಿದ್ದ ಬೊಳ್ಳಿಯ ದೆವ್ವ, "ಬಲಿಬೇಕು ಎಂದು ಕೂಗತೊಡಗಿತು. ಮತ್ತೊಂದು ಕೋಳಿಯಿತ್ತು. ಅದರ ರಕ್ತ ಹೀರು

ಯನ್ನು ಅನಿರೀಕ್ಷಿತವಾಗಿ ಕೆರೆಗೆ ತಳ್ಳಲಾಯಿತು. ಕೆರೆಗೆ ಬಿದ್ದ ಬೊಳ್ಳಿ ಜೀವಕ್ಕಾಗಿ ಚಡಪಡಿಸುತ್ತಿದ್ದಳು. ದಂಡೆಯಲ್ಲಿ ನಿಂತು ಆಕೆಯ ನಡುವಿಗೆ ಬಿಗಿದಿದ್ದ ಹಗ್ಗವನ್ನು ಹಿಡಿದಾತನ ಕೈ ಜಾರಿ ಹೋಗಿತ್ತು. ಆಳವಾದ ಕೆರೆಗೆ ಒಮ್ಮೆಗೇ ನೂಕಿದರೆ ಬೊಳ್ಳಿಗಲ್ಲ, ಭೂತಕ್ಕೂ ಭಯವಾಗದೇ? ನೀರಿಗೆ ಬಿದ್ದವಳನ್ನು ಹಗ್ಗದ ಸಹಾಯದಿಂದ ಮೇಲಕ್ಕೆಳೆಯಬೇಕಾಗಿತ್ತು. ಆದರೆ ಹಗ್ಗ ಕಳಚಿ ಹೋಗಿತ್ತು. ಬೊಳ್ಳಿ ಎರಡು ಸಾರಿ ಮುಳುಗಿ ಮೇಲೆದ್ದಳು. ಕೆರೆಯ ನೀರು ಆಳವಿದ್ದುದರಿಂದ ಕೆಳ ತದಿಯನ್ನು ಮುಟ್ಟಿ ಮೇಲೆದ್ದರೂ, ಎಲ್ಲರೂ ನಿಸ್ಸಹಾಯರಾಗಿ, ಬೆದರುಗಣ್ಣಲ್ಲಿ ನೋಡುತ್ತಿದ್ದರು. ಕೆರೆಯ ದಂಡೆಯಲ್ಲಿ ಅಷ್ಟು ಜನ ನೆರೆದಿದ್ದರೂ ಯಾರಿಗೂ ಕೆರೆಗಿಳಿಯುವ ಛಾತಿ ಬರಲೇ ಇಲ್ಲ.

ಮಾರನಿಗೆ ದಿಕ್ಕೇ ತೋಚದಾಯಿತು, ಅದಾವುದೋ ಆವೇಶದಿಂದ 'ಬೊಳ್ಳಿ' ಎಂದು ಕೂಗಿ ಕೆರೆಗೆ ಹಾರಿದ. ಹೇಗೋ ವಿಶ್ವ ಪ್ರಯತ್ನಪಟ್ಟು ತನ್ನ ಮಡದಿಯನ್ನು ಬದುಕಿಸಿಕೊಳ್ಳಲು ನೀರಡಿಯಲ್ಲಿ ತಡಕಾಡಿದ ಕೈಗೆ ಸಿಕ್ಕಿದ ಆಕೆಯ ಉದ್ದ ಕೂದಲನ್ನು ಹಿಡಿದು ನೀರ ಮೇಲಕ್ಕೆ ಬಂದ. ಅವರಿವರ ಸಹಾಯದಿಂದ, ದಂಡೆಯ ಮೇಲೆ ಮಲಗಿಸಿದಾಗ, ಮೊದಲೇ ಹೈರಾಣಾದ ಹೆಣ್ಣು ಈಗ ಹೆಣವಾಗಿದ್ದಳು.

ಆದರೆ, ಪಾಟಾಳಿ, ದೆವ್ವ ತುಂಬಾ ಕಠಿಣವೆಂದೂ ಹೇಗಾದರೂ ಆಕೆಯನ್ನು ಬಲಿ ತೆಗೆಯಲೇಬೇಕೆಂದು ಹಟ ತೊಟ್ಟಿತ್ತೆಂದೂ. ಅಂದ. ನೆರೆದವರು ಬಲಿಬೇಕೆಂದು ಅಂಗಲಾಚುತ್ತಿದ್ದ ದೆವ್ವ ಆಕೆಯನ್ನೇ ಬಲಿ ತೆಗೆದುಕೊಂಡಿತ್ತೆಂಬ ಪಾಟಾಳಿಯ ಮಾತಿಗೆ ತಲೆದೂಗಿದರು. ●

ಸಮಸ್ಯೆಗೆ ಪರಿಹಾರ

(೩೭ ನೆಯ ಪುಟದಿಂದ)

೧ ಬಸಪ್ಪ ಆ ಚಿಕ್ಕ ಕೊಡಲಿಯಿಂದ ಗೋಡೆಯಿಂದಲೂ ನೆಲದಿಂದಲೂ ಮಣ್ಣು ಅಗೆದು ಎರಡು ಮೂರು ಅಡಿಗಳಷ್ಟು ಕುಪ್ಪೆ ಹಾಕಿದ. ಅನಂತರ ಸಲೀಸಾಗಿ ಕಿಟಕಿಯೊಳಗಿನಿಂದ ನುಸುಳಿ ಟೊಂಗೆಯಿಂದ ಕೆಳಕ್ಕಿಳಿದು ಪಾರಾದ.

೨ ಪ್ಯಾಂಟನ್ನು ತಿರುವು ಮುರುವಾಗಿ ಹಾಕಿಕೊಂಡ.


೩ ರಿಕಾರ್ಡಿನಲ್ಲಿ ಎಷ್ಟು ಗೆರೆಗಳಿದ್ದರೆ ಏನಂತೆ? ತಿರುಗುವುದು ರಿಕಾರ್ಡೇ ಹೊರತು ಸ್ಟೈಲಸ್ ಅಲ್ಲ ತಾನೆ? ಹೀಗಾಗಿ ರಿಕಾರ್ಡನ್ನೊಮ್ಮೆ ಪೂರ್ತಿಯಾಗಿ ಕೇಳಿದಾಗ ಸ್ಟೈಲಸ್ ಕ್ರಮಿಸಿದ ಅಂತರ ನಾಲ್ಕು ಇಂಚುಗಳಷ್ಟು ಮಾತ್ರ.

೪ ಡಜನ್ನೆಂದರೆ ಡಜನ್ನೇ. ಐದು ಡಜನ್ನಿನಲ್ಲಿ ಐದು ಪೈಸೆಯ ಸ್ಟಾಂಪುಗಳೂ ಅರವತ್ತರಷ್ಟೇ ಇರುತ್ತವೆ.

೫ ೭೦ ರೂಪಾಯಿಗಳು.

೬ ಜನವಟ್ಟಣೆಯಿರುವ ಮಾರುಕಟ್ಟೆಯಲ್ಲಿ ಗಿಡಮರಗಳು ಹೇಗಿರಬೇಕು? ಸುರೇಶನು ಹೇಳಿದ ಅಂಗಡಿಯಲ್ಲಿ ರೇಖಾ ನಿಂತಿದ್ದಳೆಂದ ಮೇಲೆ ಮಳೆಯಿಂದ ಅವಳ ಮೈ ಹೇಗೆ ತೊಯ್ಯಬೇಕು?

೭ ಇಬ್ಬರೂ ಎದುರು ಬದುರಾಗಿಯೆ ನಿಂತಿದ್ದರು. ಅಷ್ಟೂ ಹೊಳೆಯಲಿಲ್ಲವೆ ನಿಮಗೆ?


ವಿ ಸ. ಖಾಂಡೇಕರ ಅವರ

ಕಚ

ಒಬ್ಬನ ಆತ್ಮ ವಿಕಸಿತನಾದಷ್ಟೂ ಆತನಿಗೆ ದುಃಖ ಹೆಚ್ಚಾಗುತ್ತದಂತೆ. ಈ ಮಾತಿಗೆ ಸಾರ್ವಕಾಲಿಕ ಸಾಕ್ಷಿಯಾಗಿ ನಿಲ್ಲುವವನೆಂದರೆ ಕಚ. ದೇವಯಾನಿಯನ್ನು ಕುರಿತಾದ ಆತನ ಪ್ರೀತಿ ದುರ್ದೈವದಿಂದ ಫಲಿಸಲಿಲ್ಲ. ಆದರೆ ಕಚ ಸಂಯಮಿ, ಧ್ಯೇಯವಾದಿ ಯುವಕ. ಇತರರ ಸುಖವೇ ತನ್ನ ಸುಖ ಎಂದುಕೊಳ್ಳುವವ.

ಜ್ಞಾನಪೀಠ ಪ್ರಶಸ್ತಿ ಪಡೆದ ಮರಾಠಿಯ ಶ್ರೇಷ್ಠ ದರ್ಜೆಯ ಕಾದಂಬರಿಕಾರ ದಿ. ವಿ. ಸ. ಖಾಂಡೇಕರರ 'ಯಯಾತಿ'ಯ ಪಾತ್ರಪೋಷಣೆ, ಶೈಲಿ ಹೊಸ ಬಗೆಯವು. ಅದರಲ್ಲೂ ಕಚನ ಪಾತ್ರ ಅತಿ ಮಹತ್ವದ್ದು. ಕಾದಂಬರಿಯಲ್ಲಿ ಯಯಾತಿಯ ಸರಿದೊರೆಯಾಗಿ ನಿಲ್ಲುವ ಕಚನ ಪಾತ್ರವನ್ನಷ್ಟೇ ಇಲ್ಲಿ, ಪ್ರೊ. ವಿ. ಎಂ. ಇನಾಂದಾರ ಅವರ ಅನುವಾದದಿಂದ, ಸಂಗ್ರಹಿಸಿ ಕೊಟ್ಟಿದ್ದಾರೆ. ಶ್ರೀಮತಿ ಲಲಿತಾ ಶಾಸ್ತ್ರಿ.

ಯಯಾತಿ ಸುಮಾರು ಒಂದೂವರೆ ವರ್ಷ ಕಾಲ ಅಶ್ವಮೇಧದ ಕುದುರೆಯ ಜೊತೆಯಲ್ಲಿ ಅಲೆಯುತ್ತಿದ್ದ. ಅವನ ಕುದುರೆಯನ್ನು ತಡೆದ ರಾಜರು ಅಪರೂಪವೆನ್ನಬೇಕು. ತಮ್ಮ ಶೌರ್ಯದ ಮೂಲಕ ಯಯಾತಿಯ ತಂದೆ ಇಡೀ ಆರ್ಯಾವರ್ತದಲ್ಲಿ ಹೆದರಿಕೆ ಹುಟ್ಟಿಸಿದ್ದರು. ಇಂದ್ರನನ್ನೇ ಸೋಲಿಸಿದ ನಹುಷ ದೊರೆಯ ಆ ಅಶ್ವಮೇಧದ ಕುದುರೆಯನ್ನು ತಡೆಯುವ ಎದೆಗಾರಿಕೆ ಯಾರಿಗಿದ್ದೀತು? ಅಭಿಮಾನಿಯಾದ ಯಾರಾದರೂ ವಿರೋಧಿಸಿದ್ದೇ ಆದರೆ ತಂದೆಗೆ ತಕ್ಕ ಮಗ ಯಯಾತಿ ಎನ್ನುವುದನ್ನು ಅನೇಕ ಸಲ ತೋರಿಸಿಕೊಟ್ಟಿದ್ದ.

ಈ ಪರ್ಯಟನದಲ್ಲಿ ದೊಡ್ಡ ದೊಡ್ಡ ರಾಜಮಹಾರಾಜರು ತನ್ನೆದುರು ಅಡ್ಡ ಬೀಳತೊಡಗಿದಾಗ ಅಹಂಕಾರಿಗಳಾದ ವೀರರು ಹಲ್ಲಲ್ಲಿ ಹುಲ್ಲುಕಡ್ಡಿಗಳನ್ನು ಹಿಡಿದುಕೊಂಡು ಬಂದು ಶರಣಾಗತರಾಗತೊಡಗಿದಾಗ ಯಯಾತಿ ಆನಂದದ ಉತ್ತುಂಗ ಶಿಖರವನ್ನೇ ಏರಿ ನಿಂತಿದ್ದ.

ದಿಗ್ವಿಜಯಿಯಾದ ಅಶ್ವಮೇಧದ ಕುದುರೆಯೊಂದಿಗೆ ಯಯಾತಿ ಹಸ್ತಿನಾಪುರಕ್ಕೆ ಹಿಂದಿರುಗಿ ಬಂದಾಗ ರಾಜಧಾನಿಯಲ್ಲಿ ಭವ್ಯವಾದ ಸ್ವಾಗತ ದೊರೆಯಿತು. ಇಡೀ ನಗರ ನವವಧುವಿನಂತೆ ಸಿಂಗರವಾಗಿತ್ತು. ರಮಣಿಯಂತೆ ನೃತ್ಯ ಗಾಯನದಲ್ಲಿ ಮಗ್ನವಾಗಿತ್ತು. ಪ್ರೇಮದೇವಿಯಂತೆ ಪುಷ್ಪಕಟಾಕ್ಷಗಳನ್ನು ಮಳೆಗರೆಯುತ್ತಿತ್ತು.

ಯಾಗ ಮುಗಿಯುವಷ್ಟರಲ್ಲಿ ಯತಿಯನ್ನು (ಯಯಾತಿಯ ಅಣ್ಣ) ಅನುಗ್ರಹಿಸಿದ ಋಷಿಯ ಶಿಷ್ಯಂದಿರು ಅವನಿಂದ ಒಂದು ಸಂದೇಶವನ್ನು ತೆಗೆದುಕೊಂಡು ನಹುಷ ದೊರೆಯ ಹತ್ತಿರ ಬಂದರು. ಆ ಋಷಿಯ ಹೆಸರನ್ನು ಯಾರೂ ಎತ್ತಲೇ ಬಾರದೆಂದು ಮನೆಯಲ್ಲಿ ಒಂದು ಸಂಕೇತವನ್ನು ಮಾಡಿಕೊಂಡಿದ್ದರು. ಅದರ ಹಿಂದೆ ಇದ್ದುದು ಭಕ್ತಿಯೋ ಕೋಪವೋ ಯಾರಿಗೆ ಗೊತ್ತು?

ಆದರೆ ಯಯಾತಿಗೇನೂ ಬಚ್ಚಿಡುವ ಮನಸ್ಸಿಲ್ಲ. ಆ ಋಷಿಯ ಹೆಸರು ಅಂಗಿರಸ ಎಂದು ಹೇಳಿಬಿಡುತ್ತಾನೆ.

ದೇವ ದಾನವರ ನಡುವೆ ಮಹಾಯುದ್ಧ ನಡೆಯುವ ಸಂದರ್ಭ ಒದಗಿ ಬಂದಿತ್ತು. ಅದು ನಡೆಯಬಾರದೆಂದು ಅಂಗಿರಸನು ಶಾಂತಿ ಯತ್ನವ

ಸಂಕಲ್ಪವನ್ನು ಮಾಡಿದ್ದನು. ಆ ಯಜ್ಞದಲ್ಲಿ ಅವನ ಪ್ರೀತಿಯ ಶಿಷ್ಯನಾಗಿದ್ದ ಕಚ ಮುಖ್ಯ ಋತ್ವಿಜನಾಗುವವನಿದ್ದ. ಕಚ ದೇವಗುರುವಾಗಿದ್ದ ಬೃಹಸ್ಪತಿಯ ಮಗ, ಆದ್ದರಿಂದ ಯಜ್ಞದ ಸಮಯದಲ್ಲಿ ರಾಕ್ಷಸರಿಂದ ವಿಘ್ನವಾಗುವ ಸಂಭವವಿದ್ದಿತು. ಅಂಥ ವಿಘ್ನಗಳಿಂದ ಯಜ್ಞವನ್ನು ಸಂರಕ್ಷಿಸುವುದಕ್ಕೋಸ್ಕರ ಆಂಗಿರಸನು ನಹುಷ ದೊರೆಯ ಹತ್ತಿರ ಅವನ ದಿಗ್ವಿಜಯಿಯಾದ ಮಗನನ್ನು ಬೇಡಿದ್ದನು. ಯಯಾತಿಗೆ ಅಶ್ವಮೇಧಕ್ಕಿಂತಲೂ ಹೆಚ್ಚಿನ ಗೌರವ ಸನ್ನಿವೇಶ ಇದಾಗಿತ್ತು. ಹೀಗಾಗಿ ಅವನ ಆಕಾಂಕ್ಷೆಗಳೆಲ್ಲವೂ ಆ ಶಾಂತಿ ಯಜ್ಞದ ಸುತ್ತಲೇ ಪ್ರದಕ್ಷಿಣೆ ಹಾಕತೊಡಗಿದವು. ಆ ಯಜ್ಞಕ್ಕೆ ರಕ್ಷಣೆ ನೀಡುತ್ತಿರುವಾಗ ತನ್ನ ಶೌರ್ಯ ಪ್ರಕಟವಾಗುತ್ತದೆ, ಇಷ್ಟೊಂದು ಲೀಲಾಜಾಲವಾಗಿ ರಾಕ್ಷಸರನ್ನು ಸಂಹರಿಸುವ ವೀರ ಯಾರು ಎಂದು ನೋಡುವುದಕ್ಕೆ ಇಂದ್ರ ಬಂದುಬಿಡುತ್ತಾನೆ. ಆಮೇಲೆ ತಾನು ಸ್ವರ್ಗಕ್ಕೆ ಹೋಗುವುದು; ಅಲ್ಲಿ ತನ್ನ ಮೆಚ್ಚಿನ ಅಲಕೆಗಿಂತಲೂ ಸಾವಿರ ಪಾಲು ಸುಂದರಿಯರಾದ ಅಪ್ಸರೆಯರು ತನ್ನ ಲಕ್ಷ್ಯವನ್ನು ಸೆಳೆಯುವ ಯತ್ನವನ್ನು ಮಾಡುತ್ತಾರೆ. ಆದರೆ ತಾನು ಅದಕ್ಕೆಲ್ಲ ಲಕ್ಷ್ಯ ಕೊಡದೆ ಇಂದ್ರನನ್ನು ಕುರಿತು ಕೇಳುವುದು– "ದೇವರಾಜ, ದಾನವರ ಯುದ್ಧದಲ್ಲಿ ನಾನು ಸದಾಕಾಲವೂ ನಿಮಗೆ ಸಹಾಯ ಮಾಡುತ್ತೇನೆ. ನನಗಾಗಿ ನೀವು ಒಂದು ಮಾತನ್ನು ನಡೆಸಿಕೊಡಬೇಕು. 'ನಹುಷ ರಾಜನ ಮಕ್ಕಳು ಎಂದಿಗೂ ಸುಖವಾಗಿರಲಾರರು' ಎಂದು ನನ್ನ ತಂದೆಯವರಿಗೆ ಬಂದು ಶಾಪ ಇದೆಯಂತೆ. ಆ ಶಾಪಕ್ಕೆ ಪ್ರತಿಯಾಗಿ ನನಗೆ ಉಶ್ಶಾಪಬೇಕಾಗಿದೆ" ಎಂದು.

ಯಯಾತಿಯ ಅಂಗರಕ್ಷಕರು ಹಿಂದಿನಿಂದ ನಿಧಾನವಾಗಿ ಬರುತ್ತಿದ್ದರು. ಅವರ ಜೊತೆಯಲ್ಲಿ ಮಂದಗತಿಯಿಂದ ಆಂಗಿರಸ ಋಷಿಯ ಆಶ್ರಮದತ್ತ ಸಾಗುವುದು ಅವನ ಕುದುರೆಗೆ ಬೇಸರವೆನಿಸಿರಬೇಕು. ಗಾಳಿಯೊಡನೆ ಸ್ಪರ್ಧಿಸಿ ಮುನ್ನುಗ್ಗುವುದರಲ್ಲಿ ಅದಕ್ಕೆ ಸಂತೋಷವೆನಿಸುತ್ತಿದ್ದಿರಬೇಕು. ಹೀಗಾಗಿ ಅಲ್ಪಾವಧಿಯಲ್ಲೇ ಆಶ್ರಮದ ಹತ್ತಿರಕ್ಕೆ ಬಂದುಬಿಟ್ಟರು.

ಸಂಧ್ಯಾಸಮಯ. ಎದುರಿನ ಗಿಡಮರಗಳೊಳಗಿನಿಂದ ಕಪ್ಪು ಬಣ್ಣದ ಧೂಮವಲಯಗಳು ನೀಲಾಕಾಶದ ಕಡೆಗೆ ವಕ್ರಗತಿಯಿಂದ ಮೇಲಕ್ಕೇರುತ್ತಿದ್ದವು. ಅವುಗಳ ಗತಿಯನ್ನು ನೋಡಿದಾಗ ನರ್ತಕಿಯೊಬ್ಬಳ ನಯವಾದ ತಾಲಬದ್ಧವಾದ ಪದಗತಿಯ ನೆನಪು ಬರುತ್ತಿತ್ತು. ತಮ್ಮ ಗೂಡುಗಳತ್ತ ಹಿಂದಿರುಗುತ್ತಿದ್ದ ಹಕ್ಕಿಗಳ ಕಿಲಿಕಿಲಿ ಕರ್ಣಮನೋಹರವಾಗಿತ್ತು. ಪಶ್ಚಿಮದ ದಿಗಂತದಲ್ಲಿ ಯಜ್ಞಕುಂಡವೇ ಹೊತ್ತಿ ಉರಿಯುತ್ತಿದ್ದಂತೆನಿಸುತ್ತಿತ್ತು. ಆಕಾಶದಲ್ಲಿಯ ಮೋಡದ ತುಣುಕುಗಳೇ ಅದರಲ್ಲಿ ಆಹುತಿಯಾಗುತ್ತಿದ್ದ ಹಾಗೆ. ಆ ಹಕ್ಕಿಗಳೇ ಋತ್ವಿಜರಾಗಿ ಮಂತ್ರಗಳನ್ನು ಹೇಳುತ್ತಿದ್ದ ಹಾಗೆ ಭಾಸವಾಗುತ್ತಿತ್ತು.

ಬಗೆ ಬಗೆಯ ಹಕ್ಕಿಗಳು ತಮ್ಮ ಮನೆಗಳತ್ತ ಸಾಗುತ್ತಿದ್ದವು. ಅರಮನೆಯಲ್ಲಿ ಕೂಡ ಅಂಥ ವರ್ಣವೈವಿಧ್ಯವನ್ನು ಯಯಾತಿ ಕಂಡಿರಲಿಲ್ಲ. ಕುದುರೆಯನ್ನು ತಡೆದು ತರಂಗ ತರಂಗವಾಗಿ ಹಾರುತ್ತಿದ್ದಂತಿದ್ದ ಆ ಬಣ್ಣಗಳನ್ನು ನೋಡುತ್ತಾ ನಿಂತ. ನೋಡುತ್ತಿದ್ದಂತೆ ಅವನ ಕಣ್ಣ ಮುಂದೆಯೇ ಪಂಚವರ್ಣದ ಹಕ್ಕಿಯೊಂದು ಹಾರಿ ಹೋಯಿತು. ಅದರ ಬಣ್ಣಗಳಿಂದ ಮೋಹಿತನಾದ ಅವನು ಅದನ್ನು ಬಾಣದಿಂದ ಹೊಡೆದು ಅದರ ಚೆಲುವಾದ ರೆಕ್ಕೆಗಳನ್ನು ಸಂಗ್ರಹಿಸಿ ಇಟ್ಟುಕೊಳ್ಳಬೇಕೆಂದು ಆಶಿಸಿದ. ಬಿಲ್ಲಿಗೆ ಬಾಣವನ್ನೇರಿಸುವುದಕ್ಕೆ ತೊಡಗುತ್ತಿದ್ದ ಹಾಗೆ 'ತಡೆ ತಡೆ' ಎಂಬ ಕಠೋರವಾದ ಮಾತು ಅವನ ಕಿವಿಯನ್ನು ಅಪ್ಪಳಿಸಿತು.

ಆ ಮಾತು ಬೇಡಿಕೆಯಾಗಿರದೆ ಆಜ್ಞೆಯಾಗಿತ್ತು. ಆಶ್ಚರ್ಯದಿಂದ ಯಯಾತಿ ಹಿಂದಿರುಗಿ ನೋಡಿದ. ಬಲಗಡೆಯಲ್ಲಿಯ ಒಂದು ಮರದ ರೆಂಬೆಯ ಮೇಲೆ ಋಷಿಕುಮಾರನೊಬ್ಬ ಸಂಧ್ಯಾಕಾಲದ ಶೋಭೆಯನ್ನು ನೋಡುತ್ತ ಕುಳಿತಿದ್ದ. ಯಯಾತಿಯ ವಯಸ್ಸಿನವನೇ ಇರಬೇಕು ಆ ಋಷಿಕುಮಾರ. ಅವನ ಆಜ್ಞೆ ಕೇಳಿ ಯಯಾತಿಗೆ ಕೋಪ ಬಂದಿತು. ಆದರೆ ಅವನಿಗೆ ತಿಳಿಯದಂತೆಯೆ ಅವನ ಕೈ ತಡೆದಿತ್ತು. ಮರುಕ್ಷಣವೇ ಆತ ಮರದಿಂದ ಕೆಳಕ್ಕೆ ಜಿಗಿದು ಯಯಾತಿಯ ಹತ್ತಿರ ಬಂದು, "ಅಂಗಿರಸ ಋಷಿಗಳ ಆಶ್ರಮ ಇದು," ಎಂದು ಹೇಳಿದ.

"ಅದು ನನಗೆ ಗೊತ್ತು" ಎಂದ ಯಯಾತಿ ದರ್ಪದಿಂದ.

"ಈ ಆಶ್ರಮದ ಪರಿಸರದಲ್ಲಿ ಆ ಹಕ್ಕಿಯನ್ನು ನೀನು ಕೊಲ್ಲುವವನಿದ್ದೆ. ಅದು ಅಧರ್ಮ ವಾಗುತ್ತಿತ್ತು."

"ನಾನೊಬ್ಬ ಕ್ಷತ್ರಿಯ, ಹಿಂಸೆ ನನಗೆ ಧರ್ಮ."

"ತನ್ನ ಅಥವಾ ಇತರರ ರಕ್ಷಣೆಗಾಗಿ ಮಾಡಿದ ಹಿಂಸೆ ಧರ್ಮವಾಗಬಹುದು. ಯಾವ ಪಾಪ ವನ್ನೂ ಮಾಡದ ಆ ಮೂಕ ಪ್ರಾಣಿ ನಿನಗೆ ಏನು ಮಾಡಿತ್ತು?"

"ಅದರ ಬಣ್ಣಗಳು ನನಗೆ ಪ್ರೀತಿಯಾಗಿದ್ದವು."

"ದೊಡ್ಡ ರಸಿಕನ ಹಾಗೆ ಕಾಣುತ್ತೀ. ಆದರೆ ನಿನ್ನನ್ನು ರಸಿಕನನ್ನಾಗಿ ಮಾಡಿದವನೇ ಆ ಹಕ್ಕಿಗೆ ಜೀವವನ್ನು ಕೊಟ್ಟಿದ್ದಾನೆ ಎನ್ನುವುದನ್ನು ಮರೆಯ ಬೇಡ."

"ಇಂಥ ನೀರಸ ಪ್ರವಚನ ದೇವಸ್ಥಾನದಲ್ಲಿ ಮಾತ್ರ ಸರಿ." ಎಂದ ಯಯಾತಿ ಸಿಡುಕಿನಿಂದ.

"ನೀನೀಗ ನಿಂತಿರುವುದು ಒಂದು ದೇವಸ್ಥಾನ ದಲ್ಲಿಯೇ." ಋಷಿಕುಮಾರ ನಸುನಕ್ಕ. "ಅಲ್ಲಿ ನೋಡು, ಪಶ್ಚಿಮದ ಕಡೆಯಲ್ಲಿ. ಅಲ್ಲಿಯ ನಂದಾದೀಪ ಮಂದ ಮಂದವಾಗುತ್ತಿದೆ. ಆದರೆ ಮೇಲಕ್ಕೆ ನೋಡು. ಇಷ್ಟರಲ್ಲಿಯೆ ಒಂದರ ಹಿಂದೊಂದು ಸಾವಿರಾರು ನೀರಾಜನ ದೀಪಗಳು ಬೆಳಗತೊಡಗುತ್ತಿವೆ."

ವೇಷ ನೋಡಿದರೆ ಆತನೊಬ್ಬ ಸಾಮಾನ್ಯ ಋಷಿಕುಮಾರನಾಗಿ ಕಾಣುತ್ತಿದ್ದ. ಆದರೆ ಆತನ ಮಾತುಗಳು ಋಷಿಗಿಂತ ಹೆಚ್ಚಾಗಿ ಕವಿಯೊಬ್ಬನಿಗೆ ಶೋಭಿಸುವಂಥವಾಗಿದ್ದವು. ಆತನನ್ನು ಉಪಹಾಸ ಮಾಡಬೇಕೆಂದು ಯಯಾತಿ ಕೇಳಿದ:

"ಕವಿರಾಜರೆ, ನಿಮಗೆ ಕುದುರೆ ಸವಾರಿ ಮಾಡುವುದು ಗೊತ್ತೆ?"

"ಇಲ್ಲ."

"ಹಾಗಿದ್ದರೆ ಬೇಟೆಯಾಡುವ ಸಂತೋಷ ನಿಮ ಗೆಂದಿಗೂ ಸಿಗಲಾರದು."

"ಆದರೆ ನಾನೂ ಬೇಟೆಯಾಡುತ್ತೇನೆ."

"ಯಾವುದರ ಬೇಟೆ? ದರ್ಭೆಯದ್ದೆ?" ಎಂದು ಉಪಹಾಸ ತುಂಬಿದ ದನಿಯಲ್ಲಿ ಕೇಳಿದ.

"ನನ್ನ ಶತ್ರುಗಳದ್ದು," ಆತ ಶಾಂತವಾಗಿಯೇ ಉತ್ತರ ನೀಡಿದ.

"ನಾರು ಮಡಿಯನ್ನುಟ್ಟು ಪರ್ಣಕುಟೀರ ಗಳಲ್ಲಿರುವ ಋಷಿಕುಮಾರನಿಗೂ ಶತ್ರುಗಳಿ ರುತ್ತಾರೆಯೆ?"

"ಒಬ್ಬನಲ್ಲ, ನೂರಾರು!"

"ಶತ್ರುಗಳೊಡನೆ ಯುದ್ಧ ಮಾಡುವುದಕ್ಕೆ ನಿನ್ನ ಹತ್ತಿರ ಶಸ್ತ್ರಗಳೆಲ್ಲಿ?"

"ಸೂರ್ಯ ಚಂದ್ರರಿಗಿಂತಲೂ ತೇಜಸ್ವಿಯಾದ ಕುದುರೆ ನನ್ನ ಹತ್ತಿರವಿದೆ."

"ಆದರೆ ಕುದುರೆ ಸವಾರಿ ಮಾಡುವುದು ನಿನಗೆ ಗೊತ್ತಿಲ್ಲ ಅಲ್ಲವೆ?"

"ನಿನ್ನ ಕುದುರೆಯನ್ನು ನಾನು ಸವಾರಿ ಮಾಡ ಲಾರೆ. ಆದರೆ ನನ್ನ ಕುದುರೆಯನ್ನು ನಾನು ಸದಾ ಕಾಲವೂ ಏರಿಕೊಂಡೇ ಇರುತ್ತೇನೆ. ಅತ್ಯಂತ ಚಪ ಲಗತಿಯ ಚೆಲುವಾದ ಪ್ರಾಣಿ ಅದು. ಅದರ ವಿಲಕ್ಷಣವಾದ ವೇಗವನ್ನು ಏನೆಂದು ಹೇಳು ವುದು? ಕ್ಷಣಾರ್ಧದಲ್ಲಿ ಪೃಥ್ವಿಯಿಂದ ಸ್ವರ್ಗಕ್ಕೇ ರಬಲ್ಲದು. ಬೆಳಕು ಎಲ್ಲಿ ತಲಪಲಾರದೋ, ಅಲ್ಲಿಯೂ ಅದು ಪ್ರವೇಶಿಸಬಲ್ಲದು. ಅಷ್ಟು ಮೋಘದ ಕುದುರೆಯನ್ನು ಅದರೆದುರು ನಿವಾಳಿಸಿ ಎಸೆಯಬೇಕು. ಅದರ ಶಕ್ತಿಯಿಂದ ಮನುಷ್ಯ ದೇವನಾಗುತ್ತಾನೆ, ದೇವನಾಗಿದ್ದವ ಮಹಾದೇವ ನಾಗುತ್ತಾನೆ."

ಯಯಾತಿಯನ್ನು ಚುಚ್ಚಿ ಮಾತನಾಡುತ್ತಿದ್ದೇ ನೆಂದು ಆತ ಅಂದುಕೊಂಡಿರಬೇಕು. ಆದರೆ ಆತನ ಮಾತಿನ ಅರ್ಥ ಯಯಾತಿಗೆ ಪೂರ್ತಿ ತಿಳಿಯಲಿಲ್ಲ. ಆದರೆ ಸಿಟ್ಟು ಬಂತು. ಸಂತಾಪದಿಂದ ಕೈಯಲ್ಲಿಯ ಕುದುರೆಯ ಕಡಿವಾಣವನ್ನು ಕುಣಿಸಿದ– ಕುದುರೆ ಮುನ್ನಡೆಯುವಂತೆ. ಆ ಉದ್ಧತ ಋಷಿಕುಮಾರ ನನ್ನು ಕೇಳಿದ ಯಯಾತಿ, "ಎಲ್ಲಿದೆ ನಿನ್ನ ಆ ಕುದುರೆ?"

"ಅದನ್ನು ನಿನಗೆ ತೋರಿಸಲಾಗುವುದಿಲ್ಲ. ಆದರೆ ದಿನದ ಪ್ರಹರಗಳುದ್ದಕ್ಕೂ ಅದು ನನ್ನ ಹತ್ತಿರ ವಿರುತ್ತದೆ. ನನ್ನ ಸೇವೆಗಾಗಿ ಸದಾ ಕಾಲವೂ ಜಾಗೃ ತವಾಗಿರುತ್ತದೆ."

"ಅದಕ್ಕೆ ಏನಾದರೊಂದು ಹೆಸರು ಇರಬೇಕು."

"ಇದೆ."

"ಏನದರ ಹೆಸರು?"

"ಮನಸ್ಸು."

ನಯ ವಿನಯಗಳ ಮನೋವೃತ್ತಿಯಿಂದ ಆಶ್ರಮವನ್ನು ಪ್ರವೇಶಿಸಬೇಕೆಂದು ತಾಯಿ ಯಯಾತಿಗೆ ಒತ್ತಿ ಹೇಳಿದ್ದರಿಂದ ತನ್ನ ಅಲಂಕಾರ ವಸ್ತುಗಳನ್ನು ಕಳಚಿ ತನ್ನ ಅಂಗರಕ್ಷಕರಿಗೆ ಕೊಟ್ಟು ಕುದುರೆಯನ್ನು ಮುಂದೋಡಿಸಿದ್ದ ಸಾಮಾನ್ಯ ಒಬ್ಬ ಸೈನಿಕನಂತೆ ಕಾಣುತ್ತಿದ್ದ ಯಯಾತಿಯನ್ನು ಆ ಋಷಿಕುಮಾರ ಗುರ್ತಿಸಿರದಿದ್ದರೆ ಅದೊಂದು ಆಶ್ಚರ್ಯದ ವಿಷಯವಲ್ಲ. ಯಯಾತಿಯೂ ಆತನನ್ನು ಕಂಡವನಲ್ಲ. ಅಂದ ಮೇಲೆ ಆತನನ್ನು ಗುರ್ತಿಸುವುದು ಹೇಗೆ?

ಎಲ್ಲ ಋಷಿಗಳೂ ಎಲ್ಲ ಚಿಟ್ಟೆಗಳ ಹಾಗೆ ಒಂದೇ ತೆರನಾಗಿ ಕಾಣುತ್ತಾರೆ– ಜಟಾಭಾರ, ಯಜ್ಞೋಪವೀತ, ನಾರು ಮಡಿ, ಭಸ್ಮಲೇಪ ಇತ್ಯಾದಿಗಳಿಂದ. ಋಷಿಗಳಲ್ಲಿ ಯಾವ ವ್ಯತ್ಯಾಸ ವಿದ್ದೀತು?

ಅಂದು ರಾತ್ರಿ ಪ್ರಾರ್ಥನೆಯ ಸಮಯದಲ್ಲಿ ಅಂಗೀರಸನು ಯಯಾತಿ ಹಾಗೂ ಋಷಿಕುಮಾರನನ್ನು ಪರಸ್ಪರ ಪರಿಚಯಿಸಿದಾಗ ಮಾತ್ರ ಯಯಾತಿ ಬೆಚ್ಚುವಂತಾಯಿತು. ಅವನು ಕಚ, ದೇವಗುರು ಬೃಹಸ್ಪತಿಯ ಮಗ. ಶಾಂತಿಯಜ್ಞದ ಪ್ರಮುಖ ಋತ್ವಿಜ. ವಯಸ್ಸಿನಲ್ಲಿ ಹೆಚ್ಚೆಂದರೆ ಯಯಾತಿಗಿಂತ ಒಂದೆರಡು ಮಳೆಗಾಲಗಳನ್ನು ಕಳೆದಿರಬಹುದು.

ಅಂಥ ಚಿಕ್ಕ ವಯಸ್ಸಿನಲ್ಲಿಯೇ ಅಂಗಿರಸನಂಥ ನಿಸ್ಪೃಹ ಋಷಿ ತಾನು ನಡೆಸುತ್ತಿದ್ದ ಶಾಂತಿಯಜ್ಞದ ಪ್ರಮುಖ ಪಟ್ಟವನ್ನು ಕೊಟ್ಟದ್ದನ್ನು ನೋಡಿ ಯಯಾತಿಗೆ ಆಶ್ಚರ್ಯವಾಯಿತು. ಪ್ರೀತಿ ಕುರುಡು. ಮಕ್ಕಳ ವಿಷಯದಲ್ಲಿಯ ತಾಯಿಯ ಪ್ರೀತಿಯೇ ಆಗಲಿ, ಶಿಷ್ಯನ ವಿಷಯದಲ್ಲಿಯ ಗುರುವಿನ ಪ್ರೀತಿಯೇ ಆಗಲಿ ಎರಡೂ ಒಂದೇ ಎನ್ನಬೇಕು.

ಅಂಗಿರಸನು ತಮ್ಮಿಬ್ಬರನ್ನೂ ಪರಿಚಯಿಸಿದಾಗ ಕಚನಾದರೂ ಅಂತೆಯೇ ಚಕಿತನಾಗಿದ್ದ. ಅಂದು ಸಂಜೆಯೇ ಅವರಿಬ್ಬರಲ್ಲಿ ಮಾತಿನ ಚಕಮಕಿ ನಡೆದುಹೋಗಿತ್ತು. ಅದನ್ನು ನೆನೆದುಕೊಂಡೇ ಆತ ಮುಂದೆ ಬಂದು ನಮಸ್ಕರಿಸಿ ಹೇಳಿದ: "ಯುವರಾಜರೆ, ಇಂದು ಸಾಯಂಕಾಲ ನಾನು



ತಮ್ಮನ್ನು ಕುರಿತು ಒಂದಿಷ್ಟು ತಿರಸ್ಕಾರದಿಂದ ಮಾತಾಡಿದೆ ಎಂದು ಕಾಣುತ್ತದೆ. ಸತ್ಯವನ್ನು ಹೇಳಬೇಕು ನಿಜ. ಆದರೆ ಕೇಳುವವನಿಗೆ ಅದನ್ನು ಪ್ರಿಯವಾಗಿರುವ ರೀತಿಯಲ್ಲಿ ಹೇಳಬೇಕು ಎಂದು ಗುರುಗಳು ಹೇಳಿದ ಪಾಠವನ್ನು ಇನ್ನೂ ಪೂರ್ತಿಯಾಗಿ ಅರಗಿಸಿಕೊಳ್ಳಲಾಗಿಲ್ಲ. ನನ್ನ ಮಾತಿಗಾಗಿ ತಾವು ಕೋಪಿಸಿಕೊಳ್ಳಬಾರದು. ಮನುಷ್ಯನ ಮನಸ್ಸು ಒಂದು ಕುದುರೆ ಇದ್ದ ಹಾಗೆ. ಅದು ಯಾವಾಗ ಯಾವುದರ ಮೇಲೆ ನೆಗೆದೀತು ಎಂದು ಹೇಳಲಾಗುವುದಿಲ್ಲ. ದಯವಿಟ್ಟು ನನ್ನನ್ನು ಕ್ಷಮಿಸಬೇಕು."

ಯಯಾತಿ ಆತನಿಗೆ ತಿರುಗಿ ವಂದಿಸಿದ. 'ನೀನೇ ನನ್ನನ್ನು ಕ್ಷಮಿಸಬೇಕು.' ಎಂಬ ಮಾತು ನಾಲಗೆಯ ತುದಿಯವರೆಗೂ ಬಂದರೂ ಹೊರ ಬೀಳಲಿಲ್ಲ. 'ಹಸ್ತಿನಾಪುರದ ಯುವರಾಜ ಒಬ್ಬ ಋಷಿಕುಮಾರನ ಕ್ಷಮೆ ಬೇಡುವುದೇ?' ಅದಾಗದು.

ತನ್ನಷ್ಟಕ್ಕೆಯೆ ಏನನ್ನೋ ಹೇಳುಕೊಳ್ಳುತ್ತಾ ಕಚ ಅಗ್ನಿಶಾಲೆಯಿಂದ ಹೊರಕ್ಕೆ ಬಂದ. ಆತನ ಬೆನ್ನ ಹಿಂದೆಯೇ ಯಯಾತಿ ಬರುತ್ತಿದ್ದ. ಕಚ ಹೇಳುತ್ತಿದ್ದ ಮಾತುಗಳು ಸ್ಪಷ್ಟವಾಗಿ ಕೇಳಿಬರುತ್ತಿದ್ದವು. "ಆತ್ಮಾವಾ ಅತಿ ಮಂತವ್ಯಃ ಶ್ರೋತವ್ಯಃ ಆತ್ಮಾವಾ ಅತಿ ನಿದಿಧ್ಯಾಸಿತವ್ಯಃ" (ಎಲೆ ಮಾನವಾ, ಆತ್ಮದ ಕರೆಯನ್ನು ಕೇಳು; ಆತ್ಮಧ್ಯಾನವನ್ನೇ ಧ್ಯೇಯವನ್ನಾಗಿ ತಿಳಿದುಕೊ, ಅದರದೇ ನಿದಿಧ್ಯಾನ ಮಾಡು.)

ಕಚ ಯಯಾತಿ ಇಬ್ಬರಿಗೂ ಆಶ್ರಮದ ತೀರ ಕೊನೆಯಂಚಿನಲ್ಲಿ ಬೇರೆ ಬೇರೆಯಾದ ಪರ್ಣಕುಟೀರಗಳನ್ನು ಕೊಡಲಾಗಿತ್ತು. ಸಣ್ಣ ವಯಸ್ಸಿನ ಅಕ್ಕತಂಗಿಯರು ಒಬ್ಬರನ್ನೊಬ್ಬರು ಅಮುಕಿಕೊಂಡು ಒಂದೇ ಹೊದಿಕೆಯಲ್ಲಿ ಮಲಗಿ ನಿದ್ರೆ ಹೋದ ಹಾಗೆ ಕಪ್ಪು ಹಸಿರು ವನರಾಜಿಯ ಮಧ್ಯದಲ್ಲಿ ಆ ಎರಡು ಕುಟೀರಗಳು ಕಾಣುತ್ತಿದ್ದವು. ಯಯಾತಿಯ ಕಡೆ ನೋಡಿ ನಸುನಗುತ್ತಾ ಕಚ ಹೇಳಿದ, "ಯುವರಾಜ, ನಾವಿಬ್ಬರೂ ನೆರೆಹೊರೆಯವರಾಗಿಬಿಟ್ಟೆವು."

"ನೆರೆಹೊರೆಯವರಿಗಿಂತ ಶತ್ರುಗಳು ಬೇರೆ ಇಲ್ಲ. ಎಂಬ ಉಕ್ತಿಯನ್ನು ಕೇಳಿಲ್ಲವೆ?" ಎಂದು ಯಯಾತಿ ವಿನೋದದಿಂದ ಕೇಳಿದ.

"ಲೋಕಪ್ರಿಯವಾದ ಎಲ್ಲ ಉಕ್ತಿಗಳಲ್ಲಿರುವುದು ಅರ್ಧಸತ್ಯ ಮಾತ್ರ," ಎಂದು ಕಚ ನಕ್ಕು ನುಡಿದ.

ಯಯಾತಿ ತನ್ನ ಕುಟೀರಕ್ಕೆ ಬಂದು ಮಲಗಿದ. ಮೆತ್ತೆಗಳ ಮೇಲೆ ಮಲಗಿ ರೂಢಿಯಾದ ಶರೀರಕ್ಕೆ ನಿದ್ರೆ ಬರಲಿಲ್ಲ. ಮೈ ನೋಯುತ್ತಿತ್ತು. ಈ ಶಾಂತಿಯಜ್ಞ ಮುಗಿಯುವ ವರೆಗೆ ಈ ರುಕ್ಷ ದರಿದ್ರವಾದ ವಾತಾವರಣದಲ್ಲಿ ತಾನು ಇರಬೇಕೆಂಬ ಯೋಚನೆಯಿಂದ ಯಯಾತಿಯ ಮೈ ಮೇಲೆ ಮುಳ್ಳು ನಿಲ್ಲುವಂತಾಯಿತು. ಆಚೆಯ ಪರ್ಣಕುಟಿಯಿಂದ ಮಂದ ಮಧುರವಾದ ದನಿಯೊಂದು ತೇಲಿಬರುತ್ತಿತ್ತು. ದುಂಬಿಗಳ ಗುಂಜಾರವದಂತೆ. ಕಚ ಮಲಗುವ ಮೊದಲು ಮಾಡುತ್ತಿದ್ದ ನಿತ್ಯ ಪಠಣ ಅದಾಗಿರಬೇಕು. ಯಯಾತಿಗೆ ಅಸ್ಪಷ್ಟವಾಗಿ ಕೇಳಿಬರುತ್ತಿದ್ದ ಆ ಗಾನ ಜೋಗುಳ ಹಾಡಿದಂತಾಗಿ ನಿದ್ರೆಯಾವರಿಸಿತು. ಆ ನಿದ್ರೆಯಲ್ಲಿ ಯಯಾತಿ ತನ್ನ ಬಾಲ್ಯದ ಗೆಳತಿ ಅಲಕೆಯನ್ನು ಕಂಡ. ಅವಳು ಏನನ್ನೋ ಗುಣುಗುಣಿಸುತ್ತಿದ್ದಳು. ಅದು ಕಚನು ನುಡಿದುದೆ! "ಆತ್ಮಾವಾ ಅತಿ ಮಂತವ್ಯಃ ಶ್ರೋತವ್ಯಃ ನಿದಿಧ್ಯಾಸಿತವ್ಯಃ" 'ಇದೇನು ನೀನು ಈಗ ಗಾರ್ಗಿ ಮೈತ್ರೇಯೀ ಆಗಿ ಬಿಟ್ಟಿರುವೆಯಲ್ಲ' ಎನ್ನುತ್ತಾ ಯಯಾತಿ ಆಕೆಯ ಹೆಗಲ ಮೇಲೆ ಕೈಯಿಟ್ಟ. ಆಕೆ ಅದೃಶ್ಯಳಾದಳು.

ಜಪಮಾಲೆಯಲ್ಲಿನ ರುದ್ರಾಕ್ಷಿಗಳು ಹಿಂದೆ ಹಿಂದೆ ಸರಿಯುವಂತೆ ದಿನಗಳು ಉರುಳತೊಡಗಿದವು.

ಶಾಂತಿಯಜ್ಞದ ಮುಖ್ಯ ಋತ್ವಿಜನೆಂದು ಕಚ ಬೆಳಗಿನಿಂದ ಸಂಜೆಯವರೆಗ ಬರೀ ನೀರನ್ನು ಸೇವಿಸಿ ಇರುತ್ತಿದ್ದ. ಯಜ್ಞದ ಮುಖ್ಯ ಸಂರಕ್ಷಕನೆಂದು ಯಯಾತಿಯು ಆ ವ್ರತವನ್ನು ಪಾಲಿಸಬೇಕಾಗಿತ್ತು. ಅಂಗೀರಸನು ಯಯಾತಿಯ ಅಂಗರಕ್ಷರಲ್ಲಿ ಆರು ಜನರನ್ನು ಆಯ್ದು ಅವರೊಂದಿಗೆ—ಯುವರಾಜನನ್ನು ಏಳನೆಯವನನ್ನಾಗಿ ಮಾಡಿದ್ದನು. ವಾರದಲ್ಲಿನ ಆ ಒಂದು ದಿನ ಸೂರ್ಯೋದಯದಿಂದ ಸೂರ್ಯಾಸ್ತದವರೆಗೆ ಬರೀ ನೀರನ್ನು ಸೇವಿಸಿ ಇರುವುದು ಯಯಾತಿಗೆ ಕಷ್ಟವೆನಿಸುತ್ತಿತ್ತು. ಆಗೆಲ್ಲ ಅವನಿಗೆ ಕಚನನ್ನು ನೋಡಿ ಆಶ

ರ್ಯವೆನಿಸುತ್ತಿತ್ತು. ಆತ ವಾರದುದ್ದಕ್ಕೂ ಉಪವಾಸವನ್ನು ಸಹಜವಾಗಿ ನಡೆಸಿಕೊಂಡು ಹೋಗುತ್ತಿದ್ದ. ಆ ಶಕ್ತಿಯನ್ನು ಆತ ಸಂಪಾದಿಸಿಕೊಂಡಿದ್ದು ಹೇಗೆ? ಎಷ್ಟು ಯೋಚನೆ ಮಾಡಿದರೂ ಆ ಪ್ರಶ್ನೆಗೆ ಉತ್ತರ ಸಿಕ್ಕಲಿಲ್ಲ. ಕೊನೆಗೆ ಯಯಾತಿ ತಾನೇ ಸಮಾಧಾನ ಹೇಳಿಕೊಂಡ. 'ನನ್ನದು ವೀರ ಜೀವನ. ವೀರನ ಪರಾಕ್ರಮಕ್ಕೆ ದೇಹವೇ ಮುಖ್ಯವಾದ ಆಧಾರ. ಅದನ್ನು ಪುಷ್ಟವಾಗಿಸಿ ಸಂತುಷ್ಟವಾಗಿಸಿರುವುದನ್ನು ಚಿಕ್ಕಂದಿನಿಂದ ಕಲಿತುಕೊಂಡು ಬಿಟ್ಟಿದ್ದೇನೆ. ಹಾಗೆಂದೇ ಹಸಿವನ್ನು ಗೆಲ್ಲುವುದು ಸಾಧ್ಯವಾಗುತ್ತಿಲ್ಲ. ಕಚನ ಕಥೆ ಬೇರೆ. ಋಷಿಯ ತೋಳುಗಳು ಒಂದು ಒಣಗಿದ ಮರದಂತಿದ್ದರೂ ಆದೀತು. ವೀರನ ತೋಳುಗಳು ಮಾತ್ರ ಉಕ್ಕಿನವಾಗಿರಬೇಕಾಗುತ್ತದೆ. ಕಚನಂತೆ ತನಗೆ ಹಸಿವನ್ನು ಗೆಲ್ಲುವುದು ಸಾಧ್ಯವಾಗುತ್ತಿರಲಿಲ್ಲವೆನ್ನುವುದು ನಿಜ. ಆದರೆ ಅದರಲ್ಲಿ ಕಡಿಮೆತನವೇನು ಬಂತು? ಅಶ್ವಮೇಧದ ಕುದುರೆಯನ್ನು ಹಿಡಿದುಕೊಂಡು ಆರ್ಯಾವರ್ತದುದ್ದಕ್ಕೂ ಅಲೆಯುವುದು ಕಚನಿಗೆ ಸಾಧ್ಯವೆ? ತಪಸ್ಸಿನಿಂದಾಗಿ ಆತನ ದೇಹ ತೇಜಃಪುಂಜವಾಗಿ ಕಾಣುತ್ತದೆ; ತಾರುಣ್ಯದಿಂದಾಗಿ ಚೆಲುವಾಗಿಯೂ ಕಾಣುತ್ತದೆ. ಆದರೆ ಪ್ರಾಣ ಹೋದರೂ ಆತನಿಂದ ಬಿಲ್ಲಿಗೆ ಬಾಣವನ್ನೇರಿಸುವುದು ಆಗುವುದಿಲ್ಲ.'

ಇಷ್ಟೆಲ್ಲ ಅಂದುಕೊಂಡರೂ ಕಚ ಯಯಾತಿಗಿಂತ ಭಿನ್ನವಾಗಿದ್ದ ಎಂದು ಕೇವಲ ಉಪವಾಸದ ದಿನದಂದು ಮಾತ್ರ ಕಾಣುತ್ತಿರಲಿಲ್ಲ. ಆ ವ್ಯತ್ಯಾಸ ಹಲವಾರು ಬಗೆಗಳಲ್ಲಿ ಕಾಣಿಸಿಕೊಳ್ಳುತ್ತಿತ್ತು.

ಯಜ್ಞದ ಮುಖ್ಯ ಭಾಗ ನಿರ್ವಿಘ್ನವಾಗಿ ನೆರವೇರಿದಾಗ ಆಂಗೀರಸನು ಆಶ್ರಮದಲ್ಲಿ ಮೂರು ದಿನಗಳ ಉತ್ಸವವೊಂದನ್ನು ನಡೆಸಿದನು. ಅದರಲ್ಲಿ ಕಚ ಒಬ್ಬ ಚಿಕ್ಕ ಮಗುವಿನಂತೆ ಭಾಗವಹಿಸಿದ. ಸಂಗೀತ ಆತನಿಗೆ ಚೆನ್ನಾಗಿ ಗೊತ್ತು. ಕಚ ಈಜುವುದನ್ನು ನೋಡಿದರೆ ಕಳೆದ ಜನ್ಮದಲ್ಲಿ ಆತ ಒಂದು ಮೀನಾಗಿರಬಹುದೆ ಎಂದೆನಿಸುವುದು. ಉತ್ಸವದಲ್ಲಿ ಒಂದು ಸಲ ಹಾಡು ನಡೆದಾಗ ಒಂದು ಮಗು ಅಳತೊಡಗಿತು. ಅದರ ತಾಯಿಗೆ ಅದನ್ನು ಸುಮ್ಮನಾಗಿಸಲಾಗಲಿಲ್ಲ. ಕಚ ಅದನ್ನು ತಾಯಿಯ ತೊಡೆಯಿಂದ ಎತ್ತಿಕೊಂಡ. ಹತ್ತಿರದಲ್ಲಿ ನೆಲದ ಮೇಲೆ ಹರವಿ ಬಿದ್ದಿದ್ದ ನೂರಾರು ನೇರಳೆ ಹಣ್ಣುಗಳಿಂದ ಒಂದೆರಡನ್ನು ಬಾಯಿಗೆ ಹಾಕಿಕೊಂಡು ಅದರಿಂದ ನೇರಳೆಬಣ್ಣದ್ದಾಗಿದ್ದ ತನ್ನ ನಾಲಗೆಯನ್ನು ಮಗುವಿಗೆ ತೋರಿಸಿದ. ಹಟಹಿಡಿದು ಅಳುತ್ತಿದ್ದ ಮಗು ಅದನ್ನು ನೋಡಿ ಇದ್ದಕ್ಕಿದ್ದ ಹಾಗೆ ನಗತೊಡಗಿತು. ಕೋತಿಯಂತೆ ಮುಖ ಮಾಡಿ ನಾಲಗೆಯನ್ನು ಹೊರ ಚಾಚುವ ಹುಡುಗಾಟದ ಕಚ ಮತ್ತು ಶಾಂತಿಯಜ್ಞದ ಮಂತ್ರಗಳನ್ನು ಅಸ್ಖಲಿತವಾಗಿ ಹೇಳಬಲ್ಲ ಪಂಡಿತನಾಗಿದ್ದ ಕಚ ಇಬ್ಬರೂ ಒಂದೇ ಎನ್ನುವುದನ್ನು ಕಣ್ಣಾರೆ ಕಂಡ ಹೊರತು ನಂಬುವುದು ಕಷ್ಟವಾಗುತ್ತಿತ್ತು.

ಕಚನ ರೂಪಗಳು ಎರಡು ಮಾತ್ರವೆ? ಆತ ಬಹುರೂಪಿಯಾಗಿದ್ದ. ಯಯಾತಿಗಂತೂ ಆತನ ಒಂದೊಂದು ರೂಪವನ್ನು ಕಂಡಾಗಲೂ ಗೊಂದಲವುಂಟಾಗುತ್ತಿತ್ತು. ರಾತ್ರಿ ಫಲಹಾರದ ವೇಳೆ



"ಏನೂಂದ್ರೆ ಬರೋವಾಗ ೨ ಕೇ ಜಿ. ಗಂಗಾವತಿ ಸಕ್ರೆ ತೊಂಡ್ಬನ್ನಿ. ಐರನ್ ಕಡಿಮೆ ಇದೆ ಅಂತದ್ರು ಡಾಕ್ಟ್ರು. ಟಾನಿಕ್ ತೊಗಳ್ಳೋದು ತಪ್ಪುತ್ತೆ."

ಯಲ್ಲಿ ಕಚ ಯಯಾತಿ ಇಬ್ಬರೂ ಮಾತನಾಡುತ್ತಾ ಕುಳಿತಿರುತ್ತಿದ್ದರು. ಒಂದು ಸಲ ನೋಡುವುದಕ್ಕೆ ಚೆಲುವಾಗಿದ್ದ ರುಚಿಯಾಗಿದ್ದ ಒಂದು ಹಣ್ಣಿನಲ್ಲಿ ಹುಳುವೊಂದು ಕಾಣಿಸಿಕೊಂಡಿತು. ಕಚನ ನಗುಮುಖ ಗಂಭೀರವಾಯಿತು. ಜಿಂಕೆಯಂತೆ ದೊಡ್ಡದಾಗಿದ್ದು ಸಿಂಹದಂತೆ ನಿರ್ಭೀತವಾಗಿದ್ದ ತನ್ನ ಕಣ್ಣುಗಳನ್ನು ಯಯಾತಿಯತ್ತ ತಿರುಗಿಸಿ ಕಚ ನುಡಿದ–"ಯುವರಾಜ, ಬದುಕು ಎಂದರೆ ಹೀಗೆ ಸುಂದರವಾಗಿದೆ. ಮಧುರವಾಗಿದೆ. ಆದರೆ ಅದಕ್ಕೆ ಯಾವಾಗ ಎಲ್ಲಿಂದ ಹುಳು ಹಿಡಿದುಕೊಂಡೀತು ಹೇಳಲಾಗುವುದಿಲ್ಲ." ಎನ್ನುತ್ತಾ ನಿಲ್ಲಿಸಿ ಯೋಚನೆಯಲ್ಲಿ ತೊಡಗಿದ್ದ ಹಾಗೆ ಯಾವುದೋ ಶ್ಲೋಕದ ಚರಣವೊಂದನ್ನು ಉಚ್ಚರಿಸಿದ. 'ಈ ಲೋಕದಲ್ಲಿ ಸಿಹಿಯಾದ ಹಣ್ಣುಗಳಿಗೆಯೇ ಹುಳು ಹಿಡಿದುಕೊಳ್ಳುವ ಸಂಭವ ಹೆಚ್ಚು' ಎಂದು ಅದರ ಭಾವವಾಗಿತ್ತು. ಆ ಚರಣವನ್ನು ಹೇಳಿ ಆತ ಗಟ್ಟಿಯಾಗಿ ನಕ್ಕು, "ಯುವರಾಜ, ಶ್ಲೋಕದ ಒಂದು ರಣ ಹೇಗೋ ಬಂತು. ಎರಡನೆಯದು ಹೊಳೆಯುತ್ತಿಲ್ಲ. ವಿಶೇಷವಾದ ಗುಣಗಳಿದ್ದ ಮನುಷ್ಯ, ತನ್ನ ಮನೋವೃತ್ತಿಯಲ್ಲಿ ಉತ್ಕಟತೆಯನ್ನು ಸಾಧಿಸಬಲ್ಲ ಮನುಷ್ಯ, ಇಂಥ ಸಿಹಿಯಾದ ಹಣ್ಣುಗಳಿಂದ ಪಾಠ ಕಲಿಯಬೇಕು. ತನ್ನನ್ನು ತಾನು ಕಾಪಾಡಿಕೊಳ್ಳುವುದನ್ನು ಕಲಿಯಬೇಕು ಎಂದು ನನಗೆ ಹೇಳಬೇಕಾಗಿದೆ. ಆದರೆ ಹೇಳಬೇಕೆಂದಿದ್ದು ಛಂದೋರೂಪವನ್ನು ತಾಳಿ ಮನಸ್ಸಿನೊಳಗಿಂದ ಉಕ್ಕಿ ಬರುತ್ತಿಲ್ಲ," ಎಂದ.

ಕಚ ಕವಿಯೂ ಆಗಿದ್ದನೆಂದು ಅಂದು ರಾತ್ರಿ ಯಯಾತಿಗೆ ತಿಳಿಯಿತು. ಏನಾದರೊಂದು ಕಚನ ಮನಸ್ಸಿನಲ್ಲಿ ನಟ್ಟಾಗ ಒಂದು ಶ್ಲೋಕಾರ್ಧವನ್ನು ಆತ ಹೇಳುತ್ತಿದ್ದ. ಅಂಥವುಗಳನ್ನೆಲ್ಲ ಬರದಿಟ್ಟುಕೊಳ್ಳಬೇಕಾಗಿತ್ತು ಎಂದು ಯಯಾತಿಗೆ ಬಹಳ ದಿನಗಳ ಮೇಲೆ ಅನ್ನಿಸಿತು. ಅವುಗಳನ್ನು ನೆನಪು ಮಾಡಿಕೊಳ್ಳಲು ಪ್ರಯತ್ನ ಪಟ್ಟ. ಕೇವಲ ಒಂದೇ ಒಂದು ಚರಣದ ಮೂರು ಪದಗಳು ಮಾತ್ರ ಮನಸ್ಸಿನಲ್ಲಿ ಉಳಿದಿವೆ. "ಜಗದ್ರುಮಸ್ಯಹೇ ಪರ್ಣ" ಎನ್ನುವುವೇ ಆ ಮೂರು ಪದಗಳು. ಆ ಶ್ಲೋಕ ಕಚನಿಗೆ ಹೊಳೆದಿದ್ದ [illegible] ವೃತ್ತ ಯಯಾತಿಗೆ ಕಣ್ಣು ಮುಂದೆ ಇವೆ. ಬೆಳದಿಂಗಳ ರಾತ್ರಿ ಅವರಿಬ್ಬರೂ ಅಂಗಳದಲ್ಲಿ ಹಜ್ಜೆ ಹಾಕುತ್ತಿದ್ದರು. ಗಾಳಿ ಸ್ತಬ್ಧವಾಗಿತ್ತು ಒಂದೆಲೆಯೂ ಅಲುಗಾಡುತ್ತಿರಲಿಲ್ಲ. ಇದ್ದಕ್ಕಿದ್ದಂತೆ ಎಲ್ಲಿಂದಲೋ ಒಂದು ಗಾಳಿಯ ಜುಳುಕು ಹರಿದು ಬಂತು. ಅದರ ಜೊತೆಯಲ್ಲಿಯೇ ಅಂಗಳದ ತುದಿಯಲ್ಲಿದ್ದ ಕೇಸರ ವೃಕ್ಷದ ಒಂದು ಎಲೆ ಉದುರಿತು. ಉದುರಿದ್ದು ಒಂದೇ ಒಂದು ಎಲೆ. ಅದು ಒಂದು ಚಿಕ್ಕದು ಕಚನ [illegible] ಮೇಲೆ. ಕಾಲ ಕೆಳಗೆ ಬಿದ್ದು ತಾನು ಅದನ್ನು ತುಳಿಯುವಂತಾಗಬಾರದೆಂದು ಆತ ಎಷ್ಟು ಪ್ರಯತ್ನಿಸಿದರೂ ಎಲೆ ಆತನ ಕೈಗೆ ಸಿಕ್ಕಲಿಲ್ಲ ಕೊನೆಗೊಮ್ಮೆ ನೆಲಕ್ಕೆ ಬಿದ್ದ ಅದನ್ನೆತ್ತಿಕೊಂಡ ಎಷ್ಟೋ ಹೊತ್ತು ಮಂತ್ರಮುಗ್ಧನಂತೆ ನೋಡುತ್ತಿದ್ದ ಹಾಗೆ 'ಜಗದ್ ದ್ರುಮಸ್ಯಹೇ ಪರ್ಣ' ಎಂದು ಪ್ರಾರಂಭವಾಗುವ ಒಂದು ಶ್ಲೋಕ ಬಾಯಿಯಿಂದ ಹೊರ ಬಂದಿತು. ಅದರ ಭಾವಾರ್ಥ, "ಎಲೆ ಮಾಟಾದ ಎಲೆಯೆ, ನಿನಗೆ ಬಂದ ಅಕಾಲ ಮೃತ್ಯುವಿಗಾಗಿ ನೀನು ಪರಿತಪಿಸಬೇಕಾಗಿಲ್ಲ. ಯಥಾಶಕ್ತಿಯಾಗಿ ಆ ವೃಕ್ಷಕ್ಕೆ ಸೌಂದರ್ಯವನ್ನು ತಂದುಕೊಟ್ಟೆ. ನಿನಗೆ ಸಾಧ್ಯವಿದ್ದ ಮಟ್ಟಿಗೆ ನನ್ನ [illegible] ಅನೇಕರಿಗೆ ನೆರಳನ್ನು ಒದಗಿಸಿದೆ. ನಿನ್ನ ಜೀವನ [illegible] ಸಫಲವಾಗಿದೆ. ಸ್ವರ್ಗದಲ್ಲಿಯ ನಿನ್ನ ಸ್ಥಾ[illegible] ಭದ್ರವಾಗಿದೆ."

*

ಒಂದು ಸಲ ಆಶ್ರಮದಲ್ಲಿಯ ಏಳೆಯ ಋಷಿ[illegible] ಕನ್ನಿಕೆಯೊಬ್ಬಳು ಕಚ, ಯಯಾತಿ ಇಬ್ಬರನ್ನೂ[illegible] ಕ್ಕೆ ಹಿಡಿದು ತನ್ನ ಅಂಗಳಕ್ಕೆ ಕರೆದುಕೊಂಡು ಹೋದಳು. ಆಕೆಯ ನೆಟ್ಟು ಬೆಳೆಸಿದ್ದ [illegible] ಬಳ್ಳಿಯ ಮೇಲೆ ಮೊದಲ ಹೂವು ಕಾಣಿ[illegible] ಕೊಂಡಿತ್ತು. ಅದನ್ನು ಅವರಿಬ್ಬರಿಗೆ ತೋರಿ[illegible] ಬೇಕಾಗಿತ್ತು. ಅದರ ವಿಷಯದಲ್ಲಿ ಪ್ರಶಂಸೆ[illegible] [illegible] ಗಿದ ಹಾಗೆ ಕಂಡಿತು. ತಾನು ಉಪಚರಿಸಬೇಕಾ[illegible] ಅತಿಥಿಗಳು ಇಬ್ಬರು. ಬಳ್ಳಿಯಲ್ಲಿ ಹೂವು ಬಂದಿ[illegible] ಒಂದೇ. ಅದನ್ನು ಕೊಡುವುದು ಯಾರಿ[illegible] ಎನ್ನುವುದು ಆಕೆಗೆ ತಿಳಿಯದಾಯಿತು. ಯೋ[illegible] ನಾಮಗ್ನಳಾಗಿ ಆ ಹೂವನ್ನೆ ದಿಟ್ಟಿಸುತ್ತ[illegible]

ನಿಂತಿದ್ದಳು. ಆಕೆಯ ಕಷ್ಟವನ್ನು ಮನಗಂಡು ಕಚ ಹೇಳಿದ, "ಮಗು, ಆ ಹೂವನ್ನು ಯುವ ರಾಜರಿಗೆ ಕೊಡು," ಎಂದು. ಯಯಾತಿ ಕೂಡಲೆ ಹೇಳಿದ. "ಬೇಡ, ಅದನ್ನು ಅವರಿಗೆಯೆ ಕೊಡು ಅವರು ದೊಡ್ಡ ಋಷಿಗಳು." ಮಗು ಅರ್ಧ ಅರಳಿದ, ಆ ಹೂವನ್ನು ಕುಯ್ಯುವವಳಿದ್ದಳು. ಅಷ್ಟರಲ್ಲಿ ಕಚ ಆಕೆಯ ಕೈಯನ್ನೆತ್ತಿಕೊಂಡು, "ಮಗು, ನೀನು ನನಗೆ ಕೊಡಬೇಕೆಂದ ಹೂವು ನನಗೆ ಬಂದಂತಾಯಿತು. ಅದು ಅಲ್ಲಿಯೇ ಇರಲಿ. ಅಲ್ಲಿಯೇ ಅರಳಲಿ. ಪ್ರತಿ ದಿನ ಬೆಳಗಿನಲ್ಲಿ ನಾನು ಇಲ್ಲಿಗೆ ಬಂದು ಅದರೊಡನೆ ಮಾತನಾಡಿ ಹೋಗುತ್ತೇನೆ. ಅಂದರೆ ಆಯಿತೆ?" ಎಂದ.

ಕಚನ ಮಾತುಗಳಿಂದ ಮಗುವಿಗೆ ಸಮಾಧಾನವಾಯಿತು. ಯಯಾತಿ ಮಾತ್ರ ಸಮಾಧಾನ ಹೊಂದಿದಂತೆ ಕಾಣಲಿಲ್ಲ. ಅಂದು ರಾತ್ರಿ ಕಚನೊಡನೆ ಆ ಪ್ರಸ್ತಾಪವೆತ್ತಿದ, "ಮೊಗ್ಗು ನಾಳೆ ನಾಡಿದ್ದರಲ್ಲಿ ಪೂರ್ತಿಯಾಗಿ ಅರಳುತ್ತದೆ. ನಾಲ್ಕಾರು ದಿನ ನಗುತ್ತಾ ಬಳ್ಳಿಯ ಮೇಲೆ ನಲಿಯುತ್ತದೆ. ಆ ಮೇಲೆ ಬಾಡಿ ತಾನಾಗಿ ಬಿದ್ದು ಹೋಗುತ್ತದೆ. ಇದನ್ನೆಲ್ಲ ನೋಡುವುದರಲ್ಲಿ ಎಂಥ ಸುಖವಿದ್ದೀತು. ಹೂವುಗಳಿರುವುದು ದೂರದಿಂದ ನೋಡುವುದಕ್ಕಾಗಿಯೆ? ಅವುಗಳ ಆನಂದವಿರುವುದು ಅವನ್ನು ಕುಯ್ಯುವುದರಲ್ಲಿ, ಮೂಸುವುದರಲ್ಲಿ, ಮಾಲೆಗಳನ್ನು ಮಾಡುವುದರಲ್ಲಿ, ಜಡೆಗಳಲ್ಲಿ ಮುಡಿಯುವುದರಲ್ಲಿ, ಅವನ್ನು ಹಾಸಿಗೆಯ ಮೇಲೆ ಹರವಿಕೊಂಡಿರುವುದರಲ್ಲಿ." ಎಂದ. ನಸುನಕ್ಕು ಕಚ ಹೇಳಿದ– "ಅದರಲ್ಲಿ ಆನಂದವಿರುತ್ತದೆ ನಿಜ ಆದರೆ ಅದು ಕ್ಷಣಿಕವಾದದ್ದು. ಕೇವಲ ಉಪಭೋಗದ್ದು!"

"ಉಪಭೋಗ ಪಾಪವೆ?"

"ಅಲ್ಲ. ಧರ್ಮವನ್ನು ಮೀರಿದ ಉಪಭೋಗ ಪಾಪವಲ್ಲ. ಆದರೆ ಉಪಭೋಗಕ್ಕಿಂತಲೂ ಹೆಚ್ಚಿನ

ದಾದ ಒಂದು ಆನಂದವಿದೆ, ಈ ಲೋಕದಲ್ಲಿ."

"ಅದು ಯಾವುದು ?"

"ತ್ಯಾಗದ್ದು!"

ಯಯಾತಿಗೆ ಎಳೆತನದಲ್ಲಿಯೇ ಸಂಸಾರವನ್ನು ಬಿಟ್ಟು ಹೊರಟುಹೋಗಿದ್ದ ಸಹೋದರ ಯತಿಯ ನೆನಪು ಬಂದಿತು. ತಾನೊಮ್ಮೆ ಆನೆಯ ಬೇಟೆಯಾಡ ಹೊರಟದ್ದು, ಯತಿಯ ವಿಚಿತ್ರವಾದ ಆ ಗುಹೆ, ಅದರೊಳಗಿನ ಆತನ ಮುಳ್ಳು ಬಳ್ಳಿಯ ಹಾಸಿಗೆ ಎಲ್ಲವೂ ನೆನಪಿಗೆ ಬಂದಿತು. ಕಚನನ್ನು ಯಯಾತಿ ಪ್ರಶ್ನಿಸಿದ, "ಈ ಲೋಕದಲ್ಲಿ ಸಂನ್ಯಾಸವೊಂದೇ ಸುಖದ ಮಾರ್ಗವೆ ?"

ಕಚ ನಕ್ಕು ಸುಮ್ಮನಾದ. ಯಯಾತಿ ಮತ್ತೆ ಪ್ರಶ್ನಿಸಿದ. "ನಾಳೆ ಅರಸನಾಗುವುದನ್ನು ಬಿಟ್ಟು ಸಂನ್ಯಾಸಿಯಾಗುವುದು ಯೋಗ್ಯವಾದೀತೆ ?"

ಕಚ ಗಂಭೀರವಾಗಿ ಆವೇಶದಿಂದ ಉದ್ಗರಿಸಿದ. ಎಂದಿಗೂ ಇಲ್ಲ. ಅರಸನಾಗಿ ನ್ಯಾಯವಾಗಿ ಪ್ರಜೆಗಳ ಪಾಲನೆ ಮಾಡುವುದು, ಅವರ ಸುಖಕ್ಕಾಗಿ ಸದಾ ಶ್ರಮಿಸುವುದು, ನಿಮ್ಮ ಧರ್ಮ ರಾಜಧರ್ಮವಾ-ದರೂ ಸಂನ್ಯಾಸ ಧರ್ಮದಷ್ಟೇ ಶ್ರೇಷ್ಠವಾದುದು

ಯಯಾತಿ ಕೂಡಲೇ ಮತ್ತೊಂದು ಪ್ರಶ್ನೆ ಹಾಕಿದ- "ಸಿಂಹಾಸನವನ್ನೇರಿ ಸಂನ್ಯಾಸಿಯಂತೆ ನಡೆದುಕೊಳ್ಳುವುದು ಸಾಧ್ಯವಿದೆಯೆ?"

ಕಚನ ಹಣೆಯ ಮೇಲೆ ಒಂದು ಸೂಕ್ಷ್ಮವಾದ ಗೆರೆ ಕಾಣಿಸಿಕೊಂಡಿತ. ಆತ ನಿಧಾನವಾಗಿ, ಹೇಳಿದ: "ಯುವರಾಜ, ಸಂಸಾರದಲ್ಲಿ ತೊಡಗಿರುವುದೇ ಮನುಷ್ಯನ ಸಹಜ ಪ್ರವೃತ್ತಿ, ಸ್ವಾಭಾವಿಕವಾಗಿಯೇ ಆತನ ಬದುಕಿನಲ್ಲಿ ಎಲ್ಲ ಬಗೆಯ ಉಪಭೋಗಗಳಿಗೆ ಸ್ಥಾನವಿದೆ. ಉಪಭೋಗವಿರಬಾರದು ಎಂದು ಈಶ್ವರನ ಅಪೇಕ್ಷೆಯಾಗಿದ್ದರೆ ಆತ ಮನುಷ್ಯನಿಗೆ ದೇಹವನ್ನೇ ದಯಪಾಲಿಸುತ್ತಿರಲಿಲ್ಲ. ಆದರೆ ಉಪಭೋಗವೊಂದೇ ಜೀವನವಲ್ಲ. ದೇಹವನ್ನು ದಯಪಾಲಿಸಿದಂತೆ ದೇವರು ಮನುಷ್ಯನಿಗೆ ಆತ್ಮವನ್ನೂ ದಯಪಾಲಿಸಿದ್ದಾನೆ. ದೇಹದ ಬಯಕೆಗೂ ಆತ್ಮದ ಬಂಧನವಿರಬೇಕಾಗುತ್ತದೆ. ಹಾಗೆಂದು ಮನುಷ್ಯನ ಆತ್ಮ ಸದಾ ಕಾಲವೂ ಜಾಗೃತವಾಗಿರಬೇಕಾಗುತ್ತದೆ. ಮದ್ಯದ ಅಮಲೇರಿದ ಸಾರಥಿಯ ಕೈಯಿಂದ ಕಡಿವಾಣ ಕಳಚಿ ಬೀಳುತ್ತದೆ; ಕುದುರೆಗಳು ಸ್ವೈರವಾಗಿ ನೆಗೆಯುತ್ತವೆ; ರಥ ಕಂದರಕ್ಕೆ ಬಿದ್ದು ನುಚ್ಚು ನೂರಾಗುತ್ತದೆ. ಅದನ್ನೇರಿದ ಧನುರ್ಧಾರಿಯಾದ ವೀರ ವ್ಯರ್ಥವಾಗಿ ಪ್ರಾಣಕ್ಕೆರವಾಗುತ್ತಾನೆ."

ಮಾತನಾಡುತ್ತಿದ್ದ ಹಾಗೆ ನಡುವೆಯೆ ತಡೆದು ಮುಖವನ್ನು ಮೇಲಕ್ಕೆತ್ತಿ ನಕ್ಷತ್ರಖಚಿತವಾದ ಆಕಾಶವನ್ನು ಒಂದು ಸಲ ನೋಡಿ ಆತ ಮುಂದುವರಿದ: "ಯುವರಾಜ, ನನ್ನನ್ನು ಕ್ಷಮಿಸಬೇಕು. ಇಂಥದ್ದೇನಾದರೂ ಮಾತನಾಡತೊಡಗಿದರೆ ನನಗೆ ಎಚ್ಚರವೇ ಉಳಿಯುವುದಿಲ್ಲ. ನಾನೊಬ್ಬ ಜೀವನ ಮಾರ್ಗದಲ್ಲಿಯ ಪಯಣಿಗ. ಆ ಮಾರ್ಗದಲ್ಲಿಯ ಬೆಟ್ಟ ಬಯಲುಗಳಲ್ಲಿ ದರಿಕಂದರಗಳಲ್ಲಿ ನಾನಿನ್ನೂ ಹಾದುಹೋದವನಲ್ಲ. ನಾನು ಆಡಿದ್ದೆಲ್ಲವೂ ಕಲಿಕೆಯ ಜ್ಞಾನ. ಅದರಲ್ಲಿ ಅನುಭವದ ಭಾಗ ತೀರ ಕಡಿಮೆ. ಆದರೆ ಬೃಹಸ್ಪತಿಯಂಥ ತಂದೆಯವರಿಂದ ಹಾಗೂ ಅಂಗಿರಸರಂಥ ಗುರುಗಳ ಸಹವಾಸದಲ್ಲಿ ನಾನು ಕಲಿತುಕೊಂಡು ಯೋಚನೆ ಮಾಡಿದ್ದರ ಸಾರಸರ್ವಸ್ವ ಅದಾಗಿದೆ. ಚೆಲುವಾದ ಆ ಹೂವನ್ನು ನೋಡಿ ನನಗೆ ಸಂತೋಷವಾಯಿತು. ಆ ಮಗುವಿಗೆ ಕೊಟ್ಟ ಮಾತನ್ನು ನಾನು ನಡೆಸಿಕೊಡುತ್ತೇನೆ. ಅದನ್ನು ನೋಡುವಾಗ ನನ್ನ ಕಣ್ಣುಗಳು ಪಡೆದ ಆನಂದವನ್ನು ಪ್ರತಿದಿನವೂ ಪಡೆಯುವವನಿದ್ದೇನೆ. ಅದು ಪೂರ್ತಿಯಾಗಿ ಅರಳಿದಾಗ ಹತ್ತಿರ ಹೋಗಿ ಅದನ್ನು ಮೂಸುವವನೂ ಇದ್ದೇನೆ. ಆದರೆ ಅದನ್ನು ನಾನು ಕುಯ್ಯುವುದಿಲ್ಲ. ಸುಗಂಧಕ್ಕಾಗಿ ಇಂದು ಒಂದು ಹೂವನ್ನು ನಾನು ಕುಯ್ದರೆ ನಾಳೆ ಅಂಥದೇ ಸುಖಕ್ಕಾಗಿ ಒಂದಾದ ಮೇಲೊಂದರಂತೆ ಕುಯ್ಯುತ್ತಿರಬೇಕೆಂದು ನನಗೆನಿಸೀತು. ಆಗ ಇನ್ನೊಬ್ಬರ ಹೂವುಗಳನ್ನು ಅಪಹರಿಸಬೇಕೆಂಬ ಬಯಕೆಯೂ ನನ್ನಲ್ಲಿ ಬಲಿತೀತು. ಅಪಹಾರದಂಥ ಅಧರ್ಮ ಇನ್ನೊಂದಿಲ್ಲ."

ಯಯಾತಿಗೆ ಅವನ ಮಾತುಗಳು ಗಿಳಿಪಾಠದಂತೆ ಕಂಡರೂ ಕಚನ ದನಿಯು ಸೊಗಸಾಗಿ ಕೇಳುತ್ತಲೇ ಇರಬೇಕು ಎನಿಸಿತು. ಇದು ಶುಷ್ಕ ಪಾಂಡಿತ್ಯವೇ ಸರಿ ಎಂದೆನಿಸಿತು. ಮಧ್ಯದಲ್ಲಿಯೇ ಕಚನನ್ನು ಯಯಾತಿ ತಡೆದ.

"ನನ್ನದೊಂದು ಸಂದೇಹವಿದೆ. ಕೇಳಲೆ?" ಎಂದ

"ಅವಶ್ಯವಾಗಿ. ಆದರೆ ಒಂದು ಮಾತನ್ನು ಮಾತ್ರ ಮರೆಯದಿರಿ. ನಿಮ್ಮಂತೆಯೆ ನಾನಾದರೂ

ಒಬ್ಬ ಅನುಭವಶೂನ್ಯ ಯುವಕನಾಗಿದ್ದೇನೆ. ಜೀವನದ ರಹಸ್ಯ ಗವಿಯಲ್ಲಿ ಅಡಗಿದ ಹಾಗಿರುತ್ತದೆ. ಆ ಗವಿಯ ಬಾಗಿಲಲ್ಲಿ ನಾನಿನ್ನೂ ಕಾಲಿರಿಸುತ್ತಿದ್ದೇನೆ. ಒಳಗಿನ ಕತ್ತಲಲ್ಲಿ ನಮಗಿನ್ನೂ ಯಾವುದೂ ಸ್ಪಷ್ಟವಾಗಿ ಕಾಣುತ್ತಿಲ್ಲ. ನಮ್ಮಲ್ಲಿಯ ಪ್ರತಿಯೊಬ್ಬನೂ ಒಳಗಿನದನ್ನು ತಾನೇ ಶೋಧ ಮಾಡಿ ಹುಡುಕಿ ತೆಗೆಯಬೇಕಾಗುತ್ತದೆ."

"ಅದು ಹೋಗಲಿ, ನನ್ನ ಸಂದೇಹ ಹೀಗೆ. ಆ ಹೂವು ಇನ್ನು ನಾಲ್ಕು ದಿನಗಳ ನಂತರ ತಾನಾಗಿಯೇ ಬಾಡಿ ಬಿದ್ದುಹೋಗುತ್ತದೆ. ಹಾಗಿರುವಾಗ ನಾನದನ್ನು ಇಂದೇ ಕುಯ್ದರೆ, ಮೂಸಿದರೆ, ಅದನ್ನು ತಿಕ್ಕಿ ಹಾಕಿದರೆ ಏನು ಕೆಡಬೇಕಾಗಿದೆ. ಅದರಿಂದ ಯಾರಿಗೆ ಯಾವ ನಷ್ಟವಾಗಬೇಕಾಗಿದೆ? ಒಂದು ಕ್ಷಣವನ್ನಾದರೂ ಆ ಸುಗಂಧದ ಉನ್ಮಾದದಲ್ಲಿ ಕಳೆಯುವುದು ಸಾಧ್ಯವಾಗುತ್ತದೆ, ಅಲ್ಲವೆ?"

ಯಯಾತಿ ಕೇಳಿದ ಈ ಪ್ರಶ್ನೆಗೆ ನೇರವಾಗಿ ಉತ್ತರ ಹೇಳಲು ಕಚನಿಂದಾಗಲಿಲ್ಲ. ಆದರೆ ತನ್ನ ಸೋಲನ್ನೊಪ್ಪಿಕೊಳ್ಳಲಾಗದೆ ಆತ ಹೇಳಿದ: "ದೈತ್ಯಗುರುಗಳಾದ ಶುಕ್ರಾಚಾರ್ಯರು ಉಗ್ರವಾದ ತಪಸ್ಸನ್ನಾಚರಿಸಿ ಸಂಜೀವನೀ ವಿದ್ಯೆಯನ್ನು ಗಳಿಸಿಕೊಂಡಿದ್ದಾರೆಂದು ಇತ್ತೀಚೆಗೆ ನಾನು ಕೇಳಿದೆ. ಆ ವಿದ್ಯೆಯಿಂದ ಸತ್ತವರನ್ನು ಬದುಕಿಸಲು ಬರುತ್ತದೆ. ಆ ವಿದ್ಯೆಯನ್ನು ನಾನು ಸಾಧಿಸಬಲ್ಲೆನಾದರೆ ಬಾಡಿ ಹೋಗುವ ಹೂವುಗಳನ್ನು ಮತ್ತೆ ಅರಳುವಂತೆ ಮಾಡುವುದಕ್ಕೆಂದು ಅದನ್ನು ಉಪಯೋಗಿಸಿಯೇನು?" ಒಬ್ಬ ಚಿಕ್ಕ ಮಗುವಿನ ಮಾತಿನಂತಿತ್ತು ಆತ ಹೇಳಿದ ಮಾತು.

ಎಷ್ಟೋ ಸಲ ಹೀಗೆಯೇ ಅವನು ವಿಚಿತ್ರವಾಗಿ ಮಾತನಾಡುತ್ತಿದ್ದ. ಮತ್ತೆ ಮತ್ತೆ ಹೇಳುತ್ತಿದ್ದ.

"ದೇವತೆಗಳೆಲ್ಲರೂ ವಿಲಾಸದ ಅಂಧ ಉಪಾಸಕರು. ದೈತ್ಯರೆಲ್ಲರೂ ಶಕ್ತಿಯ ಅಂಧ ಉಪಾಸಕರು. ಈ ಇಬ್ಬರೂ ಲೋಕವನ್ನು ಸುಖಿಯಾಗಿರಿಸಲಾರರು. ಅವರ ನಡುವಿನ ಯುದ್ಧದಿಂದ ಯಾವುದೊಂದೂ ನಿಷ್ಪನ್ನವಾಗಲಾರದು." ಹೇಳ ಹೇಳುತ್ತಿದ್ದಂತೆಯೇ ಕಚ ಸಂಜೀವನೀ ವಿದ್ಯೆಯನ್ನು ಕಲಿಯಲು ವೃಷಪರ್ವನ ರಾಜ್ಯಕ್ಕೆ ಶುಕ್ರಾಚಾರ್ಯರ ಶಿಷ್ಯರಾಗಿ ಹೋಗಬೇಕಾದ ಸಂದರ್ಭ ಒದಗಿತು. ಅಂಗಿರಸನು ತೊಡಗಿದ ಶಾಂತಿಯಜ್ಞವು ಕೊನೆಗೊಂಡು ಯಜ್ಞಕುಂಡದಲ್ಲಿಯ ಅಗ್ನಿಯು ವಿಧಿಪೂರ್ವಕವಾಗಿ ವಿಸರ್ಜನೆಯಾಗುವ ಮೊದಲೇ ದೇವದಾನವರ ನಡುವೆ ಯುದ್ಧಜ್ವಾಲೆ ಕಾಣಿಸಿಕೊಂಡಿತು. ದೈತ್ಯಗುರುವಾದ ಶುಕ್ರಾಚಾರ್ಯರು ಸಂಜೀವನೀ ವಿದ್ಯೆಯಿಂದ ರಣಾಂಗಣದಲ್ಲಿ ಹತರಾಗಿ ಬೀಳುವ ರಾಕ್ಷಸ ಸೈನಿಕರನ್ನು ಅವರು ಮತ್ತೆ ಮತ್ತೆ ಜೀವಂತವಾಗಿರಿಸುತ್ತಿದ್ದರು. ದೇವತೆಗಳು ಈ ಯುದ್ಧದಲ್ಲಿ ಸೋಲುವುದನ್ನು ತಪ್ಪಿಸಬೇಕಾದರೆ ಯಾರಾದರೂ, ಶುಕ್ರಾಚಾರ್ಯರ ಬಳಿ ಧೈರ್ಯವಾಗಿ ಹೋಗಿ ಆ ವಿದ್ಯೆಯನ್ನು ಕಲಿತುಕೊಂಡು ಬರಬೇಕಾಗಿತ್ತು. ದೇವತೆಗಳಲ್ಲಿ ಯಾರೂ ಆ ಕೆಲಸಕ್ಕೆ ಮುಂದೆಬರಲಿಲ್ಲವಾದ್ದರಿಂದ ಕಚ ತಾನೇ ಹೊರಟ. ಅಂಗಿರಸನು ಆತನನ್ನು ಬೀಳ್ಕೊಡುವಾಗ ಆಶೀರ್ವದಿಸುತ್ತಾ ಸಹಜವಾಗಿ ನುಡಿದ, "ಹುಟ್ಟಿನಿಂದ ನೀನು ಬ್ರಾಹ್ಮಣ. ಅಧ್ಯಯನ, ಅಧ್ಯಾಪನ – ಯಜನ, ಯಾಜನ ಇವು ನಿನ್ನ ಧರ್ಮ. ನೀನು ವಿದ್ಯೆಯನ್ನು ಗಳಿಸುವುದಕ್ಕೆಂದು ಹೊರಟಿದ್ದೇನೋ ಸರಿ. ಆದರೆ ನಿನ್ನ ಈ ಸಾಹಸ ಬ್ರಾಹ್ಮಣನಿಗಿಂತಲೂ ಕ್ಷತ್ರಿಯನಿಗೆ ಶೋಭಿಸುವಂಥದಾಗಿದೆ."

ಕಚನಿಗೆ ಯಯಾತಿಯ ನೆನಪು ಬಂತು. ಯಯಾತಿ ಉತ್ಸವದ ಮೂರನೆಯ ದಿನವೇ ರಾಜಧಾನಿಯಿಂದ ಅವಸರದ ಕರೆ ಬಂದಿತೆಂದು ಹೊರಟು ಹೋಗಿದ್ದ. ನಹುಷ ದೊರೆಯ ಆರೋಗ್ಯ ಇದ್ದಕ್ಕಿದ್ದಂತೆ ಹದಗೆಟ್ಟಿತ್ತು. ಯಯಾತಿ ಕಚನಿಂದ ಅಗಲುವಾಗ ಬಹಳ ಬೇಸರಗೊಂಡಿದ್ದ.


ಕಚ ದೈತ್ಯರಾಜ್ಯಕ್ಕೆ ಹೊರಡುವ ಈ ಸಮಯದಲ್ಲಿ ಅಂಗೀರಸನಿಗೆ ಹೇಳಿದ. "ಯುವರಾಜ ಯಯಾತಿ ಈಗ ಇಲ್ಲಿದ್ದಿದ್ದರೆ ಅವರನ್ನು ಕರೆದುಕೊಂಡೇ ರಾಕ್ಷಸರಾಜ್ಯದಲ್ಲಿ ಹೆಜ್ಜೆಯಿಡುತ್ತಿದ್ದೆ. ಶೌರ್ಯದ ಕೆಲಸವನ್ನು ಅವರಿಗೆ ಒಪ್ಪಿಸಿ ವಿದ್ಯಾರ್ಜನೆಯ ಕೆಲಸವನ್ನು ನಾನಿರಿಸಿಕೊಳ್ಳುತ್ತಿದ್ದೆ."

*

ಕಚ ರಾಕ್ಷಸರ ರಾಜ್ಯವನ್ನು ಪ್ರವೇಶಿಸಿದ. ಶುಕ್ರಾಚಾರ್ಯರು ಆತನಿಗೆ ತಮ್ಮ ಶಿಷ್ಯನಾಗುವ ಅವಕಾಶವನ್ನು ಕೊಟ್ಟರು. ಗುರುಪುತ್ರಿಗೆ ಕಾಣಿಕೆ

"ನಾನು ಸ್ಕೂಲಿಗೆ ಹೋಗುವವಳು,
ಆಟಪಾಟಗಳಿಗೆ ನನಗೆ ಚಂದವಾದ ಬಟ್ಟೆಗಳೇ ಬೇಕು."





ನಿಮ್ಮ ಮೆಚ್ಚಿನ ಉಡುಪುಗಳಿಗಾಗಿ
ನಿಮ್ಮ ನಚ್ಚಿನ ಬಟ್ಟೆಗಳು

ಮಫತ್‌ಲಾಲ್
ಫ್ಯಾಬ್ರಿಕ್ಸ್

ಸೂಟಿಂಗ್ಸ್, ಶರ್ಟಿಂಗ್ಸ್,
ಸೀರೆಗಳು, ಡ್ರೆಸ್ ಮಟೀರಿಯಲ್ಸ್ ಮತ್ತು ಡೆನಿಮ್ಸ್

ಮಫತ್‌ಲಾಲ್ ಇಂಡಸ್ಟ್ರೀಸ್ ನ್ಯೂ ಶೊರ್ರೋಕ್ ಮಿಲ್ಸ್ **ಮಫತ್‌ಲಾಲ್ ಫೈನ್**

MF-8 KAN

ಯಾಗಿ ಸ್ವರ್ಗದಿಂದ ಒಂದು ಉತ್ತಮ ಅಂಶುಕವನ್ನು ತೆಗೆದುಕೊಂಡು ಬಂದು ಕೊಟ್ಟ. ತನ್ನ ಭಕ್ತಿಯ ಹಾಗೂ ಅಖಂಡವಾದ ಸೇವೆಯಿಂದ ಗುರುಗಳನ್ನು ಸಂತೋಷಪಡಿಸಿ ಇಂದಿಲ್ಲ ನಾಳೆ ಸಂಜೀವನೀ ವಿದ್ಯೆ ಪಡೆದೇ ಪಡೆಯುವುದೆಂಬ ಭರವಸೆ ಕಚನಿಗೆನಿಸತೊಡಗಿತು. ಆ ವಿದ್ಯೆಯ ಸಹಾಯದಿಂದ ದೇವತೆಗಳನ್ನು ಮಣ್ಣು ಮುಕ್ಕಿಸಿ ತಾವು ಸ್ವರ್ಗವನ್ನು ಪ್ರವೇಶಿಸಬಹುದು ಎಂದುಕೊಂಡ ರಾಕ್ಷಸರು ಕಚನನ್ನು ದ್ವೇಷಿಸತೊಡಗಿದರು. ಆತನನ್ನು ತೀರಿಸಿಬಿಡಬೇಕೆಂದು ನಿಶ್ಚಯಿಸಿ, ತನ್ನ ನಿತ್ಯದ ನಿಯಮದಂತೆ ಕಚ ತನ್ನ ಗುರುಗಳ ಪಸುಗಳನ್ನು ಮೇಯಿಸಲು ಹೋದಾಗ ರಾಕ್ಷಸರು ಆತನನ್ನು ಅತ್ಯಂತ ಕ್ರೂರವಾದ ರೀತಿಯಲ್ಲಿ ವಧೆ ಮಾಡಿದರು. ಆತನ ದೇಹವನ್ನು ತುಂಡು ತುಂಡಾಗಿಸಿ ತೋಳಗಳಿಗೆ ಹಾಕಿದರು. ಆದರೆ ಶಿಷ್ಯಪ್ರೇಮದಿಂದಾಗಿ ಶುಕ್ರಾಚಾರ್ಯರು ಕಚನನ್ನು ಮತ್ತೆ ಜೀವಂತವಾಗಿಸಿದರು. ದೇವಪಕ್ಷಕ್ಕೆ ಸಂಜೀವನೀಯ ಲಾಭ ಸಿಕ್ಕುವುದಕ್ಕೆ ಪ್ರಾರಂಭವಾಯಿತು.

ಈ ವಿಷಯವನ್ನು ತುಂಬಾ ಸಂತೋಷದಿಂದ ಆಂಗೀರಸನು ಆದೇ ತಾನೇ ಯತಿಯನ್ನು ಹುಡುಕಲು ಆ ದಾರಿಯಲ್ಲಿ ಬಂದ ಯಯಾತಿಗೆ ತಿಳಿಸಿದನು. ಆ ಸಂತೋಷವನ್ನು ವ್ಯಕ್ತಪಡಿಸುವಷ್ಟರಲ್ಲಿಯೇ ಒಬ್ಬ ಋಷಿಕುಮಾರ ಅವಸರವಸರವಾಗಿ ಒಳಗೆ ಬಂದ. ಆತನ ಕಾಲುಗಳು ಧೂಳು ಮುಸುಕಿದ್ದವು. ಮುಖದಲ್ಲಿ ಬೆವರು ಹರಿಯುತ್ತಿತ್ತು. ಮುಖ ಮುದುಡಿಕೊಂಡಿತ್ತು. ಅದು ಪ್ರವಾಸದ ಪರಿಣಾಮವೋ ಅಥವಾ ಬೇರೆ ಏನೋ ಗೊತ್ತಾಗುವಂತಿರಲಿಲ್ಲ. ದುಃಖಿತನಾಗಿ ಆತ ಹೇಳತೊಡಗಿದ.

"ರಾಕ್ಷಸರ ರಾಜ್ಯದಲ್ಲಿ ದೊಡ್ಡ ಉತ್ಸವ ಮೊದಲಾಗಿದೆ, ಗುರುಗಳೆ. ಮಾರಿ ತಮಗೆ ಸಹಾಯವಾಗಿ ಬಂದಳು ಎಂದು ಅವರು ಮಾರಿರೋತ್ಸವವನ್ನು..." ಯಯಾತಿ ಮಧ್ಯ ಬಾಯಿ ಹಾಕಿದ, "ರಾಕ್ಷಸರಿಗೆ ಮದ್ಯ ಎಂಥ ಉಪಕಾರ ಮಾಡೀತು?" ಅವನೆಂದ—"ಶುಕ್ರಾಚಾರ್ಯರಿಗೆ ಕಚನನ್ನು ಬದುಕಿಸುವುದು ಸಾಧ್ಯವಾಗದಂಥ ಒಂದು ಯುಕ್ತಿಯನ್ನು ರಾಕ್ಷಸರು ಹುಡುಕಿತೆಗೆದಿದ್ದಾರೆ."

"ಅದು ಎಂಥದು?" ಅಂಗಿರಸನು ಕೇಳಿದ.

"ಕಚನನ್ನು ಹೊಡೆದು, ಸುಟ್ಟುಬಿಟ್ಟು ಆತನನ್ನು ಬೂದಿ ಮಾಡಿ ಅದನ್ನು ಮದ್ಯದ ಮೂಲಕ ಶುಕ್ರಾಚಾರ್ಯರ ಒಳಗಡೆಯಲ್ಲಿ ಸೇರುವಂತೆ ವ್ಯವಸ್ಥೆ ಮಾಡುವುದು ಅವರ ಯೋಜನೆ. ಶುಕ್ರಾಚಾರ್ಯರು ಮದಿರಾಭಕ್ತರು. ಇದರಿಂದಾಗಿ ರಾಕ್ಷಸರ ಆಟ ಸಾಧಿಸಿತು. ಇನ್ನು ಮತ್ತೆ ಬದುಕಿ ಬರುವುದು—"

ಋಷಿಕುಮಾರನಿಗೆ ಕಂಠ ಬಿಗಿದು ಮುಂದೆ ಮಾತನಾಡಲಾಗಲಿಲ್ಲ. ಕ್ಷಣಾರ್ಧದಲ್ಲಿ ಆಶ್ರಮ ಅವಲಕ್ಷಣವಾಗಿ ಕಾಣತೊಡಗಿತು.

ಆದರೆ ಕಚ ಮತ್ತೆ ಬದುಕಿ ಬಂದ. ರಾಕ್ಷಸರು ಆತನನ್ನು ಮೂರು ಬಾರಿ ಹಿಂಸೆಗೀಡು ಮಾಡಿ ಕೊಂದರು. ಮತ್ತೆ ಮತ್ತೆ ಬದುಕಿ ಬಂದಾಗ ಕಚ ವೃಷಪರ್ವ ರಾಜರ ಮಗಳು ಶರ್ಮಿಷ್ಠೆಯೊಂದಿಗೆ ನಗುತ್ತಾ, "ದೂರದಿಂದ ಭಯಂಕರವಾಗಿ ಕಂಡದ್ದು ನಿಜವಾಗಿಯೂ ಅಷ್ಟು ಭಯಂಕರವಾಗಿರುವುದಿಲ್ಲ. ಮರಣವಾದರೂ ಹಾಗೆಯೇ, ನಾನು ಹೇಳುತ್ತಿರುವುದು ಅನುಭವದ ಮಾತನ್ನು ರಾಜಕನ್ಯೆ," ಎಂದಿದ್ದ.

ಸಂಜೀವನಿಗಾಗಿ ಬಂದಿದ್ದ ಕಚ ವಾಸ್ತವದಲ್ಲಿ ದೈತ್ಯರಿಗೆ ಶತ್ರುವಾಗಿದ್ದ. ಆದರೆ ಆತನ ವಿದ್ಯೆ, ಆತನ ತ್ಯಾಗ, ಆತನ ನಿಷ್ಠೆ ಆತನ ಮೃದು ಸ್ವಭಾವದಿಂದಾಗಿ ರಾಜಪುತ್ರಿ ಶರ್ಮಿಷ್ಠೆ ಆತನನ್ನು ಪೂಜಿಸತೊಡಗಿದಳು. ಇಂಥ ಒಬ್ಬ ಅಣ್ಣ ತನಗಿದ್ದರೆ ತಾನೆಷ್ಟು ಒಳ್ಳೆಯವಳಾಗುತ್ತಿದ್ದೆ ಎಂದೆನಿಸುತ್ತಿತ್ತು. ಕಚನನ್ನು ಆರಾಧಿಸುತ್ತಿದ್ದ ಮತ್ತೊಬ್ಬ ವ್ಯಕ್ತಿ ಗುರುಪುತ್ರಿ ದೇವಯಾನಿ ಕಚನೊಂದಿಗೆ ಬಿಚ್ಚು ಮನಸ್ಸಿನಿಂದ ಮಾತನಾಡುವುದಕ್ಕೆ, ನಡೆದುಕೊಳ್ಳುವುದಕ್ಕೆ, ಶರ್ಮಿಷ್ಠೆಗೆ ಅವಕಾಶ ಕೊಡಲೇ ಇಲ್ಲ. ಅದೇಕೆ ಆ ರೀತಿಯ ಮತ್ಸರವೆಂದು ಶರ್ಮಿಷ್ಠೆಗೆ ಅರ್ಥವಾಗುತ್ತಿರಲಿಲ್ಲ. ಆಕೆಗೆ ಕಚನನ್ನು ನೋಡುವುದರಿಂದಲೇ ಮನಸ್ಸು ಪ್ರಸನ್ನವಾಗುತ್ತಿತ್ತು. ತನ್ನನ್ನು ನೋಡಿ ಕಚ ನಸುನಕ್ಕರೆ ತುಂಬ ಸಂತೋಷವೆನಿಸುತ್ತಿತ್ತು. ಸಹಜವಾಗಿ ಆಡಿದ ಮಾತುಗಳೂ ಶರ್ಮಿಷ್ಠೆಯನ್ನು ಎಷ್ಟೋ ಕಾಲದವರೆಗೆ ಯೋಚನೆಗೀಡುಮಾಡುತ್ತಿದ್ದವು.

ಬ್ರಾಹ್ಮಣ ಯುವಕನಾಗಿದ್ದ ಕಚ ಎಲ್ಲ ಕ್ಷತ್ರಿ

ಯರನ್ನು ನಾಚಿಸಿ, ಸಂಜೀವನೀ ವಿದ್ಯೆ ತನ್ನದಾಗುವವರೆಗೆ ನಿರ್ಭೀತನಾಗಿ ರಾಕ್ಷಸ ರಾಜ್ಯದಲ್ಲೇ ಉಳಿದ. ಇದು ಶರ್ಮಿಷ್ಠೆಗೆ ಮೆಚ್ಚುಗೆಯಾಯಿತು.

ಆದರೆ ದೇವಯಾನಿ ಮಾತ್ರ ಭಂಗಿತಳಾಗಿದ್ದಳು. ಕಚನ ಪ್ರೇಮವನ್ನು ಯಾಚಿಸಿದಳು. ಆ ಪ್ರೀತಿಯಿಂದಲೇ ತಂದೆಯನ್ನು ಬೇಡಿಕೊಂಡು ಕಚನನ್ನು ಮೂರು ಬಾರಿ ಬದುಕಿಸಿದಳು. ಆದರೆ ಕಚ ಅವಳ ಪಾಲಿಗೆ ಕೃತಘ್ನನಾಗಿಬಿಟ್ಟ. ಅವಳ ಪ್ರೇಮವನ್ನು ತಿರಸ್ಕರಿಸಿದ.

ರೋಷಗೊಂಡ ದೇವಯಾನಿ, ಬದುಕಿನುದ್ದಕ್ಕೂ ಮರೆಯಲಾಗದಂಥ ಶಿಕ್ಷೆಯನ್ನು ಕಚನಿಗೆ ವಿಧಿಸಬೇಕೆಂದುಕೊಂಡಳು. ಆದರೆ ಕನಸು ಮನಸಿನಲ್ಲಿಯೂ ನಿಜವಾದ ಪ್ರೇಯಸಿ ತನ್ನ ಪ್ರಿಯಕರನಿಗೆ ಆತ ಮೋಸವೆಸಗಿದ್ದರೂ ಯಾವ ಶಿಕ್ಷೆಯನ್ನು, ಎಂಥ ಶಿಕ್ಷೆಯನ್ನು ವಿಧಿಸಬಹುದು ? ಹೆಚ್ಚೆಂದರೆ ಆತನನ್ನು ಸದಾಕಾಲವೂ ತನ್ನ ತೋಳಸೆರೆಯಲ್ಲಿ ಬಂದಿಯಾಗಿಸಿ ಇಡಬಹುದು. ಅಷ್ಟು ಶಿಕ್ಷೆಯನ್ನೂ ಕಚನಿಗೆ ವಿಧಿಸಲಿಲ್ಲ. "ಒಂದು ಸಲ, ಒಂದೇ ಒಂದು ಸಲ ನನ್ನನ್ನು ಚುಂಬಿಸು" ಎಂದು ಆ ನಿರ್ದಯಿಯನ್ನು ಬೇಡಿಕೊಂಡಳು. ಕಚನು ನುಡಿದ. "ದೇವಯಾನಿ, ರಾಕ್ಷಸರು ನನ್ನನ್ನು ಹೊಡೆದುಕೊಂದು ಸುಟ್ಟು ನನ್ನ ಮೂಳೆಗಳ ಪುಡಿಯನ್ನು ಮದ್ಯದಲ್ಲಿ ಬೆರೆಸಿ ಅದನ್ನು ಶುಕ್ರಾಚಾರ್ಯರು ಕುಡಿಯುವಂತೆ ಮಾಡಿದರು. ಅದರಿಂದಾಗಿ ಅವರ ಹೃದಯದ ಮರ್ಮಸ್ಥಾನದಲ್ಲಿ ನನಗೆ ಪ್ರವೇಶ ಸಿಕ್ಕಿತು. ಲೋಕದಲ್ಲಿ ಇನ್ನಾರೂ ತಿಳಿಯದ ಸಂಜೀವನೀ ಮಂತ್ರವಿದ್ಯೆಯನ್ನು ನಾನು ಅಲ್ಲಿ ನನ್ನದಾಗಿಸಿಕೊಂಡೆ. ಅದರಿಂದಾಗಿ ನಾನು ನಿನಗೆ ಅಣ್ಣನಾದೆ. ನೀನು ಹುಟ್ಟಿದ ಹೊಟ್ಟೆಯಲ್ಲಿಯೇ ನಾನಾದರೂ..."

ಸಂತಾಪದಿಂದ ದೇವಯಾನಿ ಸಿಡಿದು ನುಡಿದಳು: "ದೇವಯಾನಿಯೆಂದರೆ ಏನೂ ತಿಳಿಯದ ಒಬ್ಬ

ಹುಚ್ಚು ಹುಡುಗಿಯೆಂದು ನೀನು ಭಾವಿಸಿಕೊಂಡಂತಿದೆ. ಮಕ್ಕಳು ಬೆಳೆಯುವುದು ತಾಯಿಯ ಹೊಟ್ಟೆಯಲ್ಲಿ, ತಂದೆಯ ಹೊಟ್ಟೆಯಲ್ಲಲ್ಲ. ಇಷ್ಟು ತಿಳಿಯುವುದಕ್ಕೇನೂ ಹೆಚ್ಚಿನ ಬುದ್ಧಿವಂತಿಕೆ ಬೇಕಿಲ್ಲ. ನಾನು ನಿನ್ನ ತಂಗಿಯಲ್ಲ. ನೀನು ನನ್ನ ಅಣ್ಣನಲ್ಲ. ನಾನು ನಿನ್ನ ಪ್ರೇಯಸಿ. ನಾನು ನಿನ್ನ ಹತ್ತಿರ ಏನೂ ಬೇಡುವುದಿಲ್ಲ. ಒಂದೇ ಒಂದು ಸಲ ನನ್ನನ್ನು ಚುಂಬಿಸು."

ತೀರ ಸಾಮಾನ್ಯವಾದ ಈ ಬೇಡಿಕೆಯನ್ನು ಕಚ ಈಡೇರಿಸಲಿಲ್ಲ. ಭಗ್ನಳಾದ ದೇವಯಾನಿ ಇದೇ ದೃಶ್ಯವನ್ನೇ ಕನಸಿನಲ್ಲಿಯೂ ಕಾಣುತ್ತಿದ್ದಳು. ರಾಜಸಭೆಯಲ್ಲಿ ಕಚ ಬೇಡಿಗಳಿಂದ ಬಂಧಿತನಾಗಿ ನಿಂತಿದ್ದಾಗ ತನ್ನನ್ನು ಒಮ್ಮೆ ಮಾತ್ರ ಚುಂಬಿಸುವಂತೆ ಕೇಳಿಕೊಂಡಳು. ಅದನ್ನು ಆತ ನಿರಾಕರಿಸಿದಾಗ ರೋಷಗೊಂಡಳು. ವೃಷಪರ್ವ ಮಹಾರಾಜ "ಗುರುಕನ್ಯೆ, ನಮ್ಮ ಉದ್ಧಾರಕ್ಕಾಗಿ ಗುರುಗಳು ತಪಸ್ಸನ್ನು ಆರಂಭಿಸುವ ಮೊದಲು ಅವರು ನನಗೆ ಅಪ್ಪಣೆ ಕೊಡಿಸಿದರು. 'ದೇವಯಾನಿಯೆಂದರೆ ನನಗೆ ಆರನೆಯ ಪ್ರಾಣವಿದ್ದ ಹಾಗೆ. ಆಕೆ ಸದಾಕಾಲವೂ ಆನಂದದಲ್ಲಿರುವಂತೆ ನೋಡಿಕೊ' ಎಂದು. ಕಚ ನಿನಗೆ ದುಃಖ ಕೊಟ್ಟಿದ್ದಾನೆ. ಹೇಳು ಆತನಿಗೆ ಎಂಥ ಶಿಕ್ಷೆಯನ್ನು ವಿಧಿಸಲಿ?"

ಮದ್ಯದ ಜೊತೆಯಲ್ಲಿ ತಂದೆಯವರ ಹೊಟ್ಟೆಯನ್ನು ಸೇರಿದ ಕಚ ಸಂಜೀವನಿಯ ಸಹಿತವಾದರೂ ಚಿಂತೆಯಿಲ್ಲ. ಸಜೀವವಾಗಿ ಹೊರಬರಲಿ ಎಂದು ದೇವಯಾನಿ ಶುಕ್ರಾಚಾರ್ಯರ ಪಾದ ಮುಟ್ಟಿ ಬೇಡಿಕೊಂಡಳು. ಅಂಥವನಿಗೆ ಶಿಕ್ಷೆಯನ್ನು ವಿಧಿಸುವುದೆ? ತನ್ನ ಪ್ರೇಮವನ್ನು ತಿರಸ್ಕರಿಸಿದಾಗ ತನ್ನನ್ನು ಅವಮಾನಗೊಳಿಸುವಾಗ, ಆತನಿಗೆ ಏನೊಂದೂ ಅನ್ನಿಸಲೇ ಇಲ್ಲವೆ? ಅದಕ್ಕಾಗಿಯಾದರೂ ಆತನಿಗೆ ಶಿಕ್ಷೆಯಾಗಬೇಕು. ದೇವಯಾನಿ ವೃಷಪರ್ವ ರಾಜನಿಗೆ ಹೇಳುತ್ತಾಳೆ: "ಕಚನ ಶಿರಚ್ಛೇದ ಮಾಡಿ. ಆತನ ತಲೆಯನ್ನು ಒಂದು ತಬಕದಲ್ಲಿರಿಸಿ ರಾಜಸಭೆಗೆ ತರಿಸಿ, ದೇವಯಾನಿ ನೃತ್ಯದಲ್ಲಿ ಎಂಥ ನಿಪುಣಳು ಎಂದು ಇಂದು ತೋರಿಸಿಕೊಡುವವಳಿದ್ದೇನೆ."

ಆ ತಬಕವನ್ನು ತಲೆಯ ಮೇಲಿಟ್ಟು ದೇವಯಾನಿ ಕುಣಿಯತೊಡಗಿದಳು. ಅದರಿಂದ ರಕ್ತ ಹರಿಯತೊಡಗಿತು. ಅದು ಮಂಗಲವಾದ ಕುಂಕುಮದಿಂದ ಅಲಂಕೃತವಾದ ತನ್ನ ಪ್ರಿಯಕರನ ಮುಖವನ್ನು ಕಂಡಂತೆನಿಸಿತು. ಅಭಿಸಾರಿಕೆಯಂತೆ ಕಚನನ್ನು ಕಾಣಲು ಹೊರಟವಳಂತೆ ಆ ತಲೆ ನಿರ್ಜೀವವಾಗಿತ್ತು ಎನ್ನುವುದನ್ನು ಬಿಟ್ಟು ನರ್ತಿಸುತ್ತಿದ್ದ ಹಾಗೆ ಮಂಡೆಯನ್ನೂರಿ ಕುಳಿತು ಅದನ್ನು ಚುಂಬಿಸುತ್ತ "ಕಚದೇವ, ನೀನು ಚುಂಬಿಸುವುದಕ್ಕೆ ಸಿದ್ಧನಿರಲಿಲ್ಲ. ಆದರೆ ಕೊನೆಗೂ ನಾನು ಬಿಡಲಿಲ್ಲ" ಎಂದಳು. ಹಾಗೆ ಹೇಳುತ್ತಿದ್ದಂತೆ ದೇವಯಾನಿಗೆ ಎಚ್ಚರವಾಗಿತ್ತು. ಕನಸಿನ ಕೊನೆಯ ಭಾಗ ಚಿಕ್ಕಂದಿನಲ್ಲಿ ಯಾರೋ ಹೇಳಿದ ಅಸುರರ ಇಂಥ ಒಂದು ಕಥೆಯನ್ನು ಕೇಳಿದ ಪ್ರಭಾವವಿರಬೇಕು.

ದೇವಯಾನಿ ಸಿಟ್ಟಿನಿಂದ ಆತನಿಗೆ ಶಾಪ ಕೊಟ್ಟಳು. ಅಲ್ಲಿಂದ ಹೊರಡುವಾಗ ಶರ್ಮಿಷ್ಠೆಗೆ ಹೇಳಿ ಹೋಗಲು ಬಂದ. ಆಗಲೂ ಕಚನದು ನಗುಮೊಗವೆ. ಪ್ರೇಮಭಂಗದ ದುಃಖ, ಪ್ರೇಯಸಿಯೇ ಶಾಪ ಕೊಟ್ಟ ದುಃಖ. ಆದರೂ ಆತನ ಮುಖದಲ್ಲಿ ದುಃಖದ ಯಾವ ಛಾಯೆಯೂ ಕಾಣುತ್ತಿರಲಿಲ್ಲ. ಶರ್ಮಿಷ್ಠೆ ತಾನಾಗಿಯೇ ಹೇಳಿದ್ದಳು: "ಮದುವೆಯಾಗಿ ನೀವು ದೇವಲೋಕಕ್ಕೆ ಹಿಂದಿರುಗುವಂತಾಗಿದ್ದರೆ ನಾನು ನಿಮ್ಮನ್ನು ಸಂತೋಷದಿಂದ ಬೀಳ್ಕೊಡುತ್ತಿದ್ದೆ. ಆದರೆ..."


"ರಾಜಕನ್ಯೆ, ಬದುಕು ಎಂದಿಗೂ ಅಪೂರ್ಣವೆ. ಹಾಗಿರುವುದರಲ್ಲಿಯೇ ಅದರ ರಸ ತುಂಬಿಕೊಂಡಿರುವುದು" ಎಂದು ಕಚ ಶಾಂತಚಿತ್ತದಿಂದ ಉತ್ತರ ಹೇಳಿದ್ದ.

"ಮನುಷ್ಯನಿಗೆ ಪ್ರೇಮಭಂಗವಾಗುವುದಕ್ಕಿಂತ ಆತ ಯಾರನ್ನೂ ಪ್ರೀತಿಸದಿರುವುದೇ ಒಳ್ಳೆಯದಲ್ಲವೆ?" ಎಂದು ಶರ್ಮಿಷ್ಠೆ ಪ್ರಶ್ನಿಸಿದಳು.

ಕಚ ಹೊರಡುವ ಅವಸರದಲ್ಲಿದ್ದ. ಆದರೂ ನಗುತ್ತಾ ಶರ್ಮಿಷ್ಠೆಯ ಪ್ರಶ್ನೆಗೆ ಉತ್ತರ ಹೇಳಿದ್ದ.

"ಉಂಟೆ ಎಲ್ಲಾದರೂ? ತನ್ನಿಂದಾಚೆ ನೋಡುವ ಶಕ್ತಿಯನ್ನು ಮನುಷ್ಯನಿಗೆ ಪ್ರೀತಿ ತಂದು ಕೊಡುತ್ತದೆ. ಆ ಪ್ರೀತಿ ಯಾರ ಮೇಲಿನದೂ

ಇರಬಹುದು. 'ಯಾವುದನ್ನು ಕುರಿತದ್ದೂ ಇರಬಹುದು. ಅದು ನಿಜವಾಗಿದ್ದಿರಬೇಕು, ಅಷ್ಟೆ. ಎದೆಯ ಒಳಗಿನಿಂದ ಅದು ಹೊಮ್ಮಿ ಬಂದದ್ದಾಗಿರಬೇಕು. ನಿನ್ನ ಗೆಳತಿ ದೇವಯಾನಿ ಹಟಮಾರಿ, ಕೋಪಿಷ್ಠೆ, ಅಹಂಕಾರಿ. ಈ ದೋಷಗಳನ್ನು ತಿಳಿದೂ ಪ್ರೀತಿಸಲು ಕಾರಣ, ಅವಳ ರೂಪದಿಂದ ಮೋಹಿತನಾಗಿ ಕುರುಡತನದಿಂದಲ್ಲ. ಪ್ರಿಯ ವ್ಯಕ್ತಿಯನ್ನು ದೋಷಗಳ ಸಹಿತವಾಗಿಯೇ ಸ್ವೀಕರಿಸುವ ಶಕ್ತಿ ನಿಜವಾದ ಪ್ರೀತಿಯಲ್ಲಿರುತ್ತದೆ. ಇರಬೇಕು. ದೇವಯಾನಿಯನ್ನು ಹಾಗೆ ಪ್ರೀತಿಸುವ ಯತ್ನವನ್ನು ನಾನು ಮಾಡಿದೆ. ಪ್ರೀತಿ ಪ್ರೇಯಸಿಯ ಕುರಿತದ್ದಾಗಿರಬಹುದು. ಹೂವು, ಪ್ರಾಣಿ, ಕುಲ, ರಾಷ್ಟ್ರ, ಜಾತಿ ಎಂದು ಮುಂತಾಗಿ ಯಾವುದನ್ನು ಕುರಿತದ್ದೂ ಇರಬಹುದು. ನಿಃಸ್ವಾರ್ಥವಾದ, ನಿರಪೇಕ್ಷವಾದ, ನಿರಹಂಕಾರಿಯಾದ ಪ್ರೀತಿಯೇ ಮನುಷ್ಯನಲ್ಲಿಯ ಆತ್ಮದ ವಿಕಾಸದಲ್ಲಿಯ ಮೊದಲ ಹಜ್ಜೆ. ಬದುಕಿನಲ್ಲಿ ಪ್ರೀತಿ ಬಂದು ಉಚ್ಚ ಭಾವನೆ, ಹೌದು. ಆದರೆ ಕರ್ತವ್ಯವೇ ಅದಕ್ಕಿಂತಲೂ ಉಚ್ಚವಾದದ್ದು. ಕರ್ತವ್ಯ ಕಠೋರವಾಗಬೇಕಾಗುತ್ತದೆ; ಆದರೆ ಕರ್ತವ್ಯವೇ ಧರ್ಮಕ್ಕೆ ಆಧಾರ. ಹಾಗಾಗಿ ಲಕ್ಷಾಂತರ ಸ್ವಕೀಯರಿಗಾಗಿ ಆಕೆಯ ಮನಸ್ಸನ್ನು ನಾನು ನೋಯಿಸಬೇಕಾಗಿ ಬಂತು. ನಾನಾದರೂ ಏನು ಮಾಡಲಿ? ಎಂದಾದರೂ ದೇವಯಾನಿ ನಿನ್ನೊಡನೆ ಬಿಚ್ಚು ಮನಸ್ಸಿನಿಂದ ಮಾತನಾಡಿದರೆ ಆಕೆಗೆ ಇಷ್ಟೇ ಹೇಳು– "ಕಚನ ಹೃದಯದ ಮೇಲೆ ಕರ್ತವ್ಯದ ಸ್ವಾಮಿತ್ವ ನಡೆಯುತ್ತದೆ; ಆದರೆ ಆ ಹೃದಯದಲ್ಲಿಯ ಒಂದು ಚಿಕ್ಕದಾದ ಮೂಲೆ ದೇವಯಾನಿಯದಾಗಿತ್ತು. ಅದು ಎಂದಿಗೂ ಆಕೆಯದಾಗಿಯೇ ಉಳಿಯುತ್ತದೆ.' "



"ಬೆಲೆ ಏರ್ಬುಟ್ಟದೆ ಬೆಲೆ ಏರ್ಬುಟ್ಟದೆ ಅಂತ ಒಂದೆ ಸಮ್ನೆ ಜನಾ ಕೂಗಾಡ್ತಾರಲ್ಲ, ನಂಗೆ ಅರ್ಥವೆ ಆಗಲ್ಲ. ನಮ್ಮ ನೇಲಿರೊ ಪದಾರ್ಥಗಳ ಬೆಲೆ ನಂಗು ಗೊತ್ತಿಲ್ಲ, ನಮ್ಮ ಜನಾನ್ಗೂ ಗೊತ್ತಿಲ್ಲ."

ಈ ಮಾತುಗಳು ಶರ್ಮಿಷ್ಠೆಯ ಮನದಲ್ಲಿ ಅಚ್ಚೊತ್ತಿದ್ದಂತಿದ್ದವು. ಸನ್ನಿವೇಶಗಳು ಕಾಲಪುರುಷನ ಮಹಿಮೆಯಿಂದ ಬದಲಾಗಿ ರಾಜಪುತ್ರಿ ಶರ್ಮಿಷ್ಠೆ ದೇವಯಾನಿಯ ದಾಸಿಯಾಗಬೇಕೆಂಬ ಪರಿಸ್ಥಿತಿ ಒದಗಿದಾಗ ಶರ್ಮಿಷ್ಠೆಗೆ ದಾರಿ ಕಾಣದಾಯಿತು. ಆಗ್ಗೆ ಕಚನ ಮಾತುಗಳು ನೆನಪಿಗೆ ಬಂದು ಅವಳ ಮನಸ್ಸಿನ ಮೇಲೆ ಪ್ರಕಾಶ ಬಿದ್ದಂತಾಯಿತು. ಅದರಿಂದ ಎಚ್ಚೆತ್ತು ಕರ್ತವ್ಯದ ಕಡೆಗೆ ಗಮನ ಕೊಡುವವಳಂತೆ ತಾಯಿಯ ಬಳಿಸಾರಿ ತಾನು ಹಸ್ತಿನಾಪುರಕ್ಕೆ ದೇವಯಾನಿಯ ದಾಸಿಯಾಗಿ ಹೋಗಲು ಸಿದ್ಧವಿರುವುದಾಗಿ ತಿಳಿಸಿದಳು.

ಅವಳು ಹಾಗೆ ಮಾಡಿದರೆ ದೇವಯಾನಿಯ ತಂದೆ ಶುಕ್ರಾಚಾರ್ಯರು ದೈತ್ಯ ಗುರುವಾಗಿ ಉಳಿಯುವ ಸಂಭವವಿರಲಿಲ್ಲ. ಅವರಿಲ್ಲದಿದ್ದರೆ ರಾಕ್ಷಸರ ರಾಜ್ಯ ಮಣ್ಣು ಮುಕ್ಕುವುದು ಖಚಿತ ಎಂಬುದು ವೃಷಪರ್ವನಿಗೆ ಚೆನ್ನಾಗಿ ಗೊತ್ತಿತ್ತು. ಆದರೆ ಕೊನೆಯ ನಿರ್ಧಾರವನ್ನು ಮಗಳಿಗೇ ಬಿಟ್ಟಿದ್ದ. ಯಾರಿಗಾದರೂ – ಅದರಲ್ಲೂ ರಾಜರಿಗೆ – ತಮ್ಮ ಮಗಳು ಅನ್ಯರ ತೊತ್ತಾಗಿ ಬಾಳುವುದು ಇಷ್ಟವಾಗುವುದಿಲ್ಲ. ಆದರೆ ಶರ್ಮಿಷ್ಠೆ ಕುಲದ ಉದ್ಧಾರಕ್ಕಾಗಿ ದೇವಯಾನಿಯ ತೊತ್ತಾಗಿ ಹಸ್ತಿನಾಪುರಕ್ಕೆ ಹೋದಳು.



M.K. Publicity

293–17

ದೇವಯಾನಿ ಯಯಾತಿ ಮಹಾರಾಜನ ಪಟ್ಟಮಹಿಷಿಯಾಗಿ ಹಸ್ತಿನಾಪುರಕ್ಕೆ ಬಂದಳು. ಆದರೆ ಪತ್ನಿಯಾಗಿ ಎಂದೂ ಯಯಾತಿಯ ಮನವನ್ನು ತುಂಬಲೇ ಇಲ್ಲ. ದೈಹಿಕವಾಗಿ ಸುಖವನ್ನು ಒದಗಿಸಿದಳು ನಿಜ. ಆದರೆ ಪ್ರೇಯಸಿಯಾಗಿ, ಗೆಳತಿಯಾಗಿ ಸಹಚರಿಯಾಗಿ ಯಯಾತಿಯ ಕಷ್ಟ ಸುಖಗಳನ್ನು ಕೇಳುವ, ಆತನೊಡನೆ ಸುಖ ಸಂವಾದವನ್ನು ಮಾಡುವ ದೇವಯಾನಿ ಅವಳಾಗಲೇ ಇಲ್ಲ.

ಮಾತುಗಳ ನಡುವೆ ಆಗಾಗ ಕಚನ ವಿಷಯವನ್ನು ತರುತ್ತಿದ್ದಳು. ಮೊದಲ ರಾತ್ರಿಯೇ ಗೆಳೆಯನ ಸಂಗಡ ಮೋಜಿಗಾಗಿ, ಒಂದಿಷ್ಟು, ಮದ್ಯವನ್ನು ಸೇವಿಸಿದ ಯಯಾತಿಯೊಂದಿಗೆ ಜಗಳ ಮಾಡಿ, ಕಚನಿಗೆ ಮದ್ಯವೆಂದರಾಗದು ಎಂಬ ವಿಷಯವನ್ನು ಹೊರಗೆಡವಿ ಯಯಾತಿಯ ಮನಸ್ಸಿನಲ್ಲಿ ಮತ್ಸರದ ಸೂಕ್ಷ್ಮವಾದ ಒಂದು ಛಾಯೆ ಏಳುವಂತೆ ಮಾಡಿದಳು.

ಮತ್ತೊಮ್ಮೆ ತಪಸ್ಸಿಗಾಗಿ ಕುಳಿತ ತಂದೆ ಶುಕ್ರಾಚಾರ್ಯರ ಅಭೀಷ್ಟ ಚಿಂತನೆಗಾಗಿ ಒಂದು ಯಜ್ಞ ಮಾಡುವ ಸಂಕಲ್ಪ ಮಾಡಿ ಆ ಯಜ್ಞಕ್ಕೆ ಹಿರಿಯ ಋಷಿಗಳ ಜೊತೆಗೆ ಕಚನಿಗೂ ಆಹ್ವಾನ ಕಳುಹಿಸುವೆನೆಂದಾಗ ಯಯಾತಿ ಮತ್ತೊಮ್ಮೆ ಗಲಿಬಿಲಿಗೊಳಗಾದ. ಇವಳಿಗೇಕಿಷ್ಟು ಕಚನಲ್ಲಿ ಆಸಕ್ತಿ ಎಂಬ ವಿವೇಚನೆಗೊಳಗಾದ.

ಆದರೆ ದಾಸಿಯಾಗಿ ಬಂದ ಶರ್ಮಿಷ್ಠೆ, ಕಚನನ್ನು ಕರೆಕಳುಹಿಸುವ ಪ್ರಸ್ತಾಪ ಬಂದಾಗ ಮುಖ ಅರಳಿಸಿದಳು. ಸೆರೆಯಾಳಿನಂತೆ ಬದುಕು ಸಾಗಿಸುತ್ತಿರುವ ಈ ಯುವತಿ ಕಚನ ಭೇಟಿಯಿಂದ ಸಂತೋಷಗೊಳ್ಳುವಂತಾದರೆ ಯಾಕೆ ಅಡ್ಡಿಯಾಗಬೇಕು ಎನ್ನುವ ಮನೋಭಾವದಿಂದ ಒಪ್ಪಿಗೆ ನೀಡಿದ್ದ.

ಶರ್ಮಿಷ್ಠೆಯ ವಿಷಯದಲ್ಲಿ, ಕನಿಕರದಿಂದಿದ್ದ ಯಯಾತಿ ಈ ನಿರ್ಭಾಗ್ಯೆಗೆ ಅಷ್ಟಾದರೂ ಸುಖ ದೊರೆಯಲಿ ಎಂದು ಬಯಸಿದ. ಆತನಿಗೂ ಗೊತ್ತಿತ್ತು ಶರ್ಮಿಷ್ಠೆ ಕಚನನ್ನು ತನ್ನ ಗುರುವೆಂದು ಪರಿಗಣಿಸುತ್ತಾಳೆಂದು, ಕಚನಂಥ ವಿರಕ್ತ ತಾಪಸಿ ಏನೆಂದು ಪ್ರೀತಿಯ ಪಾಠವನ್ನು ಕಲಿಸಿದನೋ!

ಆದರೆ ಆ ಆಮಂತ್ರಣ ಕಚನಿಗೆ ಮುಟ್ಟಲೇ ಇಲ್ಲ. ತೀರ್ಥಯಾತ್ರೆ ಮಾಡುತ್ತಾ ಅಲೆದಾಡುತ್ತಿದ್ದನಾತ.

ಕಚ ಬಾರದಿದ್ದರೆ ಶರ್ಮಿಷ್ಠೆಗೆ ನಿರಾಶೆಯಾಗುವುದೆಂದು ಯಯಾತಿಗೆನಿಸಿತು. ದೇವಯಾನಿ ಮಾತ್ರ ಕಚ ಖಂಡಿತವಾಗಿ ಬಂದೇ ಬರುತ್ತಾನೆಂದು ಹೇಳಿದಳು. ಅವಳು ಶರ್ಮಿಷ್ಠೆಯನ್ನು ಅಶೋಕವನಕ್ಕೆ ಕಳುಹಿಸಿದ್ದಳು. ಉತ್ತರದ ಗಡಿಯಲ್ಲಿ ದಸ್ಯುಗಳ ತೊಂದರೆ ಹೆಚ್ಚುತ್ತಿದೆಯೆಂದು ಅವರನ್ನು ನಿವಾರಿಸಲು ಯಯಾತಿ ಸೈನ್ಯದೊಡನೆ ಹೋಗಿದ್ದಾಗ ದೇವಯಾನಿ ಈ ಕೆಲಸವನ್ನು ಮಾಡಿದ್ದಳು. ಅಂದು, ಯಯಾತಿ ಪ್ರಯಾಣ ಹೊರಟ ದಿನ ಪುರೋಹಿತರು, ಶುಭ ಮುಹೂರ್ತವನ್ನಿರಿಸಿ ಆ ಘಳಿಗೆಯಲ್ಲಿ ಆರತಿಯನ್ನೆತ್ತಿ ಬೀಳ್ಕೊಡುವ ಸಮಾರಂಭವನ್ನು ನಡೆಸಬೇಕೆಂದಿದ್ದರು. ಆದರೆ ಅದೇ ವೇಳೆಗೆ ಶುಕ್ರಾಚಾರ್ಯರ ಪತ್ರವನ್ನು ತೆಗೆದುಕೊಂಡು ದೂತನೊಬ್ಬನು ಬಂದಿದ್ದಾನೆಂದು ತಿಳಿದ ದೇವಯಾನಿ ಉತ್ಸುಕಳಾಗಿ ಹೊರಕ್ಕೆ ಹೋದಳು. ಯಾಯಾತಿಯ ತಾಯಿ ಆರತಿಯ ತಟ್ಟೆಯನ್ನು ಹಿಡಿದುಕೊಂಡಿದ್ದ ಶರ್ಮಿಷ್ಠೆಗೆ ಆರತಿಯನ್ನೆತ್ತಲು ಹೇಳಿದಳು. ಆ ಘಟನೆ ದೇವಯಾನಿಯಲ್ಲಿ ಮುನಿಸನ್ನು ಉಂಟುಮಾಡಿತ್ತು. ಹಾಗಾಗಿ ಶರ್ಮಿಷ್ಠೆ ಯಜ್ಞದ ನಿಮಿತ್ತ ಬರುವ ಋಷಿ ಮುನಿಗಳ ವ್ಯವಸ್ಥೆಗಾಗಿ ಅಶೋಕವನಕ್ಕೆ ಹೋಗಬೇಕಾಯಿತು.

*

ಯಜ್ಞದ ಕೆಲಸ ಯಥಾಯೋಗ್ಯವಾಗಿ ನಡೆಯಿತು. ಅಗಸ್ತ್ಯ ಮತ್ತು ಅಂಗಿರಸರಂಥ ಕೆಲವು ಪ್ರಮುಖ ಋಷಿಗಳು ಬಂದಿರಲಿಲ್ಲ. ಅದೊಂದು ಕೊರತೆಯನ್ನು ಬಿಟ್ಟರೆ ಯಜ್ಞಕಾರ್ಯ ಯಥಾಕ್ರಮವಾಗಿ ನಡೆದಿತ್ತು. ಕಚ ಇಂದು ಬರಬಹುದು ನಾಳೆ ಬರಬಹುದು ಎಂದು ದೇವಯಾನಿಗೆನಿಸುತ್ತಿತ್ತು. ಆದರೆ ಆತ ಬರಲಿಲ್ಲ. ಅವನಿಂದ ಯಾವ ಸಮಾಚಾರವೂ ತಿಳಿಯಲಿಲ್ಲ. ಯಜ್ಞಕ್ಕಾಗಿ ಅಲ್ಲಿ ಸೇರಿದ ಮಹಾಜನರನ್ನು ಬೀಳ್ಕೊಡುವುದಕ್ಕೆ ರಾಜಸಭೆಯನ್ನು ಕರೆಯಲಾಯಿತು. ಯಯಾತಿಯ ಪಕ್ಕದಲ್ಲಿ ದೇವಯಾನಿ ದೇವಕಿಯಂತೆ ಕಂಗೊಳಿಸುತ್ತಿ-

ದ್ದಳು. ಆಕೆ ಈಗ ಗರ್ಭಿಣಿ. ಸಸ್ಯಶ್ಯಾಮಲೆಯಾದ ಭೂಮಿಯಂತೆ ದೇವಯಾನಿ ನೋಡುವವರ ಗಮನ ಸೆಳೆಯುತ್ತಿದ್ದಳು. ಯಯಾತಿಯ ತಾಯಿಯೂ ಸಮಾರಂಭವನ್ನು ನೋಡಲು ಸಿಂಹಾಸನದ ಹಿಂದುಗಡೆಯಲ್ಲಿರುವ ಪರದೆಯಾಚೆ ಕುಳಿತುಕೊಂಡಿದ್ದಳು.

ಶರ್ಮಿಷ್ಠೆಯನ್ನು ಅಶೋಕವನದಿಂದ ದೇವಯಾನಿ ಬೇಕೆಂತಲೆ ಕರೆಸಿಕೊಂಡಿದ್ದಳು. ರಾಜಸಭೆಯಲ್ಲಿ ತನ್ನ ಹತ್ತಿರ ನಿಲ್ಲಿಸಿಕೊಂಡು ಶರ್ಮಿಷ್ಠೆಯಿಂದ ಗಾಳಿ ಹಾಕಿಸಿಕೊಳ್ಳಬೇಕಾಗಿತ್ತು ಆಕೆಗೆ! ರಾಜದಂಪತಿಗಳನ್ನು ಆಶೀರ್ವದಿಸಲು ಋಷಿ ಮುನಿಗಳು ಮಂತ್ರಾಕ್ಷತೆಗಳನ್ನು ಕೈಗೆ ತೆಗೆದುಕೊಂಡರು. ಅಷ್ಟರಲ್ಲಿ ಅಮಾತ್ಯರು ರಾಜನ ಬಳಿ ಬಂದು ಕಿವಿಯಲ್ಲಿ ಹೇಳಿದರು.

"ಕಚದೇವರು ಬಂದಿದ್ದಾರೆ."

"ಒಳಗೆ ಬರುವ ಇಚ್ಛೆ ಅವರಿಗಿದ್ದ ಹಾಗೆ ಕಾಣುವುದಿಲ್ಲ."

ಅವರ ಮಾತು ದೇವಯಾನಿಗೆ ಕೇಳಿಸಿತು. ಅಮಾತ್ಯರನ್ನು ಕುರಿತು ಅವಳು "ಅವರನ್ನು ಸನ್ಮಾನಪೂರ್ವಕವಾಗಿ ಕರೆದುಕೊಂಡು ಬಂದು ಋಷಿಗಳ ಮಧ್ಯೆ ಯೋಗ್ಯ ಸ್ಥಾನದಲ್ಲಿ ಕುಳ್ಳಿರಿಸಿ" ಎಂದಳು.

"ಅದೇಕೆ?" ದೇವಯಾನಿ ಸಿಟ್ಟಿನಿಂದ ಕೇಳಿದಳು. "ಅದೇಕೆ? ಆ ಆಂಗಿರಸರ ಗಾಳಿ ಇವನಿಗೂ ತಗುಲಿದೆಯೆ? ರಾಜಧಾನಿಯಲ್ಲಿ ಬಂದು ನಿಮ್ಮ ಅಪಮಾನ ಮಾಡುವ ಇಚ್ಛೆ ಅದೆಯೇ ಅವರಿಗೆ? ಹಾಗಿದ್ದರೆ–"

ಅಮಾತ್ಯರು ಕೈಜೋಡಿಸಿ ಹೇಳಿದರು: "ಅಂಥದೇನೂ ಇಲ್ಲ ದೇವಿಯವರೆ. ಅವರೊಡನೆ ಇನ್ನೊಬ್ಬ ತಾಪಸರಿದ್ದಾರೆ. ಅವರು ಉನ್ಮತ್ತ ಮನಃಸ್ಥಿತಿಯಲ್ಲಿದ್ದಾರೆ. ಹಾಗೆಂದು ಕಚದೇವರು ಹೊರಗೆಯೇ.."

ದೇವಯಾನಿ ಹೇಳಿದಳು: "ಅದೇನಿಲ್ಲ. ಆ ಬೈರಾಗಿಯನ್ನು ಕೂಡಿಕೊಂಡೇ ಅವರನ್ನು ಒಳಗೆ ಕರೆದುಕೊಂಡು ಬನ್ನಿರಿ. ಮತ್ತೆ ಇದು ನೋಡಿ, ನಾನು ಅವರಿಗೆ ಗುರುಭಗಿನಿ, ಅವರಿಗೆ ನಮಸ್ಕರಿಸಿ ಆಶೀರ್ವಾದ ಪಡೆಯಬೇಕು. ಆದ್ದರಿಂದ ನೇರವಾಗಿ ಸಿಂಹಾಸನದ ಹತ್ತಿರಕ್ಕೆಯೆ ಕರೆದುಕೊಂಡು ಬನ್ನಿರಿ."

ಕಚ ಹಾಗೂ ಇನ್ನೊಬ್ಬ ತಾಪಸ ಒಳಗೆ ಬಂದಾಗ ಎಲ್ಲರ ಕಣ್ಣುಗಳೂ ಅವರಿಬ್ಬರತ್ತ ತಿರುಗಿದವು. ಋಷಿಗಳ ಗುಂಪಿನಿಂದ, "ಬರಬೇಕು ಕಚದೇವರು ಬರಬೇಕು," ಎಂಬ ಅಸ್ಪಷ್ಟ ಸ್ವಾಗತವೂ ಕೇಳಿಬಂತು. ಪ್ರೇಕ್ಷಕರಲ್ಲಿಯೂ ಗಂಡಸರು ಹೆಂಗಸರು ಎಲ್ಲರೂ ಬೆರಳು ಮಾಡಿ ತೋರಿಸಿ ತಮ್ಮಲ್ಲಿಯೇ ಮೆಲು ಮಾತಿಗೆ ತೊಡಗಿದರು. ಸಾಹಸ ಮಾಡಿ ಸಂಜೀವನಿಯನ್ನು ಪಡೆದು, ರಾಕ್ಷಸರ ಆಟ ನಡೆಯದಂತೆ ಮಾಡಿದ್ದ ಆತನ ರೋಮಾಂಚಕ ಕಥೆ ಆಬಾಲವೃದ್ಧರಿಗೂ ಗೊತ್ತಿದ್ದ ವಿಷಯವೇ ಆಗಿತ್ತು. ಅದರಿಂದಾಗಿ ಆತನನ್ನು ಕಂಡ ಪ್ರೇಕ್ಷಕರು ಆಶ್ಚರ್ಯ ಆನಂದಗಳಿಂದ ಸಹಜವಾಗಿಯೇ ಪುಳಕಿತರಾಗಿದ್ದರು.

ಕಚ ಮುಂದೆ ಬಂದಾಗ ಆತನೊಡನೆ ಬಂದಿದ್ದ ಬೈರಾಗಿಯನ್ನು ನೋಡಿದ ಯಯಾತಿ ತನ್ನ ಕಣ್ಣುಗಳನ್ನು ತಾನೇ ನಂಬದಾದ. ತಾನು ಕಾಣುತ್ತಿದ್ದುದು ಒಂದು ಕನಸೋ ಭ್ರಮೆಯೋ ಯಾವುದೊಂದೂ ತಿಳಿಯದಾಯಿತು. ಕಚನೊಡನೆ ಬಂದವ ಯತಿಯಾಗಿದ್ದ!!

ಕಚ ಮತ್ತು ಯತಿ ಅಮಾತ್ಯರ ಜೊತೆಯಲ್ಲಿ ಸಿಂಹಾಸನನೆದುರು ಬಂದು ನಿಂತರು. ದೇವಯಾನಿ

ಕಚನನ್ನು ನಮಸ್ಕರಿಸುವಷ್ಟರಲ್ಲಿ ಆತನ ಗಮನ ಗಾಳಿ ಬೀಸುತ್ತ ನಿಂತಿದ್ದ ಶರ್ಮಿಷ್ಠೆಯ ಕಡೆಗೆ ಹರಿಯಿತು. ಆಶ್ಚರ್ಯಚಕಿತನಾಗಿ ಒಮ್ಮೆಲೆ ಕೇಳಿದ.

"ರಾಜಕನ್ಯೆ, ನೀನು? ಇಲ್ಲಿ ಹೇಗೆ?"

ನಮಸ್ಕರಿಸಲು ಬಾಗಿದ್ದ ದೇವಯಾನಿ ಒಮ್ಮೆಲೆ ತನ್ನ ತಲೆಯನ್ನು ಮೇಲಕ್ಕೆತ್ತಿ ಕಚನಿಗೆ ಹೇಳಿದಳು.

"ಕಚದೇವ, ಈಕೆ ಈಗ ರಾಜಕನ್ಯೆಯಲ್ಲ."

"ಅಂದರೆ?"

"ಆಕೆ ದಾಸಿ! ನನ್ನ ದಾಸಿ ಆಕೆ!"

"ದಾಸಿ? ನಿನ್ನ ದಾಸಿ ?"

ಹೌದು ಎನ್ನುವಂತೆ ದೇವಯಾನಿ ನಸುನಕ್ಕಳು.

ಇದುವರೆಗೆ ಯತಿ ಸುಮ್ಮನೆ ಅತ್ತ ಕಣ್ಣು ಬಿಟ್ಟು ನೋಡುತ್ತ ನಿಂತಿದ್ದ. ಇದ್ದಕ್ಕಿದ್ದ ಹಾಗೆ ಆತ ಮಾತನಾಡತೊಡಗಿದ. ಶರ್ಮಿಷ್ಠೆಯನ್ನು ಬೆರಳಿನಿಂದ ತೋರಿಸುತ್ತಾ ದೇವಯಾನಿಯನ್ನುದ್ದೇಶಿಸಿ "ಏ! ನಿನ್ನ ಈ ದಾಸಿಯನ್ನು ನನಗೆ ಕೊಡುತ್ತೀಯ?" ಎಂದ.

ಒಬ್ಬ ಸಾಮಾನ್ಯ ತಾಪಸಿ ತನ್ನನ್ನು 'ಏ' ಎಂದು ಏಕವಚನದಲ್ಲಿ ಸಂಬೋಧಿಸಿದಾಗ ದೇವಯಾನಿ ಸಂತಾಪಗೊಳ್ಳಬೇಕಾಗಿತ್ತು. ಆದರೆ ಒಬ್ಬ ಬುದ್ಧಿ ಕೆಟ್ಟು ಹೋದ ಬೈರಾಗಿ ತುಂಬಿದ ರಾಜಸಭೆಯಲ್ಲಿ ಶರ್ಮಿಷ್ಠೆಯನ್ನು ಬೇಡುತ್ತಿದ್ದಾನೆ ಎನ್ನುವುದು ಆಕೆಗೆ ತುಂಬಾ ಮೋಜೆನಿಸಿರಬೇಕು. ಹಾಗೆಂದು ಯತಿಯನ್ನು ಕುರಿತು, "ಈಕೆ ಯಾತಕ್ಕೆ ಬೇಕು ನಿಮಗೆ. ಸ್ವಾಮಿ ಮಹಾರಾಜರೆ? ಮದುವೆಯಾಗುವುದಕ್ಕೆಯೆ?" ಎಂದು ಕೇಳಿದಳು.

ಕಚ ಕಣ್ಸನ್ನೆಯಿಂದ ಯತಿಯನ್ನು ತಡೆಯಬೇಕೆಂದ. ಆದರೆ ಆತನ ಗಮನವೆಲ್ಲವೂ ಶರ್ಮಿಷ್ಠೆಯಲ್ಲಿ ನಟ್ಟುನಿಂತಿತ್ತು. ಈ ಎಲ್ಲ ಪ್ರಸಂಗ ಹೇಗೆ ಕೊನೆಗಾಣುವುದು ಎನ್ನುವುದೇ ಯಯಾತಿಗೆ ಬಗೆಹರಿಯದಾಯಿತು. ಅಣ್ಣ–ತಮ್ಮಂದಿರಿಬ್ಬರೂ ಒಬ್ಬರನ್ನೊಬ್ಬರು ಭೇಟಿಯಾಗುತ್ತಿರುವ ಸ್ಥಿತಿಯನ್ನು ನೆನೆದು ಶಿಲಾಪ್ರತಿಮೆಯಂತೆ ಕುಳಿತ ಮಹಾರಾಜ. ಆತನ ಕಿವಿಗಳಲ್ಲಿ ಋಷಿಯ ಶಾಪ ಮೊಳಗಿತು. 'ನಹುಷನ ಮಕ್ಕಳು ಎಂದಿಗೂ ಸುಖಿಯಾಗಿರಲಾರರು.' ವಿಕಟವಾಗಿ ನಗುತ್ತಾ ಯತಿ ಹೇಳಿದ. "ಮದುವೆಯಾಗುವುದೇ? ಛೀ...! ಈಕೆಯನ್ನು ಗಂಡಸನ್ನಾಗಿ ಮಾಡಿಬಿಡುವನಿದ್ದೇನೆ ನಾನು!"

ಸಭೆಯಲ್ಲಿ ಒಮ್ಮೆಲೆ ನಗೆ ಉಕ್ಕಿ, ಹಾಗೆಯೆ ಅದು ತಗ್ಗಿ ಹೋಯಿತು, ಅದರ ಬೆನ್ನ ಹಿಂದೆಯೆ ಭೀತಿಯ ವಾತಾವರಣ ಕವಿಯಿತು.

ಪರದೆಯ ಆಚೆಯಲ್ಲಿ ಕುಳಿತಿದ್ದ ತಾಯಿ ಸಂತಾಪದಿಂದ ಕೂಗಿಕೊಂಡಳು. "ಅಮಾತ್ಯರೆ, ಆ ತಲೆತಿರುಕನನ್ನು ಹೊರಗೆ ಕರೆದೊಯ್ಯುವ ವ್ಯವಸ್ಥೆಯನ್ನು ಮಾಡಿ. ಹುಚ್ಚು ಹುಚ್ಚಾಗಿ ಆತ ಇಂಥದೇನಾದರೂ ಮಾತನಾಡಿದರೆ ಆತನಿಗೆ ಚಾಟಿಯಿಂದ ಏಟು ಹಾಕಿಸಿ."

ಅಮಾತ್ಯ ಸಂಜ್ಞೆ ಮಾಡಿದರು. ಯತಿಯನ್ನು ಹಿಡಿದುಕೊಳ್ಳಲೆಂದು ಸೇವಕನೊಬ್ಬ ಮುಂದೆ ಬಂದ.

ಯತಿಗೆ ಆಗಬಹುದಾಗಿದ್ದ ಅವಮಾನವನ್ನು ನೋಡಲಾಗದೆ ಯಯಾತಿ ಒಮ್ಮೆಲೆ ಎದ್ದು ನಿಂತು ಗಟ್ಟಿಯಾಗಿ ಅರಚಿಕೊಂಡ. "ಆತನ ಮೈಯನ್ನು ಮುಟ್ಟಬೇಡಿ. ಈ ಸಿಂಹಾಸನಕ್ಕೆ ಆತ ಅಧಿಕಾರಸ್ಥನಾಗಿದ್ದಾನೆ."

ಯಯಾತಿಗೇನಾದರೂ ಹುಚ್ಚು ಹಿಡಿಯಿತೆ ಎಂಬಂತೆ ದೇವಯಾನಿ ಕಣ್ಣರಳಿಸಿ ಆತನನ್ನು ನೋಡತೊಡಗಿದಳು.

ಯಯಾತಿ ಶಾಂತನಾಗಿ ಎಲ್ಲರಿಗೂ ಕೇಳಿಸುವಂತೆ ಹೇಳಿದ: "ಈತ ನನಗೆ ಅಣ್ಣನಾಗಬೇಕು. ಈತನ ಹೆಸರು ಯತಿ."

"ಯತಿ?" ಎಂಬ ಆತನ ಚೀತ್ಕಾರ ಪರದೆಯಾಚೆಯಿಂದ ಕೇಳಿ ಬಂದಿತು. ಎಲ್ಲ ಶಿಷ್ಟಾಚಾರಗಳನ್ನೂ ಮರೆತು ತಾಯಿ ಮುಂದೆ ಓಡಿ ಬಂದಳು. ಒಂದು ಕ್ಷಣ ಯತಿಯನ್ನು ನೋಡಿದಳು. ಆತನ ಆ ಭಯಾನಕವಾದ ರೂಪವನ್ನು ಆಕೆಯಿಂದ ನೋಡಲಾಗಲಿಲ್ಲ. ಕಣ್ಣು ಮುಚ್ಚಿಕೊಂಡು "ಯತಿ, ನನ್ನ ಯತಿ" ಎಂದು ಚೀತ್ಕರಿಸುತ್ತ ತನ್ನ ತೋಳುಗಳನ್ನು ಚಾಚುತ್ತಿದ್ದ ಹಾಗೆ ಧಡಾರೆಂದು ನೆಲಕ್ಕೆ ಕುಸಿದಳು.

*

ಸೊಗಸಾಗಿ ಕೊನೆಗೊಳ್ಳಲಿದ್ದ ಸಮಾರಂಭ ಕಚ ಹಾಗೂ ಯತಿಯ ಪ್ರವೇಶದಿಂದ ಹಾಳಾಯಿತೆಂದು ದೇವಯಾನಿ ಹಲುಬಿದಳು. 'ಕಚ ನನ್ನ ಪೂರ್ವಜನ್ಮದ ವೈರಿಯಾಗಿರಲಾರನಷ್ಟೆ' ಎಂದು ಅವಳ ಮನಸ್ಸು ಪ್ರಶ್ನಿಸುತ್ತಿತ್ತು.

ಕಚನಿಂದ ತನಗೆ ದೊರೆತ ಶಾಪ ತನಗೆ ಯಾವ ಹಾನಿಯನ್ನುಂಟುಮಾಡಲಿಲ್ಲವೆಂದೂ ಬದಲಾಗಿ ಕುಬೇರನ ಕಣ್ಣು ಕುಕ್ಕಿಸುವಂಥ ವೈಭವದಲ್ಲಿ ತಾನು ಓಲಾಡುತ್ತಿದ್ದೇನೆ ಎನ್ನುವುದು ಆತನಿಗೆ ಗೊತ್ತಾಗಬೇಕು. 'ನಿನ್ನ ಗುಡಿಸಲಿನಲ್ಲಿ ಕಸ ಗುಡಿಸಬೇಕೆಂದಿದ್ದ ದೇವಯಾನಿ ಸಿಂಹಾಸನವೊಂದರಲ್ಲಿ ವಿರಾಜಮಾನಳಾಗಿದ್ದಾಳೆ,' ಎನ್ನುವುದನ್ನು ಆತ ಕಣ್ಣಾರೆ ಕಾಣಬೇಕೆಂದೂ, ಮನಸ್ಸಿನಲ್ಲಿಯೆ ನಾಚಿ ಕಚ ದೇವಯಾನಿಯ ಕ್ಷಮೆ ಕೇಳಬೇಕೆಂದು ಬಯಸಿಯೆ ಯಜ್ಞದ ನಿಮಿತ್ತ ಆತನಿಗೆ ನಿಮಂತ್ರಣವನ್ನು ಕಳುಹಿಸಿದ್ದಳು. ಆದರೆ ಅವಳು ಬಯಸಿದಂತೆ ನಡೆಯದೆ. ಯತಿಯನ್ನು ಯಯಾತಿ ಹಾಗೂ ತಾಯಿ ಗುರ್ತಿಸಿದಾಗ ಆಭಾಸವಾಗಿ ರಾಜಸಭೆ ಅಷ್ಟಕ್ಕೇ ಮುಕ್ತಾಯಗೊಳ್ಳುತ್ತದೆ.

ಕಚ ದೇವಯಾನಿಯನ್ನು ನೋಡಲು ಬರುತ್ತಾನೆಂದು ಅಂತಃಪುರದಲ್ಲಿ ಆಕೆ ಕಚನ ಸ್ವಾಗತಕ್ಕಾಗಿ ಸಿದ್ಧಮಾಡುತ್ತಿದ್ದಳು. ದೂರದಿಂದ ಸಿಂಹಾಸನವೆಂದೇ ಕಾಣುವ ಭವ್ಯವಾದ ಆಸನ, ಸುವರ್ಣ ಪಾತ್ರೆಯಲ್ಲಿ ಚೆನ್ನಾಗಿ ಜೋಡಿಸಿ ಇಟ್ಟಿದ್ದ ರಸವತ್ತಾದ ಹಣ್ಣುಗಳು, ಆತನಿಗೆ ಪ್ರಿಯವಾಗಿದ್ದ ಹೂವುಗಳಿಂದ ಮಾಡಿದ ಚಿಕ್ಕ ಚಿಕ್ಕ ಮಾಲೆಗಳು, ನವಿಲ ಗರಿಗಳ ಬೀಸಣಿಕೆಗಳು ಎಂದೆಲ್ಲ ಸಿದ್ಧತೆ ನಡೆದಿದ್ದಾಗ ಬರದಿದ್ದಾಗ ಬಾರದ ಕಚ ಒಂದು ದಿನ ಹಠಾತ್ತಾಗಿ ಬಂದ. ದೇವಯಾನಿಯ ಗಲಿಬಿಲಿ ಹೇಳತೀರದು.

ಆಕೆಯ ಸತ್ಕಾರವನ್ನು ಮೃದುವಾಗಿಯೆ ತಿರಸ್ಕರಿಸಿದ ಕಚ ದೇವಯಾನಿಯ ಬಳಿ ಶರ್ಮಿಷ್ಠೆಯನ್ನು ಬಿಡುಗಡೆ ಮಾಡಲು ಕೇಳಿಕೊಳ್ಳುತ್ತಾನೆ. ಆದರೆ ದೇವಯಾನಿ ಒಪ್ಪುವುದಿಲ್ಲ. ಕಚ ಸಿಟ್ಟಾಗುವುದಿಲ್ಲ. ಮಹಾರಾಣಿಗೆ ಶುಭ ಹಾರೈಸಿ ತಾನು ಭೃಗುಪರ್ವತದಲ್ಲಿ ತಪಸ್ಸಿಗೆ ತೊಡಗುವೆನೆಂದು, ತಾನಿನೂ ಅಪೂರ್ಣನೆಂದು, ಅಪೂರ್ಣತೆಯನ್ನು ಕಡಿಮೆ ಮಾಡಿಕೊಳ್ಳುವೆನೆಂದೂ ಸ್ವಲ್ಪ ಮಟ್ಟಿಗೆ ಆದರೂ ಲೋಕದ ದುಃಖವನ್ನು ಕಡಿಮೆ ಮಾಡುವ ಮಾರ್ಗವನ್ನು ಹುಡುಕುವೆನೆಂದು ಹೇಳಿ ಬೀಳ್ಕೊಡುತ್ತಾನೆ. ಆತನೊಂದಿಗೆ ರಾಜಮಾತೆಯೂ ಹೊರಡುತ್ತಾಳೆ.

ಶರ್ಮಿಷ್ಠೆಯನ್ನು ಬೀಳ್ಕೊಡುವಾಗ ಕಚ ಆಕೆಯನ್ನು ಹೊಗಳಿದ: ಇಡೀ ದಾನವಕುಲಕ್ಕೆ ತಾಯಿಯೆಂದ. ಆಕೆಯ ತ್ಯಾಗ ಹಿರಿಯದಾದುದೆಂದ. ಆದರಿಂದ ತನಗೆ ಆಕೆ ಗುರುವೆಂದೂ, ಆದರೆ ತಂಗಿಯೆಂದು ಭಾವಿಸಿರುವ ಶರ್ಮಿಷ್ಠೆಗೆ ನಮಸ್ಕರಿಸಿದರೆ ಆಕೆಗಿಷ್ಟವಾಗುವುದಿಲ್ಲವೆಂದು ಬರೇ ಕೈ ಜೋಡಿಸಿದ. ಅಪ್ರತಿಭಳಾದ ಶರ್ಮಿಷ್ಠೆ ತಾನೇನು ಮಾಡುತ್ತಿದ್ದೇನೆ ಎಂಬ ಎಚ್ಚರವೂ ಉಳಿಯದೆ ಒಮ್ಮೆಲೆ ಮುಂದೆ ಬಂದು ಆತನ ಕೈಗಳನ್ನು ತನ್ನ ಕೈಯಲ್ಲಿ ಹಿಡಿದಳು. ಮರುಕ್ಷಣ ಆಕೆಗೆ ಭಯವಾಯಿತು. ಲಜ್ಜೆಯಿಂದ ಮೆಲ್ಲಗೆ ಕೈಗಳನ್ನು ಬಿಡಿಸಿಕೊಳ್ಳತೊಡಗಿದಳು. ಅದನ್ನು ಗಮನಿಸಿದ ಕಚ ಶರ್ಮಿಷ್ಠೆಯ ಕೈಗಳನ್ನು ಬಿಡದೆ ನಕ್ಕ. ನಂತರ–"ಎಲ್ಲ ಸ್ಪರ್ಶಗಳು ಒಂದೇ ಅಲ್ಲ, ತಂಗಿ. ಇಂದು ನನ್ನ ತಾಯಿ ಬದುಕಿದ್ದರೆ ನಾನು ಹಿಮಾಲಯಕ್ಕೆ ಹೋಗುವುದು ಬೇಡ ಎಂದು ಆಕೆಗೆ ಅನಿಸಿದ್ದರೆ ಆಕೆ ತನ್ನ ಪ್ರೀತಿಯ ಅಧಿಕಾರವನ್ನು ನನ್ನ ಮೇಲೆ ನಡೆಸುವುದಕ್ಕೆ ನನ್ನನ್ನು ಹೀಗೆಯೇ ಹಿಡಿದಿಡುತ್ತಿರಲಿಲ್ಲವೆ?" ಎಂದ.

ಶರ್ಮಿಷ್ಠೆ ನಡೆಸುತ್ತಿದ್ದ ಒಂದು ಬಗೆಯ ತಾಪಸಿಯ ಜೀವನಕ್ಕೆ ಅಭಿವಂದಿಸಿದರೆ ತಪ್ಪಿಲ್ಲವೆಂದು ಆತನ ಅಭಿಪ್ರಾಯವಾಗಿತ್ತು. ನಿಜವಾದ ದಾಸಿ ದೇವಯಾನಿಯೆಂದ. ವೈಭವ, ಪ್ರತಿಷ್ಠೆ ಅಹಂಕಾರಗಳ ಗುಲಾಮಳು ಅವಳು! ಸ್ವಾರ್ಥಕ್ಕೆ ವಾಸನಾಶೇಷಗಳಿಗೆ ಭೋಗಕ್ಕೆ ಆತ್ಮವನ್ನು ಬಲಿಯಾಗಿಸುವ ಮನುಷ್ಯ ಸದಾಕಾಲವೂ ದಾಸ್ಯದಲ್ಲಿ ಕೊಳೆಯುತ್ತಾನೆ ಎಂದು ನುಡಿದ ಕಚ.

*

ಗರ್ಭಿಣಿಯಾಗಿದ್ದ ದೇವಯಾನಿಯ ಕೋರಿಕೆ ಈಡೇರಿಸಲು ಯಯಾತಿ ಮಹಾರಾಜ ಋಷಿಯ ವೇಷ ತಾಳುತ್ತಾನೆ. ತಮಾಷೆ ಮಾಡಲೆಂದೇ ದೇವಯಾನಿ ಅಶೋಕವನಕ್ಕೆ ಆತನನ್ನು ಕರೆದೊಯ್ದು ಶರ್ಮಿಷ್ಠೆಯನ್ನು ಆತನ ಉಪಚಾರ ಮಾಡಲು ಹೇಳುತ್ತಾಳೆ. ಶರ್ಮಿಷ್ಠೆಯ ವಿಚಾರದಲ್ಲಿ ಕನಿಕರದಿಂದ ತುಂಬಿದ್ದ ಮಹಾರಾಜ, ಒಂದಿಷ್ಟು ಆಸಕ್ತಿಯೂ ಇತ್ತು – ಅವಳನ್ನು

ಗುಪ್ತ ಮಾರ್ಗದಿಂದ ಬಂದು ಕೂಡುವುದಾಗಿ ಹೇಳಿ ಅದರಂತೆಯೇ ಅವಳನ್ನು ಅನುಗ್ರಹಿಸುತ್ತಾನೆ. ಶರ್ಮಿಷ್ಠೆ ಗರ್ಭಿಣಿಯಾಗುತ್ತಾಳೆ. ದೇವಯಾನಿ ವ್ಯಭಿಚಾರಿಣಿಯೆಂದು ಶರ್ಮಿಷ್ಠೆಯನ್ನು ದೂರುತ್ತಾಳೆ. ಶರ್ಮಿಷ್ಠೆ ಅದನ್ನು ಅಲ್ಲಗಳೆದು ಇದು ಋಷಿಯೊಬ್ಬರ ಅನುಗ್ರಹ ಎನ್ನುತ್ತಾಳೆ. ಋಷಿ ಎಂದ ಕೂಡಲೆ ದೇವಯಾನಿಗೆ ನೆನಪಿಗೆ ಬಂದವನು ಕಚ. ಕಚನೆ! ಎಂದು ಕೇಳುತ್ತಾಳೆ. ಶರ್ಮಿಷ್ಠೆ ಮೌನವಾಗಿದ್ದು ಬಿಡುತ್ತಾಳೆ. ನಂತರ ಮನಸ್ಸಿನಲ್ಲೆ ಕಚನ ಕ್ಷಮೆ ಬೇಡುತ್ತಾಳೆ.

ಶರ್ಮಿಷ್ಠೆ ಹಾಗೂ ದೇವಯಾನಿಯರ ಪುತ್ರರ ಹಸ್ತಗಳನ್ನು ಪರೀಕ್ಷಿಸಿದ ಸಾಮುದ್ರಿಕ ದೇವಯಾನಿಯ ಯದು ಬಹಳ ದುರ್ದೈವಿಯೆಂದೂ ಶರ್ಮಿಷ್ಠೆಯ ಮಗು ಪುರು ಚಕ್ರವರ್ತಿಯಾಗುವನೆಂದೂ ಹೇಳುತ್ತಾನೆ. ಪುರುವಿನಲ್ಲಿ ಚಕ್ರವರ್ತಿಯ ಲಕ್ಷಣಗಳು ಬಂದುದಾದರೂ ಹೇಗೆ? ಸಿಟ್ಟಿನಿಂದ ಶರ್ಮಿಷ್ಠೆಯ ಪ್ರಿಯಕರನ ಹೆಸರು ಕೇಳುತ್ತಾಳೆ. ಆದರೆ ಶರ್ಮಿಷ್ಠೆ ಹೇಳುವುದಿಲ್ಲ. ಆಕೆಯನ್ನು ದೇವಯಾನಿ ಸೆರೆಮನೆಗೆ ತಳ್ಳುತ್ತಾಳೆ. ಅವಳನ್ನು ಯಯಾತಿ ಪಾರುಮಾಡುತ್ತಾನೆ. ಮಗುವಿನೊಂದಿಗೆ ಶರ್ಮಿಷ್ಠೆ ಕಾಡು ಮೇಡುಗಳಲ್ಲಿ ಅಲೆದು ಕೊನೆಗೆ ಯತಿಯ ಬಳಿ ಬರುತ್ತಾಳೆ. ಉನ್ಮತ್ತನಾಗಿದ್ದ ಯತಿ ಕಚನ ಆರೈಕೆ ಸಹವಾಸಗಳಿಂದ ಸಹಜ ಸ್ಥಿತಿಗೆ ಬಂದಿದ್ದ. ಆಗ ಕಚನ ಬಗ್ಗೆ ಕೇಳುತ್ತಾಳೆ. ಆತ ಮತ್ತೆ ಲೋಕಕಲ್ಯಾಣಕ್ಕಾಗಿ ತಪಸ್ಸಿಗೆ ತೊಡಗುತ್ತಾನೆಂದು ತಿಳಿದು ಅವಳಿಗೆನಿಸುತ್ತದೆ. 'ಹಂಗಸಿಗೆ ಮನೆಯೇ ವಿಶ್ವವಾಗಿದ್ದರೆ ಕಚನಂಥವರಿಗೆ ವಿಶ್ವವೇ ಮನೆಯಾಗುತ್ತದೆ' ಎಂದು.

ಮುಂದೆ ಇವರೆಲ್ಲರ ಭೇಟಿ ಹದಿನೆಂಟು ವರ್ಷಗಳಾದ ಮೇಲೆ. ಅಶೋಕವನದಲ್ಲಿ ಶುಕ್ರಾ

ಚಾರ್ಯರ ಶಾಪಕ್ಕೀಡಾಗಿ ಕುಷ್ಠ ಕುಷ್ಠ ಮುದುಕನಾಗಿ ಬಿಟ್ಟ ಯಯಾತಿ. ಇದಕ್ಕೆ ಕಾರಣಳೂ ದೇವಯಾನಿಯೆ! ಶರ್ಮಿಷ್ಠೆಯೊಂದಿಗೆ ಮಹಾರಾಜನ ಸಂಬಂಧವಿತ್ತೆಂದು ತಿಳಿದು ಸಿಟ್ಟಿನಿಂದ ಯಯಾತಿಯನ್ನು ತಿರಸ್ಕರಿಸಿಬಿಟ್ಟಳು. ಮದ್ಯವನ್ನು ಸಾಕಷ್ಟು ಸೇವಿಸಿದ್ದ ಯಯಾತಿಯೂ 'ಇನ್ನು ನಿನ್ನ ಮೈ ಮುಟ್ಟುವುದಿಲ್ಲ' ಎಂದು ಪ್ರತಿಜ್ಞೆಮಾಡಿದ. ಮನಸ್ಸಿಗೆ ಉಂಟಾದ ಅಶಾಂತಿಯನ್ನು ಅತೃಪ್ತಿಯನ್ನು ಕಳೆಯಲು ಮದಿರೆ ಹಾಗೂ ಮದಿರಾಕ್ಷಿಯರ ಸಹವಾಸದಲ್ಲಿ ಕಾಲ ಕಳೆದ. ದೇವಯಾನಿಯ ತಂದೆ ಶುಕ್ರಾಚಾರ್ಯರು ತಪಸ್ಸಿನಿಂದ ಹೊರಬರುತ್ತಲೆ ತನ್ನ ಪತಿಯ ಪುರಾಣವನ್ನು ಪ್ರಾರಂಭಿಸಿ ಬದುಕಿರುವವರೆಗೂ ಮರೆಯಲಾಗದ ಶಿಕ್ಷೆಯನ್ನು ಕೊಡಬೇಕೆಂದಳು. ಶುಕ್ರಾಚಾರ್ಯರ ಬಳಿ ವಾದ ಮಾಡಿದ ಯಯಾತಿ ಯೌವನ ಕುರುಡಾಗಿರುತ್ತದೆಯೆಂದ. ಧರ್ಮಪತ್ನಿ ದೇವಯಾನಿಯನ್ನು ತಿರಸ್ಕರಿಸಿ ಶರ್ಮಿಷ್ಠೆಯಂಥ ದಾಸಿಯ ಸಹವಾಸ ಮಾಡಲು ಬಯಸಿದ. ಆ ಕುರುಡು ಯೌವನ ನಷ್ಟವಾಗಲಿ ಆ ಕ್ಷಣದಲ್ಲಿ ಯಯಾತಿ ಕುಷ್ಠ ಕುಷ್ಠ ಮುದುಕನಾಗಲಿ ಎಂದು ಶಾಪ ಕೊಟ್ಟರು. ದೇವಯಾನಿ ಆ ಶಾಪದ ಘೋರ ರೂಪವನ್ನು ನೋಡಲಾರದೆ ಶುಕ್ರಾಚಾರ್ಯರನ್ನು ಬೇಡಿಕೊಂಡಳು, ಮತ್ತೆ ಯಯಾತಿ ತರುಣನಾಗಲೆಂದು. ಆಗ ಶುಕ್ರಾಚಾರ್ಯನು ಯಯಾತಿಯ ಕುಲದ ಯುವಕನೊಬ್ಬನು ಆ ವಾರ್ಧಕ್ಯವನ್ನು ಸ್ವೀಕರಿಸುವುದಕ್ಕೆ ಸಂತೋಷದಿಂದ ಮುಂದೆ ಬಂದುದಾದರೆ ಮುಪ್ಪು ಆತನಿಗೆ ಬರುವುದೆಂದ. ಆದರೆ ಆ ತರುಣನಿಗೆ ಮತ್ತೆ ತಾರುಣ್ಯ ಬರುವುದು ಯಯಾತಿಗೆ ಸಾವು ಬಂದ ನಂತರವೆ. ಮೂರು ಬಾರಿ 'ನನ್ನ ಈ ತಾರುಣ್ಯವನ್ನು ಹಿಂದಿರುಗಿಸುತ್ತಿದ್ದೇನೆ' ಎಂದರೆ ಯಯಾತಿ ಸತ್ತು ಬೀಳುವನೆಂದು ಶುಕ್ರಾಚಾರ್ಯನು ಉಶ್ಶಾಪವನ್ನಿತ್ತನು.

ಯದು ಮತ್ತು ಪುರು ಇಬ್ಬರೂ ಎದುರಿಗೆ ಬಂದಾಗ ಯದುವನ್ನು ಕೇಳುತ್ತಾನೆ ಯಯಾತಿ, ತನ್ನ ವಾರ್ಧ್ಯಕ್ಯವನ್ನು ಸ್ವೀಕರಿಸು-ವೆಯಾ ಎಂದು. ಆದರೆ ಯದು ಅಸಮ್ಮತಿಯನ್ನು ತೋರುತ್ತಾನೆ. ಪುರು ತಾನಾಗಿ ಮುಂದೆ ಬಂದು ವಾರ್ಧಕ್ಯವನ್ನು ಸ್ವೀಕರಿಸುತ್ತಾನೆ. ಮಗನ ಅಕಾಲ ಮುಪ್ಪನ್ನು ಕಂಡು ಅಳುತ್ತಿರುವ ಶರ್ಮಿಷ್ಠೆಯನ್ನು ಸಮಾಧಾನಪಡಿಸಿ ತಾನು ಅವಳಿಂದ ಪಡೆದ ಪ್ರೀತಿಯನ್ನು ಹಿಂದಿರುಗಿಸುವ ಸಂದರ್ಭ ಒದಗಿತೆಂದು ಮರಣವನ್ನು ಸ್ವಾಗತಿಸಲು ಯಯಾತಿ ಎರಡೂ ಬಾರಿ ಮೃತ್ಯುವನ್ನು ಆಹ್ವಾನಿಸುತ್ತಾನೆ. ಮೂರನೆಯ ಬಾರಿ ಹೇಳುವಷ್ಟರಲ್ಲಿ ದೂತನೊಬ್ಬ ಬಂದು "ಕಚದೇವರು ಬಂದಿದ್ದಾರೆ" ಎನ್ನುತ್ತಾನೆ. ಇದನ್ನು ಕೇಳಿ ಯಯಾತಿ ಮಹಾರಾಜ ಎಚ್ಚರ ತಪ್ಪಿ ಬೀಳುತ್ತಾನೆ.

ಕಚನಾದರೂ ಶುಕ್ರಾಚಾರ್ಯರಂತೆಯೆ ತಪವನ್ನಾಚರಿಸಿ ಒಂದು ವಿದ್ಯೆಯನ್ನು ಸಂಪಾದಿಸಿಕೊಂಡಿದ್ದ. ಶುಕ್ರಾಚಾರ್ಯರಂಥ ಕೋಪಿಷ್ಠ ಋಷಿಗಳು ಯಾರಿಗೆ ಯಾವಾಗ ಮಾರಕವಾಗು



"ಏನ್ಮಾಡೋದು ಸ್ವಾಮಿ ಕೈದಿಗಳಿಗೆ ಬೇಡಿ ಹಾಕೊ ಹಾಗಿಲ್ಲ, ಈಗ ರೂಲ್ಸ್ ಬಂದ್ಬಿಟ್ಟಿದೆ."

ವಂಥ ಶಾಪವನ್ನು ಕೊಡುತ್ತಾರೆಂದು ಹೇಳಲಾಗುವುದಿಲ್ಲವೆಂದು ಆದನ್ನು ದೂರವಾಗಿಸುವ ಸಿದ್ಧಿಯನ್ನು ಪಡೆದುಕೊಂಡಿದ್ದ. ಆ ಸಿದ್ಧಿಯ ಪ್ರಭಾವದಿಂದ ಆತ ಪುರುವಿನ ಯೌವನ ಆತನಿಗೆ ಹಿಂತಿರುಗುವಂತೆ ಮಾಡಿದ.

ಯಯಾತಿ ಎಚ್ಚೆತ್ತಾಗ ಶರ್ಮಿಷ್ಠೆ ಹಾಗೂ ದೇವಯಾನಿ ಇಬ್ಬರೂ ಯಯಾತಿಯನ್ನು ಉಪಚರಿಸುತ್ತಾ ಕುಳಿತಿದ್ದರು. ಎರಡು ನದಿಗಳು ಒಟ್ಟಿಗೆ ಸೇರಿದ ಹಾಗೆ ನಗು ನಗುತ್ತಾ ಮಾತನಾಡುತ್ತಿದ್ದರು. ಇದು ಕಚನ ಉಪದೇಶವೆ ಎಂದು ಯಯಾತಿಗೆ ಸ್ಪಷ್ಟವಾಗಿ ತಿಳಿದಿತ್ತು. ಆದರೆ ಆ ಮಾತು ದೇವಯಾನಿಗೆ ಮನವರಿಕೆಯಾದುದಾದರೂ ಹೇಗೆ ? ಕಚನೊಡನೆ ಪ್ರಸ್ತಾಪ ಮಾಡಿದಾಗ ಆ ಶ್ರೇಯಸ್ಸೆಲ್ಲವೂ ತನ್ನದೆಂದು ಆತ ಒಪ್ಪಲಿಲ್ಲ. ತಾನು ಸತತವಾಗಿ ಪ್ರಯತ್ನ ಮಾಡಿದರೂ ಯಶಸ್ಸು ದೊರಕಿದ್ದು ಪುರುವಿನಿಂದ ಎಂದು ಆತ ಹೇಳಿದ.

ತನಗೆ ರಾಜ್ಯ ಬೇಡವೆಂದು ಅಣ್ಣ ಯದು ಹಾಗೂ ದೇವಯಾನಿ ಬೇಕೆಂದು ಬಿಚ್ಚು ಮನಸ್ಸಿನಿಂದ ಪುರು ಹೇಳಿದಾಗ ಆಕೆ ಕರಗಿಹೋದಳು. ತನ್ನನ್ನು ಮಾತೆಯೆಂದು ಭಾವಿಸಿದ ಪುರುವಿನ ವಿಶಾಲ ಮನೋಭಾವಕ್ಕೆ ಮಾರುಹೋದಳು.

ಪ್ರಜೆಗಳ ಅಭೀಷ್ಟದಂತೆ ಪುರುವಿಗೆ ಪಟ್ಟಾಭಿಷೇಕ ಮಾಡಿ ಕಚನೊಂದಿಗೆ ದೇವಯಾನಿ, ಶರ್ಮಿಷ್ಠೆ ಹಾಗೂ ಯಯಾತಿ ವಾನಪ್ರಸ್ಥಕ್ಕೆ ತೆರಳಿದರು. ಯಯಾತಿಯ ಇಚ್ಛೆಯಂತೆ ಆತನ ಪ್ರಾಣಸ್ನೇಹಿತನ ವಯಸ್ಸಾದ ತಾಯಿಯನ್ನು ಸಹ ತಮ್ಮೊಂದಿಗೆ ಕರೆದುಕೊಂಡು ಹೋದರು. ✡



ಸೂರ್ಯ ತನ್ನ ಹನ್ನೆರಡು ಕುದುರೆಗಳ ರಥದಲ್ಲಿ ಕುಳಿತು ವೇಗವಾಗಿ ಸಾಗುತ್ತಿದ್ದ. ಆತನ ಗುರಿ ದೂರವಿತ್ತು ವೇಗದ ಓಟದಿಂದಾಗಿ ಆಯಾಸಗೊಂಡಿದ್ದ. ಗಂಟಲು ಒಣಗಿತ್ತು. ತುಟಿಗಳು ಒಂದಕ್ಕೊಂದು ಅಂಟಿಕೊಂಡು ಬಿಟ್ಟಿದ್ದವು. ಆದರೂ "ನೀರು ..." ಎಂಬ ಕ್ಷೀಣ ಧ್ವನಿ ಆತನ ಬಾಯಿಂದ ಬಂತು. ಆತನ ಸ್ಥಿತಿ ನೋಡಿ ಪೃಥ್ವಿಗೆ ಕರುಣೆಯುಕ್ಕಿತು. ತನ್ನ ಹೃದಯಕುಂಭವನ್ನು ಆತನ ತುಟಿಗಳ ಮೇಲೆ ಸುರಿದಳು. ದಾಹವಡಗಿಸಿಕೊಂಡು ಆತ ಮತ್ತೆ ಯಾತ್ರೆಯನ್ನಾರಂಭಿಸಿದ.

ಅಂದು ಪೃಥ್ವಿ ಸೂರ್ಯನಿಗೆ ನೀರು ಕುಡಿಸಿದ ಸ್ಥಳವೇ ಇಂದಿನ ಸಹರಾ ಮರುಭೂಮಿ ಎಂದು ಹೇಳಲಾಗುತ್ತಿದೆ. ಸೂರ್ಯನ ತುಟಿಗಳ ಸ್ಪರ್ಶದಿಂದಲೇ ಅದು ಮರುಭೂಮಿಯಾಯಿತಂತೆ. ಮತ್ತೊಮ್ಮೆ ಸೂರ್ಯ ಬರುತ್ತಾನೆ, ಬಂದು ಸಹಾರಾವನ್ನು ಜಲಾವೃತಗೊಳಿಸುತ್ತಾನೆಂದು ಭೂಮಾತೆ ಇನ್ನೂ ಕಾಯುತ್ತಲೇ ಇದ್ದಾಳೆ.

— 'ತರಂಗ ಗೀತೆಗಳು'ದಿಂದ

Printed & published by G. Vamadev, Charity Commissioner, Belgaum, Receiver for Loka Shikshana Trust, at Samyukta Karnataka Press, Koppikar Road, Hubli-580 020. Rept : Bombay : V. Satyamurthy Phone : 522412; Calcutta : H. Majumdar 46-4233; Madras : K. A. Subramanian Phone : 842201; New Delhi : P. R. Chopra Phone : 714130.

Registered with the Registrar of Newspapers for India under No. 3533

